ಭಾನುವಾರ, ಮೇ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 129 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಕಲ್ಯಾಣದ ಹಾದಿ-ಬೀದಿಯಲ್ಲಿ ಬಿರುಬಿಸಿಲ ನಡುವೆ ಸುತ್ತಾಡಿದಾಗ ಬಸವಣ್ಣ ಸುಳಿದಾಡಿದ, ಹೇಗೆ ಗೊತ್ತಾ?

‘ಹಾಸಿಗೆ ಬ್ಲಾಕ್’: ಬಿಜೆಪಿ ನಾಯಕರೇ ಕಿಂಗ್‌ಪಿನ್’ 4
ರಾಜ್ಯಕ್ಕೆ ₹ 34 ಕೋಟಿ ಮಂಜೂರು ಮಾಡಿದ ಕೇಂದ್ರ ಸರ್ಕಾರ
‘ಕೋವಿಡ್ ನಿಯಂತ್ರಿಸುವಲ್ಲಿ ಕರ್ಫ್ಯೂ ವಿಫಲ’ 4
28 ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ 7

ಉಸಿರನೇ ಕಸಿದ ಅವ್ಯವಸ್ಥೆ

• ವಿಶಾಲಾಕ್ಷಿ ಅಕ್ಕಿ

ಚಾಮರಾಜನಗರ: ಚಾಮರಾಜನಗರದ ಕೋವಿಡ್ ಆಸ್ಪತ್ರೆಯ ಐಸಿಯು ವಾರ್ಡ್‌ನಲ್ಲಿದ್ದವರು ಸೇರಿದಂತೆ 24 ರೋಗಿಗಳು ಮೃತಪಟ್ಟ ಪ್ರಕರಣವು ಕೋವಿಡ್ ದುರಿತ ಕಾಲದಲ್ಲಿ ರಾಜ್ಯ ಕಂಡ ಮಹಾದುರಂತ. ಕಳೆದ ಭಾನುವಾರದ ಸಂಜೆವರೆಗೂ ಭರವಸೆಯಲ್ಲಿಯೇ ಬದುಕಿದ್ದವರು, ಕತ್ತಲಾಗುತ್ತಿದ್ದಂತೆಯೇ ಕಣ್ಮುಚ್ಚಿದ ಬಗೆಯನ್ನು ಅವರ ಸಂಬಂಧಿಕರು ಬಿಚ್ಚಿಡುತ್ತ ಹೋದಂತೆ ಎದೆ ಒಡೆದು ಹೋದ ಭಾವ. ನೋವು, ಹತಾಶೆ, ಸಂಕಟ, ಪ್ರಶ್ನೆಗಳ ಜೊತೆ ಜೊತೆಗೆ ಆಸ್ಪತ್ರೆಯಲ್ಲಿನ ಅವ್ಯವಸ್ಥೆಯನ್ನೂ ಅವರು ಬಟಾಬಯಲು ಮಾಡಿದ್ದಾರೆ.

ಅಂದು ಆಗಿದ್ದೇನು?: ಭಾನುವಾರ ರಾತ್ರಿ (ಮೇ 2), ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ 23 ಹಾಗೂ ಹನೂರಿನ ಹೋಲಿಕ್ರಾಸ್ ಆಸ್ಪತ್ರೆಯಲ್ಲಿ ಒಬ್ಬ ರೋಗಿ ಸೇರಿದಂತೆ 24 ಮಂದಿ ಮೃತಪಟ್ಟರು. ಆಮ್ಲಜನಕದ ಪೂರೈಕೆ ಸ್ಥಗಿತಗೊಂಡಿದ್ದೇ ಇದಕ್ಕೆ ಕಾರಣ ಎಂಬುದು ಅವರ ಸಂಬಂಧಿಕರ ಆರೋಪ. ಆದರೆ, ಜಿಲ್ಲಾಡಳಿತ ನೀಡಿರುವ ಡೆತ್ ಆಡಿಟ್ ವರದಿಯಲ್ಲಿ ಆಮ್ಲಜನಕದ ಕೊರತೆಯಿಂದ ಮೂವರು ಹಾಗೂ ಆಮ್ಲಜನಕದ ಪೂರೈಕೆಯಲ್ಲಿನ ನಿರ್ಬಂಧ ದಿಂದಾಗಿ ಉಂಟಾಗುವ ಸಮಸ್ಯೆಯಿಂದ (ಹೈಪಾಕ್ಸಿಕ್ ಬ್ರೇಯ್ನ್ ಇಂಜುರೀಸ್) ಏಳು ಮಂದಿ ಮೃತಪಟ್ಟಿದ್ದಾಗಿ ಹೇಳಿತು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಪ್ರಕಾರ, ಅಂದು ಆಮ್ಲಜನಕ ಸಿಗದೇ ಮೃತಪಟ್ಟವರು ಮೂವರು ಮಾತ್ರ. ಈ ಹೇಳಿಕೆಗಳು, ಮೃತಪಟ್ಟವರ ಸಂಬಂಧಿಕರ ಆಕ್ರೋಶಕ್ಕೆ ತುಪ್ಪ ಸುರಿದಂತಾಗಿದೆ. ಪ್ರಾಣವಾಯುವಿಗಾಗಿ ಪರಿತಪಿಸಿದ ತಮ್ಮವರ ಕೊನೆಯ ಕ್ಷಣಗಳನ್ನು ಕಣ್ಣಾರೆ ಕಂಡಿರುವ ಅವರೆಲ್ಲ ಏಕಕಾಲಕ್ಕೆ ಜಿಲ್ಲಾಡಳಿತ, ಸಚಿವರು, ಮುಖ್ಯಮಂತ್ರಿ ಎಲ್ಲರನ್ನೂ ಮನಬಂದಂತೆ ತರಾಟೆಗೆ ತೆಗೆದುಕೊಂಡಿದ್ದಾರೆ.

ಆದ ವೈಫಲ್ಯಕ್ಕೆ ಕ್ಷಮೆ ಯಾಚಿಸದೇ ಸಾವಿನ ಸಂಖ್ಯೆಯ ಬಗ್ಗೆ ತಮ್ಮದೇ ಲೆಕ್ಕ ನೀಡುತ್ತಿದ್ದಾರೆ ಎಂದು ಛೀಮಾರಿ ಹಾಕಿದ್ದು, ‘ಆಮ್ಲಜನಕವಿಲ್ಲದೇ ಹತ್ತು ಮಂದಿಯೇ ಸತ್ತಿದ್ದಾರೆಂದು ಅಂದುಕೊಂಡರೂ ಅದು ಸಾವಲ್ಲವೇ? ಸಾವನ್ನು ಸಂಖ್ಯೆಯಾಗಿ ನೋಡುವ ವರಿಗೆ ಇದು ಅರ್ಥವಾಗುವುದಿಲ್ಲ. ಅದು, ಬದುಕೊಂದು ಮುಗಿಯುವುದರ ಜೊತೆಗೆ ಅದನ್ನು ನೆಚ್ಚಿಕೊಂಡ ಪರಿವಾರದ ಮುಳುಗಡೆ ಎಂಬುದನ್ನು ಇವರಿಗೆ ಯಾರು ಅರ್ಥ ಮಾಡಿಸಬೇಕು?’ ಎಂದು ಕಿಡಿಕಾರುತ್ತಿದ್ದಾರೆ.

6ನೇ ಪುಟ ನೋಡಿ

ಒಳನೋಟ
ಕೋವಿಡ್ ಕಾಲದ ದುರಂತ
ಪ್ರತಿಕ್ರಿಯಿಸಿ: 9606038256



ಲಕ್ಕೂರಿನ ಮನೆಯ ಕಟ್ಟೆಯ ಮೇಲೆ ದಿಕ್ಕು ತೋಚದೇ ಕುಳಿತಿರುವ ಗುರುಪ್ರಸಾದ್ ಅವರ ತಾಯಿ ಮಹದೇವಮ್ಮ, ಪತ್ನಿ ಸವಿತಾ

ತನಿಖೆಯ ಹಾದಿಯಲ್ಲಿ ಗೊಂದಲದ ನಡೆ

• ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ 24 ಮಂದಿ ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ ಎಂಬ ಆರೋಪಗಳ ಕುರಿತ ತನಿಖೆಯ ವಿಚಾರದಲ್ಲಿ ರಾಜ್ಯ ಸರ್ಕಾರದ ನಡೆ ಗೊಂದಲವನ್ನು ಸೃಷ್ಟಿಸಿದೆ. ಪರಿಣಾಮವಾಗಿ ಒಂದೇ ಘಟನೆಗೆ ಸಂಬಂಧಿಸಿದಂತೆ ಇಬ್ಬರು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪ್ರತ್ಯೇಕ ತನಿಖೆಗಳು ನಡೆಯುವಂತಹ ಸನ್ನಿವೇಶ ನಿರ್ಮಾಣವಾಗಿದೆ.

ಮೇ 3ರಂದು ದುರ್ಘಟನೆ ಸಂಭವಿಸಿತ್ತು. ಮೇ 4ರಂದು ಕೋವಿಡ್‌ಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ವೇಳೆ ಸ್ವಯಂಪ್ರೇರಿತವಾಗಿ ಈ ಬಗ್ಗೆಯೂ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆ ನಡೆಸುವ ಇಂಗಿತ ವ್ಯಕ್ತಪಡಿಸಿತ್ತು. ಈ ಕುರಿತು ಸರ್ಕಾರದ ನಿಲುವು ಏನು? ಎಂಬ ಪ್ರಶ್ನೆ ಮುಂದಿಟ್ಟಿತ್ತು.

ಅದೇ ದಿನ ಸಂಜೆ ನಡೆದ ಸಂಪುಟ ಸಭೆಯಲ್ಲಿ ತರಾತುರಿಯಲ್ಲಿ ಈ ವಿಷಯವನ್ನು ಚರ್ಚಿಸಿದ ಸರ್ಕಾರ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ್ ನೇತೃತ್ವದಲ್ಲಿ ತನಿಖಾ ಆಯೋಗ ನೇಮಿಸುವ ತೀರ್ಮಾನ ಕೈಗೊಂಡಿದೆ. ಈ ಸಂಬಂಧ ಮೇ 5ರಂದು ಆದೇಶವನ್ನೂ ಹೊರಡಿಸಲಾಗಿದೆ. ವಿಷಯ ವಿಚಾರಣಾ ಹಂತದಲ್ಲಿರುವಾಗ ಸರ್ಕಾರ ತರಾತುರಿಯಲ್ಲಿ ನಿರ್ಧಾರ ಕೈಗೊಂಡಿರುವುದಕ್ಕೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

6ನೇ ಪುಟ ನೋಡಿ

ಶವಗಳನ್ನು ಕಸದಂತೆ ರಾಶಿ ಹಾಕಿದ್ದರು

• ಕೆ.ಓಂಕಾರ ಮೂರ್ತಿ

ಚಾಮರಾಜನಗರ: ‘ಅಂದು ರಾತ್ರಿ 8.20ಕ್ಕೆ ಅಣ್ಣ ಬಾಬು ಫೋನ್ ಮಾಡಿ, ಸುಸ್ತಾಗುತ್ತಿದೆ, ಆಮ್ಲಜನಕ ಕೊಡುತ್ತಿಲ್ಲ ಎಂದು ಗೋಳು ಹೇಳಿಕೊಂಡ. ಅಷ್ಟರಲ್ಲಿ ಕರೆ ಕಡಿತಗೊಂಡಿತು. ಮತ್ತೆ ರಿಂಗಾದರೂ ಎತ್ತಲಿಲ್ಲ. ಪರಿಚಿತ ವೈದ್ಯರಿಗೇ ಕರೆ ಮಾಡಿ ಪಿಪಿಇ ಕಿಟ್ ಧರಿಸಿ ತಕ್ಷಣವೇ ಆಸ್ಪತ್ರೆಗೆ ಧಾವಿಸಿದೆ. ಅಣ್ಣ ಶವವಾಗಿದ್ದ...’

ಬೆಳಿಗ್ಗೆ ಶವವನ್ನು ಪಡೆಯಲು ಹೋದಾಗ ಕೊಠಡಿಯೊಂದರಲ್ಲಿ ಕಸದಂತೆ ರಾಶಿ ಹಾಕಿದ್ದರು. ಇದೆಂಥಾ ವ್ಯವಸ್ಥೆಯೋ? ಇದಕ್ಕೆ ಜಿಲ್ಲಾಧಿಕಾರಿಯೇ ನೇರ ಹೊಣೆ’ ಎಂದು ಶವಗಳ ರಾಶಿಯ ವಿಡಿಯೊ ತೋರಿಸುತ್ತಾ ಆಕ್ರೋಶಭರಿತರಾಗಿದ್ದವರು ಚಂದ್ರಶೇಖರ್.



ಬಾಬು ತಮ್ಮ ಚಂದ್ರಶೇಖರ್

‘ವೈದ್ಯರಿಗೆ ಕರೆ ಮಾಡಿದಾಗ ಆಮ್ಲಜನಕ ಕೊರತೆ ಉಂಟಾಗಿರುವುದನ್ನು ಒಪ್ಪಿಕೊಂಡರು. ಅಲ್ಲದೇ, ರಾತ್ರಿ ಆಮ್ಲಜನಕ ಪೂರೈಕೆ ಆಗದಿದ್ದರೆ ಮತ್ತಷ್ಟು ಸಾವು ಸಂಭವಿಸಲಿದೆ ಎಂದರು. ಜಿಲ್ಲಾಧಿಕಾರಿಗೆ ಕರೆ ಮಾಡಿದರೂ ಸ್ವೀಕರಿಸಲಿಲ್ಲ. ಆಸ್ಪತ್ರೆಯ ಮೊದಲ ಮಹಡಿಗೆ ಮಾತ್ರ ಅಂದು ಆಮ್ಲಜನಕ ಪೂರೈಕೆ ಆಗಿದೆ. ಸಿ.ಸಿ. ಟಿ.ವಿ ಕ್ಯಾಮೆರಾ ತೆಗೆದು ನೋಡಿದರೆ ಬಂಡವಾಳ ಬಯಲಾಗಲಿದೆ’ ಎಂದು ಹರಿಹಾಯ್ದರು.

6ನೇ ಪುಟ ನೋಡಿ

ಇಂದಿಗೂ ಸುಧಾರಿಸದ ವ್ಯವಸ್ಥೆ

ಗಡಿ ಜಿಲ್ಲೆಯೂ ಆಗಿರುವ ಚಾಮರಾಜನಗರದಲ್ಲಿ ಆರೋಗ್ಯ ಸೌಲಭ್ಯಗಳಿಲ್ಲ ಎಂಬುದು ಹಲವಾರು ವರ್ಷಗಳ ದೂರು. ಸದ್ಯ ಜಿಲ್ಲಾಸ್ಪತ್ರೆಯಲ್ಲೇ ಕೋವಿಡ್ ಆಸ್ಪತ್ರೆ ತೆರೆದಿದ್ದು, ಪ್ರವೇಶದ್ವಾರ ರಸ್ತೆಗೆ ಅಂಟಿಕೊಂಡಿದೆ. ಪಕ್ಕದಲ್ಲೇ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಅನತಿ ದೂರದಲ್ಲಿ ಎಮರ್ಜೆನ್ಸಿ ವಾರ್ಡ್. ಅದರ ಪಕ್ಕದಲ್ಲೇ ಶವ ಸಾಗಿಸಲಾಗುತ್ತದೆ.

ಈ ಕೋವಿಡ್ ಆಸ್ಪತ್ರೆಯಲ್ಲಿ ಇರುವುದೇ 152 ಬೆಡ್ ವ್ಯವಸ್ಥೆ. ಆದರೆ, 160ಕ್ಕೂ ಹೆಚ್ಚು ಸೋಂಕಿತರನ್ನು ದಾಖಲಿಸಲಾಗಿದೆ. ಕೆಲವೇ ಗಂಟೆಗಳಲ್ಲಿ 24 ಮಂದಿ ಮೃತಪಟ್ಟಿದ್ದರೂ ಚಿಕಿತ್ಸೆ ವ್ಯವಸ್ಥೆ ಇನ್ನೂ ಸರಿ ಹೋಗಿಲ್ಲ. ಕೆಲವರಿಗೆ ಕುರ್ಚಿಗಳಲ್ಲೇ ಕೂರಿಸಿ ಚಿಕಿತ್ಸೆ ಕೊಡುತ್ತಿರುವ ಆರೋಪಗಳಿವೆ. ಜೊತೆಗೆ ವೈದ್ಯರು ಹಾಗೂ ನರ್ಸ್‌ಗಳ ಕೊರತೆಯೂ ಇದೆ.

ಚಾಮರಾಜನಗರ ಪಟ್ಟಣದಲ್ಲಿ ಇರುವುದೇ ಒಂದು ಜಿಲ್ಲಾಸ್ಪತ್ರೆ. ಅದು ಬಿಟ್ಟರೆ ಕ್ಷೇಮ, ಜೆಎಸ್‌ಎಸ್, ಪಿಕಾರ್ಡೊ ಹಾಗೂ ಬಸವರಾಜೇಂದ್ರ ಖಾಸಗಿ ಆಸ್ಪತ್ರೆಗಳು ಮಾತ್ರ. 450 ಬೆಡ್‌ಗಳ ಆಸ್ಪತ್ರೆ ಕಟ್ಟಡ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಈಗಲೂ ಜಿಲ್ಲೆಯ ಹೆಚ್ಚಿನ ಜನರು ಮೈಸೂರಿನ ಆಸ್ಪತ್ರೆ ಅವಲಂಬಿಸಿದ್ದಾರೆ.

6 ಸಾವಿರ ಲೀಟರ್ ಸಾಮರ್ಥ್ಯದ ಆಮ್ಲಜನಕ ಘಟಕ ಇದೆ. ಬಳ್ಳಾರಿಯಿಂದ ಪೂರೈಕೆ ಆಗುತ್ತಿದೆ. ನಿತ್ಯ 320 ಸಿಲಿಂಡರ್‌ಗಳ ವ್ಯವಸ್ಥೆ ಬೇಕಿದೆ. ಇದರಲ್ಲಿ ವ್ಯತ್ಯಯ ಉಂಟಾದರೆ ಸಮಸ್ಯೆ ಆಗಲಿದೆ.

ಇನ್ನಷ್ಟು ಸುದ್ದಿಗಳು 6

‘2ನೇ ಡೋಸ್ ಪಡೆವವರಿಗಷ್ಟೇ ಕೋವ್ಯಾಕ್ಸಿನ್’

ಬೆಂಗಳೂರು: ಬೇಡಿಕೆಗೆ ತಕ್ಕಂತೆ ಕೋವ್ಯಾಕ್ಸಿನ್ ಲಸಿಕೆ ರಾಜ್ಯಕ್ಕೆ ಪೂರೈಕೆ ಆಗುತ್ತಿಲ್ಲ. ಹಾಗಾಗಿ ಲಭ್ಯ ಇರುವ ಕೋವ್ಯಾಕ್ಸಿನ್ ಲಸಿಕೆಯನ್ನು ಎರಡನೇ ಡೋಸ್ ಪಡೆಯುವವರಿಗೆ ಮಾತ್ರ ಬಳಸಲು ಸರ್ಕಾರ ನಿರ್ಧರಿಸಿದೆ.

‘ಮೊದಲ ಡೋಸ್‌ನಲ್ಲಿ ಕೋವ್ಯಾಕ್ಸಿನ್ ಪಡೆದವರಿಗೆ ಮಾತ್ರ ಇದೇ ಲಸಿಕೆಯನ್ನು ಎರಡನೇ ಡೋಸ್ ಪಡೆಯುವವರಿಗೆ ನೀಡಲಾಗುವುದು. ಮೊದಲ ಡೋಸ್ ಲಸಿಕೆ ಪಡೆಯುವ 45 ವರ್ಷ ಮೇಲ್ಪಟ್ಟವರಿಗೆ ‘ಕೋವಿಶೀಲ್ಡ್’ ಲಸಿಕೆ ನೀಡಲಾಗುವುದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

‘ಲಭ್ಯವಿರುವ ‘ಕೋವಿಶೀಲ್ಡ್’ ಲಸಿಕೆಗಳಲ್ಲಿ ಶೇ 70ರಷ್ಟನ್ನು ಎರಡನೇ ಡೋಸ್ ಬಾಕಿ ಇರುವ 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ಮೇರೆಗೆ ನೀಡಲಾಗುವುದು. ಉಳಿದ ಶೇ 30ರಷ್ಟು ಲಸಿಕೆಗಳನ್ನು ಮಾತ್ರ ಮೊದಲ ಡೋಸ್ ಪಡೆಯುವವರಿಗೆ ನೀಡಲಾಗುತ್ತದೆ’ ಎಂದೂ ಅವರು ಟ್ವೀಟ್ ಮಾಡಿದ್ದಾರೆ.

ಪರೋಲ್ ಪಡೆದ ಕೈದಿಗಳ ಬಿಡುಗಡೆಗೆ ‘ಸುಪ್ರೀಂ’ ಆದೇಶ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಬಿಕ್ಕಟ್ಟು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಜೈಲುಗಳಲ್ಲಿ ಕೈದಿಗಳ ಸಂಖ್ಯೆ ಕಡಿಮೆಗೊಳಿಸಬೇಕು. ಕಳೆದ ವರ್ಷ ಜಾಮೀನು ಅಥವಾ ಪರೋಲ್ ಪಡೆದಿದ್ದ ಎಲ್ಲ ಕೈದಿಗಳನ್ನು ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಕಳೆದ ವರ್ಷದ ಮಾರ್ಚ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡ ಉನ್ನತಮಟ್ಟದ ಸಮಿತಿ, ಕೆಲ ಕೈದಿಗಳಿಗೆ ಜಾಮೀನಿನ ಮೇಲೆ ಹೊರ ಹೋಗಲು ಅನುಮತಿ ನೀಡಿತ್ತು. ಈಗ ಮತ್ತೊಮ್ಮೆ ಅದೇ ಆದೇಶವನ್ನು ಮುಂದುವರಿಸಿರುವುದಾಗಿ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಎಲ್ ನಾಗೇಶ್ವರ ರಾವ್ ಮತ್ತು ಸೂರ್ಯಕಾಂತ ಅವರನ್ನೊಳಗೊಂಡ ಪೀಠ ತಿಳಿಸಿದೆ.

‘ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಸಲುವಾಗಿ, ನಾವು ಹಿಂದೆ ನೀಡಿದ್ದ ಆದೇಶಕ್ಕೆ ಅನುಗುಣವಾಗಿ ಪರೋಲ್ ಪಡೆದ ಕೈದಿಗಳಿಗೆ ಮತ್ತೆ 90 ದಿನಗಳ ಕಾಲ ಪರೋಲ್ ನೀಡಲಾಗುತ್ತಿದೆ’ ಎಂದು ಸ್ವಯಂ-ಪ್ರೇರಿತವಾಗಿ ವಿಚಾರಣೆ ನಡೆಸಿದ ನ್ಯಾಯಪೀಠವು ಶನಿವಾರ ತಿಳಿಸಿತು.

ತೀರ್ಪೊಂದನ್ನು ಉಲ್ಲೇಖಿಸಿದ ನ್ಯಾಯಾಲಯ, ಗರಿಷ್ಠ ಏಳು ವರ್ಷಗಳ ಜೈಲು ಶಿಕ್ಷೆ ವಿಧಿಸುವ ಪ್ರಕರಣಗಳಲ್ಲಿ ಆರೋಪಿಗಳನ್ನು ಯಾಂತ್ರಿಕವಾಗಿ ಬಂಧಿಸದಂತೆ ಅಧಿಕಾರಿಗಳನ್ನು ತಿಳಿಸಿದೆ.

ಕೋವಿಡ್: ದೇಶದಲ್ಲಿ 4.03 ಲಕ್ಷ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ (ಮಧ್ಯರಾತ್ರಿ 12ರವರೆಗೆ) ಕೋವಿಡ್ ದೃಢಪಟ್ಟವರ ಸಂಖ್ಯೆ 4,03,626 ಆಗಿದ್ದು, 4,091 ಮಂದಿ ಮೃತಪಟ್ಟಿದ್ದಾರೆ.ದೇಶದಲ್ಲಿ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 37.32 ಲಕ್ಷ.

ಮನೆಗಳಲ್ಲಷ್ಟೇ ಮದುವೆ: 40ರ ಮಿತಿ

ಬೆಂಗಳೂರು: ಈಗಾಗಲೇ ನಿಗದಿಯಾದ ಮದುವೆಗಳನ್ನು ಮನೆಗಳಲ್ಲಿ ಮಾತ್ರ ನಡೆಸುವಂತೆ ನಿರ್ಬಂಧ ವಿಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅಲ್ಲದೆ, ಮದುವೆಗೆ ಕುಟುಂಬದ ಆಪ್ತರು ಸೇರಿ ಕೇವಲ 40 ಜನರಿಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಕಲ್ಯಾಣ ಮಂಟಪ ಅಥವಾ ಸಭಾಂಗಣದಲ್ಲಿ ಮದುವೆ ಸಮಾರಂಭ ನಡೆಸುವಂತಿಲ್ಲ ಎಂದು ಆದೇಶ ಹೇಳಿದೆ. ಈ ಕುರಿತು ಪರಿಷ್ಕೃತ ಆದೇಶವನ್ನು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಎನ್. ಮಂಜುನಾಥ ಪ್ರಸಾದ್ ಶನಿವಾರ ಹೊರಡಿಸಿದ್ದಾರೆ.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಬಂಧಿಸಿದ ಜಂಟಿ ಆಯುಕ್ತರಿಂದ ಹಾಗೂ ಜಿಲ್ಲೆಗಳಲ್ಲಿ ಆಯಾ ವ್ಯಾಪ್ತಿಯ ತಹಶೀಲ್ದಾರ್‌ಗಳಿಂದ ಮದುವೆ ಆಮಂತ್ರಣದ ಜೊತೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು. ಈ ಅರ್ಜಿ ಆಧರಿಸಿ 40 ಪಾಸ್‌ಗಳನ್ನು ವಿತರಿಸಲಾಗುವುದು. ಈ ಪಾಸ್ ಇದ್ದವರಿಗೆ ಮಾತ್ರ ಮದುವೆಯಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು’ ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ರಾಜ್ಯ ಕೋವಿಡ್ ಅಂಕಿ-ಅಂಶ

18,86,448 ▲	ಒಟ್ಟು ಸೋಂಕಿತರು (18,38,885 ನಿನ್ನೆಯ ವಿವರ)
5,48,841 ▲	ಸಕ್ರಿಯ ಪ್ರಕರಣಗಳು
13,19,301 ▲	ಗುಣಮುಖರಾದವರು
18,286 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	47,536	▼
ಗುಣಮುಖ	34,881	▲
ಸಾವು	482	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಆಮ್ಲಜನಕ ಸೌಲಭ್ಯ ಒದಗಿಸಲು ಸರ್ಕಾರದಿಂದ ಸಮರೋಪಾದಿಯ ಪ್ರಯತ್ನ

‘ರಾಜ್ಯದಲ್ಲಿ ಮತ್ತೆ 20 ಸಾವಿರ ಹಾಸಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ 1,200 ಟನ್ ಆಮ್ಲಜನಕ ಹಂಚಿಕೆ ಮಾಡಬೇಕೆಂಬ ಕರ್ನಾಟಕ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದ ಬೆನ್ನಲ್ಲೇ, ಆಮ್ಲಜನಕ ಸೌಲಭ್ಯ ಇರುವ ಹಾಸಿಗೆಗಳನ್ನು ಇನ್ನೂ 20 ಸಾವಿರಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ-ನಾರಾಯಣ, ‘ಈ ಪೈಕಿ, 10 ಸಾವಿರ ಹಾಸಿಗೆಗಳನ್ನು ತಕ್ಷಣವೇ ವ್ಯವಸ್ಥೆ ಮಾಡಲಾಗುವುದು’ ಎಂದರು.

‘ಕೋವಿಡ್ ಬರುವ ಮೊದಲು ರಾಜ್ಯದಲ್ಲಿ ನಿತ್ಯ 100 ಟನ್ ಆಮ್ಲಜನಕ ಖರ್ಚಾಗುತ್ತಿತ್ತು. ಈಗ ನಿತ್ಯವೂ 950 ಟನ್ ಬೇಕಾಗುತ್ತಿದೆ. ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದರಿಂದ ಆಮ್ಲಜನಕ ಸೌಲಭ್ಯದ ಹಾಸಿಗೆಗಳನ್ನೂ ಹೆಚ್ಚಿಸಬೇಕಾಗಿದೆ’ ಎಂದರು.

‘ಕೋವಿಡ್ ಕೇರ್ ಸೆಂಟರ್‌ಗಳಲ್ಲೂ ಆಮ್ಲಜನಕ ಸೌಲಭ್ಯದ ಹಾಸಿಗೆ ಅಳವಡಿಸಲು ನಿರ್ಧರಿಸಲಾಗಿದೆ. ಸದ್ಯ ತಲಾ 35 ಸಾವಿರದಂತೆ ಸರ್ಕಾರಿ–ಖಾಸಗಿ ಆಸ್ಪತ್ರೆಗಳ 70 ಸಾವಿರ ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಲಾಗಿದೆ. ಅದರಲ್ಲಿ 50 ಸಾವಿರ ಆಮ್ಲಜನಕ ಸೌಲಭ್ಯವಿರುವ ಹಾಸಿಗೆಗಳು’ ಎಂದು ಮಾಹಿತಿ ನೀಡಿದರು.



24 ಗಂಟೆಯೊಳಗಾಗಿ ಕೋವಿಡ್ ಪರೀಕ್ಷೆ ಫಲಿತಾಂಶ ನೀಡದ ಸರ್ಕಾರಿ, ಖಾಸಗಿ ಲ್ಯಾಬ್‌ಗಳಿಗೆ ಪ್ರತಿ ಪರೀಕ್ಷೆಗೆ ₹ 100ರಿಂದ ₹150ರವರೆಗೆ ದಂಡ ವಿಧಿಸಲಾಗುವುದು
ಡಾ.ಸಿ.ಎನ್. ಅಶ್ವತ್ಥನಾರಾಯಣ
ಕೋವಿಡ್ ಕಾರ್ಯಪಡೆ ಅಧ್ಯಕ್ಷ

‘ಶೇ 30ರಿಂದ 40ರಷ್ಟು ಗಂಭೀರವಲ್ಲದ ಸೋಂಕಿತರು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿ ಆಮ್ಲಜನಕ ಸೌಲಭ್ಯದ ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರನ್ನು ಕೂಡಲೇ ಸ್ಟೆಪ್‌ಡೌನ್ ಆಸ್ಪತ್ರೆಗಳಿಗೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ’ ಎಂದರು.

ರೆಮ್‌ಡಿಸಿವಿರ್ ಕೊರತೆ ಇಲ್ಲ: ‘ಇದೇ 9ರವರೆಗಿನ ಅವಧಿಗೆ ಹಂಚಿಕೆಯಾದ ರೆಮ್‌ಡಿಸಿವಿರ್‌ನಲ್ಲಿ 30,900 ಡೋಸ್ ಹಂಚಿಕೆಯಾಗಿದ್ದು, ಇನ್ನೂ 70 ಸಾವಿರ ಬಾಕಿ ಇದೆ. 10ರ ನಂತರದ ಒಂದು ವಾರಕ್ಕೆ 2.60 ಲಕ್ಷ ಡೋಸ್ ಹಂಚಿಕೆಯಾಗಿದ್ದು, ರಾಜ್ಯಕ್ಕೆ ತಲುಪಬೇಕಿದೆ. ಈ ಲೆಕ್ಕದ ಪ್ರಕಾರ ನಿತ್ಯ 37 ಸಾವಿರ ಡೋಸ್ ಲಭ್ಯವಾಗುತ್ತಿರುವುದರಿಂದ ಕೊರತೆಯ ಪ್ರಶ್ನೆಯೇ ಇಲ್ಲ’ ಎಂದರು.

‘ರಾಜ್ಯಕ್ಕೆ ರೆಮ್‌ಡಿಸಿವಿರ್ ಕೋಟಾವನ್ನು ಸಕಾಲದಲ್ಲಿ ಪೂರೈಸುವಂತೆ ಎಲ್ಲ ತಯಾರಿಕಾ ಕಂಪನಿಗಳಿಗೆ ನೋಟಿಸ್ ಜಾರಿ ಮಾಡಲಾಗುವುದು’ ಎಂದೂ ಅವರು ಹೇಳಿದರು.

ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಔಷಧ ಬಳಕೆಗೆ ಅನುಮತಿ

ನವದೆಹಲಿ (ಪಿಟಿಐ): ‘ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಕೋವಿಡ್ ತಡೆಗೆ ಅಭಿವೃದ್ಧಿಪಡಿಸಿದ ಔಷಧವನ್ನು ತುರ್ತು ಸಂದರ್ಭದಲ್ಲಿ ಸಹಾಯಕ ಚಿಕಿತ್ಸೆಯ ರೂಪದಲ್ಲಿ ಬಳಸಲು ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಅನುಮತಿ ನೀಡಿದ್ದಾರೆ’ ಎಂದು ರಕ್ಷಣಾ ಸಚಿವಾಲಯ ಶನಿವಾರ ತಿಳಿಸಿದೆ.

2–ಡಯಾಕ್ಸಿ–ಡಿ–ಗ್ಲೂಕೋಸ್ (2–ಡಿಜಿ) ಎಂಬ, ಬಾಯಿಯಿಂದ ಸೇವಿಸಬಹುದಾದ ಈ ಔಷಧವು ಕೋವಿಡ್‌ಗೆ ಒಳಗಾಗಿ, ಆಸ್ಪತ್ರೆಗೆ ದಾಖಲಾದ ರೋಗಿಗಳು ಶೀಘ್ರವಾಗಿ ಗುಣಮುಖರಾಗಲು ನೆರವಾಗುತ್ತದೆ ಎಂದು ಸಚಿವಾಲಯ ಹೇಳಿದೆ.

7ನೇ ಪುಟ ನೋಡಿ

ಆಮ್ಲಜನಕ ಟ್ಯಾಂಕರ್‌ಗಳಿಗೆ ಟೋಲ್ ಶುಲ್ಕ ಇಲ್ಲ

ನವದೆಹಲಿ (ಪಿಟಿಐ): ದ್ರವೀಕೃತ ವೈದ್ಯಕೀಯ ಆಮ್ಲಜನಕ ಒಯ್ಯುವ ಟ್ಯಾಂಕರ್‌ಗಳಿಗೆ ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ಶುಲ್ಕ ವಿನಾಯಿತಿ ನೀಡಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಶನಿವಾರ ಪ್ರಕಟಿಸಿದೆ.

ಕೋವಿಡ್ ಸಾಂಕ್ರಾಮಿಕದ ಕಾರಣ ವೈದ್ಯಕೀಯ ಆಮ್ಲಜನಕಗಳಿಗೆ ಅಭೂತಪೂರ್ವ ಬೇಡಿಕೆ ಬಂದಿರುವ ಕಾರಣ ಆಂಬುಲೆನ್ಸ್ ರೀತಿ ಇದನ್ನೂ ತುರ್ತುಸೇವೆ ಎಂದು ಪರಿಗಣಿಸಲಾಗುವುದು. ಈ ವಿನಾಯಿತಿ ಎರಡು ತಿಂಗಳ ಕಾಲ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ ಎಂದು ಪ್ರಾಧಿಕಾರ ಹೇಳಿಕೆಯಲ್ಲಿ ತಿಳಿಸಿದೆ. ಫಾಸ್ಟ್‌ಟ್ಯಾಗ್ ಅಳವಡಿಕೆ ಜಾರಿಗೆ ಬಂದ ಮೇಲೆ ಕಾಯುವಿಕೆ ಪ್ರಮಾಣ ಕಡಿಮೆಯಾಗಿದ್ದರೂ, ಆಮ್ಲಜನಕ ಕಂಟೇನರ್ ಸಾಗಿಸುವಂಥ ವಾಹನಗಳಿಗೆ ತಡೆಯಿಲ್ಲದೇ ಸಂಚರಿಸಲು ಈಗಾಗಲೇ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದೆ.

‘ಪಾಸಿಟಿವ್ ವರದಿ ಕಡ್ಡಾಯವಲ್ಲ’

ನವದೆಹಲಿ (ಪಿಟಿಐ): ಸರ್ಕಾರಿ ಅಥವಾ ಖಾಸಗಿ ಕೋವಿಡ್ ಆಸ್ಪತ್ರೆಗೆ ದಾಖಲಿಸುವಾಗ ಪಾಸಿಟಿವ್ ವರದಿ ಕಡ್ಡಾಯವಲ್ಲ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೊಸ ಸುತ್ತೋಲೆ ಹೊರಡಿಸಿದೆ. ಕೊರೊನಾ ಸೋಂಕಿತರು ಕೋವಿಡ್‌ಗೆ ಮೀಸಲಾಗಿರುವ ಆರೋಗ್ಯ ಕೇಂದ್ರಗಳಿಗೆ ದಾಖಲಾಗುವ ಸಂಬಂಧ ಇರುವ ರಾಷ್ಟ್ರೀಯ ನೀತಿಯನ್ನು ಕೇಂದ್ರ ಆರೋಗ್ಯ ಸಚಿವಾಲಯ ಪರಿಷ್ಕರಿಸಿದ್ದು, ರೋಗಿಯು ಬೇರೆ ನಗರದವರಾಗಿದ್ದರೂ ಆಮ್ಲಜನಕ ಮತ್ತು ಔಷಧಿ ಸೇರಿದಂತೆ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ಸಚಿವಾಲಯ ಹೇಳಿದೆ.

ಕೋವಿಡ್‌ನಿಂದ ಬಳಲುತ್ತಿರುವವರಿಗೆ ತ್ವರಿತ ಮತ್ತು ಪರಿಣಾಮಕಾರಿ ಚಿಕಿತ್ಸೆ ನೀಡುವ ಉದ್ದೇಶದಿಂದ ಈ ಕ್ರಮ ಜಾರಿಗೊಳಿಸಲಾಗಿದೆ. ರೋಗಿ ಚಿಕಿತ್ಸೆ ಪಡೆಯಲು ಬಂದ ಪ್ರದೇಶದ ಗುರುತಿನ ಚೀಟಿಯನ್ನು ತೋರಿಸಲು ವಿಫಲರಾದರೂ ಚಿಕಿತ್ಸೆ ನಿರಾಕರಿಸುವಂತಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಸಿ.ಟಿ. ಸ್ಕ್ಯಾನ್ ದರ ₹ 2,500ಕ್ಕೆ ಏರಿಕೆ



ಬೆಂಗಳೂರು: ರಾಜ್ಯದಾದ್ಯಂತ ಖಾಸಗಿ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನ್‌ಗೆ ₹ 1,500 ದರ ನಿಗದಿಪಡಿಸಿ ಶುಕ್ರವಾರ ಆದೇಶ ಹೊರಡಿಸಿದ್ದ ರಾಜ್ಯ ಸರ್ಕಾರ, ಒಂದೇ ದಿನದಲ್ಲಿ ಅದನ್ನು ಪರಿಷ್ಕರಿಸಿ ₹ 2,500 ಕ್ಕೆ ಏರಿಸಿದೆ.

ಆದರೆ, ಬಿಪಿಎಲ್ ಕಾರ್ಡ್ ಹೊಂದಿರುವವರಿಂದ ₹ 1,500 ಕ್ಕಿಂತ ಹೆಚ್ಚಿನ ಶುಲ್ಕ ಪಡೆಯುವ ಹಾಗಿಲ್ಲ. ಕೆಲ ಪ್ರಕರಣಗಳಲ್ಲಿ ಕೋವಿಡ್ ರೂಪಾಂತರ ವೈರಾಣು ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಕೂಡ ಪತ್ತೆಯಾಗುತ್ತಿಲ್ಲ. ಹೀಗಾಗಿ, ಸಿ.ಟಿ. ಸ್ಕ್ಯಾನ್‌ಗೆ ಬೇಡಿಕೆ ಹೆಚ್ಚಿದೆ. ಈ ಕಾರಣದಿಂದ ಖಾಸಗಿ ಆಸ್ಪತ್ರೆಗಳು ₹10 ಸಾವಿರದವರೆಗೆ ಕೂಡ ಶುಲ್ಕ ಪಡೆಯುತ್ತಿವೆ ಎಂಬ ದೂರುಗಳು ಕೇಳಿಬಂದಿದ್ದವು. ಇದಕ್ಕೆ ಕಡಿವಾಣ ಹಾಕಲು ಸರ್ಕಾರವು ₹ 1,500ಗೆ ನಿಗದಿ ಮಾಡಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಖಾಸಗಿ ವೈದ್ಯಕೀಯ ಸಂಸ್ಥೆಗಳು ಹಾಗೂ ಸ್ಕ್ಯಾನಿಂಗ್ ಕೇಂದ್ರಗಳು ಶುಲ್ಕ ಹೆಚ್ಚಿಸುವಂತೆ ಆಗ್ರಹಿಸಿದ್ದವು.

ಆಮ್ಲಜನಕ: ರಾಷ್ಟ್ರೀಯ ಕಾರ್ಯಪಡೆಯಲ್ಲಿ ದೇವಿ ಶೆಟ್ಟಿ

ನವದೆಹಲಿ: ರಾಜ್ಯಗಳಿಗೆ ವೈಜ್ಞಾನಿಕ ರೀತಿಯಲ್ಲಿ ಆಮ್ಲಜನಕ ಸರಬರಾಜಾಗುವುದನ್ನು ಖಚಿತಪಡಿಸಲು ಸುಪ್ರೀಂ ಕೋರ್ಟ್ ಶನಿವಾರ ಉನ್ನತ ಮಟ್ಟದ ವೈದ್ಯಕೀಯ ಅಧಿಕಾರಿಗಳನ್ನೊಳಗೊಂಡ, 12 ಮಂದಿ ಸದಸ್ಯರ ರಾಷ್ಟ್ರೀಯ ಕಾರ್ಯಪಡೆಯನ್ನು ರಚಿಸಿದೆ. ಬೆಂಗಳೂರಿನ ನಾರಾಯಣ ಹೆಲ್ತ್‌ಕೇರ್‌ನ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ದೇವಿಪ್ರಸಾದ್ ಶೆಟ್ಟಿ ಅವರು ಕಾರ್ಯಪಡೆಯ ಸದಸ್ಯರಲ್ಲಿ ಒಬ್ಬರಾಗಿದ್ದಾರೆ.

ರಾಜ್ಯಗಳಿಗೆ ನೀಡುವ ಆಮ್ಲಜನಕದ ಮೇಲ್ವಿಚಾರಣೆಗಾಗಿ ಪ್ರತಿ ರಾಜ್ಯಕ್ಕೆ ಒಂದು ಉಪಸಮಿತಿಯನ್ನು ರಚಿಸುವಂತೆ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎಂ.ಆರ್. ಶಾ ಅವರ ಪೀಠವು ಸೂಚಿಸಿದೆ.

ರಾಜ್ಯ ಸರ್ಕಾರದ ಕಾರ್ಯದರ್ಶಿ ಮಟ್ಟದ ಒಬ್ಬ ಅಧಿಕಾರಿ, ಕೇಂದ್ರ ಸರ್ಕಾರದ ಹೆಚ್ಚುವರಿ ಅಥವಾ ಜಂಟಿ ಕಾರ್ಯದರ್ಶಿ ಮಟ್ಟ ಒಬ್ಬ ಅಧಿಕಾರಿ, ಇಬ್ಬರು ವೈದ್ಯರು (ಅವರಲ್ಲಿ ಒಬ್ಬರಿಗೆ ಆಸ್ಪತ್ರೆಯ ವೈದ್ಯಕೀಯ ವ್ಯವಸ್ಥೆಯನ್ನು ನಿರ್ವಹಣೆ ಮಾಡಿದ ಅನುಭವ ಇರಬೇಕು) ಹಾಗೂ ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆಯ (ಪಿಇಎಸ್‌ಒ) ಒಬ್ಬ ಪ್ರತಿನಿಧಿ ಈ ಉಪಸಮಿತಿಯಲ್ಲಿರಬೇಕು ಎಂದು ಸೂಚಿಸಿದೆ.

‘ರಾಜ್ಯಗಳಿಗೆ ಸರಬರಾಜು ಮಾಡುವ ಆಮ್ಲಜನಕಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸುವುದು ನಮ್ಮ ಉದ್ದೇಶವೇ ವಿನಾ ರೋಗಿಗಳ ಒಳಿತಿಗಾಗಿ ವೈದ್ಯರು ಕೈಗೊಳ್ಳುವ ತೀರ್ಮಾನಗಳನ್ನು ಪ್ರಶ್ನಿಸುವುದಲ್ಲ’ ಎಂದು ಪೀಠ ಸ್ಪಷ್ಟಪಡಿಸಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲಾಕ್‌ಡೌನ್: ನಗರ ತೊರೆದು ಊರಿನತ್ತ ಹೊರಟ ಕಾರ್ಮಿಕರು

‘ಕೆಲಸ ಹೋಗಲಿ, ಪ್ರಾಣ ಉಳಿದರೆ ಸಾಕು...’

• ಜಿ.ಶಿವಕುಮಾರ

ಪ್ರಜಾವಾಣಿ ವಿಶೇಷ

ಬೆಂಗಳೂರು: ‘ಕೋವಿಡ್ ರೋಗಿಗಳು ಆಮ್ಲಜನಕ ಸೌಲಭ್ಯವನ್ನೊಳಗೊಂಡ ಹಾಸಿಗೆ ಸಿಗದೆ ನಡುರಸ್ತೆಯಲ್ಲೇ ಪ್ರಾಣ ಬಿಡುತ್ತಿದ್ದಾರೆ. ಇದನ್ನೆಲ್ಲಾ ಕಣ್ಣಾರೆ ನೋಡುತ್ತಿದ್ದೇವೆ. ಇಂತಹ ವಿಷಮ ಸ್ಥಿತಿಯಲ್ಲಿ ದುಡಿಮೆ ನೆಚ್ಚಿಕೊಂಡು ಬೆಂಗಳೂರಿನಲ್ಲಿ ಇರುವುದಾದರೂ ಹೇಗೆ? ಕೋವಿಡ್‌ನಿಂದ ಬೀದಿ ಹೆಣವಾಗುವ ಬದಲು ಊರಿಗೆ ಹೋಗಿ ಅಂಬಲಿ ಕುಡಿದಾದರೂ ಜೀವನ ನಡೆಸುತ್ತೇನೆ’...

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಬಳಿ ನಿಂತಿದ್ದ ಬಳ್ಳಾರಿಯ ಗಣೇಶ್ ಅವರನ್ನು ಮಾತಿಗೆಳೆದಾಗ ಅವರು ಹೇಳಿದ್ದು ಹೀಗೆ.



ಸಾಮಾನು ಸರಂಜಾಮು ಹೊತ್ತುಕೊಂಡು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ಬಂದ ಪ್ರಯಾಣಿಕರು ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

‘ವೈಟ್‌ಫೀಲ್ಡ್‌ನಲ್ಲಿರುವ ಚೈತನ್ಯ ಪ್ರಾಜೆಕ್ಟ್ಸ್ ಕಂಪನಿಯಲ್ಲಿ ಗಾರೆ ಕೆಲಸ ಮಾಡುತ್ತಿದ್ದೆ. ಪ್ರತಿ ನಿತ್ಯ ₹1 ಸಾವಿರ ಕೂಲಿ ನೀಡುತ್ತಿದ್ದರು. ಒಂದೆರಡು ಗಂಟೆ ಹೆಚ್ಚು ದುಡಿದರೆ ₹400 ಅಧಿಕ ಕೂಲಿ ಸಿಗುತ್ತಿತ್ತು. ಹೀಗಾಗಿ ಜೀವನ ಉಲ್ಲಾಸಮಯವಾಗಿತ್ತು. ಆದರೆ ಈ ಕೊರೊನಾ ಬದುಕಿನ ಖುಷಿಯನ್ನೇ ಕಸಿದುಕೊಂಡಿದೆ. ಬೆಂಗಳೂರಿನಲ್ಲಿ ನಿತ್ಯವೂ ನೂರಾರು ಮಂದಿ ಕೋವಿಡ್‌ನಿಂದ ಜೀವ ಕಳೆದುಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ಟಿ.ವಿ.ಯಲ್ಲಿ ನೋಡಿ ಮನೆಯವರು ಗಾಬರಿಯಾಗಿದ್ದಾರೆ. ನೀನು ದುಡಿದು ನಮ್ಮನ್ನು ಸಾಕದಿದ್ದರೂ ಪರವಾಗಿಲ್ಲ ಬೇಗ ಮನೆಗೆ ಬಂದುಬಿಡು ಎಂದು ಪ್ರತಿನಿತ್ಯ ಕರೆ ಮಾಡುತ್ತಿದ್ದರು. ಹೀಗಾಗಿ ಊರಿಗೆ ಹೊರಟಿದ್ದೇನೆ’ ಎಂದು ತಿಳಿಸಿದರು.

‘ಸದ್ಯಕ್ಕಂತೂ ಬೆಂಗಳೂರಿನ ಕಡೆ ಮುಖ ಮಾಡುವುದಿಲ್ಲ. ಕೊರೊನಾ ಪ್ರಕರಣಗಳು ಕಡಿಮೆಯಾಗಲಿ. ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದ ನಂತರ ನೋಡೋಣ’ ಎಂದರು.

7ನೇ ಪುಟ ನೋಡಿ



ರಕ್ಷಾ ಕವಚ ಬೆಂಗಳೂರಿನ ದೊಡ್ಡಣ್ಣ ಕೈಗಾರಿಕಾ ಪ್ರದೇಶದ ಸಿಪ್ರಾ ಸರ್ಜಿ- ಮೆಡ್ ಘಟಕದಲ್ಲಿ ಶನಿವಾರ ಕೋವಿಡ್‌ನಿಂದ ರಕ್ಷಣೆ ನೀಡುವ ಪಿಪಿಇ ಕಿಟ್‌ಗಳನ್ನು ಹೊಲಿಯುವುದರಲ್ಲಿ ಮಹಿಳೆಯರು ನಿರತರಾಗಿದ್ದರು
ಪ್ರಜಾವಾಣಿ ಚಿತ್ರ/ ರಂಜು ಪಿ.

ಕೆ.ಆರ್.ಪುರ ಸಾರ್ವಜನಿಕರ ಒತ್ತಾಯ • ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆ ಬಿಟ್ಟುಕೊಡಲು ಸಿದ್ಧವಿದೆ ಆಡಳಿತ ಮಂಡಳಿ

ಐಟಿಐ ಆಸ್ಪತ್ರೆ ಕೋವಿಡ್ ಚಿಕಿತ್ಸೆಗೆ ಬಳಕೆಯಾಗಲಿ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ನಗರದಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳದಿಂದಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಾಮರ್ಥ್ಯ ಹೆಚ್ಚಿಸಬೇಕು ಎನ್ನುವ ಬೇಡಿಕೆ ಎಲ್ಲೆಡೆ ವ್ಯಕ್ತವಾಗುತ್ತಿದೆ. ಇನ್ನೊಂದೆಡೆ ಮೂಲಸೌಕರ್ಯಗಳು ಸಾಕಷ್ಟಿರುವ ಆಸ್ಪತ್ರೆಗಳೂ ವೈದ್ಯರು ಹಾಗೂ ಸಿಬ್ಬಂದಿ ಕೊರತೆಯಿಂದಾಗಿ ಪೂರ್ಣಪ್ರಮಾಣದಲ್ಲಿ ಬಳಕೆ ಆಗುತ್ತಿಲ್ಲ. ಇಂತಹ ಆಸ್ಪತ್ರೆಗಳ ಬಲವರ್ಧನೆ ಮಾಡಿ ತುರ್ತು ಸಂದರ್ಭದಲ್ಲಿ ಬಳಸಿಕೊಳ್ಳಬೇಕು ಎಂಬ ಕೂಗೆದ್ದಿದೆ.

ಕೆ.ಆರ್.ಪುರದ 'ಐಟಿಐ ಮ್ಯಾನೇಜ್‌ಮೆಂಟ್ ಆಫಿಸರ್ಸ್ ಜನರಲ್ ಆಸ್ಪತ್ರೆಯಲ್ಲಿ 100 ಹಾಸಿಗೆಗಳ ವ್ಯವಸ್ಥೆ ಇದೆ. ಸ್ನಾನ ಗೃಹ ಜೊತೆಗೆ ಶೌಚಾಲಯ ಹಾಗೂ ವಿಶಾಲವಾದ ಆವರಣವನ್ನೂ ಇದು ಹೊಂದಿದೆ. ಇಲ್ಲಿನ ಬಹುತೇಕ ಸೌಕರ್ಯಗಳು ನನೆಗುದಿಗೆ ಬಿದ್ದಿವೆ. ಈ ಆಸ್ಪತ್ರೆಯನ್ನು ನವೀಕರಿಸಿ ತಕ್ಷಣವೇ ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಳಸಿ ಎಂದು ಕೆ.ಆರ್.ಪುರದ ನಾಗರಿಕರು ಒತ್ತಾಯಿಸಿದ್ದಾರೆ.


ಕೇಂದ್ರ ಸರ್ಕಾರವು ಕೆ.ಆರ್. ಪುರದಲ್ಲಿ 1948 ರಲ್ಲಿ ಐಟಿಐಯನ್ನು ಸ್ಥಾಪಿಸಿತ್ತು. ಇಲ್ಲಿನ ಸಾವಿರಾರು ಉದ್ಯೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಸುಸಜ್ಜಿತ ವ್ಯವಸ್ಥೆ ಹೊಂದಿರುವ 'ಐಟಿಐ ಮ್ಯಾನೇಜ್‌ಮೆಂಟ್ ಆಫಿಸರ್ಸ್ ಜನರಲ್ ಆಸ್ಪತ್ರೆ'ಯನ್ನೂ ಆಗಲೇ ನಿರ್ಮಾಣ ಮಾಡಲಾಗಿತ್ತು.

ಒಂದು ಕಾಲದಲ್ಲಿ ಆಸುಪಾಸಿನ ಊರುಗಳ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುತ್ತಿದ್ದ ಆಸ್ಪತ್ರೆ ಈಗ ಪೂರ್ಣ ಪ್ರಮಾಣದಲ್ಲಿ ಬಳಕೆ ಆಗುತ್ತಿಲ್ಲ. ಇಲ್ಲಿ ಹೊರ ರೋಗಿಗಳ ವಿಭಾಗ (ಒಪಿಡಿ) ಮಾತ್ರ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆ. ಒಬ್ಬ ವೈದ್ಯ ಮಾತ್ರ ಇದ್ದಾರೆ. ಒಳರೋಗಿಗಳನ್ನು ದಾಖಲಿಸಿಕೊಳ್ಳದೇ ವರ್ಷಗಳೇ ಉರುಳಿವೆ. ಐಟಿಐ ಸಿಬ್ಬಂದಿ ಜೊತೆಗೆ ಹೊರಗಿನಿಂದ ಬರುವ ಸಾರ್ವಜನಿಕರು ಆಸ್ಪತ್ರೆಯ ಹೊರರೋಗಿಗಳ ಸೇವೆಯನ್ನು ಮಾತ್ರ ಬಳಸಲು ಸಾಧ್ಯವಾಗುತ್ತಿದೆ.

ಐಟಿಐ ಆಸ್ಪತ್ರೆಯನ್ನು ಕೋವಿಡ್ ಕೇಂದ್ರವಾಗಿ ಮಾರ್ಪಡಿಸಿ ಈ ಭಾಗದ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದರೆ ಅನುಕೂಲವಾಗುತ್ತದೆ. ಮಹದೇವಪುರ ವಲಯದ ಕೋವಿಡ್ ಉಸ್ತುವಾರಿ ವಹಿಸಿಕೊಂಡಿರುವ ಸಚಿವ ಬೈರತಿ ಬಸವರಾಜು ಅವರು ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ಈ ಆಸ್ಪತ್ರೆಯನ್ನು ಕೋವಿಡ್ ಚಿಕಿತ್ಸೆಗೆ ಬಳಸಲು ಆಸಕ್ತಿ ತೋರಿಸಬೇಕು ಎಂದು ಈ ಭಾಗದ ಸಾರ್ವಜನಿಕರು ಒತ್ತಾಯಿಸಿದ್ದಾರೆ.

'ಕೆ.ಆರ್.ಪುರಕ್ಕೆ ಹೊಂದಿಕೊಂಡಿರುವ ಐಟಿಐ ಜನರಲ್ ಆಸ್ಪತ್ರೆಯಲ್ಲಿ ಐಸೋಲೇಷನ್ ಪೈಪ್‌ಗಳನ್ನು ಮೊದಲೇ ಅಳವಡಿಸಲಾಗಿದೆ. ಕೇವಲ ಆಕ್ಸಿಜನ್ ವ್ಯವಸ್ಥೆ ಕಲ್ಪಿಸಿದರೆ ಕೋವಿಡ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಬಹುದಾಗಿದೆ. ಐಟಿಐ ಆಡಳಿತ ಮಂಡಳಿ ಇದನ್ನು ಕೋವಿಡ್ ಚಿಕಿತ್ಸೆಗೆ ಒದಗಿಸಲು ಸಿದ್ಧವಿದೆ. ಸರ್ಕಾರ ಮುಂದೆ ಬಂದರೆ ಐಟಿಐ ಜನರಲ್ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಬಳಸಬಹುದು' ಎಂದು ಐಟಿಐನ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ವೈದ್ಯಕೀಯ ಸಿಬ್ಬಂದಿ ಕೊರತೆ ಹೊರತುಪಡಿಸಿದರೆ, ಇಲ್ಲಿನ ಸೌಲಭ್ಯಗಳು ಕೋವಿಡ್ ರೋಗಿಗಳ ಚಿಕಿತ್ಸೆಗೆ ಹೇಳಿ ಮಾಡಿಸಿದಂತಿವೆ. ರಾಜ್ಯ ಸರ್ಕಾರ ಕೂಡಲೇ ಇದನ್ನು ತನ್ನ ತೆಕ್ಕೆಗೆ ಪಡೆದು ಐಟಿಐ ಆಸ್ಪತ್ರೆಗೆ ವೈದ್ಯಕೀಯ ಸಿಬ್ಬಂದಿ ಜೊತೆಗೆ ಆಮ್ಲಜನಕ ಪೂರೈಕೆ ಮತ್ತಿತರ ಸವಲತ್ತುಗಳನ್ನು ಒದಗಿಸಬಹುದು. ಸರ್ಕಾರ ಈ ಬಗ್ಗೆ ಆಸಕ್ತಿ ವಹಿಸಿಬೇಕು' ಎಂದು ಸ್ಥಳೀಯ ನಿವಾಸಿ ವೇಣುಗೋಪಾಲ ಒತ್ತಾಯಿಸಿದರು.





ಐಟಿಐ ಆಫಿಸರ್ಸ್ ಜನರಲ್ ಆಸ್ಪತ್ರೆ (ಎಡಚಿತ್ರ) ಕೆ.ಆರ್.ಪುರದ ಐಟಿಐ ಭವನ ಕಟ್ಟಡ

ಪ್ರಜಾವಾಣಿ ವಿಶೇಷ


ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ ಮೇಲೆ ಒತ್ತಡ

ಮಹದೇವಪುರ ವಲಯದಲ್ಲಿ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳಿಂದಾಗಿ ಸಾರ್ವಜನಿಕರು ಆಸ್ಪತ್ರೆಗಳಿಗೆ ಎಡತಾಕುವಂತಾಗಿದೆ. ಪೂರ್ವ ತಾಲ್ಲೂಕು ವ್ಯಾಪ್ತಿಯಲ್ಲಿ ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆ ಇದ್ದು ಇದು 100 ಹಾಸಿಗೆಯನ್ನು ಮಾತ್ರ ಹೊಂದಿದೆ. ಮಾಜಿ ಸಚಿವ ಎ.ಕೃಷ್ಣಪ್ಪ ಅವರ ಕಾಲದಲ್ಲಿ ಆರಂಭವಾದ ಈ ಆಸ್ಪತ್ರೆ ಇನ್ನೂ ಮೇಲ್ದರ್ಜೆಗೆ ಏರಿಲ್ಲ. ಇಲ್ಲಿಗೆ ಬರುವ ರೋಗಿಗಳ ಸಂಖ್ಯೆಯು ಹೆಚ್ಚಿದೆ. ಆಸ್ಪತ್ರೆ ಆರಂಭವಾದ ಬಳಿಕ ಈ ಕೆ.ಆರ್.ಪುರ ಕ್ಷೇತ್ರ ನಾಲ್ವರು ಶಾಸಕರನ್ನು ಕಂಡಿದೆ. ಅವರ ಅವಧಿಯಲ್ಲಿ ಇದರ ಅಭಿವೃದ್ಧಿಯ ಪ್ರಯತ್ನಗಳು ನಡೆದಿಲ್ಲ.

'ಆತ್ಮವಿಶ್ವಾಸವೇ ಮೊದಲ ಮದ್ದು'

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆ



ಬೆಂಗಳೂರು: 'ಕೋವಿಡ್ ಪೀಡಿತನಾಗಿ ಆಸ್ಪತ್ರೆ ಸೇರಿದಾಗ ಕಾಯಿಲೆ ಬಗ್ಗೆ ಅಷ್ಟಾಗಿ ತಿಳಿಯದ ಕಾರಣ ಭಯಭೀತನಾಗಿದ್ದೆ. ಹೀಗಾಗಿ, ನಾನು ಯಾರಿಗೆಲ್ಲ ಹಣ ನೀಡುವುದಿದೆ ಮತ್ತು ಮಗನಿಗೆ ಏನೆಲ್ಲ ಹೇಳಬೇಕು ಎಂಬುದನ್ನು ಬರೆಯಲಾರಂಭಿಸಿದೆ. ಇದನ್ನು ನೋಡಿ ನಗಲಾರಂಭಿಸಿದ ವೈದ್ಯರು, 'ಆತ್ಮವಿಶ್ವಾಸವನ್ನು ಕಳೆದಕೊಳ್ಳಬೇಡಿ' ಎಂದು ಧೈರ್ಯ ತುಂಬಿದರು. ಪರಿಣಾಮ ಎಂಟೇ ದಿನಗಳಲ್ಲಿ ಚೇತರಿಸಿಕೊಂಡು, 12ನೇ ದಿನಕ್ಕೆ ಆಸ್ಪತ್ರೆಯಿಂದ ಮನೆಗೆ ಬಂದೆ.'

'ಕಳೆದ ಫೆಬ್ರುವರಿಯಲ್ಲಿ ರಸ್ತೆಗಳ ಡಾಂಬರೀಕರಣ, ಕಾವೇರಿ ನೀರು ಸಂಪರ್ಕ ಕಾಮಗಾರಿಗೆ ಚಾಲನೆ ಕಾರ್ಯಕ್ರಮವನ್ನು ನಾವು ವಾಸವಿರುವ ಭರತ್ ನಗರದಲ್ಲಿ ಬಿಬಿಎಂಪಿ ಹಮ್ಮಿಕೊಂಡಿತ್ತು. ಅದನ್ನು ನನ್ನಿಂದಲೇ ಉದ್ಘಾಟಿಸಿದರು. ಅಲ್ಲಿ ಸುಮಾರು 150 ಮಂದಿ ಸೇರಿದ್ದರು. ಅದಾದ ಮೂರು–ನಾಲ್ಕು ದಿನಗಳ ಬಳಿಕ ತಲೆನೋವು ಹಾಗೂ ಕೆಮ್ಮು ಕಾಣಿಸಿಕೊಂಡಿತು. ಉಷ್ಣತಾ ಮಾಪಕದಲ್ಲಿ ಉಷ್ಣಾಂಶ ಪರೀಕ್ಷಿಸಿದಾಗ ಜ್ವರ ಇರುವುದು ಪತ್ತೆಯಾಯಿತು. ಕೂಡಲೇ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಪರೀಕ್ಷೆಗೆ ಗಂಟಲ ದ್ರವದ ಮಾದರಿ ಒದಗಿಸಿದೆ. ಮರುದಿನ ಬಂದ ಪರೀಕ್ಷೆ ವರದಿಯಲ್ಲಿ ಸೋಂಕಿತನಾಗಿರುವುದು ದೃಢಪಟ್ಟಿತು. ಆ ವೇಳೆಗೆ ಕೆಮ್ಮು ಕೂಡ ಜಾಸ್ತಿಯಾಗಿತ್ತು.'

'ಅಪೋಲೊ ಆಸ್ಪತ್ರೆಗೆ ದಾಖಲಿಸಿ, ವಿಶೇಷ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದೆ. ಆ ವೇಳೆ ನನಗೆ ಸರಿಯಾಗಿ ಮಾತನಾಡಲೂ ಸಾಧ್ಯವಾಗುತ್ತಿರಲಿಲ್ಲ. ಶೇ 90ರಷ್ಟು ಧ್ವನಿ ನಷ್ಟವಾಗಿತ್ತು. ನನ್ನಿಂದ ಪತ್ನಿ ಮತ್ತು ಪುತ್ರನಿಗೆ ಕೂಡ ಸೋಂಕು ಹರಡಿತ್ತು. ಪತ್ನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಯಿತು. ನಾನು ಮನೆಗೆ ಬಂದ ಬಳಿಕ ನಿಗಾ ವ್ಯವಸ್ಥೆಗೆ ಒಳಪಟ್ಟೆ. ಬಳಿಕವೂ ಆಯಾಸವಿತ್ತು. ಕೋವಿಡ್ ಪೂರ್ವಕ್ಕೆ ಬರಲು ಮತ್ತೆ 15 ದಿನಗಳು ಬೇಕಾದವು.'

'ಆಸ್ಪತ್ರೆಯ ಅವಧಿಯಲ್ಲಿ ನಾನು ಪುಸ್ತಕಗಳನ್ನು ಓದುವ ಮೂಲಕ ಸಮಯ ಕಳೆದೆ. ಈ ಹವ್ಯಾಸದಿಂದ ಸಕಾರಾತ್ಮಕ ಆಲೋಚನೆಗಳನ್ನು ಹೊಂದಲು ಸಾಧ್ಯವಾಯಿತು. ರೋಗನಿರೋಧಕ ಶಕ್ತಿ ವೃದ್ಧಿಗೆ ಪೂರಕವಾದ ಕಷಾಯಗಳನ್ನು ಸೇವಿಸಿದೆ. ಕೋವಿಡ್ ಕಾಯಿಲೆಯ ಬಗ್ಗೆ ಅನಗತ್ಯವಾಗಿ ಭಯಕ್ಕೆ ಒಳಗಾಗಿ, ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು. ಬದಲಾಗಿ ಈ ಕಾಯಿಲೆ ಬರದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿ, ಉತ್ತಮ ಜೀವನಕ್ರಮವನ್ನು ಅಳವಡಿಸಿಕೊಳ್ಳಬೇಕು. ಲಸಿಕೆಯನ್ನು ಆದಷ್ಟು ಬೇಗ ಪಡೆದುಕೊಳ್ಳಬೇಕು. ನಾನು ಎರಡೂ ಡೋಸ್ ಪಡೆದುಕೊಂಡಿದ್ದೇನೆ. ವ್ಯಾಯಾಮ, ಪ್ರಾಣಾಯಾಮವನ್ನು ಮಾಡಬೇಕು.'

'ಕೋವಿಡ್ ವೇಗವಾಗಿ ಹರಡುತ್ತಿದೆ. ಹಾಗಾಗಿ, ಈ ವೇಳೆ ಮನೆಯಲ್ಲಿಯೇ ಇದ್ದು, ಮುನ್ನೆಚ್ಚರಿಕ ವಹಿಸಬೇಕು. ತರಕಾರಿ ಸೇರಿದಂತೆ ವಿವಿಧ ಅಗತ್ಯ ವಸ್ತುಗಳನ್ನು ಖರೀದಿಸಿ ಬಂದ ಬಳಿಕ ಕೂಡ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಮನೆಯ ಎಲ್ಲ ಸದಸ್ಯರಿಗೆ ವೈರಾಣು ಹರಡುವ ಸಾಧ್ಯತೆ ಇರುತ್ತದೆ.'

ಕೆ.ವಿ.ನಾಗರಾಜಮೂರ್ತಿ, ರಂಗಕರ್ಮಿ

'ಕುಟುಂಬ ದೂರದಲ್ಲಿದೆ, ಸೇವೆ ನಿರಾತಂಕ'

ಪ್ರಜಾವಾಣಿ ವಾರ್ತೆ

ಶುಶ್ರೂಷಕರ ಅಂತರಂಗ



ಬೆಂಗಳೂರು: 'ಕುಟುಂಬದವರೆಲ್ಲ ದೂರದ ಊರಿನಲ್ಲಿರುವುದರಿಂದ ಕೊರೊನಾ ಸೇವೆ ಮಾಡಲು ನನಗೆ ಆತಂಕವಿಲ್ಲ. ಆದರೆ, ಈಗಿನ ಪರಿಸ್ಥಿತಿಯಿಂದ ಹೆದರಿರುವ ನನ್ನ ತಾಯಿ ಪ್ರತಿ ದಿನವೂ ಕರೆ ಮಾಡಿ ಯೋಗಕ್ಷೇಮ ವಿಚಾರಿಸುತ್ತಾರೆ. 'ಕೆಲಸ ಬಿಟ್ಟು ಮನೆಗೆ ಬಾ' ಎಂದೂ ಆಗಾಗ ಗದರುತ್ತಾರೆ. ಅವರಿಗೆ ಧೈರ್ಯ ತುಂಬಿ ಕೆಲಸಕ್ಕೆ ತೆರಳುತ್ತೇನೆ'.

ಇದು, ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊರೊನಾ ಸೇವೆಯಲ್ಲಿ ತೊಡಗಿರುವ ಆರೋಗ್ಯ ಸಿಬ್ಬಂದಿ ಡಿ.ಬಿಂದು ಅವರ ಅಂತರಂಗದ ಮಾತು.

'ಕಳೆದ ವರ್ಷ ಹಾಗೂ ಸದ್ಯದ ಪರಿಸ್ಥಿತಿಯಲ್ಲಿನ ಮಾತು ಕೊರೊನಾ ಆಗಿದ್ದರೂ, ಪರಿಸ್ಥಿತಿಗಳು ಭಿನ್ನವಾಗಿವೆ. ಕಳೆದ ವರ್ಷ ಈಗಿನಂತೆ ಆಮ್ಲಜನಕದ ಕೊರತೆ ಎದುರಾಗಿರಲಿಲ್ಲ. ಸಾವಿನ ಪ್ರಮಾಣವೂ ಕಡಿಮೆ ಇತ್ತು. ಈಗ ತದ್ವಿರುದ್ಧದ ವಾತಾವರಣ'.

'ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವ ತಂದೆಯ ಚಿಂತೆ ಕರ್ತವ್ಯದ ವೇಳೆಯೂ ಕಾಡುತ್ತದೆ. ಈಗ ಊರಿಗೆ ಹೋಗಲೂ ಸಾಧ್ಯವಿಲ್ಲ. ಇಲ್ಲಿನ ರೋಗಿಗಳ ಆರೈಕೆಯಿಂದಲೇ ಅಲ್ಲಿನ ತಂದೆಯ ಆರೋಗ್ಯ ಕ್ಷೇಮ ಎಂದು ಕೊಳ್ಳುತ್ತೇನೆ'.

'ಆಸ್ಪತ್ರೆಯವರೇ ನನಗೆ ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಕೋಣೆಯಲ್ಲಿ ಒಬ್ಬಳೇ ಇರುವುದರಿಂದ ಒಂದು ರೀತಿಯಲ್ಲಿ ಕ್ವಾರೆಂಟೈನ್ ಜೀವನ. ಹಾಗಾಗಿ, ನನ್ನಿಂದ ಇತರರಿಗೆ ಸೋಂಕು ಹರಡುವುದಿಲ್ಲ ಎಂಬ ನಂಬಿಕೆಯಲ್ಲಿ ಹೆಜ್ಜೆ ಇಡುತ್ತೇನೆ. ಆದರೆ, ಆಸ್ಪತ್ರೆಗೆ ಬರುವ ಸೋಂಕಿತರನ್ನು ನಿರ್ವಹಿಸುವಾಗ ಎಷ್ಟೇ ಜಾಗ್ರತೆಯಿಂದ ಇದ್ದರೂ ಸೋಂಕು ತಗುಲುವ ಸಾಧ್ಯತೆ ಇರುತ್ತದೆ'.

'ಸೋಂಕಿತರನ್ನು ನಿಭಾಯಿಸುವುದು ಸವಾಲಿನ ಕೆಲಸ. ಪ್ರತಿಯೊಬ್ಬರ ಮನಸ್ಥಿತಿ ವಿಭಿನ್ನವಾಗಿರುತ್ತವೆ. ಅವರಷ್ಟೇ ಒತ್ತಡ ನಮಗೂ ಇರುತ್ತದೆ. ಅದನ್ನು ಕೆಲವೇ ಮಂದಿ ಅರ್ಥ ಮಾಡಿಕೊಳ್ಳುತ್ತಾರೆ. ಆಸ್ಪತ್ರೆಗೆ ಬಂದ ಮೇಲೆ ಕುಟುಂಬದವರಿಂದ ದೂರವಿರಲು ಸಾಧ್ಯವಾಗದೆ, ಗೋಳಾಡುತ್ತಾರೆ. ಮನೆಗೆ ಹೋಗಬೇಕು, ತನ್ನವರನ್ನು ಕಾಣಬೇಕು ಎಂದು ಹಠ ಮಾಡುತ್ತಾರೆ. ಆಗ ಬೇರೆ ದಾರಿ ಕಾಣದೆ, ವಿಡಿಯೊ ಕರೆ ಮಾಡಿಸಿ, ಕುಟುಂಬದವರನ್ನು ಸಂಪರ್ಕಿಸುತ್ತೇವೆ. ಇದಾದ ಬಳಿಕ ರೋಗಿಗಳು ಸಮಾಧಾನದಿಂದ ವರ್ತಿಸುತ್ತಾರೆ'.

'ಸೋಂಕಿನ ಲಕ್ಷಣಗಳು ಕಂಡು ಬಂದರೆ ಭಯಗೊಳ್ಳಬೇಡಿ. ಆರಂಭಿಕ ಹಂತದಲ್ಲಿರುವವರು ಆಸ್ಪತ್ರೆಗೆ ದಾಖಲಾಗುವ ಬದಲು ಮನೆಯಲ್ಲೇ ಗುಣಮುಖವಾಗಬಹುದು. ಸೋಂಕು ಲಕ್ಷಣ ಕಾಣಿಸಿಕೊಂಡರೆ, ಮನೆಯಲ್ಲೇ ಪ್ರತ್ಯೇಕಗೊಂಡು, ಚಿಕಿತ್ಸೆಗೆ ಪಡೆಯಿರಿ. ಈಗ ರೋಗಿಗಳಿಗೆ ಹಾಸಿಗೆ ಸಮಸ್ಯೆ ಇರುವುದರಿಂದ ತುರ್ತು ಅಗತ್ಯವಿದ್ದವರಿಗೂ ಸಕಾಲದ ಚಿಕಿತ್ಸೆ ಸಿಗಬಹುದು'.

ಪರಿಚಯ

ಹೆಸರು: ಬಿಂದು ಡಿ.
ಊರು: ದಾವಣಗೆರೆ
ವೃತ್ತಿ: ಕೋವಿಡ್ ವಾರ್ಡ್ ಉಸ್ತುವಾರಿ
ಸೇವೆ: 9 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ಫೋರ್ಟಿಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು



ನೆರವಿನ ಚೆಕ್ ವಿತರಣಾ ಕಾರ್ಯಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ ಸಾಂಕೇತಿಕವಾಗಿ ಚಾಲನೆ ನೀಡಿದರು. ಸಚಿವ ಸೋಮಶೇಖರ್ ಇದ್ದಾರೆ.

'27 ಕುಟುಂಬಗಳಿಗೆ ತಲಾ ₹1 ಲಕ್ಷ ನೆರವು'

ಬೆಂಗಳೂರು: 'ಯಶವಂತಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಕುಟುಂಬದ ಯಾರಾದರೂ ಕೋವಿಡ್‌ನಿಂದ ಮೃತಪಟ್ಟರೆ, ಅಂತಹ 100 ಕುಟುಂಬಗಳಿಗೆ ವೈಯಕ್ತಿಕವಾಗಿ ₹1 ಲಕ್ಷ ನೆರವು ನೀಡುವುದಾಗಿ ಘೋಷಿಸಿದ್ದೆ. ಅಂತೆಯೇ ಕೆಂಗೇರಿಯ ವಾರ್ಡ್‌ನಲ್ಲಿ 27 ಕುಟುಂಬಗಳಿಗೆ ಸಾಂಕೇತಿಕವಾಗಿ ಪರಿಹಾರದ ಮೊತ್ತ ವಿತರಿಸಲಾಗಿದೆ. ಹೆಸರು ನೋಂದಾಯಿಸಿಕೊಂಡಿರುವ ಇತರ ಕುಟುಂಬಗಳಿಗೆ ಭಾನುವಾರದಿಂದ ಚೆಕ್ ನೀಡಲಾಗುತ್ತದೆ' ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

'ಸರ್ಕಾರಿ ಕೋಟಾದಡಿ ಬಿಬಿಎಂಪಿ ಮೂಲಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ತಲಾ ₹25 ಸಾವಿರ, ಖಾಸಗಿಯಾಗಿ ಚಿಕಿತ್ಸೆ ಪಡೆಯುತ್ತಿರುವವರಿಗೆ ತಲಾ ₹50 ಸಾವಿರ ನೀಡಲಿದ್ದೇನೆ. ಕ್ಷೇತ್ರದಲ್ಲಿ ಒಟ್ಟು 5 ಸಾವಿರ ಮಂದಿಗೆ ಸೋಂಕು ತಗುಲಿದೆ. ಅವರ ಮನೆಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗುತ್ತಿದೆ. ಈ ಕುಟುಂಬಗಳಿಗೆ ದಿನಸಿ ಹಾಗೂ ಔಷಧ ಕಿಟ್‌ಗಳನ್ನು ಉಚಿತವಾಗಿ ನೀಡುವ ವ್ಯವಸ್ಥೆ ಮಾಡಿದ್ದೇನೆ. 1 ಸಾವಿರ ಕಾರ್ಯಕರ್ತರು ಈ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ' ಎಂದರು.

'15 ಲಕ್ಷ ಆ್ಯಂಟಿಜೆನ್ ಪರೀಕ್ಷಾ ಕಿಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದಿಂದ 15 ಲಕ್ಷ ಆ್ಯಂಟಿಜೆನ್ ಪರೀಕ್ಷಾ ಕಿಟ್‌ಗಳನ್ನು ಬಿಬಿಎಂಪಿಗೆ ಪೂರೈಸಲಾಗುತ್ತಿದೆ. ಇದರಿಂದ ಕೊರೊನಾ ಸೋಂಕಿತರನ್ನು ತ್ವರಿತವಾಗಿ ಪತ್ತೆ ಹಚ್ಚಬಹುದಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ಡಾ. ಬಾಬುಜಗಜೀವನರಾಮ್ ನಗರದಲ್ಲಿನ ಹೆರಿಗೆ ಆಸ್ಪತ್ರೆಯಲ್ಲಿ ತೆರೆಯಲಾಗಿರುವ ಸ್ಥಿರೀಕರಣ ಕೇಂದ್ರಕ್ಕೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಜೊತೆ ಶನಿವಾರ ಭೇಟಿ ನೀಡಿದ ಅವರು ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು. 'ಕೋವಿಡ್ ಪರೀಕ್ಷೆಗಳನ್ನು ತ್ವರಿತವಾಗಿ ನಡೆಸುವುದರಿಂದ ಶೀಘ್ರ ಚಿಕಿತ್ಸೆ ನೀಡುವುದು ಸಾಧ್ಯವಾಗುತ್ತದೆ. ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯೂ ಇದರಿಂದಾಗಿ ತಗ್ಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಜಗಜೀವನ್‌ರಾಮ್‌ನಗರದ ಹೆರಿಗೆ ಆಸ್ಪತ್ರೆಗೆ ಶನಿವಾರ ಭೇಟಿ ನೀಡಿದ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಗೌರವ್ ಗುಪ್ತ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು. ಸರ್ಫರಾಜ್ ಖಾನ್, ಡಾ.ನಿರ್ಮಲಾ ಬುಗ್ಗಿ ಇದ್ದಾರೆ

ಆಮ್ಲಜನಕ ಹಾಸಿಗೆ ಸೌಲಭ್ಯ: ಸೋಂಕಿತರಿಗೆ ಆಮ್ಲಜನಕ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ನಗರದಲ್ಲಿನ ಕೋವಿಡ್ ಆರೈಕೆ ಕೇಂದ್ರಗಳು ಹಾಗೂ 12 ಹೆರಿಗೆ ಆಸ್ಪತ್ರೆಗಳನ್ನು ಆಮ್ಲಜನಕ ಸೌಲಭ್ಯ ಇರುವ ಸ್ಥಿರೀಕರಣ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. ಹೆರಿಗೆ ಆಸ್ಪತ್ರೆಗಳಲ್ಲಿ ಒಟ್ಟು 254 ಹಾಸಿಗೆಗಳು ಇದ್ದು, 240 ಹಾಸಿಗೆಗಳಿಗೆ ಆಮ್ಲಜನಕ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಜಗಜೀವನರಾಮ್‌ನಗರದ ಹೆರಿಗೆ ಆಸ್ಪತ್ರೆಯಲ್ಲಿ 30 ಹಾಸಿಗೆ ಸಾಮರ್ಥ್ಯವಿದ್ದು, 30 ಹಾಸಿಗೆಗಳಿಗೂ ಆಮ್ಲಜನಕ ವ್ಯವಸ್ಥೆ ಮಾಡಲಾಗಿದೆ.

'ಎಲ್ಲ ಹೆರಿಗೆ ಆಸ್ಪತ್ರೆಗಳಲ್ಲಿ ನುರಿತ ತಜ್ಞರು, ವೈದ್ಯರನ್ನು ನಿಯೋಜನೆ ಮಾಡಲಾಗಿದೆ. ಸೋಂಕಿತರಿಗೆ ಉತ್ತಮ ಚಿಕಿತ್ಸೆ ನೀಡಿ ಕಾಲಕಾಲಕ್ಕೆ ಔಷಧಗಳನ್ನು ನೀಡಲಾಗುವುದು. ಗುಣಮುಖರಾದ ಬಳಿಕ ಮನೆಗೆ ಕಳುಹಿಸಲಾಗುವುದು' ಎಂದು ಗೌರವ್ ಗುಪ್ತ ಅವರು ಹೇಳಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಪಶ್ಚಿಮ ವಲಯ ಆಯುಕ್ತ ಎಸ್. ಬಸವ ರಾಜ್, ಜಂಟಿ ಆಯುಕ್ತ ಸರ್ಫರಾಜ್ ಖಾನ್, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ವಿಜಯೇಂದ್ರ, ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ. ನಿರ್ಮಲಾ ಬುಗ್ಗಿ ಉಪಸ್ಥಿತರಿದ್ದರು.

ಸೋಂಕಿತ ವಕೀಲರಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಸೋಂಕಿಗೆ ಒಳಗಾಗುವ ವಕೀಲರಿಗೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಿಂದ ಆರ್ಥಿಕ ನೆರವು ನೀಡಲಾಗುವುದು' ಎಂದು ಅಧ್ಯಕ್ಷ ಎಲ್.ಶ್ರೀನಿವಾಸ ಬಾಬು ತಿಳಿಸಿದರು

'ಕೋವಿಡ್ ಸೋಂಕಿತರಾಗಿ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದು ಆರೈಕೆ ಪಡೆಯುವ ವಕೀಲರಿಗೆ ₹10 ಸಾವಿರ ಹಾಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ವಕೀಲರಿಗೆ ತಲಾ ₹25 ಸಾವಿರ ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಜಿಲ್ಲಾವಾರು ಕೋವಿಡ್ ಸೋಂಕಿತ ವಕೀಲ ವೃತ್ತಿಪರರ ಚಿಕಿತ್ಸೆಗೆ ಸ್ಪಂದಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಸೋಂಕು ನಿಯಂತ್ರಣಕ್ಕೆ ವಕೀಲರು ಮತ್ತು ಅವರ ಕುಟುಂಬದ ಸದಸ್ಯರು ನಿಯಮಗಳನ್ನು ಪಾಲಿಸಬೇಕು. ಶೀಘ್ರವಾಗಿ ಲಸಿಕೆ ಹಾಕಿಸಿಕೊಳ್ಳಬೇಕು. ವಕೀಲರ ಸಂಘವು ಇಂತಹ ಸಂಕಷ್ಟ ಸಮಯದಲ್ಲಿ ವಕೀಲರಿಗೆ ನೆರವು ನೀಡಲು ಬದ್ಧ' ಎಂದು ಹೇಳಿದರು.

ನಷ್ಟದ ಭೀತಿಯಿಂದ ಬಾಗಿಲು ಮುಚ್ಚಿದ ಮಾಲೀಕರು

ತಾತ್ಕಾಲಿಕವಾಗಿ ಸೇವೆ ನಿಲ್ಲಿಸಿದ ಹೋಟೆಲ್‌ಗಳು

• ಮನೋಹರ್ ಎಂ.

ಬೆಂಗಳೂರು: 'ಕೊರೊನಾ ಕರ್ಫ್ಯೂ' ಸಂದರ್ಭದಲ್ಲೂ ಹೋಟೆಲ್‌ಗಳಲ್ಲಿ ಪಾರ್ಸೆಲ್ ಸೇವೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಗ್ರಾಹಕರ ಕೊರತೆ ಹಾಗೂ ನಷ್ಟದ ಭೀತಿಯಿಂದಾಗಿ ನಗರದಾದ್ಯಂತ ಸಾವಿರಾರು ಹೋಟೆಲ್‌ಗಳು ತಾತ್ಕಾಲಿಕವಾಗಿ ಬಾಗಿಲು ಮುಚ್ಚಿವೆ.

ಅನೇಕ ಹೋಟೆಲ್‌ಗಳ ಬಾಗಿಲಲ್ಲಿ 'ಕೊರೊನಾ ಇರುವುದರಿಂದ ಸೇವೆ ನೀಡಲು ಸಮಸ್ಯೆಯಾಗಿದೆ. ಕರ್ಫ್ಯೂ ತೆರವಾದ ನಂತರ ಎಂದಿನಂತೆ ಸೇವೆ ಇರಲಿದೆ' ಎಂಬ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಮುಚ್ಚಲಾಗಿರುವ ಹೋಟೆಲ್‌ಗಳ ಪೈಕಿ ಸಣ್ಣ ಪ್ರಮಾಣದ ಹೋಟೆಲ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ.

'ಕೊರೊನಾ ಕರ್ಫ್ಯೂ' ಜಾರಿಯಿಂದಾಗಿ 10 ಗಂಟೆಯವರೆಗೆ ಮಾತ್ರ ಜನರಿಗೆ ಖರೀದಿಸಲು ಅವಕಾಶ ನೀಡಲಾಗಿದೆ. ಹೋಟೆಲ್‌ಗಳಲ್ಲಿ ಪಾರ್ಸೆಲ್ ಸೇವೆಗೂ ಅನುಮತಿ ಇದೆ. ಜನರ ಸಂಚಾರಕ್ಕೆ ಅವಕಾಶ ಇಲ್ಲದ ಮೇಲೆ ಹೋಟೆಲ್‌ಗಳಿಗೆ ಬಂದು ಯಾರು ಆಹಾರ ಪಾರ್ಸೆಲ್ ತೆಗೆದುಕೊಳ್ಳುತ್ತಾರೆ' ಎಂದು ಹೋಟೆಲ್‌ವೊಂದರ ಮಾಲೀಕ ತೇಜಸ್ ಪ್ರಶ್ನಿಸಿದರು.

'ಹೋಟೆಲ್‌ನಲ್ಲಿ ಕೂತು ತಿಂದರೆ ಮಾತ್ರ ವ್ಯಾಪಾರ ಸುಗಮವಾಗಿ ನಡೆಯುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ. ಜನರಿಗೆ ಆಹಾರದ ಅಗತ್ಯವಿರುವುದರಿಂದ ಸರ್ಕಾರದ ಸೂಚನೆಯಂತೆ ಪಾರ್ಸೆಲ್ ನೀಡಲು ಆರಂಭಿಸಿದೆವು. ನಿಗದಿತ ಅವಧಿಯಲ್ಲೂ ಬೆರಳೆಣಿಕೆಯಷ್ಟು ಮಂದಿ ಮಾತ್ರ ಪಾರ್ಸೆಲ್ ಕೊಳ್ಳುತ್ತಾರೆ. ದಿನದಲ್ಲಿ ಎಷ್ಟು ವ್ಯಾಪಾರ ಆಗುತ್ತದೆ ಎಂಬ ಬಗ್ಗೆಯೂ ಸ್ಪಷ್ಟತೆ ಇರುವುದಿಲ್ಲ. ಆಹಾರ ತಯಾರಿಸಿಟ್ಟರೆ ಹಾಳಾಗಿ ನಷ್ಟ ಉಂಟಾಗುತ್ತದೆ. ಹಾಗಾಗಿ, ಹೋಟೆಲ್ ಅನ್ನು ತಾತ್ಕಾಲಿಕವಾಗಿ ಬಂದ್ ಮಾಡಿದ್ದೇವೆ' ಎಂದು ವಿವರಿಸಿದರು.

ಕಾರ್ಮಿಕರೂ ಇಲ್ಲ: 'ಕಳೆದ ವರ್ಷ ಜಾರಿಯಾದ ಲಾಕ್‌ಡೌನ್ ವೇಳೆ ಊರಿಗೆ ತೆರಳಿದ್ದ ಹೋಟೆಲ್ ಕಾರ್ಮಿಕರು ಎರಡು ತಿಂಗಳ ಹಿಂದಷ್ಟೇ ಮತ್ತೆ ಕೆಲಸಕ್ಕೆ ಮರಳಿದ್ದರು. ಅಷ್ಟರಲ್ಲಿ ಮತ್ತೆ ಕೊರೊನಾ ಸೋಂಕು ಹೆಚ್ಚಾಯಿತು. ಸಿಬ್ಬಂದಿಯೂ ಊರಿಗೆ ಮರಳಿದರು. ಕೆಲಸಗಾರರಿಲ್ಲದೆ ಸಣ್ಣ ಹೋಟೆಲ್ ನಡೆಸುವುದು ಕಷ್ಟಕರ. ಒಂದು ವೇಳೆ ಸಿಬ್ಬಂದಿ ಬಂದರೂ ಅವರಿಗೆ ವೇತನ ನೀಡುವಷ್ಟು ಆದಾಯವೂ ಬರುವುದಿಲ್ಲ. ಈಗ ಹೋಟೆಲ್ ನಡೆಸಿ ಏನು ಪ್ರಯೋಜನ' ಎಂದು ಪ್ರಶ್ನಿಸುತ್ತಾರೆ ಅಕ್ಷಯ ಟಿಫನ್ ಸೆಂಟರ್‌ನ ಮಾಲೀಕ ಅನಿಲ್ ಕುಮಾರ್.



ಕತ್ರಿಗುಪ್ಪೆ ರಸ್ತೆಯಲ್ಲಿ ತಾತ್ಕಾಲಿಕವಾಗಿ ಸೇವೆ ನಿಲ್ಲಿಸಿರುವ ಹೋಟೆಲ್ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'3 ಸಾವಿರ ಹೋಟೆಲ್ ಸ್ಥಗಿತ'



'ಬೆಂಗಳೂರಿನಾದ್ಯಂತ ಒಟ್ಟು 24 ಸಾವಿರ ಹೋಟೆಲ್‌ಗಳಿವೆ. ಅವುಗಳಲ್ಲಿ ಕೊರೊನಾ ಎರಡನೇ ಅಲೆಯಿಂದ ಅಂದಾಜು ಮೂರು ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳು ಸದ್ಯ ಸೇವೆ ನಿಲ್ಲಿಸಿವೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ಅಂದಾಜು 1.5 ಲಕ್ಷ ಕೊರೊನಾ ರೋಗಿಗಳಿಗೆ ಹೋಟೆಲ್‌ಗಳಿಂದಲೇ ಆಹಾರ ಪೂರೈಕೆಯಾಗುತ್ತಿದೆ. ಆಹಾರಕ್ಕೆ ಬೇಡಿಕೆ ಇರುವ ಹೋಟೆಲ್‌ಗಳು ಮಾತ್ರ ತೆರೆದಿವೆ. ಪಾರ್ಸೆಲ್ ಸೇವೆ ನೀಡುತ್ತಿದ್ದ ಬಹುತೇಕ ಹೋಟೆಲ್‌ಗಳನ್ನು ಮಾಲೀಕರು ತಾತ್ಕಾಲಿಕವಾಗಿ ಮುಚ್ಚಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ಗೋಪಾಲಪುರ: ಮೊದಲ ಲಸಿಕೆಗಾಗಿ ಜನರ ಪರದಾಟ

ಹೆಸರಘಟ್ಟ: 'ದಾಸನಪುರ ಹೋಬಳಿ ಗೋಪಾಲಪುರ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಮೊದಲ ಲಸಿಕೆಗಾಗಿ ವೃದ್ಧರು ಹಾಗೂ ಮಹಿಳೆಯರು ಪ್ರತಿ ದಿನ ಅಲೆಯಬೇಕಾಗಿದೆ' ಎಂದು ಗ್ರಾಮಸ್ಥರು ದೂರಿದ್ದಾರೆ.

ಲಸಿಕೆ ಹಾಕಿಸಿಕೊಳ್ಳಲು ಕೇಂದ್ರದತ್ತ ಬರುವವರಿಗೆ ಕಾಣುವುದು, 'ಮುಂದಿನ ಆದೇಶದ ವರೆಗೆ ಎರಡನೇ ಡೋಸ್ ಮಾತ್ರ ನೀಡಲಾಗುವುದು' ಎಂಬ ಫಲಕ.

'ಗೋಪಾಲಪುರ ವ್ಯಾಪ್ತಿಯಲ್ಲಿ ಇರುವ ತೋಟಗೆರೆ, ಕುಕ್ಕನಹಳ್ಳಿ, ಶ್ಯಾಮಭಟ್ಟರ ಪಾಳ್ಯ, ಹೊಸಹಳ್ಳಿ ಪಾಳ್ಯ ಗ್ರಾಮಗಳಲ್ಲಿ ಕೊರೊನಾ ಸೋಂಕು ತೀವ್ರಗೊಳ್ಳುತ್ತಿದೆ. ಹಾಗಾಗಿ ಲಸಿಕೆ ಹಾಕಿಸಿಕೊಳ್ಳಲು ಗ್ರಾಮಸ್ಥರು ಸಜ್ಜಾಗಿದ್ದರೂ ಕೇಂದ್ರದಲ್ಲಿ ಲಸಿಕೆ ಇಲ್ಲ' ಎಂದು ಗ್ರಾಮದ ನಿವಾಸಿ ವೀಣಾ ರಮೇಶ್ ಆತಂಕ ವ್ಯಕ್ತಪಡಿಸಿದರು.

'ನನ್ನ ವಯಸ್ಸು 50. ಲಸಿಕೆಗಾಗಿ ಪ್ರತಿದಿನ ಇಲ್ಲಿಗೆ ಬರುತ್ತೇನೆ. ಲಸಿಕೆ ಇಲ್ಲ ಎಂದು ವಾಪಸ್ ಆಗುತ್ತೇವೆ. ಯಾವಾಗ ಬರುತ್ತದೆ ಎಂದು ಪ್ರಶ್ನಿಸಿದರೆ, 'ಸರ್ಕಾರ ಕೇಳಿ' ಎಂದು ಉಡಾಫೆ ಮಾತಾಡುತ್ತಾರೆ' ಎಂದು ಗ್ರಾಮಸ್ಥ ಮಂಜಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಜ್ಞಾನಪ್ರಕಾಶ್, 'ಎರಡನೇ ಬಾರಿ ನೀಡುವ ಲಸಿಕೆ ಆಸ್ಪತ್ರೆಯಲ್ಲಿ ಸದ್ಯ ಲಭ್ಯವಿದೆ. ಮೊದಲ ಲಸಿಕೆ ಪೂರೈಕೆ ಆದ ಕೂಡಲೇ ಜನರಿಗೆ ನೀಡಲಿದ್ದೇವೆ' ಎಂದರು.

ಟೆಕ್ಸಾಸ್‌ನಿಂದ ಮಾಡ್ಯುಲರ್ ಐಸಿಯು



ಬೆಂಗಳೂರು: ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ ಕಂಪನಿಯು ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆಯಲ್ಲಿ 86 ಹಾಸಿಗೆಗಳ ಸಾಮರ್ಥ್ಯದ ಮಾಡ್ಯುಲರ್ ತೀವ್ರ ನಿಗಾ ಘಟಕ (ಐಸಿಯು) ತೆರೆಯಲು ಮುಂದಾಗಿದೆ.

ಈ ಸಂಬಂಧ ಕಂಪನಿಯ ಹಿರಿಯ ಅಧಿಕಾರಿಗಳ ನಿಯೋಗವು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಶನಿವಾರ ಭೇಟಿ ಮಾಡಿ ಚರ್ಚೆ ನಡೆಸಿತು.

'₹3 ಕೋಟಿ ವೆಚ್ಚದಲ್ಲಿ ಈ ಘಟಕ ತಯಾರಾಗಲಿದೆ. ಮೂರು ವಾರಗಳಲ್ಲಿ ಘಟಕ ಸಿದ್ಧಗೊಳ್ಳಲಿದೆ. ರಾಜ್ಯವು ಕೋವಿಡ್ ಪರಿಸ್ಥಿತಿ ಎದುರಿಸುತ್ತಿರುವಾಗ ಸಂಸ್ಥೆಯಿಂದ ನೆರವಾಗಲು ಇದೊಂದು ಸಣ್ಣಪ್ರಯತ್ನ' ಎಂದು ಸಂಸ್ಥೆಯ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಯಡಿಯೂರಪ್ಪ,'ಕೊರೊನಾ ಪರಿಸ್ಥಿತಿಯಲ್ಲಿ ಟೆಕ್ಸಾಸ್ ಕಂಪನಿಯ ಸ್ಪಂದನೆ ಶ್ಲಾಘನೀಯ. ಸರ್ಕಾರದ ಜೊತೆ ಖಾಸಗಿ ವಲಯದ ಬೆಂಬಲ ಪಡೆದು, ಇನ್ನಷ್ಟು ಪರಿಣಾಮಕಾರಿಯಾಗಿ ಆರೋಗ್ಯ ಸೇವೆ ಒದಗಿಸುವುದು ನಮ್ಮ ಉದ್ದೇಶ. ಖಾಸಗಿ ವಲಯದ ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅನುದಾನವನ್ನು ಜನರಿಗೆ ನೆರವಾಗಲು ಬಳಸಬೇಕು' ಎಂದರು.

ಪ್ರಜಾವಾಣಿ ಓದುಗರಲ್ಲಿ ಮನವಿ



ಕೋವಿಡ್ ಸಂಕಷ್ಟದ ನಡುವೆಯೂ ಮಳೆ, ಗಾಳಿ, ಚಳಿಯ ಪರಿವಿಲ್ಲದೆ ಪ್ರತಿದಿನ ಓದುಗರು ನಿದ್ದೆಯಿಂದ ಎದ್ದೇಳುವ ಮುಂಚೆಯೇ ಅವರ ಮನೆ ಬಾಗಿಲಿಗೆ 'ಪ್ರಜಾವಾಣಿ' ಪತ್ರಿಕೆಯನ್ನು ಮುಟ್ಟಿಸುವ ಕೆಲಸವನ್ನು ವಿತರಕರು ಮಾಡುತ್ತಿದ್ದಾರೆ. ಪ್ರಸ್ತುತ ಕರ್ಫ್ಯೂ ಜಾರಿಯಲ್ಲಿರುವ ಪರಿಣಾಮ ಪತ್ರಿಕೆಯ ತಿಂಗಳ ಬಿಲ್ ಕಲೆಕ್ಷನ್ ಕಷ್ಟಕರವಾಗಿದೆ. ಹಾಗಾಗಿ, ಓದುಗರೇ ವಿತರಕರನ್ನು ನೇರವಾಗಿ ಸಂಪರ್ಕಿಸಿ ಡಿಜಿಟಲ್ ಪೇಮೆಂಟ್ ಮೂಲಕ ಹಣ ಪಾವತಿಸಲು ಮನವಿ.

'ಸರ್ಕಾರಿ ಆಸ್ಪತ್ರೆಯ ಸೌಲಭ್ಯ ಹೆಚ್ಚಿಸಿ'



ಎಚ್.ವೆಂಕಟೇಶ್ ದೊಡ್ಡೇರಿ

ನೆಲಮಂಗಲ: 'ಕೊರೊನಾ ಎರಡನೇ ಅಲೆಯ ಪ್ರಭಾವದಿಂದ ತಾಲ್ಲೂಕಿನಲ್ಲಿ ರೋಗಿಗಳಿಗೆ ಹಾಸಿಗೆ, ಆಮ್ಲಜನಕ ಪೂರೈಕೆ ವ್ಯವಸ್ಥೆಯ ಹಾಸಿಗೆ, ತೀವ್ರ ನಿಗಾ ಘಟಕಗಳ (ಐಸಿಯು) ಹಾಸಿಗೆ, ವೆಂಟಿಲೇಟರ್ ಸೌಕರ್ಯದ ಹಾಸಿಗೆಗಳ ಕೊರತೆ ಇದೆ. ಇಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು' ಎಂದು ಒತ್ತಾಯಿಸಿ ರಾಜ್ಯ ಪರಿಶಿಷ್ಟ ವರ್ಗಗಳ ಆಯೋಗದ ಸದಸ್ಯ ಎಚ್.ವೆಂಕಟೇಶ್ ದೊಡ್ಡೇರಿ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿ ಕುಮಾರ್‌ಗೆ ಪತ್ರ ಬರೆದಿದ್ದಾರೆ.

'ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಕೇವಲ 30 ಹಾಸಿಗೆಗಳಿದ್ದು, ಅದರಲ್ಲಿ ಆರು ಐಸಿಯು, ಒಂದು ವೆಂಟಿಲೇಟರ್ ಸೌಲಭ್ಯ ಮಾತ್ರ ಇದೆ. ತ್ಯಾಮಗೊಂಡ್ಲು, ಸೋಂಪುರ, ಸೋಲೂರು ಆರೋಗ್ಯ ಕೇಂದ್ರಗಳಲ್ಲಿ ಯಾವುದೇ ಸೌಲಭ್ಯಗಳಿಲ್ಲ'.

'ತಾಲ್ಲೂಕಿನಲ್ಲಿ ಸುಮಾರು 2.60 ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯಿದ್ದು, 5 ಸಾವಿರಕ್ಕೂ ಹೆಚ್ಚು ಜನ ಕೊರೊನಾ ಸೋಂಕಿಗೆ ಒಳಗಾಗಿದ್ದಾರೆ. ತಾಲ್ಲೂಕಿಗೆ ಕೂಡಲೇ ಅಗತ್ಯವಿರುವ ಐಸಿಯು, ವೆಂಟಿಲೇಟರ್ ಹಾಸಿಗೆಗಳ ವ್ಯವಸ್ಥೆ ಮಾಡಿ ಬಡ ರೋಗಿಗಳ ಚಿಕಿತ್ಸೆಗೆ ಸ್ಪಂದಿಸಬೇಕು' ಎಂದು ಮನವಿ ಮಾಡಿದ್ದಾರೆ.

ಪೌರಕಾರ್ಮಿಕರ ಅಳಲು: ಬಾಡಿಗೆ ಪಾವತಿಸದ ಕಾರಣ ಮನೆಯಿಂದ ಹೊರ ಹಾಕುತ್ತಿದ್ದಾರೆ

ಸಿಗದ ಸಂಬಳ: ಬೀದಿಗೆ ಬಿದ್ದ ಬದುಕು

• ಜಿ.ಶಿವಕುಮಾರ

ಬೆಂಗಳೂರು: 'ಆರು ತಿಂಗಳಾಯಿತು, ನಯಾಪೈಸೆಯೂ ನಮ್ಮ ಕೈಸೇರಿಲ್ಲ. ಬೆವರು ಸುರಿಸಿ ದುಡಿದ ಹಣಕ್ಕಾಗಿ ಅಧಿಕಾರಿಗಳ ಕಚೇರಿ ಹಾಗೂ ಮನೆಗೆ ಅಲೆಯುತ್ತಲೇ ಇದ್ದೇವೆ. ಅವರು ನಾಳೆ ಬನ್ನಿ, ನಾಡಿದ್ದು ಬನ್ನಿ ಎಂದು ಹೇಳಿ ದಿನದೂಡುತ್ತಲೇ ಇದ್ದಾರೆ. ಹೀಗಾದರೆ ನಾವು ಬದುಕುವುದು ಹೇಗೆ..'

ಸಿ.ವಿ.ರಾಮನ್‌ನಗರ ಕ್ಷೇತ್ರದ ಹೊಯ್ಸಳನಗರ ವಾರ್ಡ್‌ನಲ್ಲಿ ಕೆಲಸ ಮಾಡುವ ಕೆಲ ಪೌರಕಾರ್ಮಿಕರು ಅಳಲು ತೋಡಿಕೊಂಡಿದ್ದು ಹೀಗೆ.

ಬಿಬಿಎಂಪಿಯು ಪೌರಕಾರ್ಮಿಕರಿಗೆ2018ರಲ್ಲಿ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ ಜಾರಿಗೆ ತಂದಿತ್ತು. ಈ ವಾರ್ಡ್‌ನಲ್ಲಿ ಕಳೆದ ಡಿಸೆಂಬರ್‌ಲ್ಲಿ ಈ ವ್ಯವಸ್ಥೆ ಜಾರಿಯಾಗಿತ್ತು. ಒಂದು ವರ್ಷ ವೇತನವೇ ಇಲ್ಲದೆ ದುಡಿದಿದ್ದ ಇವರು ಬಯೋಮೆಟ್ರಿಕ್ ಬಂದಾಗ ನಿಟ್ಟುಸಿರು ಬಿಟ್ಟಿದ್ದರು. ಇನ್ನಾದರೂ ತಮ್ಮ ಬದುಕು ಹಸನಾಗಬಹುದೆಂಬ ಕನಸು ಕಂಡಿದ್ದರು. ಹಿರಿಯ ಅಧಿಕಾರಿಗಳ ತಾತ್ಸಾರದಿಂದಾಗಿ ಅವರು ಈಗಲೂ ಕಣ್ಣೀರಿನಲ್ಲೇ ಕೈತೊಳೆಯಬೇಕಾದ ಪರಿಸ್ಥಿತಿ ಇದೆ.

'ನಾವು ಒಟ್ಟು 15 ಮಂದಿ ಕಾರ್ಮಿಕರಿದ್ದೇವೆ. ಎಲ್ಲರೂ ಬಿಬಿಎಂಪಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೆ ತಿಂಗಳಿಗೆ ₹14 ಸಾವಿರ ವೇತನ ನೀಡುವುದಾಗಿ ಹೇಳಿದ್ದರು. ಹಿಂದೆ ಬಯೋಮೆಟ್ರಿಕ್ ವ್ಯವಸ್ಥೆ ಇರಲಿಲ್ಲ. ಹೀಗಾಗಿ ಒಂದು ವರ್ಷ ಸಂಬಳವೇ ಕೊಡಲಿಲ್ಲ. ಹೀಗಿದ್ದರೂ ಕೆಲಸ ಮುಂದುವರಿಸಿದ್ದೆವು. ಸಾಲ ಮಾಡಿ ಹೇಗೊ ಬದುಕು ಸಾಗಿಸಿದೆವು. ಬಯೋಮೆಟ್ರಿಕ್ ವ್ಯವಸ್ಥೆ ಬಂದ ಮೇಲೂ ನಮ್ಮ ಗೋಳು ತಪ್ಪಿಲ್ಲ' ಎಂದು ಬಂಗಾರಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಹೆಂಡತಿ ಮಕ್ಕಳನ್ನು ಸಾಕುವುದು ಕಷ್ಟವಾಗಿದೆ. ಬಾಡಿಗೆ ಕೊಡಲಿಲ್ಲ ಎಂದು ಮಾಲೀಕರು ಮನೆಯಲ್ಲಿರುವ ವಸ್ತುಗಳನ್ನೆಲ್ಲಾ ಆಚೆ ಹಾಕಿದ್ದರು. ಬಳಿಕ ಅವರಿವರ ಕಾಲು ಹಿಡಿದು ಒಂದಷ್ಟು ಹಣ ಹೊಂದಿಸಿಕೊಟ್ಟಿದ್ದೆ. ಕೊರೊನಾದಿಂದಾಗಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಮನೆ ಖಾಲಿ ಮಾಡುವಂತೆ ಮಾಲೀಕರು ಮತ್ತೆ ಪೀಡಿಸುತ್ತಿದ್ದಾರೆ. ಈಗ ಸಾಲ ಕೊಡಲೂ ಯಾರು ಮುಂದೆ ಬರುತ್ತಿಲ್ಲ' ಎಂದರು.

'ಕೋವಿಡ್ ಭಯದ ನಡುವೆಯೂ ಕೆಲಸ ಮಾಡುತ್ತಿದ್ದೇವೆ. ಕಸ ಸಂಗ್ರಹಿಸಲು ಹೋದರೆ ಜನ ನಮ್ಮನ್ನು ಅಪರಾಧಿಗಳ ಹಾಗೆ ನೋಡುತ್ತಾರೆ. ಕುಡಿಯಲು ನೀರು ಕೇಳಿದರೂ ಕೊಡುವುದಿಲ್ಲ. ಇಂತಹ ಅವಮಾನಗಳು ನಮಗೇನೂ ಹೊಸತಲ್ಲ. ಮನೆಯಲ್ಲಿ ಯಾರಿಗಾದರೂ ಸಮಸ್ಯೆಯಾದರೆ ತುರ್ತಾಗಿ ಆಸ್ಪತ್ರೆಗೆ ಹೋಗಬೇಕೆಂದರೂ ಕಾಸಿಲ್ಲ' ಎಂದರು.

'ಸ್ಥಳೀಯ ಶಾಸಕರು ಹಾಗೂ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ಭೇಟಿ ಮಾಡಿ ಸಮಸ್ಯೆ ಹೇಳಿಕೊಂಡಿದ್ದೇವೆ. ಶಾಸಕರು ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಅವರು ಅಧಿಕಾರಿಗಳ ಜೊತೆ ಮಾತನಾಡಿದರೂ ಪ್ರಯೋಜನವಾಗಿಲ್ಲ. ಸಂಬಳವಿಲ್ಲದೇ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಗಂಡ ಆಟೊ ಚಾಲಕ. ಕೊರೊನಾದಿಂದಾಗಿ ಅವರಿಗೂ ದುಡಿಮೆ ಇಲ್ಲ. ವಿದ್ಯುತ್ ಬಿಲ್ ಪಾವತಿಸಲೂ ಹಣವಿಲ್ಲದಂತಾಗಿದೆ. ದಿನಸಿ ಕೊಂಡುಕೊಳ್ಳುವುದೂ ಕಷ್ಟ. ಪರಿಸ್ಥಿತಿ ಹೀಗೆ ಮುಂದುವರಿದರೆ ನಾವೆಲ್ಲಾ ಉಪವಾಸ ಮಲಗಬೇಕಾಗುತ್ತದೆ' ಎಂದು ಲೀಮಾ ಅಳಲು ತೋಡಿಕೊಂಡರು.

ಪ್ರಜಾವಾಣಿ ವಿಶೇಷ

'ಸಾಕಷ್ಟು ಪ್ರಯತ್ನಪಟ್ಟಿರುವೆ'

'ನಾನು 15 ಮಂದಿ ಪೌರಕಾರ್ಮಿಕರ ಮಾಹಿತಿಯನ್ನೂ ಕಲೆಹಾಕಿ ಮೇಲಧಿಕಾರಿಗಳಿಗೆ ಕಳುಹಿಸಿದ್ದೇನೆ. ಅವರು ಕಡತಕ್ಕೆ ಸಹಿ ಹಾಕುವುದು ಬಾಕಿ ಇದೆ. ಸುದೀರ್ಘ ರಜೆಯ ಮೇಲಿರುವುದರಿಂದ ಪ್ರಕ್ರಿಯೆ ತಡವಾಗುತ್ತಿದೆ' ಎಂದು ಕಿರಿಯ ವೈದ್ಯಾಧಿಕಾರಿ ನವೀನ್ ತಿಳಿಸಿದರು.

'ಪೌರಕಾರ್ಮಿಕರ ಕಷ್ಟ ನನಗೂ ಅರ್ಥವಾಗುತ್ತದೆ. ನಾನೂ ಮೇಲಧಿಕಾರಿಗಳ ಮೇಲೆ ಒತ್ತಡ ಹಾಕುತ್ತಿದ್ದೇನೆ. ಸದ್ಯದಲ್ಲೇ ಈ ಸಮಸ್ಯೆ ಬಗೆಹರಿಯಬಹುದೆಂಬ ವಿಶ್ವಾಸವಿದೆ' ಎಂದರು.

ಕೆಲ ತಾಂತ್ರಿಕ ಕಾರಣಗಳಿಂದಾಗಿ ವಿಳಂಬವಾಗಿದೆ. ದತ್ತಾಂಶ ದಾಖಲಿಸುವುದೂ ಸೇರಿದಂತೆ ಇನ್ನಿತರ ಪ್ರಕ್ರಿಯೆಗಳನ್ನು ಬೇಗ ಪೂರ್ಣಗೊಳಿಸುವಂತೆ ಸೂಚಿಸಿದ್ದೇನೆ. ಇನ್ನೊಂದು ವಾರದೊಳಗೆ ಸಮಸ್ಯೆ ಬಗೆಹರಿಯಲಿದೆ.

ಸಂತೋಷ್ ಕುಮಾರ್, ಬಿಬಿಎಂಪಿ ಅಧಿಕಾರಿ

ಬೆಂಗಳೂರು ವಿ.ವಿ: ಅನಧಿಕೃತ ನಾಮಫಲಕ ತೆರವಿಗೆ ತೀರ್ಮಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡದ ಎದುರು ಹಾಕಲಾಗಿದ್ದ ನಾಮಫಲಕವನ್ನು ತೆರವುಗೊಳಿಸಿ, ಈ ಕಟ್ಟಡಕ್ಕೆ ಅಧಿಕೃತವಾಗಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರಿಡಲು ವಿಶ್ವವಿದ್ಯಾಲಯ ತೀರ್ಮಾನಿಸಿದೆ.

ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಏ.13ರಂದು ಯುಗಾದಿ ನಿಮಿತ್ತ ಸರ್ಕಾರಿ ರಜೆ ಇದ್ದ ಸಂದರ್ಭದಲ್ಲಿ, ಕೆಲವು ದುಷ್ಕರ್ಮಿಗಳು ಗ್ರಂಥಾಲಯ ಕಟ್ಟಡದ ಮೇಲೆ ಅಂಬೇಡ್ಕರ್ ಅವರ ನಾಮಫಲಕ ಹಾಕಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು.

'ಗ್ರಂಥಾಲಯಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರಿಡಲು ಯಾರದೇ ವಿರೋಧವಿಲ್ಲ. ಆದರೆ, ನಾಮಫಲಕವನ್ನು ಅಳವಡಿಸಿದ ರೀತಿಗೆ ವಿರೋಧವಿದೆ. ಹೀಗೆ ರಾತ್ರೋ ರಾತ್ರಿ ಯಾರೋ ಬಂದು ಹೀಗೆ ಹೆಸರಿಡುವಂತಾದರೆ ಮುಂದೆ ಅನೇಕ ಸಮಸ್ಯೆಗಳಿಗೆ ಅದು ದಾರಿ ಮಾಡಿಕೊಡಬಹುದು' ಎಂದು ಸಿಂಡಿಕೇಟ್ ಸದಸ್ಯರೊಬ್ಬರು ಹೇಳಿದರು.

ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ ನಂತರ, ಈಗ ಹಾಕಲಾಗಿರುವ ನಾಮಫಲಕ ತೆರವುಗೊಳಿಸಲಾಗುತ್ತದೆ. ಮುಂದೆ ವಿಶ್ವವಿದ್ಯಾಲಯವು ಅಧಿಕೃತವಾಗಿ ಅಂಬೇಡ್ಕರ್ ಅವರ ಹೆಸರನ್ನು ಗ್ರಂಥಾಲಯ ಕಟ್ಟಡಕ್ಕೆ ಇಡಲಿದೆ.

ಕಾರಂತ ಬಡಾವಣೆ: ಬಿಡಿಎ ನೋಂದಣಿಗೆ 'ಸುಪ್ರೀಂ' ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬೆಂಗಳೂರಿನ ಡಾ.ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ 2018ರ ಆಗಸ್ಟ್ 3ಕ್ಕೆ ಮುನ್ನ ನಿವೇಶನ ಖರೀದಿಸಿದವರು ಮಾಲೀಕತ್ವಕ್ಕೆ ಅರ್ಹರು' ಎಂದು ಸುಪ್ರೀಂ ಕೋರ್ಟ್ ಮಹತ್ವದ ಆದೇಶ ನೀಡಿದೆ.

ಈ ನಿವೇಶನಗಳ ಖರೀದಿ ಹಾಗೂ ಹಕ್ಕುಗಳ ಪರಿಶೀಲನೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಸಮಿತಿಯನ್ನು ನೇಮಿಸಲು ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರಿದ್ದ ಪೀಠ ಶುಕ್ರವಾರ ಸೂಚಿಸಿದೆ.

ಮುಂದಿನ ನಾಲ್ಕು ತಿಂಗಳ ಒಳಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದಲ್ಲಿ ನೋಂದಣಿ ಮಾಡಿಕೊಳ್ಳಲು ನಿವೇಶನಗಳ ಅರ್ಹ ಮಾಲೀಕರಿಗೆ ಅನುಮತಿ ನೀಡಿರುವ ಪೀಠ, ಬೆಂಗಳೂರು ಮತ್ತು ಸುತ್ತಮುತ್ತ ಈಗಾಗಲೇ ಮನೆ ಅಥವಾ ನಿವೇಶನ ಹೊಂದಿದವರು ನೋಂದಣಿಗೆ ಅರ್ಹರಲ್ಲ ಎಂಬ ಷರತ್ತು ವಿಧಿಸಿದೆ.



ಗರಿಷ್ಠ 30x40 ಅಡಿ ಅಳತೆಯ ನಿವೇಶನ ಕೋರಿ ಬಿಡಿಎ ಆಯುಕ್ತರಿಗೆ ಅರ್ಜಿದಾರರು ಸಲ್ಲಿಸಿದ ದಾಖಲೆಗಳನ್ನು ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದ ಮೂವರು ಸದಸ್ಯರ ಈ ಸಮಿತಿಯು ಪ್ರಮಾಣೀಕರಿಸಿ, ಖರೀದಿ ಪತ್ರವನ್ನು ಪರಿಶೀಲಿಸಿ ಮಾಲೀಕತ್ವ ಕುರಿತ ವರದಿ ಸಲ್ಲಿಸಬೇಕು ಎಂದು ಪೀಠ ಹೇಳಿದೆ.

ಈ ಬಡಾವಣೆಯಲ್ಲಿ ನಿರ್ಮಿಸಲಾದ ಕಟ್ಟಡಗಳನ್ನು ನೆಲಸಮ ಮಾಡದಿರುವುದು ಸೂಕ್ತವೂ, ನ್ಯಾಯಸಮ್ಮತವೂ ಆಗಿದೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ಭವಿಷ್ಯದಲ್ಲಿ ಇಂತಹ ವಿವಾದಾತ್ಮಕ ಬಡಾವಣೆಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದಂತೆ ಬಿಡಿಎಗೆ ನಿರ್ದೇಶನ ನೀಡಿದೆ.

ಇತರೆಡೆಯೂ ಇಂತಹ ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದೆಯೇ ಎಂಬುದನ್ನು ಪರಿಶೀಲಿಸಿ ವರದಿ ನೀಡುವಂತೆ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದ ಸಮಿತಿಗೆ ನ್ಯಾಯಪೀಠ ನಿರ್ದೇಶನ ನೀಡಿದೆ.

2018ರ ಆಗಸ್ಟ್ 3ರಂದು ಈ ಬಡಾವಣೆಗೆ ಸಂಬಂಧಿಸಿದಂತೆ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 2008ರಲ್ಲಿ ಕೈಗೊಂಡ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಕೂಡದು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿತ್ತು. ಒಂದೊಮ್ಮೆ ಭೂಸ್ವಾಧೀನ ಕೈಬಿಟ್ಟಿದ್ದಲ್ಲಿ ಬಡಾವಣೆಯಲ್ಲಿ ಮನೆ ನಿರ್ಮಿಸಿದವರ ಆರ್ಥಿಕ ಸ್ಥಿತಿಯ ಮೇಲೆ ಗಂಭೀರ ಪರಿಣಾಮ ಉಂಟುಮಾಡುವ ಆತಂಕವಿತ್ತು.

ಈ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಳ್ಳಬೇಕಿದ್ದ ಒಟ್ಟು 3,546 ಎಕರೆ ಭೂಮಿಯ ಪೈಕಿ 257 ಎಕರೆ ಭೂಮಿಯನ್ನು ಸ್ವಾಧೀನದಿಂದ ಕೈಬಿಡುವ ಮೂಲಕ ಭೂಮಾಲೀಕರಿಗೆ ಅನುಕೂಲ ಕಲ್ಪಿಸಲಾಗಿದೆ ಎಂಬ ಆರೋಪವೂ ಸರ್ಕಾರದ ಮೇಲಿತ್ತು. ಈ ಸಂಬಂಧ ವಿವಾದದಿಂದಾಗಿ ಬಡಾವಣೆಯ ನಿವೇಶನ ಹಂಚಿಕೆಯ ಮೇಲೂ ಪರಿಣಾಮ ಉಂಟಾಗಿತ್ತು.

ಅನಗತ್ಯ ಸಂಚಾರ: ಪೊಲೀಸರಿಂದ ದಂಡ ವಸೂಲಿ

ದೊಡ್ಡಬಳ್ಳಾಪುರ: ತಾಲ್ಲೂಕಿನ ಹೊಸಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅನಗತ್ಯವಾಗಿ ರಸ್ತೆಯಲ್ಲಿ ಓಡಾಡುತ್ತಿದ್ದ ದ್ವಿಚಕ್ರ ವಾಹನ ಸವಾರರಿಗೆ ಪೊಲೀಸರು ಬಿಸಿ ಮುಟ್ಟಿಸಿ ದಂಡ ವಿಧಿಸಿದರು.

ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೋವಿಡ್ ಸೋಂಕು ಹೆಚ್ಚಾಗುತ್ತಿರುವುದರಿಂದ ರಸ್ತೆಯಲ್ಲಿ ಅನಗತ್ಯ ಓಡಾಡುತ್ತಿದ್ದವರ ಮೇಲೆ ಪೊಲೀಸರು ಕಟ್ಟುನಿಟ್ಟಾಗಿ ಕ್ರಮಕೈಗೊಂಡರು. ಜನರ ಓಡಾಟದ ಮೇಲೆ ನಿಗಾ ಇಟ್ಟು ಅಗತ್ಯ ವಸ್ತುಗಳ ಖರೀದಿ ಅವಧಿ ಮುಗಿದರೂ ಸುಖಾಸುಮ್ಮನೆ ಬೈಕ್‌ನಲ್ಲಿ ತಿರುಗಾಡುತ್ತಿದ್ದ ಸವಾರರಿಗೆ ಚುರುಕು ಮುಟ್ಟಿಸಿದ್ದಾರೆ.

'ಸಂವಿಧಾನ ಓದು- ನಿಜ ರೂವಾರಿ ಭಂಡಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವಜನ ಹಾಗೂ ವಿದ್ಯಾರ್ಥಿಗಳಿಗೆ ಸಂವಿಧಾನದ ಜಾಗೃತಿ ಮೂಡಿಸಲು ರಚನೆಯಾದ 'ಸಂವಿಧಾನ ಓದು' ಪುಸ್ತಕ ಬರೆಯಲು ವಿಠಲ ಭಂಡಾರಿ ಅವರೇ ಕಾರಣಕರ್ತರು. ಇದರಿಂದ ಹುಟ್ಟಿಕೊಂಡ 'ಸಂವಿಧಾನ ಓದು ಅಭಿಯಾನ' ಜನಮನ್ನಣೆ ಗಳಿಸಿತು. ಇದರ ಕೀರ್ತಿ ಭಂಡಾರಿ ಅವರಿಗೆ ಸಲ್ಲಬೇಕು' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು.

ಪ್ರಗತಿಪರ ಚಿಂತಕ ಡಾ.ವಿಠಲ ಭಂಡಾರಿ ಅವರಿಗೆ ನುಡಿನಮನ ಸಲ್ಲಿಸಲು 'ಅವಧಿ' ವತಿಯಿಂದ ಶನಿವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೆಹಲಿಯಲ್ಲಿ ನಾನು ಉನ್ನತ ಹುದ್ದೆಯಲ್ಲಿದ್ದೆ. ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಬೆಂಗಳೂರಿಗೆ ಬಂದಿದ್ದೆ. ಆಗ ಭಂಡಾರಿಯವರು ನನಗೆ ಸಂವಿಧಾನ ಕುರಿತು ಪುಸ್ತಕ ಬರೆಯಲೇಬೇಕು ಎಂದು ಪಟ್ಟು ಹಿಡಿದರು. ಅದರಂತೆ ಪುಸ್ತಕವೂ ಪ್ರಕಟವಾಯಿತು. ಕ್ರಮೇಣ ಇದು ಅಭಿಯಾನದ ರೂಪ ಪಡೆಯಿತು. 'ಸಂವಿಧಾನ ಓದು'ವಿನ ನಿಜವಾದ ರೂವಾರಿ ಭಂಡಾರಿ' ಎಂದರು.

'ತಾಳಮದ್ದಲೆಯಲ್ಲಿ ಅವರು ಅಭಿಮನ್ಯು ಪಾತ್ರ ವಹಿಸಿದ್ದರು. ಅವರ ಅಂತ್ಯವೂ ಅಭಿಮನ್ಯುವಿನಂತೆಯೇ ಆಗಿದೆ. ಇತರರಿಗಾಗಿ ಬದುಕಿದವರು ಸತ್ತರೂ ಜೀವಂತವಾಗಿರುತ್ತಾರೆ ಎಂಬ ಮಾತು ಭಂಡಾರಿ ಅವರಿಗೂ ಅನ್ವಯ' ಎಂದು ಹೇಳಿದರು.

ಚಿಂತಕ ಶ್ರೀಪಾದ್ ಭಟ್, 'ಕೋಮು ಬೆಂಕಿ ಉರಿಯುತ್ತಿರುವುದನ್ನು ವಿಠಲ ಅವರು ಗಂಭೀರವಾಗಿ ಪರಿಗಣಿಸಿದ್ದರು. ಅದರ ಬಗ್ಗೆ ಸದಾ ಮಾತಿನಲ್ಲಿರುತ್ತಿದ್ದರು. ಸಂಘಟನೆಯನ್ನೇ ಅವರು ಪ್ರಧಾನ ಕಾರ್ಯವನ್ನಾಗಿ ಸ್ವೀಕರಿಸಿದ್ದರು. ಎಲ್ಲರೊಂದಿಗೆ ಇದ್ದ ಅವರು ವಿಭಿನ್ನ ಆಲೋಚನೆಗಳಿಂದ ಕೂಡಿದ್ದರು' ಎಂದು ನೆನೆದರು.

ಮಹಿಳಾ ಹೋರಾಟಗಾರ್ತಿ ಕೆ.ಎಸ್.ವಿಮಲಾ, 'ಆಡುಮುಟ್ಟದ ಸೊಪ್ಪಿಲ್ಲ ಎನ್ನುವಂತೆ ವಿಠಲ ಭಂಡಾರಿ ಅವರು ಎಲ್ಲ ವಿಚಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಈಗಿನ ವ್ಯವಸ್ಥೆ ಯುವಜನರ ದಿಕ್ಕು ತಪ್ಪಿಸುತ್ತಿದೆ. ಅವರಿಗೆ ಸಂವಿಧಾನ ಜ್ಞಾನದ ಅಗತ್ಯವಿದೆ ಎಂದು ಹೇಳುತ್ತಿದ್ದರು. ಕೊರೊನಾ ಸೋಂಕಿನ ಪರಿಸ್ಥಿತಿಯಲ್ಲೂ ಅವರ ಚಿಂತನೆಗಳಿಗೆ ಜೀವ ತುಂಬಲು ಹೋಗಿದ್ದರು. ಆದರೆ, ಕೊರೊನಾ ಅವರನ್ನು ಬಿಡಲಿಲ್ಲ' ಎಂದು ಭಾವುಕರಾದರು.

'ಅವಧಿ' ಸಂಪಾದಕ ಜಿ.ಎನ್. ಮೋಹನ್, ಸಾಹಿತಿ ಕೆ.ವೈ. ನಾರಾಯಣಸ್ವಾಮಿ ಸೇರಿದಂತೆ ಹಲವರು ನುಡಿನಮನ ಸಲ್ಲಿಸಿದರು.

'ಕೆಲಸ ಕೊಡಿ, ಇಲ್ಲವೆ ನೆರವು ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸ್ತುತ ಶೈಕ್ಷಣಿಕ ವರ್ಷದ 1, 3 ಹಾಗೂ 5ನೇ ಸೆಮಿಸ್ಟರ್ ಅವಧಿಯನ್ನು ಮಾರ್ಚ್‌ಗೇ ಅಂತ್ಯಗೊಳಿಸಿ, ಅತಿಥಿ ಉಪನ್ಯಾಸಕರನ್ನು ಮಧ್ಯದಲ್ಲಿಯೇ ಕೈಬಿಟ್ಟಿರುವುದು ಸರಿಯಲ್ಲ. ದುಡಿಯುವ ಕೈಗಳಿಗೆ ಕೆಲಸ ಕೊಡಬೇಕು ಅಥವಾ ಅಗತ್ಯ ನೆರವು ನೀಡಬೇಕು' ಎಂದು ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ ಮನವಿ ಮಾಡಿದೆ.

'ರಾಜ್ಯದ 430 ಸರ್ಕಾರಿ ಪದವಿ ಕಾಲೇಜುಗಳಲ್ಲಿ 14,447 ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದರು. ಕನಿಷ್ಠ ಗೌರವ ಧನ ಪಡೆದು ಹಲವು ವರ್ಷಗಳಿಂದ ದುಡಿಯುತ್ತಿದ್ದಾರೆ. ಈಗ ಇವರೆಲ್ಲರನ್ನೂ ಮಧ್ಯದಲ್ಲಿಯೇ ಕೈ ಬಿಡಲಾಗಿದೆ' ಎಂದು ಸಮಿತಿಯ ಅಧ್ಯಕ್ಷ ಎಚ್. ಕೊಟ್ರೇಶ್ ಹೇಳಿದರು.

'ಈ ಬಾರಿ ಶೈಕ್ಷಣಿಕ ವರ್ಷ ಆರಂಭವಾಗಿದ್ದೇ ಜನವರಿಯಿಂದ. ಜ.21ಕ್ಕೆ ನಮಗೆ ಆದೇಶ ನೀಡಿದರು. ಮಾ.31ಕ್ಕೆ ಅವಧಿ ಪೂರ್ಣಗೊಳಿಸಿದ್ದಾರೆ. ಈ ಬಗ್ಗೆ ಮೊದಲೇ ಆದೇಶದಲ್ಲಿ ತಿಳಿಸಿದ್ದರೂ, ಹೀಗೆ ಶೈಕ್ಷಣಿಕ ವರ್ಷದ ಮಧ್ಯೆದಲ್ಲಿಯೇ ಯಾರನ್ನೂ ಸೇವೆಯಿಂದ ಬಿಡುಗಡೆಗೊಳಿಸಿರಲಿಲ್ಲ' ಎಂದು ಅವರು ಹೇಳಿದರು.

'ನಮಗೆ ₹11 ಸಾವಿರ ಗೌರವ ಧನ ನೀಡಲಾಗುತ್ತಿದೆ. ಗರಿಷ್ಠ ₹25 ಸಾವಿರ ಗೌರವಧನ ನೀಡಿ ಎಂದು ಮನವಿ ಮಾಡಿದರೂ ಸರ್ಕಾರ ಸ್ಪಂದಿಸಿಲ್ಲ. ಹೀಗೆ, ವರ್ಷದಲ್ಲಿ ಕೇವಲ ಎರಡು ತಿಂಗಳು ಮಾತ್ರ ಕೆಲಸ ಕೊಟ್ಟರೆ ನಮ್ಮ ಜೀವನ ಹೇಗೆ ನಡೆಸಬೇಕು' ಎಂದು ಅವರು ಪ್ರಶ್ನಿಸಿದರು.

'ಕೊರೊನಾ ಮೊದಲ ಅಲೆಯಲ್ಲಿ 24 ಮತ್ತು ಎರಡನೇ ಅಲೆಯಲ್ಲಿ ಆರು ಅತಿಥಿ ಉಪನ್ಯಾಸಕರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಅವರ ಕುಟುಂಬಗಳಿಗೆ ಸರ್ಕಾರ ಆರ್ಥಿಕ ನೆರವು ಘೋಷಿಸಬೇಕು' ಎಂದು ಅವರು ಒತ್ತಾಯಿಸಿದರು.

ದ್ವಿತೀಯ ಪಿಯುಸಿ: ಉಚಿತ ಆನ್‌ಲೈನ್ ತರಗತಿ

ಬೆಂಗಳೂರು: ಕುಮಾರಸ್ವಾಮಿ ಬಡಾವಣೆಯಲ್ಲಿರುವ ದಯಾನಂದ ಸಾಗರ ಸಂಸ್ಥೆಯು (ಡಿಎಸ್‌ಐ) ದ್ವಿತೀಯ ಪಿ.ಯು ವಿದ್ಯಾರ್ಥಿಗಳಿಗೆ ಉಚಿತ ಆನ್‌ಲೈನ್ ತರಗತಿ ನಡೆಸಲಿದೆ.

ಕಾಲೇಜುಗಳಲ್ಲಿ ತರಗತಿ ನಡೆಯದ ಕಾರಣ ಅನೇಕ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಸಿದ್ಧತೆ ನಡೆಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಸಂಸ್ಥೆಯು ಉಚಿತ ಆನ್‌ಲೈನ್ ತರಗತಿ ಹಮ್ಮಿಕೊಂಡಿದೆ ಎಂದು ಡಿಎಸ್‌ಐ ಹೇಳಿದೆ. ಮೇ 10ರಿಂದ 31ರವರೆಗೆ ತರಗತಿ ನಡೆಯಲಿದೆ.

ಆಸಕ್ತ ವಿದ್ಯಾರ್ಥಿಗಳು www.dayanandasagar.edu ವೆಬ್‌ಸೈಟ್ ಬಳಸಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ, ವಿಜ್ಞಾನ: 98800 59065 ವಾಣಿಜ್ಯ: 99010 83132 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು.



ಮಹಾಲಕ್ಷ್ಮಿ ಲೇಔಟ್ ಪೊಲೀಸರು ಬಂಧಿಸಿದ ಆರೋಪಿಗಳು

ರೆಮ್‌ಡಿಸಿವಿರ್ ಅಕ್ರಮ ಮಾರಾಟ: 8 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಚಿಕಿತ್ಸೆಗೆ ಬಳಸುವ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ಬ್ಯಾಂಕ್ ವ್ಯವಸ್ಥಾಪಕ ಸೇರಿ ಎಂಟು ಮಂದಿಯನ್ನು ನಗರದ ಪೊಲೀಸರು ಬಂಧಿಸಿದ್ದಾರೆ.

‘ಮಹಾಲಕ್ಷ್ಮಿ ಲೇಔಟ್, ಶ್ರೀರಾಮಪುರ ಹಾಗೂ ಬೊಮ್ಮನಹಳ್ಳಿ ಠಾಣೆ ಪೊಲೀಸರು ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಚುಚ್ಚುಮದ್ದು ಬಾಟಲಿಗಳನ್ನೂ ಜಪ್ತಿ ಮಾಡಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಆಸ್ಪತ್ರೆ ಬಳಿ ಮಾರಾಟ: ‘ಮಹಾಲಕ್ಷ್ಮಿ ಲೇಔಟ್ ಬಸ್ ನಿಲ್ದಾಣ ಬಳಿಯ ಸಂಜೀವಿನಿ ಆಸ್ಪತ್ರೆ ಬಳಿ ಓಡಾಡುತ್ತಿದ್ದ ಇಬ್ಬರು ಆರೋಪಿಗಳ ಬಳಿ ರೆಮ್‌ಡಿಸಿವಿರ್ ಇತ್ತು. ಅದನ್ನು ದುಪ್ಪಟ್ಟು ಬೆಲೆಗೆ ಮಾರಾಟ ಮಾಡಲು ಮುಂದಾಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು’ ಎಂದು ಅಧಿಕಾರಿ ತಿಳಿಸಿದರು.

‘ಈ ಪ್ರಕರಣದಲ್ಲಿ ಜನಾ ಬ್ಯಾಂಕ್ ವ್ಯವಸ್ಥಾಪಕರಾದ ರಾಜರಾಜೇಶ್ವರಿನಗರದ ಶಿವಕುಮಾರ್ (32), ವೈದ್ಯಕೀಯ ಪ್ರತಿನಿಧಿಯಾದ ಕೆಂಗೇರಿಯ ದರ್ಶನ್ (29), ಲ್ಯಾಬ್ ಟೆಕ್ನಿಷಿಯನ್ ಗಿರೀಶ್ (30) ಹಾಗೂ ಮಲ್ಲತ್ತಹಳ್ಳಿಯ ತರಕಾರಿ ವ್ಯಾಪಾರಿ ನಾಗೇಶ್ (43) ಎಂಬುವರನ್ನು ಬಂಧಿಸಲಾಗಿದೆ.’

‘ನಾಗೇಶ್ ತಂದೆ ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದರು. ಅವರ ಬಳಿ ರೆಮ್‌ಡಿಸಿವಿರ್ ಉಳಿದಿತ್ತು. ಅದನ್ನೇ ಬೇರೆಯವರಿಗೆ ಮಾರಾಟ ಮಾಡಲು, ಇತರೆ ಆರೋಪಿಗಳ ಜೊತೆ ಬಂದಿದ್ದರು’ ಎಂದೂ ಅಧಿಕಾರಿ ವಿವರಿಸಿದರು.

₹40 ಸಾವಿರಕ್ಕೆ ಮಾರಾಟ: ‘ಶ್ರೀರಾಮಪುರ ಠಾಣೆ ವ್ಯಾಪ್ತಿಯಲ್ಲಿ ನಯಾಜ್ ಅಹಮ್ಮದ್ (30) ಎಂಬಾತನನ್ನು ಬಂಧಿಸಲಾಗಿದ್ದು, ಆತ ರೆಮ್‌ಡಿಸಿವಿರ್ ಚುಚ್ಚುಮದ್ದು ಒಂದನ್ನು ₹30 ಸಾವಿರದಿಂದ ₹ 40 ಸಾವಿರಕ್ಕೆ ಮಾರಾಟ ಮಾಡುತ್ತಿದ್ದ’ ಎಂದು ಅಧಿಕಾರಿ ಹೇಳಿದರು.

‘ಚಾಮರಾಜಪೇಟೆ ನಿವಾಸಿ ನಯಾಜ್, ಫಾರ್ಮಾ ಹಬ್‌ನಲ್ಲಿ ಸರಕು ವಿತರಣೆ ಕಾರ್ಮಿಕನಾಗಿದ್ದ. ಬಂಡಿರೆಡ್ಡಿ ವೃತ್ತ ಬಳಿಯ ಆಶೀರ್ವಾದ ನರ್ಸಿಂಗ್ ಹೋಮ್ ಬಳಿ ಚುಚ್ಚುಮದ್ದು ಮಾರಲು ಬಂದಿದ್ದಾಗಲೇ ಸೆರೆಸಿಕ್ಕ. ತನ್ನ ಸಂಬಂಧಿಕರಿಗೆ ಕೊರೊನಾ ಇರುವುದಾಗಿ ಫಾರ್ಮಾ ಮಾಲೀಕರಿಗೆ ಸುಳ್ಳು ಹೇಳಿ ಚುಚ್ಚುಮದ್ದು ಖರೀದಿಸಿ ತರುತ್ತಿದ್ದ ಆರೋಪಿ, ಅದನ್ನು ದುಬಾರಿ ಬೆಲೆಗೆ ಮಾರುತ್ತಿದ್ದ’ ಎಂದೂ ತಿಳಿಸಿದರು.

ಮೂವರ ಬಂಧನ: ‘ಬೊಮ್ಮನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ರೆಮ್‌ಡಿಸಿವಿರ್ ಅಕ್ರಮವಾಗಿ ಮಾರುತ್ತಿದ್ದ ಅನಿಲ್, ಮಂಜುನಾಥ್ ಹಾಗೂ ಬಾಲಾಜಿ ಎಂಬುವರನ್ನು ಬಂಧಿಸಲಾಗಿದೆ’ ಎಂದೂ ಅಧಿಕಾರಿ ಹೇಳಿದರು.

ಹಾಸಿಗೆ ಬ್ಲಾಕಿಂಗ್ ಪ್ರಕರಣ 16 ಆಸ್ಪತ್ರೆಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕೋಟಾದ ಹಾಸಿಗೆ ಬ್ಲಾಕಿಂಗ್ ದಂಧೆ ಪ್ರಕರಣದ ಬಗ್ಗೆ ಮಾಹಿತಿ ಕಲೆಹಾಕುತ್ತಿರುವ ಸಿಸಿಬಿ ಪೊಲೀಸರು, ನಗರದ 16 ಆಸ್ಪತ್ರೆಗಳಲ್ಲಿ ಶನಿವಾರ ಶೋಧ ನಡೆಸಿದರು.

ವಾರ್‌ರೂಮ್‌ಗಳ ಮೂಲಕ ಬ್ಲಾಕ್ ಮಾಡಲಾಗಿದ್ದ ಹಾಸಿಗೆಗಳಲ್ಲಿ ಯಾರೆಲ್ಲ ಸೋಂಕಿತರು ದಾಖಲಾಗಿದ್ದರು. ಅವರ ಹಿನ್ನೆಲೆ ಹಾಗೂ ಅವರ ಆರೋಗ್ಯ ಸ್ಥಿತಿ ಬಗ್ಗೆ ಸಿಸಿಬಿ ಮಾಹಿತಿ ಕಲೆಹಾಕುತ್ತಿದೆ.

ಬ್ಲಾಕ್ ಮಾಡಿದ್ದ ಹಾಸಿಗೆಗಳಲ್ಲಿ ದಾಖಲಾಗಲು ಬಹುತೇಕರು, ಸಾವಿರಾರು ರೂಪಾಯಿ ಹಣ ನೀಡಿದ್ದಾರೆ. ಹಣವನ್ನು ಪಡೆದವರು ಯಾರು ಎಂಬುದನ್ನು ಸಿಸಿಬಿ ಪತ್ತೆ ಮಾಡುತ್ತಿದೆ.

‘ಹಾಸಿಗೆ ಬ್ಲಾಕಿಂಗ್ ಸಂಬಂಧ ಜಯನಗರ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ. ಎರಡೂ ಪ್ರಕರಣಗಳಲ್ಲೂ ನಾಲ್ವರನ್ನು ಬಂಧಿಸಿ, ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಅದೇ ರೀತಿ ನಿತ್ಯವೂ ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಶೋಧ ನಡೆಸಲಾಗುತ್ತಿದೆ. ರೋಗಿಗಳ ಪಟ್ಟಿಯನ್ನು ಸಂಗ್ರಹಿಸಿ, ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಇದುವರೆಗೂ ನಗರದ 18 ಆಸ್ಪತ್ರೆಗಳ ಮಾಹಿತಿ ಸಂಗ್ರಹಿಸಲಾಗಿದೆ. ಇನ್‌ಸ್ಪೆಕ್ಟರ್ ನೇತೃತ್ವದ ತಂಡಗಳು ಮಾಹಿತಿ ಪರಿಶೀಲನೆ ನಡೆಸುತ್ತಿವೆ’ ಎಂದೂ ತಿಳಿಸಿವೆ.

ವಿಚಾರಣೆ ಮುಂದುವರಿಕೆ

‘ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಆಪ್ತ ಎನ್ನಲಾದ ಬಾಬು ಸೇರಿದಂತೆ ಹಲವರನ್ನು ಈಗಾಗಲೇ ವಿಚಾರಣೆ ನಡೆಸಲಾಗಿದೆ. ಬಾಬು ಸೋಂಕಿತರಾಗಿ ಆಸ್ಪತ್ರೆ ಸೇರಿದ್ದಾರೆ. ಇದೀಗ ಮತ್ತಷ್ಟು ಮಂದಿಯನ್ನು ವಿಚಾರಣೆ ನಡೆಸಲಾಗುತ್ತಿದ್ದು, ಅವರಿಂದಲೂ ಲಿಖಿತ ಹೇಳಿಕೆ ಪಡೆಯಲಾಗುತ್ತಿದೆ’ ಎಂದೂ ಮೂಲಗಳು ಹೇಳಿವೆ.

‘ವಾರ್‌ರೂಮ್ ವೈದ್ಯರು, ಸಿಬ್ಬಂದಿ, 108 ಆಂಬುಲೆನ್ಸ್ ಸಿಬ್ಬಂದಿ ಹಾಗೂ ಆಸ್ಪತ್ರೆ ಸಿಬ್ಬಂದಿ ಸೇರಿದಂತೆ ಎಲ್ಲರ ಪಟ್ಟಿ ಸಿದ್ಧಪಡಿಸಲಾಗಿದೆ. ಎಲ್ಲರಿಂದಲೂ ಲಿಖಿತ ಹೇಳಿಕೆ ಪಡೆದು, ಪರಿಶೀಲನೆ ನಡೆಸಿ ಜಾಲದ ಪ್ರಮುಖ ಆರೋಪಿ ಯಾರು ಎಂಬುದನ್ನು ಪತ್ತೆ ಮಾಡಬೇಕಿದೆ’ ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

ಎಎಸ್‌ಐ ಮೇಲೆ ಹಲ್ಲೆ ಆರೋಪ: ಯುವಕ ವಶಕ್ಕೆ

ಬೆಂಗಳೂರು: ಮಾಸ್ಕ್ ಹಾಕದಿದ್ದದ್ದನ್ನು ಪ್ರಶ್ನಿಸಿದ್ದಕ್ಕಾಗಿ ಎಎಸ್‌ಐ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಅಕ್ಷಯ್ ಎಂಬಾತನನ್ನು ವಿದ್ಯಾರಣ್ಯಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಸ್ಥಳೀಯ ನಿವಾಸಿ ಅಕ್ಷಯ್, ವಿದ್ಯಾರಣ್ಯಪುರ ಮುಖ್ಯರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದ. ಅದೇ ಸಂದರ್ಭದಲ್ಲೇ ಕರ್ತವ್ಯದಲ್ಲಿದ್ದ ಎಎಸ್‌ಐ, ಆತನನ್ನು ತಡೆದು ಪ್ರಶ್ನಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಕ್ಷಯ್ ಮಾಸ್ಕ್ ಹಾಕಿರಲಿಲ್ಲ. ಅದನ್ನು ಕೇಳಿದ್ದ ಎಎಸ್‌ಐ, ಮಾಸ್ಕ್ ಹಾಕಿಕೊಳ್ಳುವಂತೆ ಬುದ್ಧಿವಾದ ಹೇಳಿದ್ದರು. ದಂಡ ಕಟ್ಟುವಂತೆಯೂ ಸೂಚಿಸಿದ್ದರು. ಅಷ್ಟಕ್ಕೆ ಸಿಟ್ಟಾದ ಅಕ್ಷಯ್ ಹಲ್ಲೆ ಮಾಡಿದ್ದ. ರಕ್ಷಣೆಗೆ ಹೋಗಿದ್ದ ಸಿಬ್ಬಂದಿ, ಆತನನ್ನು ಹಿಡಿದುಕೊಂಡು ಬೈಕ್ ಸಮೇತ ಠಾಣೆಗೆ ಕರೆತಂದಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಗುಣಮಟ್ಟದ ಶಿಕ್ಷಣ: ವಿದೇಶಿ ವಿ.ವಿಗಳ ಜತೆ ಒಪ್ಪಂದ

ಬೆಂಗಳೂರು: ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಿಸಲು ಅನುಕೂಲವಾಗುವಂತೆ ರಾಜ್ಯದ ಉನ್ನತ ಶಿಕ್ಷಣ ಮಂಡಳಿಯು ಪೆನ್ಸಿಲ್ವೇನಿಯಾ ಗ್ಲೋಬಲ್ ಮತ್ತು ಎಜ್ಯುಕೇಷನ್ ಹಬ್, ಹ್ಯಾರಿಸ್ಬರ್ಗ್ ವಿಶ್ವವಿದ್ಯಾಲಯದ ಜೊತೆ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದೆ.



ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸಮ್ಮುಖದಲ್ಲಿ ವರ್ಚುವಲ್ ಸಭೆಯಲ್ಲಿ ಎರಡೂ ಕಡೆಯ ಉನ್ನತ ಅಧಿಕಾರಿಗಳು ಒಪ್ಪಂದಗಳಿಗೆ ಅಂಕಿತ ಹಾಕಿದರು.

ಈ ವೇಳೆ ಮಾತನಾಡಿದ ಅಶ್ವತ್ಥನಾರಾಯಣ, ‘ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಗುಣಮಟ್ಟದ ಬೋಧನೆ ಹಾಗೂ ಸಮಗ್ರ ಶೈಕ್ಷಣಿಕ ಉನ್ನತಿಗೆ ಈ ಒಪ್ಪಂದಗಳು ಪೂರಕವಾಗಲಿವೆ’ ಎಂದರು.

ತಲೆಗೆ ಕಬ್ಬಿಣದ ತುಂಡು ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ನಿರ್ಮಾಣ ಹಂತದ ಕಟ್ಟಡದ ಕಬ್ಬಿಣದ ತುಂಡುಗಳು ತಲೆ ಮೇಲೆ ಬಿದ್ದು ಕಾರ್ಮಿಕ ಲಿಟನ್ ಬೌರಿ (38) ಎಂಬುವರು ಮೃತಪಟ್ಟಿದ್ದಾರೆ.

‘ಪಶ್ಚಿಮ ಬಂಗಾಳದ ಲಿಟನ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದು ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅವರ ಸಾವಿನ ಬಗ್ಗೆ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಪೊಲೀಸರು ಹೇಳಿದರು.

ಅನಗತ್ಯ ಓಡಾಡಿದರೆ ಬಂಧನ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದ್ದು, ಅಷ್ಟಾದರೂ ಕೆಲವರು ಅನಗತ್ಯವಾಗಿ ಓಡಾಡುತ್ತಿದ್ದಾರೆ. ಅಂಥವರಿಗೆ ನಗರ ಪೊಲೀಸರು, ಲಾಠಿ ಏಟು ನೀಡಲಾರಂಭಿಸಿದ್ದಾರೆ.

ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಶನಿವಾರ ಅನಗತ್ಯವಾಗಿ ಸಂಚರಿಸುತ್ತಿದ್ದವರ ಮೇಲೆ ಸ್ಥಳೀಯ ಪೊಲೀಸರು ಲಾಠಿ ಬೀಸಿದ್ದಾರೆ. ‘ಇನ್ನೊಮ್ಮೆ ರಸ್ತೆಗೆ ಬಂದರೆ ಬಂಧಿಸಲಾಗುವುದು’ ಎಂದು ಎಚ್ಚರಿಕೆ ನೀಡಿ ಬಿಟ್ಟು ಕಳುಹಿಸಿದ್ದಾರೆ.

ಮಾರುಕಟ್ಟೆ ಬಳಿಯೇ ಪೊಲೀಸರು ತಪಾಸಣಾ ಕೇಂದ್ರ ನಿರ್ಮಿಸಿದ್ದಾರೆ. ರಸ್ತೆಯಲ್ಲಿ ಬರುವ ಪ್ರತಿಯೊಂದು ವಾಹನವನ್ನೂ ತಡೆದು ಪರಿಶೀಲನೆ ನಡೆಸುತ್ತಿದ್ದಾರೆ. ಕೆಲವರು ಬೈಕ್‌ನಲ್ಲಿ ಅನಗತ್ಯವಾಗಿ ಓಡಾಡುತ್ತಿದ್ದರು. ಆಟೊಗಳೂ ಸುತ್ತಾಡುತ್ತಿದ್ದವು. ಸ್ಥಳದಲ್ಲಿದ್ದ ಇನ್‌ಸ್ಪೆಕ್ಟರ್, ಲಾಠಿಯಿಂದ ಆಟೊ ದೀಪಗಳನ್ನು ಒಡೆದು ಹಾಕಿದ್ದಾರೆ. ಚಾಲಕನಿಗೆ ಲಾಠಿಯಿಂದ ಹೊಡೆದಿದ್ದಾರೆ.

ಪೊಲೀಸರು ಲಾಠಿ ಬೀಸುವ ದೃಶ್ಯಗಳನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ’ಸೋಮವಾರದಿಂದ ನಗರದಲ್ಲಿ ನಡೆಯುವ ಲಾಠಿ ಕಾರ್ಯಾಚರಣೆಯ ಟ್ರೇಲರ್ ಇದು’ ಎಂದು ವಿಡಿಯೊವನ್ನು ಹಲವರು ಹಂಚಿಕೊಂಡಿದ್ದಾರೆ.

ಅನಗತ್ಯವಾಗಿ ಓಡಾಡಿದರೆ ಬಂಧನ: ‘ಸೋಮವಾರದಿಂದ ನಗರದಲ್ಲಿ ಕರ್ಫ್ಯೂ ಜೊತೆಯಲ್ಲಿ ಕಠಿಣ ನಿಯಮಗಳು ಜಾರಿಯಾಗಲಿವೆ. ಸೂಕ್ತ ಕಾರಣವಿಲ್ಲದೇ ರಸ್ತೆಯಲ್ಲಿ ಓಡಾಡುವಂತಿಲ್ಲ. ಅನಗತ್ಯವಾಗಿ ಹೊರಗೆ ಬಂದರೆ ಸ್ಥಳದಲ್ಲೇ ಬಂಧಿಸಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದು ಕಮಿಷನರ್ ಕಮಲ್ ಪಂತ್ ಎಚ್ಚರಿಕೆ ನೀಡಿದರು.

ನಗರದ ಹಲವೆಡೆ ಶನಿವಾರ ಸಂಚರಿಸಿದ ಅವರು, ಭದ್ರತೆ ಪರಿಶೀಲನೆ ನಡೆಸಿದರು. ಪೊಲೀಸರ ಜೊತೆ ಸೇರಿ ವಾಹನಗಳ ಪರಿಶೀಲನೆಯನ್ನೂ ಮಾಡಿದರು. ಅದಾದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೊರೊನಾ ಸೋಂಕು ಮುಕ್ತ ನಗರವಾಗಿಸಲು ಜನರೆಲ್ಲರೂ ಪೊಲೀಸರು ಹಾಗೂ ಸರ್ಕಾರಕ್ಕೆ ಸಹಕಾರ ನೀಡಬೇಕು’ ಎಂದು ಕೋರಿದರು.

‘ನಮ್ಮೆಲ್ಲರ ಆರೋಗ್ಯಕ್ಕಾಗಿ ಹಾಗೂ ಬೆಂಗಳೂರಿನ ಸುರಕ್ಷತೆಗಾಗಿ ಕಠಿಣ ನಿಯಮ ಜಾರಿಗೊಳಿಸಲಾಗಿದೆ. ಸೋಮವಾರ ಬೆಳಿಗ್ಗೆಯಿಂದ ನಿಯಮಗಳ ಜಾರಿಗಾಗಿ ಪೊಲೀಸರಿಗೆ ಎಲ್ಲ ರೀತಿಯ ಅಧಿಕಾರ ನೀಡಲಾಗಿದೆ. ಜನರೆಲ್ಲರೂ ಅರ್ಥ ಮಾಡಿಕೊಂಡು ಮನೆಯಲ್ಲೇ ಇರಬೇಕು. ಅನಗತ್ಯವಾಗಿ ಹೊರಗೆ ಬಂದರೆ ಬಂಧನ ನಿಶ್ಚಿತ’ ಎಂದರು.

‘ಅನಗತ್ಯವಾಗಿ ವಾಹನ ಬಳಕೆಯನ್ನು ನಿರ್ಬಂಧಿಸಲಾಗಿದೆ. ಬೆಳಿಗ್ಗೆ 6ರಿಂದ 10ರವರೆಗೆ ಅಗತ್ಯ ವಸ್ತುಗಳ ಖರೀದಿಗೆ ನಡೆದುಕೊಂಡು ಹೋಗಬೇಕು. ವಾಹನದಲ್ಲಿ ಹೋದರೆ, ಅದನ್ನೂ ಜಪ್ತಿ ಮಾಡಲಾಗುವುದು. ಲಸಿಕೆ ಹಾಕಿಸಿಕೊಳ್ಳಲು ಹೋಗುವವರಿಗೆ ಸರ್ಕಾರವೇ ಸದ್ಯಕ್ಕೆ ವಿನಾಯಿತಿ ನೀಡಿದೆ’ ಎಂದೂ ಕಮಲ್ ಪಂತ್ ಹೇಳಿದರು.

ಮೃಗಾಲಯ: ಆರ್ಥಿಕ ನೆರವಿಗೆ ಮೊರೆ

ಮೈಸೂರು: ರಾಜ್ಯದ ವಿವಿಧೆಡೆಯಿರುವ 9 ಮೃಗಾಲಯಗಳ ನಿರ್ವಹಣೆ ಕಷ್ಟಕರವಾಗಿದೆ. ದಾನಿಗಳು, ಉದ್ಯಮಿಗಳು, ಪ್ರಾಣಿಪ್ರಿಯರು, ಸಂಘ–ಸಂಸ್ಥೆಗಳು, ಸಾರ್ವಜನಿಕರು ಆರ್ಥಿಕ ನೆರವು ಒದಗಿಸಲು ತುರ್ತಾಗಿ ಮುಂದಾಗಬೇಕಿದೆ ಎಂದು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್‌.ಆರ್‌.ಮಹದೇವಸ್ವಾಮಿ ಶನಿವಾರ ಇಲ್ಲಿ ಮನವಿ ಮಾಡಿದರು.

ನೆರವು ನೀಡುವವರು ಕೆನರಾ ಬ್ಯಾಂಕ್, ಖಾತೆ ಸಂಖ್ಯೆ–1720–214–0000028, ಐಎಫ್‌ಎಸ್‌ಸಿ ಕೋಡ್– ಸಿಎನ್‌ಆರ್‌ಬಿ0011720 ಈ ಖಾತೆಗೆ ಹಣ ಜಮೆ ಮಾಡಬಹುದು.

‘ಕೋವಿಡ್‌ನ ಮೊದಲ ಅಲೆಯ ಲಾಕ್‌ಡೌನ್‌ನಿಂದಲೂ ರಾಜ್ಯದ ಮೃಗಾಲಯಗಳು ಸಂಕಷ್ಟಕ್ಕೆ ಸಿಲುಕಿವೆ. ನಿರ್ವಹಣೆಯೇ ಕಷ್ಟಕರವಾಗಿದೆ. ಇದೀಗ ಮತ್ತೆ ಪರಿಸ್ಥಿತಿ ಬಿಗಡಾಯಿಸಿದ್ದು, ಜೂನ್ ತಿಂಗಳಿನಿಂದ ಪ್ರಾಣಿಗಳ ಆಹಾರಕ್ಕೂ ಕಷ್ಟವಾಗುವ ಸ್ಥಿತಿಯಿದೆ’ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಬ್ರಾಹ್ಮಣ ಸಂಘದಿಂದ ಪಡಿತರ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ತಾರುಣ್ಯಾಧಿತ್ಯ ಬ್ರಾಹ್ಮಣ ಸಂಘದ ವತಿಯಿಂದ ದಾಸನಪುರದಲ್ಲಿ ಬಡವರಿಗೆ ಹಾಗೂ ನಿರ್ಗತಿಕರಿಗೆ ಪಡಿತರ ಕಿಟ್‌ಗಳನ್ನು ಶನಿವಾರ ವಿತರಿಸಲಾಯಿತು.

‘ಡಿ.ಆರ್.ವಾಸುದೇವಮೂರ್ತಿ ಅವರ ಸೇವಾ ಮನೋಭಾವ ಎಲ್ಲರಿಗೂ ಪ್ರೇರಣೆಯಾಗಬೇಕು. ಇಂತಹ ತುರ್ತು ಸಂದರ್ಭದಲ್ಲಿ ಉಳ್ಳವರು ಇಲ್ಲದವರಿಗೆ ನೆರವಾಗಬೇಕು’ ಎಂದು ರಾಜ್ಯ ಬ್ರಾಹ್ಮಣ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ ತಿಳಿಸಿದರು.

ತಾರುಣ್ಯಾಧಿತ್ಯ ಬ್ರಾಹ್ಮಣ ಸಂಘದ ಗೌರವಾಧ್ಯಕ್ಷ ಡಿ.ಆರ್.ವಾಸುದೇವಮೂರ್ತಿ,‘ಸಮಾಜದಿಂದ ಪಡೆದದ್ದನ್ನು ಮತ್ತೆ ಸಮಾಜಕ್ಕೆ ಅರ್ಪಿಸುತ್ತಿದ್ದೇವೆ’ ಎಂದರು. ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಡಿ.ಆರ್. ಮಂಜುನಾಥ್, ಡಿ.ವಿ.ಗುರುದತ್, ಗಿರೀಶ್ ಕುಮಾರ್ ಹಾಗೂ ಸಂಘದ ಪದಾಧಿಕಾರಿಗಳು ಇದ್ದರು.



ಡಿ.ಆರ್‌.ವಾಸುದೇವಮೂರ್ತಿ ಹಾಗೂ ಸಚ್ಚಿದಾನಂದಮೂರ್ತಿ ಅವರು ಬಡವರಿಗೆ ಪಡಿತರ ಕಿಟ್ ವಿತರಿಸಿದರು

‘ಬಡವರಿಗೆ ಮಾಸಿಕ ₹10 ಸಾವಿರ ನೀಡಿ’

ಬೆಂಗಳೂರು:‘ಲಾಕ್‌ಡೌನ್ ವೇಳೆ ಜನ ಜೀವನ ನಡೆಸಲು ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಎಲ್ಲರ ಖಾತೆಗೆ ಸರ್ಕಾರ ಮಾಸಿಕ ₹10 ಸಾವಿರ ನಗದು ವರ್ಗಾವಣೆ ಮಾಡಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

‘ಪಡಿತರ ಕೇಂದ್ರಗಳ ಮೂಲಕ ಎಲ್ಲರಿಗೂ ಅಗತ್ಯ ಪ್ರಮಾಣದ ಅಕ್ಕಿ ಹಾಗೂ ಧಾನ್ಯಗಳನ್ನು ಉಚಿತವಾಗಿ ವಿತರಿಸಬೇಕು. ಕೋವಿಡ್ ರೋಗಿಗಳಿಗೆ ಆಮ್ಲಜನಕ, ಔಷಧಿ, ಐಸಿಯು, ಹಾಸಿಗೆ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು. ಕೋವಿಡೇತರ ಚಿಕಿತ್ಸೆಗಳಿಗೂ ವ್ಯವಸ್ಥೆ ಮಾಡಬೇಕು’ ಎಂದು ಸಂಘಟನೆಯ ರಾಜ್ಯ ಸಮಿತಿ ಅಧ್ಯಕ್ಷೆ ದೇವಿ ಒತ್ತಾಯಿಸಿದರು.

ಜಿಂದಾಲ್‌ಗೆ ಜಮೀನು: ಬಿಜೆಪಿ ಶಾಸಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಎಸ್‌ಡಬ್ಲ್ಯು ಸ್ಟೀಲ್ಸ್ ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಜಮೀನನ್ನು ಕ್ರಯಪತ್ರದ ಮೂಲಕ ಹಸ್ತಾಂತರಿಸುವ ಸಂಪುಟ ಸಭೆಯ ತೀರ್ಮಾನವನ್ನು ವಿರೋಧಿಸಿ ಬಿಜೆಪಿಯ ನಾಲ್ವರು ಶಾಸಕರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಇದೇ ಪ್ರಸ್ತಾವವನ್ನು ವಿರೋಧ ಪಕ್ಷದಲ್ಲಿದ್ದ ಬಿಜೆಪಿ ವಿರೋಧಿಸಿತ್ತು. ಈಗ ತದ್ವಿರುದ್ಧವಾಗಿ ನಿರ್ಣಯ ಕೈಗೊಂಡಿರುವುದನ್ನು ವಿರೋಧಿಸಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ, ಕೆ. ಪೂರ್ಣಿಮಾ ಮತ್ತು ಉದಯ್ ಗರುಡಾಚಾರ್ ಪತ್ರ ಬರೆದಿದ್ದಾರೆ.

‘ಜಿಂದಾಲ್ ಕಂಪನಿಗೆ ಜಮೀನು ಕ್ರಯಕ್ಕೆ ನೀಡುವ ತೀರ್ಮಾನವು ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿದೆ. ಇದು ಭ್ರಷ್ಟಾಚಾರದ ವಿರುದ್ಧದ ಬಿಜೆಪಿಯ ಹೋರಾಟಕ್ಕೂ ವಿರೋಧವಾದುದು’ ಎಂದು ಈ ಶಾಸಕರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂಬ ಮಾಹಿತಿ ಲಭಿಸಿದೆ.

ಕೋವಿಡ್‌ನಿಂದ ರಾಜ್ಯವು ಬಿಕ್ಕಟ್ಟಿನಲ್ಲಿರುವ ಸಂದರ್ಭದಲ್ಲಿ ಜೆಎಸ್‌ಡಬ್ಲ್ಯು ಸ್ಟೀಲ್ಸ್‌ಗೆ ಕಡಿಮೆ ದರಕ್ಕೆ ಜಮೀನು ನೀಡುವುದನ್ನು ಈ ಶಾಸಕರು ವಿರೋಧಿಸಿದ್ದಾರೆ. ಈ ವಿಚಾರದಲ್ಲಿ ವಿರೋಧ ಪಕ್ಷಗಳು ವ್ಯಕ್ತಪಡಿಸಿರುವ ಅಭಿಪ್ರಾಯವನ್ನೂ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

‘ಕುಮಾರಸ್ವಾಮಿ ನೇತೃತ್ವದ ಸರ್ಕಾರ ಈ ಪ್ರಸ್ತಾವಕ್ಕೆ ಅನುಮೋದನೆ ನೀಡಲು ಹೊರಟಾಗ ಆಗ ವಿರೋಧ ಪಕ್ಷದ ನಾಯಕರಾಗಿದ್ದ ಯಡಿಯೂರಪ್ಪ ನೇತೃತ್ವದಲ್ಲಿ ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಿದ್ದೆವು. ಈ ವಿಚಾರದಲ್ಲಿ ಆಗ ಬಿಜೆಪಿಯ ನಿಲುವು ಏನಾಗಿತ್ತು ಎಂಬುದು ರಾಜ್ಯದ ಜನರಿಗೆ ಸ್ಪಷ್ಟವಾಗಿ ತಿಳಿದಿದೆ. ಕುಮಾರಸ್ವಾಮಿ ಸರ್ಕಾರ ದೊಡ್ಡ ಮೊತ್ತದ ಕಿಕ್ ಬ್ಯಾಕ್ ಪಡೆದು ಜಮೀನು ಮಾರುತ್ತಿದೆ ಎಂದು ನಾವು ಆಗ ಆರೋಪಿಸಿದ್ದೆವು’ ಎಂದು ಪತ್ರದಲ್ಲಿ ಈ ಶಾಸಕರು ನೆನಪಿಸಿದ್ದಾರೆ.

‘ಬಿಜೆಪಿಯ ಪ್ರಬಲ ಪ್ರತಿಭಟನೆಗೆ ಮಣಿದ ಸಮ್ಮಿಶ್ರ ಸರ್ಕಾರ ಪ್ರಸ್ತಾವವನ್ನು ಕೈಬಿಟ್ಟಿತ್ತು. ಈಗ ಅದೇ ಪ್ರಸ್ತಾವಕ್ಕೆ ಬಿಜೆಪಿ ಸರ್ಕಾರ ಒಪ್ಪಿಗೆ ನೀಡಿರುವುದು ಆಘಾತಕಾರಿ ಬೆಳವಣಿಗೆ. ಸರ್ಕಾರದ ನಿರ್ಧಾರವು ಬಿಜೆಪಿ ಕಾರ್ಯಕರ್ತರ ಹೋರಾಟವನ್ನೇ ಅವಮಾನಿಸುವಂತಿದೆ’ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.

ಜಿಂದಾಲ್ ಕಂಪನಿಗೆ ಜಮೀನು ಮಾರಾಟ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ತಕ್ಷಣವೇ ಶಾಸಕಾಂಗ ಪಕ್ಷದ ಸಭೆಯನ್ನು ಕರೆದು ಚರ್ಚಿಸುವಂತೆಯೂ ಈ ಶಾಸಕರು ಯಡಿಯೂರಪ್ಪ ಅವರನ್ನು ಆಗ್ರಹಿಸಿದ್ದಾರೆ. ಬಿಜೆಪಿ ಶಾಸಕರಾದ ಅಭಯ್ ಪಾಟೀಲ್, ವಿ. ಸುನೀಲ್ ಕುಮಾರ್ ಮತ್ತು ಸತೀಶ್ ರೆಡ್ಡಿ ಕೂಡ ಈ ಪತ್ರವನ್ನು ಬೆಂಬಲಿಸಿದ್ದಾರೆ ಎಂಬ ಮಾಹಿತಿ ಲಭಿಸಿದೆ.

ತಳಮಳಗೊಂಡ ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಕುಟುಂಬ • ಮೊಬೈಲ್‌ಗೆ ಬಿ.ಯು ಸಂಖ್ಯೆಯೂ ರವಾನೆ

ಪರೀಕ್ಷೆ ಇಲ್ಲ: ಆಂಬುಲೆನ್ಸ್‌ನಿಂದ ಕರೆ!

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಅವರ ಮನೆಯಲ್ಲಿ ಇತ್ತೀಚೆಗೆ ಯಾರೂ ಕೋವಿಡ್ ಪರೀಕ್ಷೆಯನ್ನೇ ಮಾಡಿಸಿಲ್ಲ. ಸೋಂಕಿನ ಲಕ್ಷಣವೂ ಯಾರಿಗೂ ಇಲ್ಲ. ಆದರೂ, ಕೋವಿಡ್ ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸುವ ಆಂಬುಲೆನ್ಸ್ ಸಿಬ್ಬಂದಿಯಿಂದ ಕರೆ ಬಂದಿದೆ. 'ತಕ್ಷಣ ಹೊರಡಿ. ಕೋವಿಡ್ ಸೋಂಕಿತರಾದ ನಿಮ್ಮನ್ನು ಆಸ್ಪತ್ರೆಗೆ ದಾಖಲಿಸಲು ಆಂಬುಲೆನ್ಸ್ ಕೆಲವೇ ಕ್ಷಣಗಳಲ್ಲಿ ಮನೆಗೆ ಬರಲಿದೆ' ಎಂಬ ಧ್ವನಿ ಕೇಳಿ ಮನೆಯವರೆಲ್ಲ ಕಂಗಾಲು.

ಇಂತಹ ಸಂದಿಗ್ಧ ಸನ್ನಿವೇಶವನ್ನು ಎದುರಿಸಿದ್ದು ಹನುಮಂತ ನಗರದ ಶ್ರೀನಿವಾಸ್ ಅವರ ಕುಟುಂಬ. 'ಮನೆಯಲ್ಲಿ ಯಾರೂ ಕೊರೊನಾ ಸೋಂಕಿತರೇ ಇಲ್ಲ. ಗುರುವಾರ ಬೆಳಿಗ್ಗೆ 9 ಗಂಟೆಗೆ ಆಂಬುಲೆನ್ಸ್‌ನವರು ಕರೆ ಮಾಡಿದರು. ಎಲ್ಲಿದ್ದೀರಿ, ಆಸ್ಪತ್ರೆಗೆ ಕರೆದೊಯ್ಯಲು ಬರುತ್ತಿದ್ದೇವೆ. ಡಿಸೋಜಾ ವೃತ್ತದ ಬಳಿಯ ಸೇಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸಿದ್ದೇವೆ ಎಂದರು. ನಾವು ಪರೀಕ್ಷೆಯನ್ನೇ ಮಾಡಿಸಿಲ್ಲ. ತಪ್ಪಿ ಕರೆ ಮಾಡಿರಬಹುದು ಎಂದೆ. ಇಲ್ಲ ನಿಮ್ಮ ಮೊಬೈಲ್‌ಗೆ ಸಂದೇಶವೂ ಬಂದಿರುತ್ತದೆ ಎಂದರು. ನೋಡಿದರೆ ಪತ್ನಿ ಪುಷ್ಪಲತಾ ಮೊಬೈಲ್‌ಗೆ ಬಿ.ಯು.ನಂಬರ್ ಇರುವ ಸಂದೇಶವೂ ಬಂದಿತ್ತು' ಎಂದು ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಇಲಾಖೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿರುವ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಳೆ ಬಿ.ಯು.ನಂಬರ್ ಬಳಸಿ ಹಾಸಿಗೆ ಬ್ಲಾಕ್?

'ಇಂತಹ ಪ್ರಸಂಗ ಇದೇ ಮೊದಲು ನಮ್ಮ ಗಮನಕ್ಕೆ ಬಂದಿದೆ. ಬಹುಷಃ ಹಳೆ ಬಿ.ಯು. ನಂಬರ್ ಬಳಸಿ ಖಾಸಗಿ ಆಸ್ಪತ್ರೆಯಲ್ಲಿ ಹಾಸಿಗೆ ಬ್ಲಾಕ್ ಮಾಡಿಸುವ ಪ್ರಯತ್ನ ನಡೆಸಿರುತ್ತಾರೆ. ರೋಗಿ ಕಡೆಯವರು ಬಂದಿಲ್ಲ ಎಂಬ ಕಾರಣ ನೀಡಿ ನಂತರ ಆ ಹಾಸಿಗೆಯನ್ನು ತಮಗೆ ಬೇಕಾದವರಿಗೆ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ. ರೋಗವೇ ಇಲ್ಲದವರೂ ಹೇಗಿದ್ದರೂ ಆಸ್ಪತ್ರೆಗೆ ದಾಖಲಾಗುವುದಿಲ್ಲ. ತಪ್ಪಿ ಕರೆ ಮಾಡಿರಬಹುದು ಎಂದು ಸುಮ್ಮನಾಗುತ್ತಾರೆ. ಆಗ ಆ ಹಾಸಿಗೆಯನ್ನು ಬೇರೆಯವರಿಗೆ ಮಾರಾಟ ಮಾಡುವ ಸಾಧ್ಯತೆಯೂ ಇದೆ' ಎಂದು ಬಿಬಿಎಂಪಿಯ ಸಿಬ್ಬಂದಿಯೊಬ್ಬರು ಸಂದೇಹ ವ್ಯಕ್ತಪಡಿಸಿದರು.

'ಈ ಬಗ್ಗೆ ಸೂಕ್ತ ಪರಿಶೀಲನೆ ನಡೆಸುತ್ತೇವೆ. ಯಾರಾದರೂ ತಪ್ಪೆಸಗಿರುವುದು ದೃಢಪಟ್ಟರೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದು ಗೌರವ ಗುಪ್ತ ತಿಳಿಸಿದರು.

'ಕೋವಿಡ್ ಚಿಕಿತ್ಸೆಗೆ ವಾರ್ ರೂಂಗಳಲ್ಲಿ ಸರ್ಕಾರಿ ಕೋಟಾದ ಹಾಸಿಗೆ ಹಂಚಿಕೆಯ ಕೇಂದ್ರೀಕೃತ ವ್ಯವಸ್ಥೆಯ ತಂತ್ರಾಂಶದಲ್ಲಿ ಕೆಲವು ಲೋಪಗಳಿವೆ. ಅವುಗಳಲ್ಲಿ ಸಮಗ್ರ ಬದಲಾವಣೆ ತರಲಾಗುತ್ತಿದೆ' ಎಂದರು.

'ನನಗೆ ಹಾಗೂ ಪತ್ನಿಗೆ ಆರು ತಿಂಗಳ ಹಿಂದೆ ಕೊರೊನಾ ಬಂದಿತ್ತು. ಈ ಕಾಯಿಲೆಯ ಅಷ್ಟೂ ನೋವನ್ನು ನಾವು ಅನುಭವಿಸಿ ಬಿಟ್ಟಿದ್ದೇವೆ. ಆಗ ಅನುಭವಿಸಿದ ಯಮಯಾತನೆ ನೆನಪಿಸಿಕೊಂಡರೇ ಭಯವಾಗುತ್ತದೆ. ಮನೆಯಲ್ಲಿರುವವರನ್ನೆಲ್ಲ ಗೋಳಿನ ಕೂಪಕ್ಕೆ ತಳ್ಳುವ ಈ ಕಾಯಿಲೆ ನಮ್ಮ ಶತ್ರುವಿಗೂ ಬರಬಾರದು ಎಂದು ಹಾರೈಸುವವ ನಾನು. ಒಂದು ಸಲ ಕೊರೊನಾ ದೃಢಪಟ್ಟರೆ ಅದು ರೋಗಿಯ ಮೇಲೆ ಹಾಗೂ ಕುಟುಂಬದವರ ಮೇಲೆ ಉಂಟು ಮಾಡುವ ಆಘಾತವನ್ನು ಮಾತಿನಲ್ಲಿ ವಿವರಿಸಲಾಗದು. ಇಂತಿರುವಾಗ ಇವರು ಸುಖಾ ಸುಮ್ಮನೆ ಆಂಬುಲೆನ್ಸ್ ಕಳುಹಿಸಿ ನಮ್ಮಲ್ಲಿ ತಳಮಳ ಉಂಟುಮಾಡಿದರು' ಎಂದು ಬೇಸರ ವ್ಯಕ್ತಪಡಿಸಿದರು.

'ಪೊಲೀಸ್ ಸಿಬ್ಬಂದಿಯಾಗಿರುವ ನನಗೇ ಈ ರೀತಿ ಮಾಡಿದವರು, ಇನ್ನು ಏನೂ ತಿಳಿಯದ ಅಮಾಯಕರಿಗೆಲ್ಲ ಏನೆಲ್ಲ ಮಾಡಬಹುದು. ನಮ್ಮ ಹೆಸರಿನಲ್ಲಿ ಯಾರೋ ಹಾಸಿಗೆ ಬ್ಲಾಕ್ ಮಾಡಿಸಿ, ಅದನ್ನು ಬೇರೆಯವರಿಗೆ ಮಾರಾಟ ಮಾಡಲು ಈ ರೀತಿ ಹುನ್ನಾರ ನಡೆಸಿರಬಹುದು' ಎಂದೂ ಅವರು ಸಂದೇಹ ವ್ಯಕ್ತಪಡಿಸಿದರು.

ಪುಷ್ಪಲತಾ ಅವರ ಮೊಬೈಲ್‌ಗೆ ಬಂದಿದ್ದ ಬಿ.ಯು.ಸಂಖ್ಯೆಯನ್ನು ಒಳಗೊಂಡ ಸಂದೇಶವನ್ನು 'ಪ್ರಜಾವಾಣಿ'ಯು ಬಿಬಿಎಂಪಿ ಆಯುಕ್ತ ಗೌರವ ಗುಪ್ತ ಅವರಿಗೆ ಕಳುಹಿಸಿ ಪರಿಶೀಲಿಸಿತು. ಇದು ಪುಷ್ಪಲತಾ ಅವರು ಆರು ತಿಂಗಳ ಹಿಂದೆ ಕೊರೊನಾ ಕಾಯಿಲೆಗೆ ಒಳಗಾಗಿದ್ದಾಗ ಸೃಷ್ಟಿಸಲಾದ ಬಿ.ಯು.ನಂಬರ್ ಎಂಬುದು ದೃಢಪಟ್ಟಿತು.

ದುಬಾರಿ ಬೆಲೆಗೆ ಆಮ್ಲಜನಕ: ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ



ರವಿ ಕುಮಾರ್

ಬೆಂಗಳೂರು: ಸರ್ಕಾರ ನಿಗದಿಪಡಿಸಿದ ದರಕ್ಕಿಂತಲೂ ದುಬಾರಿ ಬೆಲೆಗೆ ಆಮ್ಲಜನಕ ಸಿಲಿಂಡರ್ ಮಾರುತ್ತಿದ್ದ ಆರೋಪದಡಿ 'ಸಿಗಾ ಗ್ಯಾಸಸ್' ವ್ಯವಸ್ಥಾಪಕ ರವಿ ಕುಮಾರ್ (36) ಎಂಬುವವರನ್ನು ಸಿಸಿಬಿ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

'ನಗರದ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಸಿಗಾ ಗ್ಯಾಸಸ್ ಕಂಪನಿ ಘಟಕವಿದೆ. ನಿತ್ಯವೂ ಆಮ್ಲಜನಕ ಸಿಲಿಂಡರ್‌ಗಳನ್ನು ಭರ್ತಿ ಮಾಡಲಾಗುತ್ತದೆ. ಇದೇ ಘಟಕದಿಂದ ನೇರವಾಗಿ ಖಾಸಗಿ ಆಸ್ಪತ್ರೆ ಹಾಗೂ ಸೋಂಕಿತರ ಸಂಬಂಧಿಕರಿಗೆ ಸಿಲಿಂಡರ್ ಮಾರಲಾಗುತ್ತಿತ್ತು' ಎಂದು ಸಿಸಿಬಿ ಪೊಲೀಸರು ಹೇಳಿದರು.

'47 ಲೀಟರ್ ಆಮ್ಲಜನಕದ ಸಿಲಿಂಡರ್ ಒಂದಕ್ಕೆ ₹ 3,000 ನಿಗದಿಪಡಿಸಲಾಗಿದೆ. ಅದೇ ಸಿಲಿಂಡರ್‌ನ್ನು ಸಿಗಾ ಗ್ಯಾಸಸ್ ಘಟಕದಲ್ಲಿ ₹ 6,000 ಮಾರಾಟ ಮಾಡಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಗ್ರಾಹಕರ ಸೋಗಿನಲ್ಲಿ ಕಾರ್ಯಾಚರಣೆ ನಡೆಸಿ ಪುರಾವೆ ಸಮೇತ ಆರೋಪಿಯನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

'ದಾಳಿ ಬಗ್ಗೆ ಪೀಣ್ಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆರೋಪಿ ರವಿಕುಮಾರ್, ಹಲವು ವರ್ಷಗಳಿಂದ ಘಟಕದ ವ್ಯವಸ್ಥಾಪಕ ಆಗಿದ್ದರು. ಘಟಕದ ಇತರೆ ಸಿಬ್ಬಂದಿಯೇ ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನವಿದ್ದು, ಅವರನ್ನೂ ವಿಚಾರಣೆ ನಡೆಸಬೇಕಿದೆ' ಎಂದೂ ಪೊಲೀಸರು ಹೇಳಿದರು.

ಕೋವಿಡ್ ನಿರ್ವಹಣೆಗೆ ಎಲ್ಲ ವಾರ್ಡ್‌ಗಳಲ್ಲಿ ಡಬ್ಲ್ಯುಡಿಸಿ ರಚನೆ

ಕೊರೊನಾ: ವಾರ್ಡ್ ಮಟ್ಟದಲ್ಲೇ ತ್ವರಿತ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಸತತವಾಗಿ ಏರುತ್ತಿರುವ ಕಾರಣ, ಆಯಾ ವಾರ್ಡ್ ಮಟ್ಟದಲ್ಲಿ ಈ ಬಿಕ್ಕಟ್ಟು ನಿರ್ವಹಣೆ ಸುಲಭ ಸಾಧ್ಯವಾಗಿಸಲು ರಾಜ್ಯ ಸರ್ಕಾರವು ಕೋವಿಡ್ ವಾರ್ ರೂಮ್ ವಿಕೇಂದ್ರೀಕರಣ ಅಥವಾ ಸ್ಪಂದನ ಸಮಿತಿಗಳನ್ನು (ಡಬ್ಲ್ಯುಡಿಸಿ) ರಚಿಸಲಿದೆ.

ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರನ್ನು ಈ ಕಾರ್ಯಕ್ಕೆ ನೋಡಲ್ ಸಚಿವರನ್ನಾಗಿ ನೇಮಕ ಮಾಡಲಾಗಿದೆ. ಸದ್ಯ, ಸೋಂಕಿತ ವ್ಯಕ್ತಿಗೆ ಕೋವಿಡ್ ದೃಢಪಟ್ಟ ವರದಿ ಬಂದ ನಂತರವೂ ಸೂಕ್ತ ಚಿಕಿತ್ಸೆಗೆ ಸಿಗಲು 12 ತಾಸುಗಳಷ್ಟು ವಿಳಂಬವಾಗುತ್ತದೆ. ಈ ವಿಳಂಬ ತಪ್ಪಿಸಿ, ಸೋಂಕಿತರಿಗೆ ತ್ವರಿತವಾಗಿ ಸ್ಪಂದಿಸುವ ಕಾರ್ಯವನ್ನು ಈ ಸಮಿತಿಗಳು ಮಾಡಲಿವೆ ಎಂದು ರಾಜ್ಯಸರ್ಕಾರ ಶನಿವಾರ ಹೇಳಿದೆ.

ನಗರದಲ್ಲಿನ ಎಲ್ಲ 198 ವಾರ್ಡ್‌ಗಳಲ್ಲಿ ಈ ಡಬ್ಲ್ಯುಡಿಸಿ ರಚಿಸಲಾಗುತ್ತಿದೆ. ಕೋವಿಡ್ ಪರಿಹಾರ ಕ್ರಮಗಳು ಪ್ರತಿ ಸೋಂಕಿತರನ್ನೂ ತಲುಪಬೇಕು, ಆರೋಗ್ಯ ಸೇವೆಗಳು ಪ್ರತಿ ನಾಗರಿಕನಿಗೂ ಲಭ್ಯವಾಗಬೇಕು ಎಂಬ ಉದ್ದೇಶದಿಂದ ಈ ಸಮಿತಿಗಳನ್ನು ರಚಿಸಲಾಗುತ್ತಿದೆ.

ಆಯಾ ವಾರ್ಡ್ ವ್ಯಾಪ್ತಿಯಲ್ಲಿ ಸೋಂಕಿತ ವ್ಯಕ್ತಿಯ ವಿಳಾಸವನ್ನು ಪತ್ತೆ ಮಾಡುವುದು, ಅವರಿಗೆ ಮಾಹಿತಿ ನೀಡುವುದು, ಕೋವಿಡ್ ಆಸ್ಪತ್ರೆಗಳು, ಸಿಗಬೇಕಾದ ಚಿಕಿತ್ಸೆ, ಸರ್ಕಾರ ಮಾಡಿರುವ ವ್ಯವಸ್ಥೆ ತಿಳಿಸುವ ಕೆಲಸವನ್ನು ಈ ಡಬ್ಲ್ಯುಡಿಸಿಗಳು ಮಾಡುತ್ತವೆ.

ವಾರದಲ್ಲಿ ಮೂರು ಬಾರಿ ಡಬ್ಲ್ಯುಡಿಸಿ ಸಭೆ ಕರೆಯುವ ಜವಾಬ್ದಾರಿಯು ಈ ನೋಡಲ್ ಅಧಿಕಾರಿಗಳದ್ದಾಗಿರುತ್ತದೆ. ಈ ಸಭೆಗೆ ಸಂಬಂಧಪಟ್ಟ ವಿಭಾಗಗಳ ಅಥವಾ ಇಲಾಖೆಯ ಅಧಿಕಾರಿಗಳನ್ನು ಆಹ್ವಾನಿಸಲಾಗುತ್ತದೆ. ಪರಿಹಾರ ಕ್ರಮಗಳ ಬಗ್ಗೆ ನಿಯಮಿತವಾಗಿ ಪರಿಶೀಲನೆಯನ್ನೂ ಈ ಸಮಿತಿಗಳು ಮಾಡಲಿವೆ ಎಂದು ಸರ್ಕಾರ ಹೇಳಿದೆ.

ಸಮಿತಿಯಲ್ಲಿ ಯಾರಿರುತ್ತಾರೆ ?: ಬಿಬಿಎಂಪಿ ಈಗಾಗಲೇ ವಾರ್ಡ್‌ವಾರು ನೇಮಕ ಮಾಡಿರುವ ನೋಡಲ್ ಅಧಿಕಾರಿಯೇ ಈ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ವಾರ್ಡ್ ಸಮಿತಿ ಸದಸ್ಯರು, ಸರ್ಕಾರಿ ಅಧಿಕಾರಿಗಳು, ಆಯಾ ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಸದಸ್ಯರು, ಸ್ವಯಂಸೇವಕರು ಸಮಿತಿಯಲ್ಲಿ ಇರುತ್ತಾರೆ. ಇವರಿಗೆ ಅಗತ್ಯ ತರಬೇತಿಯನ್ನು ನೀಡಲಾಗುತ್ತದೆ.

ಪರೀಕ್ಷಾ ಫಲಿತಾಂಶ ಬರುವಲ್ಲಿ ವಿಳಂಬವಾಗುವುದು, ಆಮ್ಲಜನಕ ಕೊರತೆ, ಲಸಿಕೆಗಳ ಕೊರತೆಯನ್ನು ಸಮಿತಿಯು ಸರ್ಕಾರದ ಗಮನಕ್ಕೆ ತರಲಿದೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯು ಈ ಸಮಿತಿಗೆ ಪೂರಕ ಸಿಬ್ಬಂದಿಯನ್ನು ಪೂರೈಸಲಿದೆ ಎಂದು ಸರ್ಕಾರ ಹೇಳಿದೆ.

ರೋಗಿಗಳಿಗೆ 'ಬಣ್ಣದ' ಸಂಕೇತ

ರೋಗಿಗಳ ಸ್ಥಿತಿಗತಿ ಆಧರಿಸಿ ಅವರಿಗೆ ಬಣ್ಣದ ಸಂಕೇತ ನೀಡುವ ಕಾರ್ಯವನ್ನು ಡಬ್ಲ್ಯುಡಿಸಿಗಳು ಮಾಡಲಿವೆ. ಅಂದರೆ, ತುರ್ತು ಚಿಕಿತ್ಸೆ ಅಗತ್ಯವಿರುವ ರೋಗಿಗೆ 'ಕೆಂಪು', ನಂತರದ ಸ್ಥಿತಿಯಲ್ಲಿರುವ ರೋಗಿಗೆ 'ಹಳದಿ' ಬಣ್ಣದ ಸಂಕೇತವನ್ನು ಸಮಿತಿ ನೀಡಲಿದೆ. ಅಲ್ಲದೆ, ಮನೆಯಲ್ಲಿಯೇ ಪ್ರತ್ಯೇಕ ವಾಸದ ಮೂಲಕ ಆರೈಕೆ ಪಡೆಯುವವರನ್ನೂ ಈ ಸಮಿತಿಯ ಸದಸ್ಯರು ಭೇಟಿ ಮಾಡಲಿದ್ದಾರೆ.

ಬನಶಂಕರಿ ಚಿತಾಗಾರ 11ರಿಂದ ಸ್ಥಗಿತ

ನಗರದ ದಕ್ಷಿಣ ವಲಯ ವ್ಯಾಪ್ತಿಯ ಬನಶಂಕರಿ ವಿದ್ಯುತ್ ಚಿತಾಗಾರವನ್ನು ದುರಸ್ತಿ ಮತ್ತು ನಿರ್ವಹಣೆ ಮಾಡುವ ಉದ್ದೇಶದಿಂದ ಇದೇ 11ರಿಂದ 20ರ ವರೆಗೆ ಸ್ಥಗಿತಗೊಳಿಸಲಾಗಿದೆ. ಸಾರ್ವಜನಿಕರು ಪರ್ಯಾಯ ಚಿತಾಗಾರ ಬಳಸಿಕೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ವಾರ್ ರೂಮ್‌ಗೆ ನೋಡಲ್ ಅಧಿಕಾರಿಗಳ ನೇಮಕ

ಬೆಂಗಳೂರು: ಕೊರೊನಾ ಸೋಂಕು ನಿಯಂತ್ರಣ ಮತ್ತು ಸಾರ್ವಜನಿಕರ ಸಹಾಯಕ್ಕಾಗಿ ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಲ್ಲಿ ಹಾಗೂ ಕೇಂದ್ರ ಕಚೇರಿಯಲ್ಲಿ ಸ್ಥಾಪಿಸಿರುವ ವಾರ್ ರೂಮ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿ ಬಿಬಿಎಂಪಿ ವಿಶೇಷ ಆಯುಕ್ತರು (ಆಡಳಿತ) ಶನಿವಾರ ಆದೇಶ ಹೊರಡಿಸಿದ್ದಾರೆ.

ನೋಡಲ್ ಅಧಿಕಾರಿಗಳ ವಿವರ

ವಲಯ	ಅಧಿಕಾರಿ
ಕೇಂದ್ರ	ಖಾಜಿ ನಫೀಸಾ
ಪೂರ್ವ	ಶಾಂತರಾಜು
ಯಲಹಂಕ	ರಂಗನಾಥ
ಪಶ್ಚಿಮ	ಅಭಿಜಿನ್
ದಕ್ಷಿಣ	ಆನಂದ್
ರಾಜರಾಜೇಶ್ವರಿ ನಗರ	ಶಿವಣ್ಣ
ಬೊಮ್ಮನಹಳ್ಳಿ	ವಿಜಯಕುಮಾರ್
ದಾಸರಹಳ್ಳಿ	ಶ್ರೀಧರ್
ಮಹದೇವಪುರ	ಮಹೇಶಬಾಬು

ಕೋವಿಡ್ ನಿಯಂತ್ರಣಕ್ಕೆ ಮುಂಬೈ, ಚೆನ್ನೈ ಮಾದರಿ: ಸಚಿವ ಲಿಂಬಾವಳಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕೋವಿಡ್ ನಿಯಂತ್ರಿಸಲು ಮುಂಬೈ ಮತ್ತು ಚೆನ್ನೈನಲ್ಲಿ ಅನುಸರಿಸಿದ ಮಾದರಿಯಲ್ಲಿ ಬೆಂಗಳೂರಿನಲ್ಲಿಯೂ ವಾರ್ಡ್ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಗಿದೆ' ಎಂದು ಕೋವಿಡ್ ವಾರ್ ರೂಂ ಮತ್ತು ಕಾಲ್ ಸೆಂಟರ್ ನಿರ್ವಹಣೆಯ ಉಸ್ತುವಾರಿ ಹೊತ್ತಿರುವ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಪ್ರತಿ ವಾರ್ಡಿನಲ್ಲಿ ವೈದ್ಯರು, ದಾದಿಯರು, ಸ್ವಯಂ ಸೇವಕರು, ಸ್ಥಳೀಯ ನಿವಾಸಿಗಳ ಸಂಘಗಳ ಪದಾಧಿಕಾರಿಗಳಿರುವ ಕನಿಷ್ಠ 50 ಜನರ ಸಮಿತಿ ರಚಿಸಲಾಗುವುದು. ಈ ಸಮಿತಿ ಸೋಂಕಿತರನ್ನು ಚಿಕಿತ್ಸೆಯ ಅಗತ್ಯವನ್ನು ಆದ್ಯತೆ ಆಧಾರದಲ್ಲಿ ನಿರ್ಧರಿಸುವ ಕೇಂದ್ರಕ್ಕೆ (ಟ್ರಯೇಜಿಂಗ್ ಸೆಂಟರ್) ಕರೆತಂದು, ರೋಗಲಕ್ಷಣಗಳಿಗೆ ಅನುಗುಣವಾಗಿ ವರ್ಗೀಕರಿಸಲಿದೆ' ಎಂದರು.

'ಆಸ್ಪತ್ರೆಗಳಲ್ಲಿ ಇನ್ನು ಮುಂದೆ ಆಧಾರ್ ಆಧಾರಿತ ಬಯೋಮೆಟ್ರಿಕ್ ವ್ಯವಸ್ಥೆ ತರಲಾಗುವುದು' ಎಂದರು.

'ವಾರ್ಡ್ ಸಮಿತಿಗಳು ಸಾಧಾರಣ ರೋಗಲಕ್ಷಣ ಇರುವವರಿಗೆ ಮನೆಯಲ್ಲಿ ಕ್ವಾರಂಟೈನ್‌ನಲ್ಲಿ ಇರಲು ತಿಳಿಸಿ, ಔಷದ ಕಿಟ್ ಒದಗಿಸಲಿವೆ. ಆಸ್ಪತ್ರೆಗೆ ದಾಖಲಿಸಬೇಕಾದವರನ್ನು ರೋಗಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಗೆ ದಾಖಲಿಸಲಿದೆ' ಎಂದರು.

'ಪ್ರತಿ ತಾಲ್ಲೂಕಿನಲ್ಲಿ ಕೋವಿಡ್ ರೋಗಿಗಳ ಆರೈಕೆ ಕೇಂದ್ರ ಆರಂಭಿಸಲಾಗುವುದು. ಅಲ್ಲಿನ ರೋಗಿಗಳ ವಿವರಗಳನ್ನು ಕೇಂದ್ರ ಜಿಲ್ಲಾ ವಾರ್ ರೂಂಗೆ ಕಳುಹಿಸುವಂತೆ ಸೂಚಿಸಲಾಗಿದೆ. ಆಯಾ ಜಿಲ್ಲೆಯಲ್ಲಿ ಲಭ್ಯವಿರುವ ಸಾಮಾನ್ಯ ಹಾಸಿಗೆ, ತೀವ್ರ ನಿಗಾ ಘಟಕಗಳ (ಐಸಿಯು) ಹಾಗೂ ತೀವ್ರ ಅವಲಂಬನೆ ಘಟಕ (ಎಚ್‌ಡಿಯು) ಹಾಸಿಗೆಗಳ ವಿವರ ಪ್ರದರ್ಶಿಸವಂತೆಯೂ ಸೂಚಿಸಲಾಗಿದೆ' ಎಂದರು

'ಬೆಂಗಳೂರಿನಲ್ಲಿ 9 ಕಡೆ (ಎಂಟು ವಲಯ ಮತ್ತು ಕೇಂದ್ರ ಕಚೇರಿ) ನಿಯಂತ್ರಣ ಕೇಂದ್ರಗಳಿವೆ. ಅಲ್ಲಿನ ಕರೆ ಸಂಪರ್ಕ ಮಾರ್ಗಗಳ ಸಂಖ್ಯೆಯನ್ನು 50ಕ್ಕೆ ಹೆಚ್ಚಿಸಲಾಗಿದೆ. 1912 ಸಹಾಯವಾಣಿಯ ಕರೆ ಸಂಪರ್ಕ ಮಾರ್ಗಗಳ ಸಂಖ್ಯೆಯನ್ನು 60ರಿಂದ 250ಕ್ಕೆ ಹೆಚ್ಚಿಸಲು ಸೂಚಿಸಲಾಗಿದೆ. ಹಾಸಿಗೆ ಹಂಚಿಕೆ ಆದವರಿಗೆ ಇನ್ನು ತಕ್ಷಣವೇ ಎಸ್‌ಎಂಎಸ್ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ' ಎಂದರು.

'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಐಸಿಯು, ಎಚ್‌ಡಿಯು, ರೋಗಿಗಳ ಅಂಕಿಅಂಶವನ್ನು ಪ್ರತಿ ಐದು ದಿನಗಳಿಗೊಮ್ಮೆ ಸಂಗ್ರಹಿಸಲಾಗುತ್ತಿತ್ತು. ಇನ್ನು ನಿತ್ಯವೂ ಪರಿಶೀಲಿಸಲು ಸೂಚಿಸಲಾಗಿದೆ. ಪ್ರತಿದಿನವೂ ಸರ್ಕಾರಿ ಕೋಟಾದಡಿ ದಾಖಲಾಗುವ ರೋಗಿಗಳ ವಿವರಗಳನ್ನು ಆಯಾ ಆಸ್ಪತ್ರೆಯ ನೋಡಲ್ ಅಧಿಕಾರಿಗಳು ಮತ್ತು ಸಹಾಯಕ ನೋಡಲ್ ಅಧಿಕಾರಿಗಳು ಆರೋಗ್ಯ ಮಿತ್ರ ಸಿಬ್ಬಂದಿಯ ಸಹಾಯ ಪಡೆದು ನೇರವಾಗಿ ಪರಿಶೀಲಿಸಿ ಕಡ್ಡಾಯವಾಗಿ ಮೇಲಧಿಕಾರಿಗಳಿಗೆ ವರದಿ ಮಾಡಬೇಕು' ಎಂದು ಲಿಂಬಾವಳಿ ಹೇಳಿದರು.

'ಹಾಸಿಗೆ ಹಂಚಿಕೆ ವ್ಯವಸ್ಥೆ ಸುಧಾರಣೆಗೆ ಈಗ ಪ್ರತಿ ಕೇಂದ್ರದ ಕಂಪ್ಯೂಟರಿನ ಐ -ಮ್ಯಾಕ್ ಐಡಿ ಹೊಂದಿರುವವರು ಇನ್ನು ಮುಂದೆ ಹೆಸರನ್ನು ಸಹ ನಮೂದಿಸಬೇಕು ಎಂಬ ನಿಯಮ ಕಡ್ಡಾಯಗೊಳಿಸಲಾಗಿದೆ' ಎಂದರು.

ಚಿತ್ರಾವಳಿ



ದಾಸರಹಳ್ಳಿ ಶಾಸಕರ ಕಚೇರಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಆರ್.ಮಂಜುನಾಥ್ (ಬಲದಿಂದ ಎರಡನೆಯವರು) ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಚಾಲಕರು ಮತ್ತು ನಿರ್ವಾಹಕರಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಿಸಿದರು. ಸ್ಥಳೀಯ ಮುಖಂಡರು ಇದ್ದರು



ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜಾಕೋಬ್ ಅವರು 10 ಆಮ್ಲಜನಕ ಕಾನ್ಸನ್‌ಟ್ರೇಟರ್ಸ್‌ಗಳನ್ನು ಸರ್.ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಆರ್.ರಾಮಕೃಷ್ಣ ಅವರಿಗೆ ಹಸ್ತಾಂತರಿಸಿದರು

ಲಾಕ್‌ಡೌನ್ ಭೀತಿ: ಮಳಿಗೆಗಳಲ್ಲಿ ಜನಜಂಗುಳಿ

ಪ್ರಜಾವಾಣಿ ವಾರ್ತೆ



ವಿಜಯನಗರದ ಡಿಮಾರ್ಟ್ ಮಳಿಗೆಯಲ್ಲಿ ಸಾಲುಗಟ್ಟಿದ್ದ ಗ್ರಾಹಕರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಸೋಮವಾರದಿಂದ ಕೊರೊನಾ ಬಿಗಿ ಕ್ರಮಗಳನ್ನು ಜಾರಿ ಮಾಡುವುದಾಗಿ ಸರ್ಕಾರ ಘೋಷಿಸಿದೆ. ಇದರ ಬೆನ್ನಲ್ಲೇ ಬೆಂಗಳೂರಿಗರು ಲಾಕ್‌ಡೌನ್ ಜಾರಿಯಾಗುತ್ತದೆ ಎಂಬ ಭೀತಿಯಲ್ಲಿ ಶನಿವಾರವೇ ಅಗತ್ಯ ವಸ್ತುಗಳ ಖರೀದಿಗೆ ಮುಗಿಬಿದ್ದರು.


ಸೋಮವಾರದಿಂದ 14 ದಿನ ರಾಜ್ಯದಲ್ಲಿ ಲಾಕ್‌ಡೌನ್ ಮಾಡುವುದಾಗಿ ಸರ್ಕಾರ ಶುಕ್ರವಾರ ಘೋಷಿಸಿತ್ತು. ಈ ವೇಳೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿಸುವುದಾಗಿಯೂ ಹೇಳಿತ್ತು. ಆದರೂ, ಈ ಬಿಗಿ ನಿಯಮ ಜಾರಿಯಾಗುವ ಎರಡು ದಿನ ಮುನ್ನವೇ ಜನರ ಖರೀದಿ ಭರಾಟೆ ಜೋರಾಗಿತ್ತು.


ಸೂಪರ್ ಮಾರ್ಕೆಟ್‌ಗಳು, ದಿನಸಿ ಅಂಗಡಿಗಳು, ತರಕಾರಿ, ಹಣ್ಣು ಅಂಗಡಿಗಳಲ್ಲಿ ಭಾರಿ ಸಂಖ್ಯೆಯಲ್ಲಿ ಗ್ರಾಹಕರು ಕಂಡುಬಂದರು. ಅಗತ್ಯ ವಸ್ತುಗಳನ್ನು ದಾಸ್ತಾನು ಮಾಡಿಕೊಳ್ಳುವ ಸಲುವಾಗಿ ಜನ ಕುಟುಂಬ ಸಮೇತ ಮಳಿಗೆಗಳಿಗೆ ಬಂದಿದ್ದರು. ಬೆಳಿಗ್ಗೆ 10 ಗಂಟೆಯವರೆಗೆ ಮಾತ್ರ ಖರೀದಿಗೆ ಅನುಮತಿ ನೀಡಿದ್ದರಿಂದ ಮಳಿಗೆಗಳ ಎದುರು ಜನ ಸಾಲುಗಟ್ಟಿ ಗುಂಪು ಸೇರಿದ್ದರು. ತಿಂಗಳಿಗೆ ಆಗುವಷ್ಟು ಅಗತ್ಯ ವಸ್ತುಗಳನ್ನು ಖರೀದಿಸಿ ಮನೆಗಳಿಗೆ ಕೊಂಡೊಯ್ದರು.

ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿದ್ದರೂ ಜನ ಖರೀದಿಗಾಗಿ ಮನೆಯಿಂದ ಹೊರಬಂದಿದ್ದ ನಗರದ ರಸ್ತೆಗಳಲ್ಲಿ ವಾಹನ ಸಂಚಾರ ಎಂದಿನಂತೆಯೇ ಇತ್ತು. ಕೆಲವೆಡೆ ವಾಹನ ದಟ್ಟಣೆಯೂ ಆಗಿತ್ತು.

ವಿಜಯನಗರದ ಡಿಮಾರ್ಟ್ ಮಳಿಗೆಯ ಹೊರಭಾಗದವರೆಗೆ ಗ್ರಾಹಕರು ಸಾಲುಗಟ್ಟಿ ನಿಂತಿದ್ದರು. 10 ಗಂಟೆಯ ನಂತರವೂ ಜನ ಖರೀದಿಯಲ್ಲಿ ತೊಡಗಿದ್ದರಿಂದ ಪೊಲೀಸರು ಸ್ಥಳಕ್ಕೆ ಬಂದು, ಮಳಿಗೆಯ ಬಾಗಿಲು ಮುಚ್ಚಿಸಿದರು.

ಮಾರುಕಟ್ಟೆಗಳಲ್ಲೂ ಭರಾಟೆ: ಕೆ.ಆರ್. ಮಾರುಕಟ್ಟೆ ಅಕ್ಕಪಕ್ಕದ ಮಳಿಗೆಗಳಲ್ಲಿ ಬೆಳಿಗ್ಗೆ ಮಾತ್ರ ವ್ಯಾಪಾರಕ್ಕೆ ಅನುಮತಿ ನೀಡಲಾಗಿತ್ತು. ತರಕಾರಿ ಮತ್ತು ಹಣ್ಣು ಖರೀದಿಯಲ್ಲಿ ಜನ ತೊಡಗಿದ್ದರು. ಈ ವೇಳೆ ಕೆಲವು ಕಡೆ ಜನ ಅಂತರ ಕಾಯ್ದುಕೊಳ್ಳಲು ಸಾಧ್ಯವಾಗಲಿಲ್ಲ.







ಆನೇಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಕೊರೊನಾದಿಂದ ಮೃತಪಟ್ಟ ವ್ಯಕ್ತಿಗಳಿಬ್ಬರ ಮೃತದೇಹ ಅದಲು ಬದಲಾದ ಹಿನ್ನೆಲೆಯಲ್ಲಿ ಕುಟುಂಬದ ಸದಸ್ಯರು ಆಸ್ಪತ್ರೆ ಮುಂಭಾಗ ಪ್ರತಿಭಟನೆ ನಡೆಸಿದರು

ಮೃತದೇಹ ಅದಲು ಬದಲು: ಕುಟುಂಬ ಸದಸ್ಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಆನೇಕಲ್: ಕೊರೊನಾ ಸೋಂಕು ತಗುಲಿ ಮೃತಪಟ್ಟ ವ್ಯಕ್ತಿಯ ಮೃತದೇಹ ಅದಲು ಬದಲಾದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಪಟ್ಟಣದ ಸರ್ಕಾರಿ ಆಸ್ಪತ್ರೆಯ ಮುಂಭಾಗ ಪ್ರತಿಭಟನೆ ನಡೆಸಿ, ಆಸ್ಪತ್ರೆ ಸಿಬ್ಬಂದಿಯ ನಿರ್ಲಕ್ಷ್ಯವನ್ನು ಖಂಡಿಸಿದರು.

ಮುತ್ತಗಟ್ಟಿ ಮಂಜುನಾಥ್(45) ಎಂಬುವರು ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಇದೇ ಆಸ್ಪತ್ರೆಯಲ್ಲಿ ಹೀಲಲಿಗೆ ಕೃಷ್ಣಪ್ಪ ಎಂಬುವವರೂ ಮೃತಪಟ್ಟಿದ್ದರು. ಮಂಜುನಾಥ್ ಅವರ ಕುಟುಂಬದವರಿಗೆ ಹೀಲಲಿಗೆ ಕೃಷ್ಣಪ್ಪ ಅವರ ಮೃತದೇಹ ನೀಡಿದ್ದಾರೆ.

ಮಂಜುನಾಥ್ ಕುಟುಂಬದವರು ಮುತ್ತಗಟ್ಟಿಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಶವಸಂಸ್ಕಾರ ಪೂರ್ಣಗೊಳಿಸಿದ್ದರು. ಈ ಮಧ್ಯೆ ಹೀಲಲಿಗೆ ಕೃಷ್ಣಪ್ಪ ಅವರ ಕುಟುಂಬದವರು ಮೃತದೇಹ ಪಡೆಯಲು ಸರ್ಕಾರಿ ಆಸ್ಪತ್ರೆಗೆ ಬಂದು ನೋಡಿದಾಗ ಕೃಷ್ಣಪ್ಪನ ಶವವಲ್ಲ ಎಂದು ತಿಳಿಸಿದ್ದಾರೆ. ಆಗ ಎಚ್ಚೆತ್ತುಕೊಂಡ ಆಸ್ಪತ್ರೆಯವರು ಶನಿವಾರ ಮಧ್ಯಾಹ್ನ ಮಂಜುನಾಥ್ ಕುಟುಂಬದವರಿಗೆ ಕರೆ ಮಾಡಿ ಮಂಜುನಾಥ್ ಶವ ಆಸ್ಪತ್ರೆಯಲ್ಲಿಯೇ ಇದೆ ತೆಗೆದುಕೊಂಡು ಹೋಗಿ ಎಂದು ತಿಳಿಸಿದ್ದಾರೆ.

ಇದರಿಂದ ಕುಪಿತಗೊಂಡ ಎರಡೂ ಕುಟುಂಬದ ಸದಸ್ಯರು ಮತ್ತು ಗ್ರಾಮಸ್ಥರು ಆಸ್ಪತ್ರೆ ಸಿಬ್ಬಂದಿಯ ಬೇಜವಾಬ್ದಾರಿ ಖಂಡಿಸಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಮಂದೂರು ಗ್ರಾಮ ಪಂಚಾಯಿತಿ ಸದಸ್ಯ ಅಂಬರೀಷ್ ಮಾತನಾಡಿ, 'ಸರ್ಕಾರಿ ಆಸ್ಪತ್ರೆಯಲ್ಲಿ ಜನರ ಜೀವಗಳಿಗೆ ಬೆಲೆ ಇಲ್ಲದಂತಾಗಿದೆ. ಶವ ಗುರುತಿಸದ ಸಿಬ್ಬಂದಿ ಚಿಕಿತ್ಸೆಯನ್ನು ಎಷ್ಟರಮಟ್ಟಿಗೆ ನೀಡಿದ್ದಾರೆ ಎಂಬ ಅನುಮಾನ ಬರುತ್ತಿದೆ. ಶುಕ್ರವಾರ ರಾತ್ರಿವರೆಗೂ ಚೆನ್ನಾಗಿ ಮಾತನಾಡುತ್ತಿದ್ದ ಮಂಜುನಾಥ್ ಶನಿವಾರ ಇಲ್ಲವಾಗಿದ್ದಾರೆ. ಅವರ ಕುಟುಂಬ ದಿಕ್ಕಿಲ್ಲದಂತಾಗಿದೆ' ಎಂದರು.

ನಿಧನ ವಾರ್ತೆ

ನೀಲಾಂಬಿಕೆ ರಾಜಣ್ಣ



ಬೆಂಗಳೂರು: ಗಾಯಕಿ ನೀಲಾಂಬಿಕೆ ರಾಜಣ್ಣ ಅವರು ಅನಾರೋಗ್ಯದಿಂದಾಗಿ ಶನಿವಾರ ನಿಧನರಾದರು.

ನೀಲಾಂಬಿಕೆ ಅವರು ಸಚಿವಾಲಯದ ನಿವೃತ್ತ ನೌಕರರಾಗಿದ್ದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಧಾರ್ಮಿಕ ವಿಧಿ-ವಿಧಾನ ಪಾಲಿಸಬೇಕೋ- ಕೋವಿಡ್ ಶವದಿಂದ ದೂರವಿರಬೇಕೋ ?

ಬಯಲು ಚಿತಾಗಾರದಲ್ಲಿ 'ಧರ್ಮ ಸಂಕಟ'

• ಗುರು ಪಿ.ಎಸ್.

ಪ್ರಜಾವಾಣಿ ವಿಶೇಷ



ಗಿಡ್ಡೇನಹಳ್ಳಿಯ ಬಯಲು ಚಿತಾಗಾರದಲ್ಲಿ ಮೃತರಿಗೆ ಅಂತಿಮ ನಮನ ಸಲ್ಲಿಸುತ್ತಿರುವ ಸಂಬಂಧಿಗಳು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಟೋಕನ್ ನಂಬರ್ 15 ಯಾರ‍್ರಿ... ಬೇಗ ಬೇಗ ಬಾಡಿ ತಗೊಂಡ್ ಬನ್ನಿ...'

ಇಷ್ಟು ಹೊತ್ತು ನಿರೀಕ್ಷಿಸಿದ್ದ ಸಮಯ ಬಂತು ಎಂಬ ಧಾವಂತದಲ್ಲಿ ಮುಂದಡಿ ಇಡಬೇಕೋ, ರಕ್ತ-ಮಾಂಸ, ನೋವು-ನಲಿವು ಎಲ್ಲವನ್ನೂ ಹಂಚಿಕೊಂಡವರ ದೇಹಕ್ಕೆ ಅಗ್ನಿಸ್ಪರ್ಶ ಮಾಡುವುದು ಹೇಗೆಂಬ ಸಂಕಟದಲ್ಲಿ ಹಿಂದಡಿ ಇಡಬೇಕೋ ಗೊತ್ತಾಗದೇ ಮೃತರ ಸಂಬಂಧಿಕರು ಸಂದಿಗ್ಧದಲ್ಲಿದ್ದರು. ಶವ ಸಂಸ್ಕಾರಕ್ಕೂ ಟೋಕನ್ ತೆಗೆದುಕೊಳ್ಳುವಂತಾದ ತಮ್ಮ 'ಹಣೆಬರಹವನ್ನು' ಶಪಿಸುತ್ತಿದ್ದರು.

ನಗರದ ತಾವರೆಕೆರೆ-ಗಿಡ್ಡೇನಹಳ್ಳಿಯಲ್ಲಿ ಕೋವಿಡ್ ಶವಗಳನ್ನು ದಹಿಸಲು ರೂಪಿಸಲಾಗಿರುವ ಬಯಲು ಚಿತಾಗಾರಗಳ ಮುಂದೆ ಒಂದೆರಡು ತಾಸು ನಿಂತರೂ ಸಾಕು, ಇಂತಹ ಅನೇಕ ದೃಶ್ಯಗಳು ಮನಸನ್ನು ನೋಯಿಸಿ, ಕಣ್ಣುಗಳನ್ನು ತೋಯಿಸುತ್ತವೆ.

ಸ್ವಲ್ಪ ಜಾಗೃತಿ ವಹಿಸಿದ್ದರೆ ಕೋವಿಡ್ ಬರುತ್ತಿರಲಿಲ್ಲವೇನೋ ಎಂಬ ಬೇಸರ, ಸಕಾಲಕ್ಕೆ ಚಿಕಿತ್ಸೆ ಕೊಡಿಸಲಾಗಲಿಲ್ಲವಲ್ಲ ಎಂಬ ಅಸಹಾಯಕತೆ, ಕೊನೆಯ ಕ್ಷಣದಲ್ಲಾದರೂ ಗೌರವಯುತವಾಗಿ ಕಳಿಸಿಕೊಡಬೇಕು, ಎಲ್ಲ 'ಸಂಸ್ಕಾರ'ಗಳನ್ನು ನೆರವೇರಿಸಬೇಕು ಎಂಬ ಅಪೇಕ್ಷೆ... ಇಂತಹ 'ಧರ್ಮ ಸಂಕಟ'ದಲ್ಲಿ ಅನೇಕರಿದ್ದರು.

ಧಾರ್ಮಿಕ ವಿಧಿ-ವಿಧಾನಗಳನ್ವಯ ಅಂತ್ಯಸಂಸ್ಕಾರ ನಡೆಯದಿದ್ದರೆ ಮೋಕ್ಷ ಸಿಗುವುದಿಲ್ಲ, ಮೃತರ ಆತ್ಮಕ್ಕೆ ಶಾಂತಿ ಲಭಿಸುವುದಿಲ್ಲ ಎಂಬ ನಂಬಿಕೆ ಒಂದೆಡೆಯಾದರೆ, ನಮಗೂ ಸೋಂಕು ತಗುಲಿದರೆ ನಮ್ಮನ್ನು ನಂಬಿದ ಉಳಿದವರ ಕಥೆ ಏನು ಎಂಬ ಚಿಂತೆ ಮತ್ತೊಂದೆಡೆ.

ಒಂದಾದ ನಂತರ ಒಂದು ಶವಗಳು ಹೀಗೆ ಸುಡುತ್ತಲೇ ಇದ್ದರೆ, ಮುಸ್ಲಿಂ ಯುವಕರು ಅವುಗಳ ದಹನಕ್ಕೆ ಸಹಕರಿಸುವ, ಸೌದೆಗಳನ್ನು ಒಡೆದು ಜೋಡಿಸುವ ಕೆಲಸದಲ್ಲಿ ನಿರತರಾಗಿದ್ದರು.

ಶವ ಸುಟ್ಟ ಬೂದಿ ತಣ್ಣಗಾಗುವುದಕ್ಕೂ ಮೊದಲೇ ಅದನ್ನು ಹೊಸ ಮಡಿಕೆಯಲ್ಲಿ ತುಂಬಿಕೊಳ್ಳಬೇಕಾದ ಅನಿವಾರ್ಯ ಸಂಬಂಧಿಕರದ್ದು. 'ಬೇಗ ಬೇಗ ತಗೊಳ್ರೀ' ಎಂಬ ಒತ್ತಡ ಬೇರೆ.

ಕಳಿಸುವಾಗಲಾದರೂ 'ಮೃತರನ್ನು' ನೆಮ್ಮದಿಯಾಗಿ 'ಕಳಿಸೋಣ' ಎಂದುಕೊಂಡ ಕೆಲವರು ಚಿತಾಗಾರದ ಬಳಿಯೇ ಸಂಸ್ಕಾರ ನಡೆಸಲು ನಿರ್ಧರಿಸಿದ್ದರು. ಚಿತಾಗಾರಕ್ಕಿಂತ ಅನತಿ ದೂರದಲ್ಲಿ (ಕಾರುಗಳ ನಿಲುಗಡೆ ಸ್ಥಳದ ಪಕ್ಕ) 'ಸಂಸ್ಕಾರ' ಕ್ರಿಯೆ ನಡೆಯುತ್ತಿತ್ತು.

ಅಂತಿಮ ವಿಧಿ-ವಿಧಾನ ನೆರವೇರಿಸಲು ಬರಲು ಒಪ್ಪದ ಪುರೋಹಿತರನ್ನು ಕಾಡಿ-ಬೇಡಿ ಒಪ್ಪಿಸಿ, ಅವರಿಗೂ ಪಿಪಿಇ ಕಿಟ್ ಹಾಕಿಸಿ ಕರೆತಂದಿದ್ದರು.

ಪತಿಯನ್ನು ಕಳೆದುಕೊಂಡ ಮಹಿಳೆಯ 'ಮುತ್ತೈದೆ'ತನವನ್ನು ತೆಗೆಯುವ ಕಾರ್ಯ ಅದು. ಅವರುಟ್ಟ ಸೀರೆಯ ಮೇಲೆಯೇ ಮತ್ತೊಂದು ಸೀರೆ ಉಡಿಸಿ, ಬಳೆ ತೊಡಿಸಿ, ಹೂವು ಮುಡಿಸಿ, ಚಿತಾಭಸ್ಮವಿರುವ ಮಡಿಕೆಗೆ ಪೂಜೆ ಮಾಡಿಸಿ, ನಂತರ ಇವೆಲ್ಲವನ್ನೂ ತೆಗೆಸಲಾಗುತ್ತಿತ್ತು.

ಗಂಡು ಮಕ್ಕಳಿದ್ದರೆ ಅವರ ಕೇಶಮುಂಡನ ಕಾರ್ಯವೂ ಇಲ್ಲಿಯೇ ನಡೆಯುತ್ತಿತ್ತು. ಆದರೆ, ಹೀಗೆ ಧಾರ್ಮಿಕ ವಿಧಿ-ವಿಧಾನಗಳನ್ನು ಸಂಪೂರ್ಣವಾಗಿ ನೆರವೇರಿಸುತ್ತಿದ್ದವರ ಸಂಖ್ಯೆ ಶೇ 10ರಷ್ಟು ಮಾತ್ರ. ಉಳಿದ ಶೇ 90ರಷ್ಟು ಜನರ ಪೈಕಿ ಕೆಲವರಿಗೆ ಈ ಕಾರ್ಯಗಳನ್ನೆಲ್ಲ ನೆರವೇರಿಸಬೇಕೆಂಬ ಮನಸಿದ್ದರೂ, ಅನಿವಾರ್ಯ ಪರಿಸ್ಥಿತಿಗಳು ಅವರಿಗೆ ಇಂತಹ ಅವಕಾಶವನ್ನು ನೀಡಿರಲಿಲ್ಲ.

ಚಿತಾಗಾರಗಳ ಬಳಿಯೇ 'ಸಂಸ್ಕಾರ' ಕ್ರಿಯೆ ನಡೆಸಲು ಆಗದ ಅನೇಕರು, ಚಿತಾಭಸ್ಮವನ್ನು ತುಂಬಿಕೊಳ್ಳದೇ ಇರುತ್ತಿರಲಿಲ್ಲ. ಅದನ್ನು ಕಾವೇರಿ ನದಿಯಲ್ಲಿ ಬಿಟ್ಟು ನಮಸ್ಕರಿಸಿದರಾಯಿತು ಎಂದು ಸಮಾಧಾನಪಟ್ಟುಕೊಳ್ಳುತ್ತಿದ್ದರು.

25 ಎಕರೆಯಷ್ಟು ವಿಶಾಲ ಜಾಗದಲ್ಲಿ ಸರ್ಕಾರ ಎಲ್ಲ ವ್ಯವಸ್ಥೆ ಮಾಡಿದೆ. ಶಾಮಿಯಾನವನ್ನು ಹಾಕಿ ವಿಶ್ರಾಂತಿಗೂ ಅವಕಾಶ ಕಲ್ಪಿಸಿದೆ. ಏನೆಲ್ಲ ವ್ಯವಸ್ಥೆಗಳಿದ್ದರೂ, ಸತ್ತವರನ್ನೂ ನೆಮ್ಮದಿಯಾಗಿ ಕಳಿಸಲು ಆಗದ ಪರಿಸ್ಥಿತಿಗೆ ಯಾರನ್ನು ಶಪಿಸಬೇಕು, ನಮ್ಮ ನಮ್ಮ ನಂಬಿಕೆಯಂತೆ, ನೆಮ್ಮದಿಯಿಂದ ಅಂತ್ಯಕ್ರಿಯೆಯನ್ನೂ ನಡೆಸಲಾಗದ ಸ್ಥಿತಿಗೆ ಯಾರನ್ನು ದೂರಬೇಕು ಎಂಬ ಸಂದಿಗ್ಧತೆ ಅನೇಕರ ಮುಖದಲ್ಲಿ ಕಾಣುತ್ತಿತ್ತು.

ದೇಗುಲ ಹಸ್ತಾಂತರ ಪ್ರಕ್ರಿಯೆ ಮುಕ್ತಾಯ

ಪ್ರಜಾವಾಣಿ ವಾರ್ತೆ

ಗೋಕರ್ಣ: ಸುಪ್ರೀಂ ಕೋರ್ಟ್ ಆದೇಶದಂತೆ ರಾಮಚಂದ್ರಾಪುರ ಮಠದಿಂದ ಗೋಕರ್ಣ ಮಹಾಬಲೇಶ್ವರ ದೇವಸ್ಥಾನದ ಹಸ್ತಾಂತರ ಪ್ರಕ್ರಿಯೆ ಶನಿವಾರ ಮುಕ್ತಾಯವಾಗಿದ್ದು ಕುಮಟಾ ಉಪವಿಭಾಗಾಧಿಕಾರಿ ಎಂ.ಅಜೀತ್ ಅವರಿಗೆ ದೇವಸ್ಥಾನದ ಆಡಳಿತಾಧಿಕಾರಿ ಜಿ.ಕೆ.ಹೆಗಡೆ ಅಧಿಕಾರ ಹಸ್ತಾಂತರಿಸಿದರು.

ಉಪವಿಭಾಗಾಧಿಕಾರಿ ಎಂ. ಅಜೀತ್ ದೇವಸ್ಥಾನದ ಆಭರಣ, ಚಿರಾಸ್ತಿ ಚರಾಸ್ತಿ, ಹಣಕಾಸು, ಬ್ಯಾಂಕ್ ಖಾತೆಗಳನ್ನೆಲ್ಲಾ ಪರಿಶೀಲಿಸಿ ತಮ್ಮ ವಶಕ್ಕೆ ಪಡೆದರು.

'ಸದ್ಯಕ್ಕೆ ದಿನನಿತ್ಯದ ವ್ಯವಹಾರಗಳು ಮುಂಚಿನಂತೆ ನಡೆಯಲಿದೆ. ದೇವಸ್ಥಾನದ ಉಸ್ತುವಾರಿಯನ್ನು ಇಲ್ಲಿಯ ಕಂದಾಯ ಅಧಿಕಾರಿ ನೋಡಿಕೊಳ್ಳಲಿದ್ದಾರೆ. ಕೋವಿಡ್ ಕಾರಣದಿಂದ ಭಕ್ತರಿಗೆ ಪೂಜೆಗೆ ಅವಕಾಶ ಇಲ್ಲದ ಕಾರಣ ಮುಂದಿನ ನಿರ್ಧಾರವನ್ನು ನಂತರ ಸಮಿತಿ ತೆಗೆದುಕೊಳ್ಳಲಿದೆ' ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ದೇವಸ್ಥಾನಕ್ಕೆ ಭೇಟಿ ನೀಡಿ ಮಹಾಬಲೇಶ್ವರನಿಗೆ ಪೂಜೆ ಸಲ್ಲಿಸಿ ಸಮಿತಿಯ ಇತರ ಸದಸ್ಯರೊಂದಿಗೆ ಸ್ವಲ್ಪಹೊತ್ತು ಚರ್ಚೆ ನಡೆಸಿದರು. ಸಮಿತಿಯ ಸದಸ್ಯರಾದ ಮಹಾಬಲ ಉಪಾಧ್ಯ, ದತ್ತಾತ್ರೇಯ ಹಿರೇಗಂಗೆ, ಪರಮೇಶ್ವರ ಮಾರ್ಕಾಂಡೆ, ಕಂದಾಯ ಅಧಿಕಾರಿ ಕೆ.ಎಸ್.ಗೊಂಡ, ಪಿಎಸ್‌ಐ ನವೀನ್ ನಾಯ್ಕ ಇದ್ದರು.

ವಾರ್ಡ್‌ಗಳಲ್ಲಿ ಸಿಸಿ ಟಿವಿ ಕ್ಯಾಮೆರಾ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳ ವಾರ್ಡ್‌ಗಳು ಮತ್ತು ತೀವ್ರ ನಿಗಾ ಘಟಕದಲ್ಲಿ (ಐಸಿಯು) ಸಿಸಿ ಟಿವಿ ಕ್ಯಾಮೆರಾವನ್ನು ಅಳವಡಿಕೆ ಮಾಡಬೇಕು ಎಂದು ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೋವಿಡ್ ನಿಯಂತ್ರಣ ಮತ್ತು ಮೇಲ್ವಿಚಾರಣೆ ಸಭೆಯಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಕೆಗೆ ಸೂಚಿಸಲಾಗಿದೆ. ಅದರಂತೆ ಆಸ್ಪತ್ರೆಗಳು ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಬೇಕು. ಇದಕ್ಕೆ ತಗಲುವ ವೆಚ್ಚವನ್ನು ಆರೋಗ್ಯ ರಕ್ಷಾ ಸಮಿತಿ ಅನುದಾನದಿಂದ ಅಥವಾ ಆಸ್ಪತ್ರೆಯಲ್ಲಿ ಲಭ್ಯವಿರುವ ಇತರೇ ಅನುದಾನದಿಂದ ಭರಿಸಿಕೊಳ್ಳಬೇಕು. ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಸದರಿ ಜಿಲ್ಲೆಯ ನೋಡಲ್ ಅಧಿಕಾರಿಗಳು ಪರಿಶೀಲಿಸಿ, ಮೇ 12ರ ಒಳಗಡೆ ವರದಿ ಸಲ್ಲಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಸರ್ಕಾರೇತರ ಸಂಸ್ಥೆಯ ಅಧ್ಯಯನ ವರದಿಯಲ್ಲಿ ಉಲ್ಲೇಖ

ಕೋವಿಡ್ ನಿಯಂತ್ರಿಸುವಲ್ಲಿ 'ಕರ್ಫ್ಯೂ' ವಿಫಲ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೊರೊನಾ ಸೋಂಕು ದೃಢ ಪ್ರಮಾಣವನ್ನು ನಿಯಂತ್ರಣಕ್ಕೆ ತರುವಲ್ಲಿ ಕರ್ಫ್ಯೂ ವಿಫಲವಾಗಿದೆ. ಸೋಂಕು ವೇಗವಾಗಿ ಹರಡುತ್ತಿದ್ದು, ಲಕ್ಷಣ ಇಲ್ಲದವರಿಗೆ ಕೂಡ ಪರೀಕ್ಷೆ ಮಾಡಬೇಕಿದೆ ಎಂದು ಸರ್ಕಾರೇತರ ಸಂಸ್ಥೆಯೊಂದು ತಿಳಿಸಿದೆ.

ಕೋವಿಡ್ ಎರಡನೇ ಅಲೆ ಹಾಗೂ ಕರ್ಫ್ಯೂ ಬಳಿಕ ರಾಜ್ಯದಲ್ಲಿ ವರದಿಯಾದ ಪ್ರಕರಣಗಳ ಬಗ್ಗೆ ಸರ್ಕಾರೇತರ ಸಂಸ್ಥೆಯಾದ ಪ್ರಾಕ್ಸಿಮಾ 'ಜೀವನ್ ರಕ್ಷಾ' ಯೋಜನೆಯಡಿ ತಜ್ಞರ ನೆರವಿನಿಂದ ಅಧ್ಯಯನ ನಡೆಸಿದೆ. ಇದಕ್ಕೆ ಭಾರತೀಯ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನವು ತಾಂತ್ರಿಕ ಸಹಕಾರ ನೀಡಿದೆ.

ಸರ್ಕಾರವು ವಿವಿಧ ಕ್ರಮಗಳನ್ನು ಕೈಗೊಂಡರೂ ಕೋವಿಡ್ ಪ್ರಕರಣಗಳು ಹರಡುವಿಕೆ ತಡೆಗೆ ಕರ್ಫ್ಯೂ ಸಹಕಾರಿಯಾಗಲಿಲ್ಲ. ಕರ್ಫ್ಯೂ ಜಾರಿಯಾದ ನಂತರ (ಮೇ 7ರವರೆಗೆ) ರಾಜ್ಯದಲ್ಲಿ 4 ಲಕ್ಷ ಪ್ರಕರಣಗಳು ವರದಿಯಾಗಿವೆ. ಈ ಅವಧಿಯಲ್ಲಿ ಪ್ರಕರಣಗಳ ಬೆಳವಣಿಗೆ ದರಕ್ಕೆ ಕಡಿವಾಣ ಹಾಕುವುದು ಸರ್ಕಾರದ ಉದ್ದೇಶವಾಗಿತ್ತು.

ದುರದೃಷ್ಟವಶಾತ್ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಕರ್ಫ್ಯೂ ಜಾರಿಯಾದ ಬಳಿಕ ಕೊಡಗು (ಶೇ 55), ಚಾಮರಾಜನಗರ (ಶೇ 47), ತುಮಕೂರು (ಶೇ 43), ಮಂಡ್ಯ (ಶೇ 39), ಮತ್ತು ರಾಮನಗರ (ಶೇ 38) ಜಿಲ್ಲೆಯಲ್ಲಿ ಸೋಂಕು ದೃಢ ಪ್ರಮಾಣ ಗಣನೀಯವಾಗಿ ಏರಿಕೆ ಕಂಡಿದೆ. ಈ ಜಿಲ್ಲೆಗಳಲ್ಲಿ ಕರ್ಫ್ಯೂ ಪೂರ್ವದ ಸ್ಥಿತಿಗೆ ಹೋಲಿಸಿದರೆ ಪ್ರಕರಣಗಳು ದ್ವಿಗುಣಗೊಂಡಿವೆ ಎಂದು ತಿಳಿಸಲಾಗಿದೆ.

ಶೇ 63ರಷ್ಟು ಹೆಚ್ಚಳ: ಬೆಂಗಳೂರು ನಗರ ಬಿಟ್ಟರೆ, ಬೆಂಗಳೂರು ಗ್ರಾಮಾಂತರ, ಉಡುಪಿ, ಮೈಸೂರು, ಹಾಸನ ಮತ್ತು ಕೊಡಗಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳಿವೆ. ಕರ್ಫ್ಯೂ ಬಳಿಕ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಶೇ 63ರಷ್ಟು ಹೆಚ್ಚಳವಾಗಿದೆ. ಅಲ್ಪಾವಧಿಯಲ್ಲಿಯೇ 5 ಲಕ್ಷದ ಗಡಿ ದಾಟಿದೆ. ಅಧಿಕ ಸಂಖ್ಯೆಯಲ್ಲಿ ಸಕ್ರಿಯ ಪ್ರಕರಣಗಳು ಇರುವ ಜಿಲ್ಲೆಗಳಲ್ಲಿ ವೈದ್ಯಕೀಯ ತಜ್ಞರ ಕೊರತೆ ಮತ್ತು ದುರ್ಬಲ ವೈದ್ಯಕೀಯ ಮೂಲಸೌಕರ್ಯವಿದೆ. ಇದರಿಂದಾಗಿ ಸೋಂಕು ಹರಡುವಿಕೆಯನ್ನು ತಡೆಯಲು ಸಾಧ್ಯವಾಗುತ್ತಿಲ್ಲ ಎಂದು ಉಲ್ಲೇಖಿಸಲಾಗಿದೆ.

ಕರ್ಫ್ಯೂ ಘೋಷಿಸುವ ವೇಳೆ ಉತ್ತರ ಕನ್ನಡದಲ್ಲಿ 1,592 ಸಕ್ರಿಯ ಪ್ರಕರಣಗಳಿದ್ದವು. ಆ ಸಂಖ್ಯೆ ಈಗ 5 ಸಾವಿರ ದಾಟಿದೆ.

ಅದೇ ರೀತಿ, ಹಾವೇರಿಯಲ್ಲಿ 529ರಿಂದ 1,388, ಕೊಪ್ಪಳದಲ್ಲಿ 2,012ರಿಂದ 5,257, ಬಾಗಲಕೋಟೆಯಲ್ಲಿ 1,872ರಿಂದ 4,462, ರಾಮನಗರದಲ್ಲಿ 1,550ರಿಂದ 3,665ಕ್ಕೆ ಹೆಚ್ಚಳವಾಗಿದೆ. ಕೋವಿಡ್ ಮರಣ ಪ್ರಕರಣಗಳು ಕೂಡ ಏರಿಕೆ ಕಂಡಿವೆ. ಎರಡನೇ ಅಲೆ ಕಾಣಿಸಿಕೊಂಡ ಬಳಿಕ 5,425 ಮಂದಿ ಮೃತಪಟ್ಟಿದ್ದಾರೆ ಎಂದು ವಿವರಿಸಲಾಗಿದೆ.

ತೋರಿಕೆಗೆ ಗುಣಮುಖರ ಸಂಖ್ಯೆ

ಸಕ್ರಿಯ ಪ್ರಕರಣಗಳ ಸಂಖ್ಯೆ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರು ಗುಣಮುಖರಾಗಿದ್ದಾರೆ ಎಂದು ಘೋಷಿಸಲಾಗುತ್ತಿದೆ ಎಂದು 'ಜೀವನ್ ರಕ್ಷಾ' ಯೋಜನೆಯ ಸಂಚಾಲಕ ಮೈಸೂರು ಸಂಜೀವ್ ತಿಳಿಸಿದರು.

ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಾದವರಿಗೆ ಮನೆಗೆ ಕಳುಹಿಸುವ ವೇಳೆ ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿಲ್ಲ ಎಂದು ಅವರು ಹೇಳಿದರು.

ಕೊರೊನಾ ಹರಡುವಿಕೆಯನ್ನು ತಡೆಯಬೇಕಾದಲ್ಲಿ ಲಕ್ಷಣ ಇಲ್ಲದವರಿಗೂ ಪರೀಕ್ಷೆ ನಡೆಸಬೇಕಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಹಾಸಿಗೆ ಸಮಸ್ಯೆ ತಲೆದೋರಿದೆ. ಹಾಗಾಗಿ, ರೋಗಿಗಳನ್ನು ವಿಂಗಡಿಸಿ, ಸೌಮ್ಯ ಲಕ್ಷಣಗಳು ಇರುವವರಿಗೆ ಮನೆ ಆರೈಕೆಗೆ ಪ್ರೋತ್ಸಾಹಿಸಬೇಕು ಎಂದು ವರದಿ ಹೇಳಿದೆ.

ಸುದ್ದಿ 2 ನಿಮಿಷ

ಹಲವು ದಿನಗಳ ಬಳಿಕ ಸಾರ್ವಜನಿಕವಾಗಿ ಕಾಣಿಸಿಕೊಂಡ ರಮೇಶ ಜಾರಕಿಹೊಳಿ

ಗೋಕಾಕ (ಬೆಳಗಾವಿ ಜಿಲ್ಲೆ): ಸಿ.ಡಿ. ಪ್ರಕರಣದ ಆರೋಪದ ಹಿನ್ನೆಲೆಯಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಹಾಗೂ ಕೋವಿಡ್–19 ಬಾಧಿತರಾಗಿ ಚೇತರಿಸಿಕೊಂಡ ನಂತರ ಶಾಸಕ ರಮೇಶ ಜಾರಕಿಹೊಳಿ ಇದೇ ಮೊದಲಿಗೆ ಸಾರ್ವಜನಿಕವಾಗಿ ಶನಿವಾರ ಕಾಣಿಸಿಕೊಂಡರು.

ಇಲ್ಲಿನ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿದ ಅವರು, 'ತಾಲ್ಲೂಕಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಕೊರೊನಾ ಸರಪಳಿ ತುಂಡರಿಸಲು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಲಾಗಿದ್ದು, ಅನುಷ್ಠಾನಕ್ಕೆ ಕ್ರಮ ವಹಿಸಬೇಕು' ಎಂದು ಸೂಚಿಸಿದರು.



'ಆಮ್ಲಜನಕ ಕೊರತೆ ನೀಗಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ಕೈಗೊಂಡಿವೆ. ಕೆಲವೇ ದಿನಗಳಲ್ಲಿ ಸಮಸ್ಯೆಗೆ ಪರಿಹಾರ ದೊರೆಯಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, 'ಸಾರ್ವಜನಿಕರು ಅನವಶ್ಯಕವಾಗಿ ಮನೆಯಿಂದ ಹೊರಬಾರದೆ ಸಹಕರಿಸಬೇಕು' ಎಂದು ಕೋರಿದರು.

ಕೋವಿಡ್ ಕಾರಣದಿಂದ ಇಲ್ಲಿನ ತಾಲ್ಲೂಕು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದು ಬಿಡುಗಡೆ ಆಗಿದ್ದ ಅವರು ವೈದ್ಯರ ಸಲಹೆಯಂತೆ ಮನೆಯಲ್ಲಿಯೇ ಪ್ರತ್ಯೇಕವಾಸದಲ್ಲಿದ್ದರು. ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಪ್ರಚಾರದಲ್ಲಿ ಕಾಣಿಸಿಕೊಂಡಿರಲಿಲ್ಲ. ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್ಐಟಿ ಎದುರು ವಿಚಾರಣೆಗೂ ರಮೇಶ ಜಾರಕಿಹೊಳಿ ಅವರು ಹಾಜರಾಗಿರಲಿಲ್ಲ.

ಐಎನ್‌ಎಸ್ ವಿಕ್ರಮಾದಿತ್ಯದಲ್ಲಿ ಸಣ್ಣ ಪ್ರಮಾಣದ ಅಗ್ನಿ ಅವಘಡ

ಕಾರವಾರ: ಭಾರತೀಯ ನೌಕಾದಳದ ಯುದ್ಧ ವಿಮಾನ ವಾಹಕ ನೌಕೆ 'ಐಎನ್‌ಎಸ್ ವಿಕ್ರಮಾದಿತ್ಯ'ದಲ್ಲಿ ಶನಿವಾರ ಬೆಳಗಿನ ಜಾವ ಸಣ್ಣ ಪ್ರಮಾಣದಲ್ಲಿ ಅಗ್ನಿ ಅವಘಡ ಸಂಭವಿಸಿದೆ. ನೌಕೆಗೆ ಮತ್ತು ಅದರಲ್ಲಿದ್ದವರಿಗೆ ಯಾವುದೇ ಅಪಾಯವಾಗಿಲ್ಲ.

ನೌಕೆಯಲ್ಲಿ ನಾವಿಕರು ಮಲಗುವ ಕೊಠಡಿಗಳಿರುವ ಭಾಗದಿಂದ ಹೊಗೆ ಬರುತ್ತಿದ್ದುದನ್ನು ಆ ಸಂದರ್ಭದಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿ ಗಮನಿಸಿದರು. ಅವರು ತಕ್ಷಣವೇ ಬೆಂಕಿ ನಂದಿಸುವ ಕಾರ್ಯ ಮಾಡಿದರು. ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ. ನೌಕೆಯಲ್ಲಿದ್ದ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಲಾಗುತ್ತಿದೆ ಎಂದು ನೌಕಾದಳದ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಹಾಸಿಗೆ ಬ್ಲಾಕ್: ಬಿಜೆಪಿ ನಾಯಕರೇ ಕಿಂಗ್‌ಪಿನ್

ಕಾಂಗ್ರೆಸ್ ಶಾಸಕರಾದ ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ ಆರೋಪ

ಪ್ರಜಾವಾಣಿ ವಾರ್ತೆ



ದಿನೇಶ್ ಗುಂಡೂರಾವ್



ಕೃಷ್ಣ ಬೈರೇಗೌಡ

ಬೆಂಗಳೂರು: 'ಬಿಜೆಪಿ ನಾಯಕರೇ ಹಾಸಿಗೆ ಬ್ಲಾಕ್ ದಂಧೆಯ ಕಿಂಗ್ ಪಿನ್‌ಗಳು' ಎಂದು ಕಾಂಗ್ರೆಸ್ ಶಾಸಕರಾದ ದಿನೇಶ್ ಗುಂಡೂರಾವ್ ಹಾಗೂ ಕೃಷ್ಣ ಬೈರೇಗೌಡ ಆರೋಪಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ದಿನೇಶ್, 'ಬಿಬಿಎಂಪಿ ವಾರ್ ರೂಂನಲ್ಲಿ ದಂಧೆ ಬಯಲಿಗೆಳೆದವು ಎಂದು ಬಿಜೆಪಿ ಮುಖಂಡರ ಕಪಟ ನಾಟಕ ಮಂಡಳಿ ಹೇಳಿಕೊಂಡಿದೆ. ಸಂಸದ ತೇಜಸ್ವಿ ಸೂರ್ಯ ಇದರ ಸೂತ್ರಧಾರ' ಎಂದು ವಾಗ್ದಾಳಿ ನಡೆಸಿದರು.

'ಬಿಜೆಪಿ ಸಂಸದ, ಶಾಸಕರ ನಾಟಕವನ್ನು ಪುಡಿ ರೌಡಿಗಳ ರೀತಿ ಅವರ ಬೆಂಬಲಿಗರು ವಿಡಿಯೊ ಮಾಡಿದ್ದಾರೆ. ವಾರ್ ರೂಂನಲ್ಲಿ ಇರುವವರನ್ನು ಖಾಲಿ ಮಾಡಿಸಿ, ತಮ್ಮ ಬೆಂಬಲಿಗರನ್ನು ಅಲ್ಲಿ ತಂದು ಕೂರಿಸಬೇಕು ಎಂದು ಮಾಡಿದ ನಾಟಕವಿದು. ಕೊರೊನಾ ಸಂಕಷ್ಟ ಸಮಯದಲ್ಲಿ ಈ ನಾಟಕ ಆಡಲು ಸ್ಕ್ರಿಪ್ಟ್ ತಯಾರು ಮಾಡುವುದಕ್ಕೆ ಸಮಯ ಹೇಗೆ ದೊರೆಯಿತು' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ ಅವರು, 'ತೇಜಸ್ವಿ ಸೂರ್ಯ ಸಂಸದರಾಗುವುದಕ್ಕೆ ನಾಲಾಯಕ್' ಎಂದು ಟೀಕಿಸಿದರು.

'ಬಿಜೆಪಿ ನಾಯಕರು ಐಎಎಸ್ ಅಧಿಕಾರಿಗಳ ಮೇಲೆ ಹಲ್ಲೆ ಮಾಡಲು ಹೋಗಿದ್ದಾರೆ. ಅಧಿಕಾರಿಗಳಿಗೆ ಮುಖ್ಯಮಂತ್ರಿ ಅವರರಕ್ಷಣೆ ನೀಡಬೇಕು. ಬಿಜೆಪಿ ನಾಯಕರ ಈ ವರ್ತನೆ ಎಲ್ಲ ರಾಜಕಾರಣಿಗಳಿಗೂ ಅವಮಾನ. ಈ ಪ್ರಕರಣದ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ಕೃಷ್ಣ ಬೈರೇಗೌಡ ಮಾತನಾಡಿ, 'ಹಾಸಿಗೆ ಹೈಜಾಕ್ ಮಾಡಲು ಬಿಜೆಪಿಯವರಿಗೆ ಅಧಿಕಾರಿಗಳು ಬಿಡಲಿಲ್ಲ. ಒತ್ತಡಕ್ಕೆ ಮಣಿಯದ ಅಧಿಕಾರಿ ಮೇಲೆ ಹಲ್ಲೆ ಮಾಡಲು ಮುಂದಾಗಿದ್ದಾರೆ. ವಾರ್ ರೂಂನಲ್ಲಿದ್ದ ಅಧಿಕಾರಿ, 'ಕೊಠಡಿಯಲ್ಲಿ ಬಂದು ಮಾತನಾಡಿ' ಎಂದು ಸಂಸದರಿಗೂ ಹೇಳಿದ್ದಾರೆ. ಜನರ ದಿಕ್ಕು ತಪ್ಪಿಸಲು ಒಂದು ಸಮುದಾಯದ ವಿರುದ್ಧ ಆರೋಪ ಮಾಡಿದ್ದಾರೆ' ಎಂದರು.

'ಅವಶ್ಯಕತೆ ಇರುವವರಿಗೆ ಹಾಸಿಗೆ ಸಿಗುತ್ತಿಲ್ಲ. ಬಿಜೆಪಿ ಶಿಫಾರಸಿನಂತೆ ಹಾಸಿಗೆ ಹಂಚಿಕೆ ಆಗುತ್ತಿದೆ. ನಾನು ಸಹ ಅಧಿಕಾರಿಗಳಿಗೆ ಕರೆ ಮಾಡಿ ಮನೆ ಬಳಿ ಬಂದಿದ್ದಾರೆ ಎಂದು ಒಂದೋ ಎರಡೋ ಹಾಸಿಗೆ ಕೊಡಿಸಿದ್ದೇನೆ. ಆದರೆ, ಬಿಜೆಪಿಯವರು ಶೇ 75ರಷ್ಟನ್ನು ತಾವು ಹೇಳಿದವರಿಗೆ ಉಳಿದದ್ದನ್ನು ಸಾರ್ವಜನಿಕರಿಗೆ ಕೊಡುವಂತೆ ಸಿಬ್ಬಂದಿಯನ್ನು ಬೆದರಿಸಿದ್ದಾರೆ. ಐಎಎಸ್ ಅಧಿಕಾರಿ ಮೇಲೆ ಬಿಜೆಪಿ ಗೂಂಡಾಗಳು ಹಲ್ಲೆ ಮಾಡಿದರೂ ಎಫ್‌ಐಆರ್ ದಾಖಲಾಗಿಲ್ಲ' ಎಂದೂ ಅವರು ಕಿಡಿಕಾರಿದರು.

ವಾರ್ ರೂಮ್ ಗಲಾಟೆ; ಐಎಎಸ್ ಅಧಿಕಾರಿ ದೂರು

ಬೆಂಗಳೂರು: ಬೊಮ್ಮನಹಳ್ಳಿ ವಲಯದ ಕೋವಿಡ್ ವಾರ್ ರೂಮ್‌ನಲ್ಲಿ ಏ. 30ರಂದು ನಡೆದಿದ್ದ ಗಲಾಟೆ ಸಂಬಂಧ ಐಎಎಸ್ ಪ್ರೊಬೇಷನರಿ ಅಧಿಕಾರಿ ವಿ. ಯಶವಂತ್ ಅವರು ಎಚ್‌ಎಸ್‌ಆರ್ ಲೇಔಟ್ ಠಾಣೆಗೆ ದೂರು ನೀಡಿದ್ದು, ಅದರನ್ವಯ 60 ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಘಟನೆ ಕುರಿತು ಯಶವಂತ್ ಅವರು ಲಿಖಿತ ದೂರು ನೀಡಿದ್ದಾರೆ. ಯಾರೊಬ್ಬರ ಹೆಸರನ್ನೂ ದೂರಿನಲ್ಲಿ ಉಲ್ಲೇಖಿಸಿಲ್ಲ. 50ರಿಂದ 60 ಮಂದಿ ಅಪರಿಚಿತರು ವಾರ್ ರೂಮ್‌ಗೆ ಬಂದು ಗಲಾಟೆ ಮಾಡಿದ್ದಾರೆಂದು ಹೇಳಿದ್ದಾರೆ. ಸರ್ಕಾರಿ ಕೆಲಸಕ್ಕೆ ಅಡ್ಡಿ ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೊಮ್ಮನಹಳ್ಳಿ ಶಾಸಕ ಶಾಸಕ ಸತೀಶ್ ರೆಡ್ಡಿ ಅವರ ಆಪ್ತ ಎನ್ನಲಾದ ಬಾಬು ವಾರ್ ರೂಮ್‌ನಲ್ಲಿ ಕುಳಿತಿದ್ದರು. ಅಲ್ಲಿಗೆ ಭೇಟಿ ನೀಡಿದ್ದ ಯಶವಂತ್, ಬಾಬು ಅವರಿಗೆ ಬೈದು ಹೊರಗೆ ಕಳಿಸಿದ್ದರು. ಅದಾದ ಕೆಲ ಗಂಟೆಗಳಲ್ಲೇ ಸತೀಶ್ ರೆಡ್ಡಿ ಹಾಗೂ ಬೆಂಬಲಿಗರು, ವಾರ್ ರೂಮ್‌ಗೆ ಬಂದು ಗಲಾಟೆ ಮಾಡಿದ್ದರು. ಈ ಪ್ರಕರಣವನ್ನು ದೂರಿನಲ್ಲಿ ವಿವರಿಸಲಾಗಿದೆ' ಎಂದೂ ತಿಳಿಸಿವೆ. 'ವಾರ್ ರೂಮ್‌ನ ಘಟನೆ ವಿಡಿಯೊ, ಫೋಟೊಗಳನ್ನು ಆಧರಿಸಿ ವಿಚಾರಣೆ ನಡೆಸಲಾಗುವುದು' ಎಂದೂ ಮೂಲಗಳು ಹೇಳಿವೆ.

ಆಶಾ ಕಾರ್ಯಕರ್ತೆ ಮೇಲೆ ಹಲ್ಲೆಗೆ ಯತ್ನ

ಮಂಗಳೂರು: ಬಂಟ್ವಾಳ ತಾಲ್ಲೂಕಿನ ಸರಪಾಡಿಯಲ್ಲಿ ಕೋವಿಡ್–19 ದೃಢಪಟ್ಟ ಮಹಿಳೆಯ ಆರೋಗ್ಯ ವಿಚಾರಿಸಲು ಬಂದಿದ್ದ ಆಶಾ ಕಾರ್ಯಕರ್ತೆಯ ಮೇಲೆ ಹಲ್ಲೆಗೆ ಯತ್ನಿಸಿ, ಜೀವ ಬೆದರಿಕೆ ಹಾಕಲಾಗಿದೆ.

ಆರೋಪಿಗಳ ವಿರುದ್ಧ ವಿರುದ್ಧ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಎಸ್ಪಿ ಋಷಿಕೇಶ್ ಸೋನಾವಣೆ ತಿಳಿಸಿದ್ದಾರೆ.

ಹಲವೆಡೆ ಉತ್ತಮ ಮಳೆ

ಮಂಗಳೂರು: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಶನಿವಾರ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು, ಜಯಪುರದಲ್ಲಿ ಸಾಧಾರಣ ಮಳೆಯಾಗಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರ, ಚೇರ್ಕಾಡಿ, ಪೇತ್ರಿ, ಕೊಕ್ಕರ್ಣೆ, ಆರೂರು ಪರಿಸರದಲ್ಲಿ ಗುಡುಗು ಸಹಿತ ಭಾರಿ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಸುಳ್ಯ ತಾಲ್ಲೂಕಿನ ವಿವಿಧೆಡೆ ಉತ್ತಮ ಮಳೆಯಾಗಿದೆ.

ಹುಬ್ಬಳ್ಳಿ ನಗರದಲ್ಲಿ ಶನಿವಾರ ಮಧ್ಯಾಹ್ನ ಕೆಲಕಾಲ ಮಳೆಯಾಯಿತು. ಧಾರವಾಡ ಜಿಲ್ಲೆಯಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಹೆಚ್ಚಾಗಿದೆ.

ಬೆಳಗಾವಿ ಜಿಲ್ಲೆ, ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕುಂಚಾವರಂ ಸುತ್ತಮುತ್ತಲ ಪ್ರದೇಶ ಹಾಗೂ ಹಾಸನ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಅರಕಲಗೂಡು, ಸಕಲೇಶಪುರ, ಹೊಳೆನರಸೀಪುರ ತಾಲ್ಲೂಕಿನಲ್ಲಿ ಶುಕ್ರವಾರ ರಾತ್ರಿ ಗುಡುಗು ಸಹಿತ ಜೋರು ಮಳೆಯಾಗಿದೆ. ಕೊಡಗು ಜಿಲ್ಲೆಯ ಗೋಣಿಕೊಪ್ಪಲಿನಲ್ಲಿ ಸಾಧಾರಣ ಮಳೆಯಾಯಿತು.



ಕಾಯಕ... ಕೋವಿಡ್ -19 ಎರಡನೇ ಅಲೆಯ ತೀವ್ರತೆ ಹಾಗೂ ರಾಜ್ಯ ಸರ್ಕಾರ ಘೋಷಿಸಿರುವ ಲಾಕ್‌ಡೌನ್ ನಡುವೆ ಕಲಬುರ್ಗಿಯ ಎಪಿಎಂಸಿ ಮಾರುಕಟ್ಟೆಯಲ್ಲಿ ಹಮಾಲಿ ಕಾರ್ಮಿಕರು ತೂಕ ಮಾಡಲು ತೊಗರಿ ಚೀಲ ಕೊಂಡೊಯ್ಯುತ್ತಿರುವುದು ಶನಿವಾರ ಕಂಡುಬಂತು

ಪ್ರಜಾವಾಣಿ ಚಿತ್ರ: ಪ್ರಶಾಂತ ಎಚ್.ಜಿ

ನೀವು ಉಳಿಯುತ್ತಿರೋ ಇಲ್ಲವೋ ಗೊತ್ತಿಲ್ಲ, ನಾನಂತೂ ಉಳಿಯಬೇಕು: ಉಮೇಶ ಕತ್ತಿ

ಪ್ರಜಾವಾಣಿ ವಾರ್ತೆ



ಉಮೇಶ ಕತ್ತಿ

ರಬಕವಿ/ಬನಹಟ್ಟಿ: 'ಮುಂದಿನ ದಿನಗಳಲ್ಲಿ ಕೋವಿಡ್ ಮೂರನೆಯ ಅಲೆ ಬರುತ್ತಿದೆ. ನೀವು ಉಳಿಯುತ್ತಿರೋ ಇಲ್ಲವೋ ಗೊತ್ತಿಲ್ಲ ನಾನಂತೂ ಉಳಿಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಉಮೇಶ ಕತ್ತಿ ಹೇಳಿದರು.

ಶನಿವಾರ ಸ್ಥಳೀಯ ನಗರಸಭೆಯ ಸಭಾಭವನದಲ್ಲಿ ನಡೆದ ಖಾಸಗಿ ವೈದ್ಯರ ಸಭೆಯಲ್ಲಿ ವೈದ್ಯರೊಬ್ಬರ ಮಾತಿಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

ಸ್ಥಳೀಯ ವೈದ್ಯ ರವಿ ಜಮಖಂಡಿ ಮಾತನಾಡಿ, 'ಆಮ್ಲಜನಕ ಸಾಂದ್ರಕ ಯಂತ್ರವನ್ನು ಸರ್ಕಾರಿ ಆಸ್ಪತ್ರೆಗೆ ದೇಣಿಗೆಯನ್ನಾಗಿ ನೀಡಿದ್ದಾರೆ. ಇಂತಹ ಇನ್ನಷ್ಟು ಯಂತ್ರಗಳನ್ನು ಸರ್ಕಾರ ತಾಲ್ಲೂಕಿಗೆ ನೀಡಿದರೆ ಈ ಭಾಗದ ರೋಗಿಗಳಿಗೆ ಅನುಕೂಲವಾಗುತ್ತದೆ' ಎಂದು ಮನವಿ ಮಾಡಿಕೊಂಡರು.

ಆಗ ಕತ್ತಿ ಅವರು, 'ಮೂರನೆಯ ಅಲೆ ಬಂದಾಗ ನೋಡೋಣ' ಎಂದು ಹೇಳಿದರು.

ಇದಕ್ಕೆ ಡಾ.ರವಿ ಅವರು, 'ಆವಾಗ ನಾವು ಉಳಿಯುತ್ತೇವೆಯೋ, ಇಲ್ಲವೋ ಎಂಬುದನ್ನು ನೋಡಬೇಕು' ಎಂದರು. ಆಗ ಕತ್ತಿ, 'ನೀವು ಉಳಿಯುತ್ತಿರೋ ಇಲ್ಲವೋ ಗೊತ್ತಿಲ್ಲ ನಾನಂತೂ ಉಳಿಯಬೇಕು' ಎಂದರು.

ಕೋವಿಡ್: ಸೋಂಕಿತರಲ್ಲಿ 482 ಮಂದಿ ಸಾವು

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 285 ಮಂದಿ ಸೇರಿದಂತೆ ರಾಜ್ಯದಲ್ಲಿ 482 ಮಂದಿ ಸಾವಿಗೀಡಾಗಿರುವುದು ಶನಿವಾರ ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 1.01ಕ್ಕೆ ಏರಿಕೆ ಕಂಡಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ 47,563 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಕೇವಲ 48 ಗಂಟೆಗಳಲ್ಲಿಯೇ 96,344 ಮಂದಿ ಕೋವಿಡ್ ಪೀಡಿತರಾಗಿದ್ದು, ಈ ಅವಧಿಯಲ್ಲಿ 1,074 ಮಂದಿ ಸಾವಿಗೀಡಾಗಿರುವುದು ಖಚಿತ ಪಟ್ಟಿದೆ. ಇದರಿಂದಾಗಿ ಈವರೆಗೆ ಸೋಂಕಿತರಾದವರ ಸಂಖ್ಯೆ 18.86 ಲಕ್ಷ ದಾಟಿದೆ. ಅದೇ ರೀತಿ, ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 18,286ಕ್ಕೆ ಏರಿಕೆಯಾಗಿದೆ.

ಒಂದು ದಿನದ ಅವಧಿಯಲ್ಲಿ 1.57 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 30.28ರಷ್ಟಿದೆ. ಬೆಂಗಳೂರಿನಲ್ಲಿ ಹೊಸದಾಗಿ 21,534 ಪ್ರಕರಣಗಳು ವರದಿಯಾಗಿವೆ. ತುಮಕೂರು (2,419), ಮೈಸೂರು (2,292), ಬಾಗಲಕೋಟೆ (1,563), ದಕ್ಷಿಣ ಕನ್ನಡ (1,513) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ಹೊಸದಾಗಿ ವರದಿ ಯಾಗಿವೆ. ಸೋಂಕಿತರಲ್ಲಿ ಮತ್ತೆ 34,881 ಮಂದಿ ಚೇತರಿಸಿಕೊಂಡಿದ್ದಾರೆ. ಇಷ್ಟಾಗಿಯೂ 5.48 ಲಕ್ಷಕ್ಕೂ ಅಧಿಕ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್: 'ಬಿಗ್‌ಬಾಸ್' ಅರ್ಧಕ್ಕೇ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಿರುವ ಕಾರಣದಿಂದ ಮುಂಜಾಗ್ರತಾ ಕ್ರಮವಾಗಿ 'ಬಿಗ್ ಬಾಸ್' ರಿಯಾಲಿಟಿ ಶೋವನ್ನು ಭಾನುವಾರದಿಂದ ಸ್ಥಗಿತಗೊಳಿಸಲು ಕಲರ್ಸ್ ಕನ್ನಡ ನಿರ್ಧರಿಸಿದೆ.

ಹೀಗಾಗಿ, ಸೋಮವಾರದಿಂದ 'ಬಿಗ್‌ಬಾಸ್' ಸಂಚಿಕೆ ಇರುವುದಿಲ್ಲ. ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಕಲರ್ಸ್ ಕನ್ನಡ ಕ್ಲಸ್ಟರ್ ಹೆಡ್ ಹಾಗೂ ಬಿಗ್ ಬಾಸ್ ಶೋನ ನಿರ್ದೇಶಕ ಪರಮೇಶ್ವರ ಗುಂಡ್ಕಲ್ ಮಾಹಿತಿ ಹಂಚಿಕೊಂಡಿದ್ದಾರೆ.

'ಬಿಗ್ ಬಾಸ್' ಶುರುವಾಗಿ ಮೇ 8ಕ್ಕೆ 71 ದಿನಗಳಾಗುತ್ತವೆ. ಹೊರಗಡೆ ಎದುರಾಗಿರುವ ಕಷ್ಟದ ಸವಾಲು ಗೊತ್ತಿಲ್ಲದೇ ಒಳಗಡೆ ಇರುವವರೆಲ್ಲಾ ಖುಷಿಯಾಗಿದ್ದಾರೆ. ಐಸೊಲೇಷನ್‌ನಲ್ಲಿ ಇರುವುದರಿಂದ ಅವರೆಲ್ಲರೂ ಸುರಕ್ಷಿತವಾಗಿಯೂ ಇದ್ದಾರೆ. ಎಲ್ಲರಿಗೂ ಹೊರಗಡೆ ಆಗಿರುವ ಬೆಳವಣಿಗೆ ತಿಳಿಸಿ ನಾಳೆ ಹೊರಗಡೆ ಕರೆಯುತ್ತಿದ್ದೇವೆ. ಅವರನ್ನು ಮತ್ತು ತಂಡವನ್ನು ಸುರಕ್ಷಿತವಾಗಿ ಮನೆಗೆ ಕಳುಹಿಸಲು ವ್ಯವಸ್ಥೆ ಆಗುತ್ತಿದೆ' ಎಂದು ತಿಳಿಸಿದ್ದಾರೆ.

ನಾಳೆಯಿಂದ ಧಾರಾವಾಹಿ ಶೂಟಿಂಗ್ ಬಂದ್

ಕೋವಿಡ್–19 ಎರಡನೇ ಅಲೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮೇ 10ರಿಂದ ಲಾಕ್‌ಡೌನ್ ಘೋಷಣೆ ಮಾಡಿರುವ ಕಾರಣ ಯಾವುದೇ ಧಾರಾವಾಹಿ, ರಿಯಾಲಿಟಿ ಶೋ ಚಿತ್ರೀಕರಣ ಸಂಪೂರ್ಣ ಸ್ಥಗಿತಗೊಳಿಸಲಾಗಿದೆ ಎಂದು ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಅಧ್ಯಕ್ಷ ಎಸ್.ವಿ. ಶಿವಕುಮಾರ್ ತಿಳಿಸಿದ್ದಾರೆ.

'ಕೋವಿಡ್ ಎರಡನೇ ಅಲೆಯ ಹಾವಳಿಯಿಂದಾಗಿ ಚಿತ್ರರಂಗವು ಹಲವು ಕಲಾವಿದರು, ತಂತ್ರಜ್ಞರನ್ನು ಕಳೆದುಕೊಂಡಿದೆ' ಎಂದಿರುವ ಅವರು, 'ಮೇ 10ರಿಂದ 24ರವರೆಗೆ ಯಾರೂ ಕೂಡಾ ರಾಜ್ಯದ ಯಾವುದೇ ಭಾಗದಲ್ಲಿ ಚಿತ್ರೀಕರಣ ನಡೆಸಲೇಬಾರದು. ಒಂದುವೇಳೆ ಯಾರಾದರೂ ಕದ್ದು ಮುಚ್ಚಿ ಚಿತ್ರೀಕರಣ ಮಾಡುವುದು ತಿಳಿದುಬಂದಲ್ಲಿ, ಕೋವಿಡ್ ನಿಯಮ ಉಲ್ಲಂಘನೆ ಪ್ರಕಾರ ಸರ್ಕಾರ ಕೈಗೊಳ್ಳುವ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಮೇ 24ರ ಬಳಿಕ ಪರಿಸ್ಥಿತಿ ಅವಲೋಕಿಸಿ ಚಿತ್ರೀಕರಣ ಪುನರಾರಂಭ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿರ್ಬಂಧ ಹಿಂಪಡೆಯಲು ಸಭಾಧ್ಯಕ್ಷರಿಗೆ ಪಿಎಸಿ ಅಧ್ಯಕ್ಷ ರಾಮಲಿಂಗಾ ರೆಡ್ಡಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೆಂಟಿಲೇಟರ್, ಆಮ್ಲಜನಕ ಸಿಲಿಂಡರ್‌ಗಳು, ಹಾಸಿಗೆಗಳು ಮತ್ತಿತರ ಉಪಕರಣಗಳ ಖರೀದಿ ಕುರಿತಂತೆ ಲೆಕ್ಕ ಪರಿಶೀಲನೆ, ಸ್ಥಳ ಪರಿಶೀಲನೆ ನಡೆಸುವ ಅಗತ್ಯವಿದ್ದು, ನಿರ್ಬಂಧ ಆದೇಶ ಹಿಂಪಡೆಯಬೇಕು' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಅಧ್ಯಕ್ಷ ರಾಮಲಿಂಗಾ ರೆಡ್ಡಿ ಪತ್ರ ಬರೆದಿದ್ದಾರೆ.

'ಕೋವಿಡ್‌ನಿಂದ ಆತಂಕದ ಪರಿಸ್ಥಿತಿ ಎದುರಾಗಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ಮಹತ್ವದ ಹೊಣೆಗಾರಿಕೆ ಮತ್ತು ಜವಾಬ್ದಾರಿ ನಿರ್ವಹಿಸಬೇಕಾಗಿದೆ. ಕೊರೊನಾ ನಿಯಂತ್ರಿಸುವ ವಿಚಾರದಲ್ಲಿ ಸರ್ಕಾರ ಪಾರದರ್ಶಕ, ಸಮಯೋಚಿತ ಜನಪರ ನಿರ್ಧಾರಗಳನ್ನು ಕಾಲಕಾಲಕ್ಕೆ ತೆಗೆದುಕೊಳ್ಳಬೇಕಾಗಿದೆ. ಆಸ್ಪತ್ರೆಗಳಲ್ಲಿ ದಾಖಲಾಗುತ್ತಿರುವ ಸೋಂಕಿತರ ಜೀವ ಉಳಿಸಲು ಅಗತ್ಯವಾದ ರೆಮ್‌ಡಿಸಿವಿರ್ ಕೊರತೆಯನ್ನು ಹಲವು ಜಿಲ್ಲೆಗಳು ಎದುರಿಸುತ್ತಿವೆ. ಈ ಔಷಧಕ್ಕೆ ಬೇಡಿಕೆ ಇರುವುದರಿಂದ ಕಾಳಸಂತೆಯಲ್ಲೂ ಮಾರಾಟ ಮಾಡುತ್ತಿರುವ ಪ್ರಕರಣ ಬಯಲಾಗಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಸರ್ಕಾರದ ವೈಫಲ್ಯದಿಂದಾಗಿ ಆಮ್ಲಜನಕ ಕೊರತೆಯಾಗಿದ್ದು ಚಾಮರಾಜನಗರ, ಅಫ್ಜಲ್‌ಪುರ ಸೇರಿದಂತೆ ಕೆಲವಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಜನರು ಮೃತಪಟ್ಟಿದ್ದಾರೆ. ಬೆಂಗಳೂರು ನಗರದ ಆಸ್ಪತ್ರೆಗಳಲ್ಲಿ ಹಾಸಿಗೆ, ವೆಂಟಿಲೇಟರ್ ಸಿಗದೆ ಸಾವಿಗೀಡಾಗುತ್ತಿದ್ದಾರೆ. ಮತ್ತೊಂದು ಕಡೆ ಖಾಸಗಿ ಆಸ್ಪತ್ರೆಗಳಲ್ಲಿನ ಹಾಸಿಗೆ ಬ್ಲಾಕ್ ಮಾಡಿ, ಅಕ್ರಮವಾಗಿ ಮಾರಾಟ ಮಾಡುತ್ತಿರುವ ಆರೋಪ ಕೇಳಿಬರುತ್ತಿದೆ. ಬೆಂಗಳೂರಿನಲ್ಲಿ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಲಘು ರೋಗಲಕ್ಷಣ ಇರುವ ಸೋಕಿತರ ಚಿಕಿತ್ಸೆಗೆ ಸಂಬಂಧಪಟ್ಟ ಇಲಾಖೆಗಳು ಕೋವಿಡ್ ಆರೈಕೆ ಕೇಂದ್ರಗಳನ್ನು ತಕ್ಷಣ ಸ್ಥಾಪಿಸುವ ಅಗತ್ಯ ಇದ್ದರೂ ಸರ್ಕಾರ ನಿರ್ಲಕ್ಷ್ಯ ವಹಿಸಿದೆ' ಎಂದು ಟೀಕಿಸಿದ್ದಾರೆ.

'ಇಂಥ ಪರಿಸ್ಥಿತಿಯಲ್ಲಿ ಶಾಸನಸಭೆ, ಶಾಸನಸಭೆಯ ಸಮಿತಿಗಳು ತಮ್ಮ ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುವುದು ಸಂವಿಧಾನಿಕ ಬಾಧ್ಯತೆಯಾಗಿದೆ. ಹೀಗಾಗಿ, ಕೋವಿಡ್‌ಗೆ ಸಂಬಂಧಿಸಿ ಸರ್ಕಾರಕ್ಕೆ ಶಿಫಾರಸು ಮಾಡುವ ಅನಿವಾರ್ಯತೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಇದೆ. ಆದರೆ, ನಿರ್ಬಂಧ ಆದೇಶದಿಂದ ಸಾಧ್ಯವಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಲಾಕ್‌ಡೌನ್: ಅಗತ್ಯಸೇವಾ ಉದ್ದಿಮೆಗಳಿಗೆ ವಿನಾಯಿತಿ

ಬೆಂಗಳೂರು: ಮೇ 10ರಿಂದ ಆರಂಭವಾಗುವ ಲಾಕ್‌ಡೌನ್ ಅವಧಿಯಲ್ಲಿ ತುರ್ತು ಮತ್ತು ಅಗತ್ಯ ಸೇವೆಗಳಿಗೆ ವಿನಾಯಿತಿ ನೀಡಲಾಗಿದ್ದು, ಇದರ ವ್ಯಾಪ್ತಿಯಲ್ಲಿ ಬರುವ ಉದ್ದಿಮೆ ಹಾಗೂ ಸೇವೆಗಳ ಪಟ್ಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ.

ಯಾವುದಕ್ಕೆಲ್ಲಾ ವಿನಾಯ್ತಿ: ಔಷಧಿಗಳು, ಸ್ಯಾನಿಟೇಷನ್ ವಸ್ತುಗಳು, ಆಮ್ಲಜನಕ, ವೈದ್ಯಕೀಯ ಉಪಕರಣಗಳು, ವೈದ್ಯಕೀಯ ಬಳಕೆಯ ಬಟ್ಟೆಗಳು ಮತ್ತು ಇವುಗಳ ಉತ್ಪಾದನೆಗೆ ಪೂರಕವಾದ ಕಚ್ಚಾ ವಸ್ತುಗಳ ಉತ್ಪಾದನಾ ಘಟಕ.

- ಅಕ್ಕಿ, ಎಣ್ಣೆ ಮತ್ತು ಬೇಳೆಕಾಳು ಸಂಸ್ಕರಣಾ ಗಿರಣಿಗಳು, ಡೇರಿ ಉತ್ಪನ್ನಗಳು, ಆರ್.ಒ ಮತ್ತು ನೀರು ಶುದ್ಧೀಕರಣ ಘಟಕ,ಹಿಟ್ಟಿನ ಗಿರಣಿಗಳು, ಬಿಸ್ಕಿಟ್ ಹಾಗೂ ಹಣ್ಣಿನ ರಸವನ್ನೊಳಗೊಂಡ ಆಹಾರ ಸಂಸ್ಕರಣಾ ಘಟಕಗಳು, ಬೇಕರಿ ಉತ್ಪನ್ನಗಳು, ಮೀನು, ಕೋಳಿ ಮತ್ತು ಪಶು ಆಹಾರ ತಯಾರಿಕೆ.
- ರಫ್ತು ಸಂಬಂಧಿ ವಸ್ತುಗಳ ಉತ್ಪಾದನಾ ಘಟಕಗಳು ಮತ್ತು ಅವುಗಳಿಗೆ ಪೂರಕ ಕಚ್ಚಾವಸ್ತು ಉತ್ಪಾದಿಸುವ ಘಟಕಗಳು.
- ಏರೋಸ್ಪೇಸ್ ಮತ್ತು ರಕ್ಷಣಾ ಇಲಾಖೆಗೆ ಉಪಕರಣ, ಬಿಡಿ ಭಾಗಗಳ ತಯಾರಿಸುವ ಘಟಕಗಳು.
- ರಸಗೊಬ್ಬರ ಸೇರಿದಂತೆ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಉಪಕರಣ ಹಾಗೂ ಬಿಡಿ ಭಾಗಗಳ ತಯಾರಿಕಾ ಘಟಕಗಳು. ಕೃಷಿ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಬಳಕೆಯಾಗುವ ವಾಹನಗಳ ತಯಾರಿಕೆ, ಪ್ಯಾಕೇಜಿಂಗ್ ಘಟಕಗಳು, ಕೈಗಾರಿಕಾ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು, ಆಹಾರ ವಸ್ತುಗಳ ತಯಾರಿಕೆ, ಇ–ಕಾಮರ್ಸ್ ಉದ್ದಿಮೆಗಳು, ಕೃಷಿ ಮತ್ತು ಆಹಾರ ವಲಯದ ಉಗ್ರಾಣಗಳು.
- ಪೆಟ್ರೋಲಿಯಂ ರಿಫೈನರಿ, ಬೃಹತ್ ಉಕ್ಕು ತಯಾರಿಕಾ ಘಟಕಗಳು (ಟಿಎಂಟಿ ಬಾರ್ ಉತ್ಪಾದನಾ ಘಟಕ ಸೇರಿ), ಬೃಹತ್ ಸಿಮೆಂಟ್ ಕೈಗಾರಿಕೆಗಳು, ಬಣ್ಣ ತಯಾರಿಕೆ, ಸಕ್ಕರೆ ಕಾರ್ಖಾನೆಗಳು, ಗಾಜು ಉತ್ಪಾದನೆ, ಬೃಹತ್ ಫೌಂಡ್ರಿಗಳು, ಟಯರ್ ಉತ್ಪಾದನೆ, ವಾಹನ ತಯಾರಿಕಾ ಘಟಕಗಳು. ಜವಳಿ ಕೈಗಾರಿಕೆಗಳು, ಕಾಗದ ತಯಾರಿಕಾ ಘಟಕಗಳು ಹಾಗೂ ಕಲ್ಲಿದ್ದಲು ಟಾರ್ ಶುದ್ಧೀಕರಣ ಘಟಕಗಳು.

ನಿಧನ ವಾರ್ತೆ

ಕಮ್ಯುನಿಸ್ಟ್ ನಾಯಕ ಎಚ್‌ಕೆಆರ್



ದಾವಣಗೆರೆ: ಕಾರ್ಮಿಕ ಹೋರಾಟಗಾರ, ಕಮ್ಯುನಿಸ್ಟ್ ನಾಯಕ ಎಚ್.ಕೆ. ರಾಮಚಂದ್ರಪ್ಪ (78) ಅವರು ಕೊರೊನಾ ಸೋಂಕಿನಿಂದ ಶನಿವಾರ ನಿಧನರಾದರು.

ಒಂದು ವಾರದ ಹಿಂದೆ ಅವರಿಗೆ ಸೋಂಕು ತಗುಲಿತ್ತು. ಆರೈಕೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ದಾವಣಗೆರೆ ಎಚ್‌ಕೆಆರ್ ಸರ್ಕಲ್ ಬಳಿಯ ನಿವಾಸಿ ಆಗಿರುವ ಅವರು ಸಿಪಿಐ ರಾಜ್ಯ ಸಹಕಾರ್ಯದರ್ಶಿ, ಎಐಟಿಯುಸಿ ರಾಜ್ಯ ಕಾರ್ಯಾಧ್ಯಕ್ಷ, ಅಂಗನವಾಡಿ ಫೆಡರೇಶನ್ ರಾಜ್ಯ ಅಧ್ಯಕ್ಷರಾಗಿದ್ದರು. ಮೂರು ಬಾರಿ ದಾವಣಗೆರೆ ನಗರಸಭೆ ಸದಸ್ಯರಾಗಿ, ಒಂದು ಬಾರಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಕಾರ್ಮಿಕ ಪರ ಹೋರಾಟಗಳಿಂದಲೇ ರಾಜ್ಯದ ಪ್ರಮುಖ ಎಡಪಂಥೀಯ ನಾಯಕನಾಗಿ ಗುರುತಿಸಿಕೊಂಡಿದ್ದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಮೂವರು ಪುತ್ರರು ಇದ್ದಾರೆ.

ಎಲ್ಲರ ಬೊಟ್ಟು ಚಾಮರಾಜನಗರ ಜಿಲ್ಲಾಡಳಿತದ ವೈಫಲ್ಯದತ್ತ...

ಮೈಮರೆತು ಕುಳಿತಿದ್ದೇ ಕಾರಣ



ಚಾಮರಾಜನಗರದ ಕೋವಿಡ್–19 ಆಸ್ಪತ್ರೆ

ಚಾಮರಾಜನಗರ: ಜೀವ ರಕ್ಷಕ ಆಮ್ಲಜನಕ ಕೊರತೆ ಆಗಬಹುದು ಎಂಬುದು ಗೊತ್ತಿದ್ದರೂ ಉದಾಸೀನ ಮಾಡಿಬಿಟ್ಟರು. ಬೇಜಬಾಬ್ದಾರಿಯಿಂದ ನಡೆದುಕೊಂಡು ಜೀವ ತೆಗೆದರು. ಇದು ಎಲ್ಲರೂ ತಲೆತಗ್ಗಿಸುವ ವಿಚಾರ...

–ಮೃತರ ಸಂಬಂಧಿಗಳು ಮಾತ್ರವಲ್ಲ; ಪ್ರತ್ಯಕ್ಷದರ್ಶಿಗಳು, ಅಂದು ರಾತ್ರಿ ಆಸ್ಪತ್ರೆ ಮುಂದೆ ನಿಂತಿದ್ದ ಆಟೊ ಚಾಲಕರು, ಜನಪ್ರತಿನಿಧಿಗಳು, ‘ಡಿ’ ದರ್ಜೆ ನೌಕರರು ಚಾಮರಾಜನಗರದ ಜಿಲ್ಲಾಡಳಿತ ಹಾಗೂ ಆಸ್ಪತ್ರೆ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪರಿ ಇದು.

ಜಿಲ್ಲಾ ಕೋವಿಡ್ ಆಸ್ಪತ್ರೆ ವೈದ್ಯರೊಬ್ಬರು ಹೇಳುವಂತೆ ಅಂದು ಆಸ್ಪತ್ರೆಯಲ್ಲಿ ಇದ್ದದ್ದು 120 ಸಿಲಿಂಡರ್. ಸಂಜೆ ವೇಳೆಗೆ ಖಾಲಿಯಾಗಲಿವೆ ಎಂಬುದು ಕೆಲವರಿಗೆ ಗೊತ್ತಿದೆ. ಈ ವಿಚಾರವನ್ನು ಜಿಲ್ಲಾಡಳಿತದ ಗಮನಕ್ಕೂ ತಂದಿದ್ದಾರೆ. ಜಿಲ್ಲಾಧಿಕಾರಿ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ಉದಾಸೀನ ಮನೋಭಾವ ತೋರಿದ್ದಾರೆ. ರಾತ್ರಿ 9 ಗಂಟೆ ಸುಮಾರಿಗೆ ಆಮ್ಲಜನಕ ಕೊರತೆ ಉಂಟಾಗಿ ಸಾವಿನ ಸರಣಿ ಆರಂಭವಾಗಿದೆ. ಆದರೆ, ಅಧಿಕಾರಿಗಳು ವ್ಯವಸ್ಥೆ ಮಾಡಲು ಆರಂಭಿಸಿದ್ದು ರಾತ್ರಿ 11 ಗಂಟೆ ಬಳಿಕ!

ಜಿಲ್ಲಾಧಿಕಾರಿ ಎಂ.ಆರ್.ರವಿ ಹಾಗೂ ಮೈಸೂರಿನ ಸಹಾಯಕ ಔಷಧ ನಿಯಂತ್ರಣಾಧಿಕಾರಿ ಜೊತೆ ರಾತ್ರಿ 11.30ಕ್ಕೆ ಮೈಸೂರು ಸಂಸದ ಪ್ರತಾಪಸಿಂಹ ಕಾಲ್ ಕಾನ್ಫರೆನ್ಸ್ ನಡೆಸಿ ತಕ್ಷಣವೇ 40 ಸಿಲಿಂಡರ್ ವ್ಯವಸ್ಥೆ ಮಾಡಿದ್ದಾರೆ. ಆದರೆ, ಸಿಲಿಂಡರ್‌ಗಳು ಮೈಸೂರಿನಿಂದ ಚಾಮರಾಜನಗರ ತಲುಪಿದ್ದು ಮಾತ್ರ ಮಧ್ಯರಾತ್ರಿ 2 ಗಂಟೆಗೆ!

‘ಮೇ 2ರಂದು ರಾತ್ರಿ 9 ಗಂಟೆಗೆ ಚಾಮರಾಜನಗರ ಜಿಲ್ಲಾಧಿಕಾರಿ ಜೊತೆ ಮಾತನಾಡಿದ್ದಾಗ ಯಾವುದೇ ಸಮಸ್ಯೆ ಇಲ್ಲ ಎಂದಿದ್ದರು. ಮೊದಲೇ ತಿಳಿಸಿದ್ದರೆ ಅನಾಹುತ ತಪ್ಪಿಸಬಹುದಿತ್ತು’ ಎಂದು ಬೇಸರದಿಂದಲೇ ನುಡಿಯುತ್ತಾರೆ ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್.

ಆದರೆ, ಚಾಮರಾಜನಗರ ಜಿಲ್ಲಾಧಿಕಾರಿಯೊಬ್ಬರ ಮೇಲೆಯೇ ಇದರ ಸಂಪೂರ್ಣ ಹೊಣೆಯನ್ನು ಹಾಕಲು ಅವರು ಸಿದ್ಧವಿಲ್ಲ. ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರತ್ತಲೂ ಬೊಟ್ಟು ಮಾಡುತ್ತಾರೆ. ಅಂದು ಮೈಸೂರಿನಿಂದ ಸಕಾಲಕ್ಕೆ ಆಮ್ಲಜನಕ ಪೂರೈಕೆ ಆಗಲಿಲ್ಲ ಎಂಬ ಮಾತನ್ನು ಎಂ.ಆರ್.ರವಿ ಕೂಡ ಘಟನೆಯ ದಿನ ಹೇಳಿಕೊಂಡಿದ್ದರು.

ಇದನ್ನು ಒಪ್ಪಲು ಸಿಂಧೂರಿ ಸಿದ್ಧರಿಲ್ಲ. ‘ಚಾಮರಾಜನಗರದ ಜಿಲ್ಲಾಸ್ಪತ್ರೆಯಲ್ಲಿ ಉಂಟಾಗಿರುವ ಸಿಲಿಂಡರ್ ಕೊರತೆ ವಿಚಾರದಲ್ಲಿ ನನ್ನ ಪಾತ್ರವೇ ಇಲ್ಲ. ಅದು ಪೂರೈಕೆದಾರರು ಹಾಗೂ ಚಾಮರಾಜನಗರ ಜಿಲ್ಲಾಡಳಿತಕ್ಕೆ ಬಿಟ್ಟ ವಿಚಾರ. ಇಷ್ಟಿದ್ದರೂ ಮಾನವೀಯತೆಯಿಂದ ಪೂರೈಕೆ ಮಾಡಿದ್ದೇವೆ’ ಎಂದು ತಮ್ಮ ನಡೆ ಸಮರ್ಥಿಸಿಕೊಳ್ಳುತ್ತಾರೆ.

ಶನಿವಾರವೇ ಗೊತ್ತಿತ್ತು: ‘ಘಟನೆ ಹಿಂದಿನ ದಿನ ಅಂದರೆ ಮೇ 1ರಂದು ಆಮ್ಲಜನಕ ಕೊರತೆ ಇರುವ ಬಗ್ಗೆ ವೈದ್ಯರೊಬ್ಬರು ನನಗೆ ಮಾಹಿತಿ ನೀಡಿದರು. ತಕ್ಷಣವೇ ರವಿ ಜೊತೆ ಮಾತನಾಡಿದೆ. ವ್ಯವಸ್ಥೆ ಮಾಡುವುದಾಗಿ ಹೇಳಿದರು. ಆದರೆ, ಸಮಸ್ಯೆ ತೀವ್ರಗೊಂಡಿರುವ ಬಗ್ಗೆ ಮಾತನಾಡಲು ಭಾನುವಾರ ಮತ್ತೆ 9.30 ಗಂಟೆಗೆ ಜಿಲ್ಲಾಧಿಕಾರಿಗೆ ಕರೆ ಮಾಡಿದ್ದು, ಸ್ವೀಕರಿಸಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರೂ ಕರೆ ಸ್ವೀಕರಿಸಲಿಲ್ಲ’ ಎಂದು ಹೇಳುತ್ತಾರೆ ಚಾಮರಾಜನಗರ ಮಾಜಿ ಸಂಸದ ಆರ್.ಧ್ರುವನಾರಾಯಣ.

ಮಾನವೀಯತೆ ತೋರಬೇಕಿತ್ತು...



ಮೈಸೂರಿನಲ್ಲಿ ಸಾಕಷ್ಟು ಸಿಲಿಂಡರ್ ಇದ್ದು, ಚಾಮರಾಜನಗರದಿಂದ ಬೇಡಿಕೆ ಬಂದಾಗ ಮೈಸೂರು ಜಿಲ್ಲಾಧಿಕಾರಿ ಮಾನವೀಯತೆ ತೋರಬೇಕಿತ್ತು. ವೈಫಲ್ಯ ಆಗಿದ್ದು ನಿಜ. ಯಾರದ್ದು ತಪ್ಪು ಎಂಬುದು ತನಿಖೆಯಿಂದಲೇ ಗೊತ್ತಾಗಬೇಕು

ವಿ.ಶ್ರೀನಿವಾಸಪ್ರಸಾದ್, ಸಂಸದ, ಚಾಮರಾಜನಗರ

ಸಚಿವರು ಮಾಹಿತಿ ಪಡೆಯಬೇಕಿತ್ತು...



ಯಾವ ಜಿಲ್ಲೆಯಲ್ಲಿ ಏನು ವ್ಯವಸ್ಥೆ ಇದೆ ಎಂಬುದನ್ನು ಆರೋಗ್ಯ ಸಚಿವರು ನಿತ್ಯ ತಿಳಿದುಕೊಳ್ಳಬೇಕಿತ್ತು. ಆರೋಗ್ಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ನಿರ್ಲಕ್ಷ್ಯವೇ ಈ ಸಾವಿಗೆ ಪ್ರಮುಖ ಕಾರಣ

ಆರ್.ಧ್ರುವನಾರಾಯಣ, ಮಾಜಿ ಸಂಸದ, ಚಾಮರಾಜನಗರ

ಮೈಸೂರು ಜಿಲ್ಲಾಡಳಿತದ ಲೋಪವಿಲ್ಲ



ಚಾಮರಾಜನಗರ ಜಿಲ್ಲಾಧಿಕಾರಿ ರವಿ, ಮೈಸೂರು ಜಿಲ್ಲಾಧಿಕಾರಿ ಜೊತೆಗೂ ಮಾತನಾಡಿಲ್ಲ. ಈಗ ಅವರತ್ತ ಬೊಟ್ಟು ಮಾಡುತ್ತಿದ್ದಾರೆ. ಮೈಸೂರು ಕಡೆಯಿಂದ ಯಾವುದೇ ಲೋಪವಾಗಿಲ್ಲ. ಆಮ್ಲಜನಕ ಪೂರೈಕೆ ಸಂಬಂಧ ಸರ್ಕಾರ ಮೊದಲು ಆಯಾಯ ಜಿಲ್ಲೆಗಳಿಗೆ ಇಂತಿಷ್ಟು ಕೋಟಾ ನಿಗದಿಪಡಿಸಬೇಕು

ಪ್ರತಾಪಸಿಂಹ, ಸಂಸದ, ಮೈಸೂರು

ಸರಿಯಾಗಿ ಯೋಜನೆ ರೂಪಿಸಬೇಕಿತ್ತು...



ನಮಗೆ ಬಳ್ಳಾರಿಯಿಂದ ಲಿಕ್ವಿಡ್ ಆಮ್ಲಜನಕ ಪೂರೈಕೆ ಆಗುತ್ತದೆ. ಮೈಸೂರಿನಲ್ಲಿ ಏನಾದರೂ ಆದರೆ ಬಳ್ಳಾರಿ ಜಿಲ್ಲಾಡಳಿತವನ್ನು ದೂರಲು ಸಾಧ್ಯವೇ? ಕೊರತೆಯಾದಾಗ ಯೋಜನೆ ರೂಪಿಸಿ ತರಿಸಿಕೊಳ್ಳಬೇಕು. ವೈದ್ಯಕೀಯ ಉದ್ದೇಶಕ್ಕೆ ಮಾತ್ರ ಆಮ್ಲಜನಕ ಪೂರೈಸಬೇಕು, ಕೈಗಾರಿಕಾ ಉದ್ದೇಶಕ್ಕೆ ಕೊಡಬಾರದು ಎಂದಷ್ಟೇ ರೀ-ಫಿಲ್ಲಿಂಗ್/ಪೂರೈಕಾ ಸಂಸ್ಥೆಗಳಿಗೆ ಸೂಚಿಸಿದ್ದೆ

ರೋಹಿಣಿ ಸಿಂಧೂರಿ, ಜಿಲ್ಲಾಧಿಕಾರಿ, ಮೈಸೂರು

‘ಡೆತ್ ಆಡಿಟ್’ ಏನು? ಎತ್ತ?

ಬೆಂಗಳೂರು: ತಾಲ್ಲೂಕು ಮಟ್ಟದ ಆಸ್ಪತ್ರೆಗಳು, ಜಿಲ್ಲಾ ಮಟ್ಟದ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಸಂಭವಿಸುವ ಎಲ್ಲ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ತಜ್ಞ ವೈದ್ಯರನ್ನು ಒಳಗೊಂಡ ಸಮಿತಿಯಿಂದ ‘ಆಂತರಿಕ ಪರಿಶೀಲನೆ’ ನಡೆಸುವ ಕ್ರಮವನ್ನೇ ‘ಡೆತ್ ಆಡಿಟ್’ ಎನ್ನಲಾಗುತ್ತದೆ.

ಒಬ್ಬ ವ್ಯಕ್ತಿಯ ಮರಣ ನಿಶ್ಚಿತವಾಗಿ ಯಾವ ಕಾರಣಕ್ಕಾಗಿ ನಡೆದಿದೆ? ಆ ಸಾವನ್ನು ತಪ್ಪಿಸಲು ಸಾಧ್ಯವಿತ್ತೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದೇ ಈ ಪ್ರಕ್ರಿಯೆಯ ಉದ್ದೇಶ.

ಜಗತ್ತಿನಾದ್ಯಂತ ಹಲವು ವರ್ಷಗಳಿಂದ ಈ ಪ್ರಕ್ರಿಯೆ ನಡೆಯುತ್ತಿದೆ. ‘ಡೆತ್ ಆಡಿಟ್’ಗೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯೂ ಮಾರ್ಗಸೂಚಿಗಳನ್ನು ನೀಡಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದ ಯಾವುದೇ ವ್ಯಕ್ತಿ ಮೃತಪಟ್ಟರೂ ಆ ಕುರಿತು ಜಿಲ್ಲಾ ಮಟ್ಟದ ಸಮಿತಿಯ ಮೂಲಕ ಪರಿಶೀಲನೆ ನಡೆಸಿ, ಮರಣಕ್ಕೆ ಕಾರಣವಾದ ನೈಜ ಸಂಗತಿಗಳನ್ನು ಪತ್ತೆಹಚ್ಚಲಾಗುತ್ತದೆ.

‘ಡೆತ್ ಆಡಿಟ್’ ಎಂಬುದು ಲೋಪಗಳನ್ನು ಹುಡುಕುವುದಕ್ಕೆ ನಡೆಸುವ ಪ್ರಕ್ರಿಯೆ ಅಲ್ಲ. ಒಂದು ಸಾವಿಗೆ ಯಾವ ಅಂಶಗಳು ಕಾರಣ ಎಂಬ ಸತ್ಯವನ್ನು ಶೋಧಿಸುವುದು ಇದರ ಉದ್ದೇಶ ಎನ್ನುತ್ತಾರೆ ತಜ್ಞರು.

‘ರೋಗಿ ಆಸ್ಪತ್ರೆಗೆ ಬರುವಾಗ ಯಾವ ಸ್ಥಿತಿಯಲ್ಲಿ ಇದ್ದ? ಆತನಿಗೆ ನಡೆಸಿದ ಪರೀಕ್ಷೆಗಳು ಏನು? ನೀಡಿದ ಚಿಕಿತ್ಸೆ ಮತ್ತು ಔಷಧಿಯ ವಿವರಗಳು, ರೋಗಪತ್ತೆ ಮತ್ತು ಚಿಕಿತ್ಸಾ ಕ್ರಮದಲ್ಲಿ ಏನಾದರೂ ತಪ್ಪುಗಳು ಆಗಿವೆಯೇ? ಮೃತನಾದ ವ್ಯಕ್ತಿ ಮನೆಯಿಂದ ಆಸ್ಪತ್ರೆಗೆ ಬರುವುದು ವಿಳಂಬವಾಯಿತೆ? ಆಗಿದ್ದಲ್ಲಿ ಕಾರಣಗಳೇನು? ಪ್ರಯಾಣದಲ್ಲೇ ಹೆಚ್ಚು ಸಮಯ ಕಳೆಯಿತೆ? ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಚಿಕಿತ್ಸೆ ನೀಡುವುದು ವಿಳಂಬ ಆಯಿತೆ ಎಂಬ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಸಮಿತಿಯು ಪರಿಶೀಲನೆ ನಡೆಸುತ್ತದೆ’ ಎಂದು ಹಿರಿಯ ವೈದ್ಯರೊಬ್ಬರು ವಿವರಿಸಿದರು.

ಚಾಮರಾಜನಗರ ಕೋವಿಡ್ ಆಸ್ಪತ್ರೆಯಲ್ಲಿ 24 ಜನರು ಮೃಪಟ್ಟ ಘಟನೆಗೆ ನಿರ್ದಿಷ್ಟವಾಗಿ ಹೇಳುವುದಾದರೆ ಆಮ್ಲಜನಕದ ಕೊರತೆಯಿಂದ ಮರಣಗಳು ಸಂಭವಿಸಿಯೆ ಎಂಬ ಪ್ರಶ್ನೆಯನ್ನೇ ಮುಂದಿಟ್ಟುಕೊಂಡು ‘ಡೆತ್ ಆಡಿಟ್’ ಆರಂಭಿಸಬೇಕಾಗುತ್ತದೆ. ಆಮ್ಲಜನಕದ ಪೂರೈಕೆಯಲ್ಲಿ ಸಮಸ್ಯೆ ಇತ್ತೆ? ದಾಸ್ತಾನು ಎಷ್ಟಿತ್ತು? ಸಕಾಲಕ್ಕೆ ಆಮ್ಲಜನಕ ಪೂರೈಕೆಗೆ ಸಂಬಂಧಿಸಿದ ಆಸ್ಪತ್ರೆಯ ಮುಖ್ಯಸ್ಥರು, ಸ್ಥಾನಿಕ ವೈದ್ಯಾಧಿಕಾರಿ ಮತ್ತು ಜಿಲ್ಲಾ ಶಸ್ತ್ರಚಿಕಿತ್ಸಕ ಏನು ಕ್ರಮ ಕೈಗೊಂಡಿದ್ದರು? ಅವರಿಂದ ಏನಾದರೂ ಲೋಪಗಳಾಗಿವೆಯೆ? ವೈದ್ಯಕೀಯ ಕಾಲೇಜಿನ ಅಧೀನದ ಆಸ್ಪತ್ರೆಯಾಗಿದ್ದಲ್ಲಿ ಡೀನ್ ಮತ್ತು ನಿರ್ದೇಶಕರು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದ್ದರು ಎಂಬುದನ್ನು ಪರಿಶೀಲಿಸಿ ವರದಿ ಸಿದ್ಧಪಡಿಸಬೇಕಾಗುತ್ತದೆ ಎಂದು ತಿಳಿಸಿದರು.

ತನಿಖೆಯ ಹಾದಿಯಲ್ಲಿ ಗೊಂದಲದ ನಡೆ

ಒಂದನೇ ಪುಟದಿಂದ...

ಸರ್ಕಾರದ ನಡೆ ಸಂಶಯಾಸ್ಪದವಾಗಿದೆ ಎಂಬ ಕಾರಣದಿಂದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಉಸ್ತುವಾರಿಯಲ್ಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲ ಗೌಡ ನೇತೃತ್ವದ ಸಮಿತಿಯಿಂದ ಪ್ರತ್ಯೇಕ ತನಿಖೆಗೆ ನ್ಯಾಯಾಲಯ ಆದೇಶಿಸಿದೆ. ನಿವೃತ್ತ ನ್ಯಾಯಮೂರ್ತಿ ಕೆ.ಎನ್. ಕೇಶವ ನಾರಾಯಣ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಇದೇ ಘಟನೆಯ ಕುರಿತು ಐಎಎಸ್ ಅಧಿಕಾರಿ ಶಿವಯೋಗಿ ಸಿ. ಕಳಸದ ನೇತೃತ್ವದಲ್ಲಿ ಪ್ರಾಥಮಿಕ ತನಿಖೆಗೆ ಆದೇಶಿಸಲಾಗಿದೆ. ಆರೋಗ್ಯ ಇಲಾಖೆಯು ತಜ್ಞರ ಸಮಿತಿಯ ಮೂಲಕ ಆಂತರಿಕ ತನಿಖೆಯನ್ನೂ ನಡೆಸುತ್ತಿದೆ. ಆದರೆ, ನ್ಯಾಯಾಂಗ ತನಿಖೆಯ ವಿಚಾರದಲ್ಲಿ ರಾಜ್ಯದಲ್ಲಿ ಹಿಂದೆಂದೂ ಕಂಡಿರದಂತಹ ಸ್ಥಿತಿ ನಿರ್ಮಾಣವಾಗಿದೆ.

‘ಇಂತಹ ಸನ್ನಿವೇಶ ರಾಜ್ಯದಲ್ಲಿ ಯಾವತ್ತೂ ಸೃಷ್ಟಿಯಾಗಿರಲಿಲ್ಲ. ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿ ಇರುವಾಗಲೇ ತರಾತುರಿಯಲ್ಲಿ ಆಯೋಗ ರಚಿಸಿರುವುದು ರಾಜ್ಯ ಸರ್ಕಾರದ ಉದ್ಧಟತನ. ನ್ಯಾಯಾಂಗಕ್ಕೆ ಅಗೌರವ ತೋರುವಂತಹ ನಡೆ. ಹೈಕೋರ್ಟ್ ಪ್ರತ್ಯೇಕ ಸಮಿತಿ ನೇಮಿಸಿದ ಬಳಿಕ ಸರ್ಕಾರ ಆಯೋಗ ರಚನೆಯ ಆದೇಶವನ್ನು ಹಿಂಪಡೆಯಬೇಕಿತ್ತು’ ಎನ್ನುತ್ತಾರೆ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್.

ಹೈಕೋರ್ಟ್ ನೇಮಿಸಿರುವ ತನಿಖಾ ಸಮಿತಿಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಬೇಕಾಗುತ್ತದೆ. ಈ ತನಿಖೆಯನ್ನು ತಡೆಯಲು ಸಾಧ್ಯವಿಲ್ಲ. ಅಂತಹ ಪ್ರಯತ್ನ ಮಾಡುವುದು ನ್ಯಾಯಾಂಗ ನಿಂದನೆಯ ಕ್ರಮವಾಗುತ್ತದೆ. ಆಯೋಗ ರಚನೆಯನ್ನು ಹಿಂಪಡೆದು ಹೈಕೋರ್ಟ್ ನೇಮಿಸಿರುವ ಸಮಿತಿಗೆ ಕೆಲಸ ಮಾಡಲು ಅವಕಾಶ ಮಾಡಿಕೊಡುವುದು ಪಾರದರ್ಶಕ ತನಿಖೆಗೆ ಬೆಂಬಲಿಸುವ ನಡೆಯಾಗುತ್ತದೆ ಎನ್ನುತ್ತಾರೆ ಅವರು.

ಬದಲಾಗದ ನಿಲುವು: ಆದರೆ, ಪ್ರತ್ಯೇಕವಾಗಿ ನ್ಯಾಯಾಂಗ ತನಿಖೆ ನಡೆಸುವ ನಿರ್ಧಾರದಿಂದ ಸರ್ಕಾರ ಈವರೆಗೂ ಹಿಂದೆ ಸರಿದಿಲ್ಲ. ಎರಡೂ ತನಿಖೆಗಳು ಏಕಕಾಲದಲ್ಲಿ ಮುಂದುವರಿಯಲಿ ಎಂಬ ನಿಲುವನ್ನೇ ಸರ್ಕಾರ ಹೊಂದಿದೆ.

ಈನ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ‘ಸರ್ಕಾರ ವಿಚಾರಣಾ ಆಯೋಗದ ಕಾಯ್ದೆಯಡಿ ಆಯೋಗ ರಚಿಸಿದೆ. ಹೈಕೋರ್ಟ್ ಪ್ರತ್ಯೇಕ ಸಮಿತಿ ನೇಮಿಸಿದೆ. ಎರಡೂ ತನಿಖೆಗಳು ಮುಂದುವರಿಯುತ್ತವೆ. ಆಯೋಗ ರಚನೆಯ ಆದೇಶ ಹಿಂಪಡೆಯುವ ಯಾವುದೇ ನಿರ್ಧಾರ ಮಾಡಿಲ್ಲ’ ಎಂದರು.

ಉಸಿರನೇ ಕಸಿದ ಅವ್ಯವಸ್ಥೆ

ಒಂದನೇ ಪುಟದಿಂದ...

‘ಕಾಯಿಲೆ ಉಲ್ಬಣಗೊಂಡು ಪರಿಸ್ಥಿತಿ ಕೈಮೀರಿ ಮೃತಪಟ್ಟಿದ್ದರೆ, ಈ ಹಾಳು ‘ಕೊರೊನಾ’ವನ್ನೇ ಶಪಿಸುತ್ತಿದ್ದೆವು. ಆದರೆ, ಚೇತರಿಸಿಕೊಳ್ಳುತ್ತಿದ್ದ ರೋಗಿಗಳಿಗೆ ಆಮ್ಲಜನಕವೇ ಸಿಗದಂತೆ ಮಾಡಿ ಕೊಂದಿದ್ದಾರೆ. ಸರ್ಕಾರವನ್ನಲ್ಲದೇ ಇನ್ನಾರನ್ನು ಶಪಿಸಬೇಕು’ ಎಂಬುದು ಅವರ ಪ್ರಶ್ನೆ.

ಪತಿಯನ್ನು ಕಳೆದುಕೊಂಡ, ಇಬ್ಬರು ಎಳೆಯ ಮಕ್ಕಳ ತಾಯಿ; ಮದುವೆಯಾದ ಎರಡು ತಿಂಗಳಿಗೇ ವಿಧವೆಯಾದ ಮಹಿಳೆ; ಮನೆಯ ನೊಗ ಹೊತ್ತಿದ್ದ ಮಗನನ್ನು ಕಳೆದುಕೊಂಡು ಹಾಸಿಗೆ ಹಿಡಿದ ವೃದ್ಧ ತಂದೆ ಹಾಗೂ ಹರೆಯದ ಮಗಳನ್ನು ಕಳೆದುಕೊಂಡ ಹೆತ್ತವರ ಸಂಕಟ; ನೂರಾರು ಜನರಿಗೆ ಉದ್ಯೋಗ ನೀಡಿ ಯಜಮಾನ ಎನಿಸಿದಾತನ ಮನೆಯ ಮೌನ... ಇವೆಲ್ಲವೂ ಘಟಿಸಿದ ಪ್ರಮಾದಕ್ಕೆ ಅವ್ಯವಸ್ಥೆಯತ್ತ ಬೆರಳು ತೋರುತ್ತಿವೆ.


ಪ್ರತ್ಯಕ್ಷದರ್ಶಿಯೂ ಆಗಿದ್ದ ರೋಗಿಯೊಬ್ಬರ ಸಂಬಂಧಿ ಹೇಳುವ ಪ್ರಕಾರ, ಭಾನುವಾರ ರಾತ್ರಿ ಎಂಟೂವರೆಗಾಗಲೇ ಆಸ್ಪತ್ರೆಯಲ್ಲಿ ಚೀರಾಟ ಶುರುವಾಗಿತ್ತು. ಹೆಚ್ಚು ಕಡಿಮೆ ಅದೇ ಹೊತ್ತಿಗೆ ಕರೆ ಮಾಡಿದ್ದ, ತಮ್ಮ ಅಣ್ಣನ ಫೋನ್ ಸಂಪರ್ಕ ಕಡಿತಗೊಂಡಿದ್ದರಿಂದ ಆತಂಕಗೊಂಡು ಆಸ್ಪತ್ರೆಗೆ ಧಾವಿಸಿದ ವ್ಯಕ್ತಿಯೊಬ್ಬರಿಗೆ ಕಂಡಿದ್ದು ಅಣ್ಣನ ಸಾವು! ಮಹಿಳೆಯೊಬ್ಬರು, ತಮ್ಮ ಪತಿಯ ಸ್ಯಾಚುರೇಶನ್ ಮಟ್ಟದಲ್ಲಿ ಏರಿಳಿತ ಆಗಿದ್ದನ್ನು ಗಮನಿಸಿ, ಆತಂಕದಿಂದ ಕೂಗಿಕೊಂಡಿದ್ದೂ ಅದೇ ಸಮಯಕ್ಕೆ. ಇವೆಲ್ಲವೂ ಎಂಟೂವರೆಗಾಗಲೇ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದಕ್ಕೆ ನಿದರ್ಶನ.

ಉಸಿರಾಟಕ್ಕೆ ತೊಂದರೆಯಾಗುತ್ತಿರುವುದಾಗಿ ಅದೇ ದಿನ ರಾತ್ರಿ ಹನ್ನೊಂದೂವರೆಗೆ ಮನೆಯವರಿಗೆ ವಿಡಿಯೊ ಕರೆ ಮಾಡಿದ ಸುರೇಂದ್ರ ಎಂಬುವವರು ಅಳುತ್ತಲೇ ಹೇಳಿದ್ದು, ರೋಗಿಯ ಕೈಯಿಂದ ಸಿಬ್ಬಂದಿಯೊಬ್ಬರು ಫೋನ್ ಕಸಿದುಕೊಂಡಿರುವುದು. ಪರಿಸ್ಥಿತಿಯ ಗಂಭೀರತೆಗೆ ಹಿಡಿದ ಕನ್ನಡಿ. ಹಾಸಿಗೆ ಸಿಗದೇ, ಒಂದು ತಾಸು ಸ್ಟ್ರೆಚರ್‌ನಲ್ಲಿಯೇ ಜೀವ ಹಿಡಿದಿದ್ದ ಯುವತಿಯೊಬ್ಬಳು ಮುಂದಿನ ಮತ್ತೊಂದು ಗಂಟೆಯಲ್ಲಿ ಅಸುನೀಗಲು ಕಾರಣವಾದ ಪ್ರಕರಣವು ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಹಾಗೂ ಸಿದ್ಧತೆ ಇಲ್ಲದಿರುವುದಕ್ಕೆ ಸಾಕ್ಷ್ಯ ನುಡಿಯುತ್ತಿದೆ.

ಅನಾಹುತದ ಘಟಿಸಿದ ರಾತ್ರಿಯ ಚಿತ್ರಣವು ಅಧಿಕಾರಿಗಳ ಉದಾಸೀನತೆಯನ್ನು, ಜನಪ್ರತಿನಿಧಿಗಳ ನಿರ್ಲಕ್ಷ್ಯವನ್ನಲ್ಲದೇ ಬೇರೇನನ್ನೂ ಹೇಳುವುದಿಲ್ಲ. ಮಾರಣಹೋಮದ ಸೂಚನೆ ಸಿಕ್ಕು ಕಂಗಾಲಾದ ಸಾಮಾನ್ಯ ನಾಗರಿಕರೊಬ್ಬರು ರಾತ್ರಿ ಹೊತ್ತಿನಲ್ಲಿ ಜಿಲ್ಲಾಧಿಕಾರಿಗೆ ಕರೆ ಮಾಡುತ್ತಾರೆ. ಆದರೆ, ಆಗುತ್ತಿರುವುದನ್ನೆಲ್ಲ ನೋಡಿಕೊಂಡು ಅಧಿಕಾರಿಗಳು, ವೈದ್ಯರು ಅಸಹಾಯಕರಂತೆ ಕೈಚೆಲ್ಲಿದ್ದಾರೆ.

ಅಪಾಯವನ್ನು ಮನಗಂಡು, ವಿಶಿಲ್ ಬ್ಲೋವರ್ ಆಗಿ ಆ ವ್ಯಕ್ತಿ ಕೆಲಸ ಮಾಡದೇ ಹೋಗಿದ್ದರೆ ಈ ಎಲ್ಲ ಸಾವುಗಳನ್ನೂ ಕೋವಿಡ್ ಸಾವುಗಳೆಂದೇ ಜಿಲ್ಲಾಡಳಿತ ಹೇಳಿಬಿಡುವ ಸಾಧ್ಯತೆಯೂ ಇತ್ತು. ಅಲ್ಲಿಗೆ, ಆಮ್ಲಜನಕ ಕೊರತೆಯ ಸಮಸ್ಯೆ ಜೀವಂತವಾಗಿದ್ದು, ಮತ್ತೆ ಹಲವು ಜೀವಗಳನ್ನು ಬಲಿ ಪಡೆಯುತ್ತಲೇ ಹೋಗುತ್ತಿತ್ತು.

ಪರಿಸ್ಥಿತಿ ಹೇಗಿದೆ ಎಂದು ವಿಚಾರಿಸಿಕೊಂಡ ಕ್ಷೇತ್ರದ ಸಂಸದ ವಿ.ಶ್ರೀನಿವಾಸಪ್ರಸಾದ ಅವರಿಗೆ ‘ಎಲ್ಲವೂ ಸರಿಯಾಗಿದೆ’ ಎಂದು ಹೇಳಿ, ಕೊರತೆ ಇದ್ದರೆ ಸರಿಪಡಿಸಿಕೊಳ್ಳುವಂತೆ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ನೀಡಿದ್ದ ಮುನ್ನೆಚ್ಚರಿಕೆಯನ್ನು ಜಿಲ್ಲಾಡಳಿತ ಕಡೆಗಣಿಸಿದ್ದೇಕೆ? ಕಳೆದ ಸಲ ಕೋವಿಡ್ ಸಂದರ್ಭವನ್ನು ನಿಭಾಯಿಸಿದ ತನಗೆ ಬೇರೆಯವರ ಸಲಹೆ ಬೇಕಿಲ್ಲ ಎಂಬ ದಾರ್ಷ್ಟ್ಯವೂ ಇರಬೇಕು ಎನ್ನುವ ಅಧಿಕಾರಿವರ್ಗದ ಕ್ಷೀಣದನಿ ಹೊರಗೆ ಕೇಳುವುದಿಲ್ಲ.



ಇಲ್ಲಿನ ಪರಿಸ್ಥಿತಿಯನ್ನು ತಿಳಿದ ತಕ್ಷಣ ಚಾಮರಾಜನಗರ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿ ಅಗತ್ಯ ನೆರವು ನೀಡಲಾಗಿದೆ ಎಂಬುದು ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಸಂಸದ ಪ್ರತಾಪ ಸಿಂಹ ಹೇಳಿಕೆ. ಆ ಬಗ್ಗೆ ಅಂದು ರಾತ್ರಿ 11.25ಕ್ಕೆ ಟ್ವೀಟ್ ಕೂಡ ಮಾಡಿದ್ದ ಪ್ರತಾಪಸಿಂಹ, ತುರ್ತಾಗಿ 50 ಸಿಲಿಂಡರ್‌ಗಳನ್ನು ಕಳುಹಿಸಿಕೊಟ್ಟಿದ್ದಾಗಿ ಹೇಳಿದ್ದಾರೆ. ಆದರೆ, ಚಾಮರಾಜನಗರ ಜಿಲ್ಲಾಧಿಕಾರಿ ಎಂ.ಆರ್. ರವಿ, ಮೈಸೂರಿನ ಜಿಲ್ಲಾಡಳಿತ ಸ್ಪಂದಿಸಿಲ್ಲ; ತಾವೇ ಮೈಸೂರಿನ ಪದಕಿ ಏಜೆನ್ಸಿಯಿಂದ 50 ಸಿಲಿಂಡರ್‌ಗಳನ್ನು ತರಿಸಿಕೊಂಡಿದ್ದಾಗಿ ಹೇಳಿದ್ದಾರೆ. ಹಾಗಿದ್ದರೆ, ಮೈಸೂರು ಜಿಲ್ಲಾಡಳಿತ ವ್ಯವಸ್ಥೆ ಮಾಡಿತ್ತು ಎನ್ನಲಾದ ಒಟ್ಟು 250 ಸಿಲಿಂಡರ್‌ಗಳು ಹೋಗಿದ್ದು ಎಲ್ಲಿಗೆ ಎಂಬುದಕ್ಕೆ ಇದುವರೆಗೂ ಉತ್ತರವಿಲ್ಲ.

‘ಮೈಸೂರಿನಿಂದ ಚಾಮರಾಜನಗರಕ್ಕೆ ನಿತ್ಯ 300 ಸಿಲಿಂಡರ್ ತರಿಸಲಾಗುತ್ತಿತ್ತು. ಏ.23ರಿಂದ ಪೂರೈಕೆಯಲ್ಲಿ ತುಸು ವ್ಯತ್ಯಯವಾಗುತ್ತಿತ್ತು. ಭಾನುವಾರವೂ (ಮೇ 2) ಮೈಸೂರಿನಿಂದ 300 ಸಿಲಿಂಡರ್ ಪೂರೈಕೆಯಾಗಲಿದೆ ಎಂಬ ವಿಶ್ವಾಸದಲ್ಲಿದ್ದೆವು. ಅಂದು ಬೆಳಿಗ್ಗೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ಕೂಡ ನಡೆದಿತ್ತು. ಆದರೆ, ಸರಿಯಾಗಿ ಪೂರೈಕೆ ಆಗಲಿಲ್ಲ. ಬಂದ ಹಾಗೆ ಬಳಕೆ ಆಗುತ್ತಿದ್ದರಿಂದ ದಾಸ್ತಾನು ಇರುವುದಿಲ್ಲ. ಅಂದು ಮಧ್ಯಾಹ್ನ 1.30ಕ್ಕೆ 66 ಸಿಲಿಂಡರ್ ಬಂದವು. ಸಂಜೆ ಆರೂವರೆಗೆ 65 ಸಿಲಿಂಡರ್‌ಗಳನ್ನು ಕೊಳ್ಳೇಗಾಲದಿಂದ ತರಿಸಲಾಯಿತು. ಮಧ್ಯರಾತ್ರಿ 2 ಗಂಟೆಗೆ ಮೈಸೂರಿನಿಂದ ಪೂರೈಕೆಯಾದವು’ ಎಂದಷ್ಟೇ ಹೇಳುತ್ತಾರೆ ಚಾಮರಾಜನಗರ ವೈದ್ಯಕೀಯ ಕಾಲೇಜಿನ ಡೀನ್ ಡಾ.ಸಂಜೀವ್. ಮೈಸೂರಿನಿಂದ ಬಂದ ಸಿಲಿಂಡರ್‌ಗಳು ಎಷ್ಟು ಎಂಬ ಮಾಹಿತಿ ಅವರಿಂದ ಸಿಗಲಿಲ್ಲ.

ಡೀನ್ ಹೇಳಿಕೆ ಪ್ರಕಾರ, ಎಂಟ್ಹತ್ತು ದಿನಗಳಿಂದಲೇ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿತ್ತು. ಇದರೊಂದಿಗೆ ಪ್ರಕರಣಗಳೂ ಹೆಚ್ಚುತ್ತಿದ್ದವು. ದಾಸ್ತಾನೂ ಇರಲಿಲ್ಲ. ಅಂದ ಮೇಲೆ ಇದಕ್ಕೆ ಹೊಣೆ ಯಾರು? ಜಿಲ್ಲಾಧಿಕಾರಿ ಎಂ.ಆರ್.ರವಿ ಈ ವಿಷಯವಾಗಿ ಪ್ರತಿಕ್ರಿಯಿಸಿಲ್ಲ. ಪ್ರತಿಕ್ರಿಯೆಗಾಗಿ ಹಲವಾರು ಸಲ ಪ್ರಯತ್ನಿಸಿದರೂ ಅವರು ಲಭ್ಯರಾಗಿಲ್ಲ. ಹೈಕೋರ್ಟ್ ಆದೇಶದ ಮೇರೆಗೆ, ಆಮ್ಲಜನಕ ಪೂರೈಕೆ– ವಿಲೇವಾರಿಗೆ ಸಂಬಂಧಿಸಿದ ಪ್ರಮುಖ ಕಡತಗಳನ್ನು ವಶಪಡಿಸಿಕೊಂಡ ನಂತರ ಬಹುತೇಕ ಅಧಿಕಾರಿಗಳು ಫೋನ್ ಸಂಪರ್ಕಕ್ಕೇ ಸಿಗುತ್ತಿಲ್ಲ.

ಮೂರುವರ್ಷಗಳ ಹಿಂದೆ ಸುಳ್ವಾಡಿಯ ದೇವಾಲಯದಲ್ಲಿ ವಿಷ ಪ್ರಸಾದದ ಸೇವಿಸಿ ಹಲವು ಜೀವಗಳು ಬಲಿಯಾದ ಪ್ರಕರಣದ ನೋವು ಮಾಯುವ ಮುನ್ನವೇ ಈ ಅನಾಹುತ ಘಟಿಸಿದೆ. ಇಷ್ಟಾದರೂ ಆಸ್ಪತ್ರೆಯ ಸ್ಥಿತಿಯಲ್ಲಿ, ಆರೋಗ್ಯ ಇಲಾಖೆಯ ಸಿಬ್ಬಂದಿಯ ಕಾರ್ಯವೈಖರಿ ಬದಲಾಗಿಲ್ಲ. ಕೋವಿಡ್ ರೋಗಿಗಳು ಮೃತಪಟ್ಟು ವಾರ ಕಳೆಯುತ್ತ ಬಂದರೂ ಪ್ರಾಥಮಿಕ ಸಂಪರ್ಕದಲ್ಲಿದ್ದ ಬಹುತೇಕರ ಕುಟುಂಬದ ಸದಸ್ಯರಿಗೆ, ಆಸ್ಪತ್ರೆಯ ಕೋಣೆಯೊಂದರಲ್ಲಿ ಒಂದರ ಮೇಲೆ ಒಂದರಂತೆ ಎಳೆದೆಳೆದು ಹಾಕಿದ್ದ ಹೆಣಗಳ ರಾಶಿಯಿಂದ ತಮ್ಮವರ ಶವ ಗುರುತಿಸಿ ತಂದವರಿಗೆ ಇದುವರೆಗೆ ಕೋವಿಡ್ ಪರೀಕ್ಷೆಯಾಗಿಲ್ಲ!

ಜಿಲ್ಲಾಸ್ಪತ್ರೆಯಲ್ಲೇ ಕೋವಿಡ್ ಚಿಕಿತ್ಸೆ ಪಡೆಯುತ್ತಿದ್ದ ಮಹಿಳೆಯೊಬ್ಬರು, ತಮ್ಮ ಪತಿಯ ಮೃತದೇಹದೊಂದಿಗೆ ಮನೆಗೆ ಮರಳಿದ್ದು, ಆಸ್ಪತ್ರೆಯಿಂದ ತಾವೇ ಸ್ವತಃ ಡಿಸ್ಚಾರ್ಜ್ ಆಗಿದ್ದಾರೆ. ಆಸ್ಪತ್ರೆಯಲ್ಲಿ ಅಂದು ಭಯಾನಕ ದೃಶ್ಯ ಕಂಡು, ಅಲ್ಲಿಂದ ಹೇಳದೇ ಬಂದವರೂ ಇದ್ದಾರೆ.

ಇದು ಜಿಲ್ಲಾಡಳಿತದ ವೈಫಲ್ಯವೇ? ಅಧಿಕಾರಿಗಳ ಪ್ರತಿಷ್ಠೆಯೇ ಎಂಬುದು ಇನ್ನೇನು ನ್ಯಾಯಾಂಗ ತನಿಖೆಯಿಂದ ಬಯಲಾಗಬೇಕಿದೆ.

ಶವಗಳನ್ನು ಕಸದಂತೆ ರಾಶಿ ಹಾಕಿದ್ದರು

ಒಂದನೇ ಪುಟದಿಂದ...

ನಿನ್ನೆ ಇದ್ದಳು; ಇವತ್ತು ಇಲ್ಲ: ಕೊಳ್ಳೇಗಾಲದ ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಿಕೊಂಡು, ಲವಲವಿಕೆಯಿಂದ ಓಡಾಡಿಕೊಂಡಿದ್ದ ಯುವತಿ ಕೀರ್ತನಾ, ಈಗ ತಮ್ಮ ಕಣ್ಣಮುಂದೆ ಇಲ್ಲ ಎಂಬ ನೋವು ತಿಮ್ಮರಾಜಿಪುರ ಗ್ರಾಮದ ಜನರದ್ದು. ಕೀರ್ತನಾಳಿಗೆ ಇನ್ನೂ 19ರ ಹರೆಯ. ದುಡಿದು ಪೋಷಕರನ್ನು ಸಾಕಲು ಪಣತೊಟ್ಟಿದ್ದಳು. ಆಕೆಯ ಸಾವು ಇಡೀ ಗ್ರಾಮದ ಜನರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಉಸಿರಾಟ ತೊಂದರೆ ಎದುರಿಸುತ್ತಿದ್ದ ಕೀರ್ತನಾಳನ್ನು ಕೊಳ್ಳೇಗಾಲ ಆಸ್ಪತ್ರೆಯಿಂದ ಭಾನುವಾರ (ಮೇ 2) ಮಧ್ಯಾಹ್ನ 12 ಗಂಟೆಗೆ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಸೇರಿಸಿದ್ದಾರೆ. ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ಬೆಡ್ ಇಲ್ಲವೆಂದು ಸ್ಟ್ರೆಚರ್‌ನಲ್ಲೇ ಮಲಗಿಸಿದ್ದರು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಆಮ್ಲಜನಕ ಕೊರತೆಯಿಂದ ಮಗಳು ಮೃತಪಟ್ಟಳು. ಜಿಲ್ಲಾಡಳಿತ ಹಾಗೂ ವೈದ್ಯರ ನಿರ್ಲಕ್ಷ್ಯವೇ ಸಾವಿಗೆ ಕಾರಣ’ ಎಂದು ತಂದೆ ಚಿಕ್ಕಕುನ್ನಯ್ಯ ಕಣ್ಣೀರಿಟ್ಟರು.

ಮೃತ ಜಯಶಂಕರ್ ಅವರ ಇಬ್ಬರು ಪುಟ್ಟ ಮಕ್ಕಳಿಗೆ ಏನೆಂದು ಹೇಳುವುದು? ವೃದ್ಧ ತಂದೆ ತಾಯಿಯನ್ನು ಸಂತೈಸುವವರು ಯಾರು? 19ರ ಹರೆಯದ ಮಗಳನ್ನು ಕಳೆದುಕೊಂಡ ಪೋಷಕರ ಎದೆಯಲ್ಲಿ ಅಡಗಿರುವ ನೋವು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಅರ್ಥವಾಗುತ್ತದೆಯೇ? ಪತಿಯನ್ನು ಕಳೆದುಕೊಂಡ ಪೂರ್ಣಿಮಾ ಅವರಿಗೆ ಆಸರೆ ಯಾರು? ಬರೀ ಪ್ರಶ್ನೆಗಳು..!

ನೋವಿನಲ್ಲೂ ಮೃತರ ಕುಟುಂಬದವರ ಪ್ರಾರ್ಥನೆಯೊಂದೇ; ಇಂಥ ಪರಿಸ್ಥಿತಿ ಮತ್ತೊಬ್ಬರಿಗೆ ಬಾರದಿರಲಿ...



ಮೃತ ಜಯಶಂಕರ್ ಅವರ ಪತ್ನಿ ಸಿದ್ಧರಾಜಮ್ಮ, ಮಕ್ಕಳು, ಪೋಷಕರು


ಅಂದು ಆಸ್ಪತ್ರೆ ಆವರಣದಲ್ಲೇ ಇದ್ದೆ...



ಜ್ವರದಿಂದ ಬಳಲುತ್ತಿದ್ದ ಪತ್ನಿಯನ್ನು ಜಿಲ್ಲಾಸ್ಪತ್ರೆಯ ಜನರಲ್ ವಾರ್ಡ್‌ನಲ್ಲಿ ಸೇರಿಸಿದ್ದೆ. ಹೀಗಾಗಿ, ಘಟನೆಯ ದಿನ ಆಸ್ಪತ್ರೆ ಆವರಣದಲ್ಲಿ ಓಡಾಡುತ್ತಿದ್ದೆ. 9 ಗಂಟೆ ಸುಮಾರಿಗೆ ಸ್ನೇಹಿತ ವೈದ್ಯರೊಬ್ಬರು ಆಮ್ಲಜನಕ ಕೊರತೆ ಬಗ್ಗೆ ಮಾಹಿತಿ ನೀಡಿದರು. ಹೀಗಾಗಿ, ಜಿಲ್ಲಾಧಿಕಾರಿಗೆ ಕರೆ ಮಾಡಿದೆ. ಕನೆಕ್ಟ್ ಆಗಲಿಲ್ಲ. 10.30ಕ್ಕೆ ಮತ್ತೆ ಕರೆ ಮಾಡಿ ಸಮಸ್ಯೆ ಹೇಳಿದೆ. ‘ಮೈಸೂರಿನಲ್ಲಿ ಆಮ್ಲಜನಕ ಭರ್ತಿ ಮಾಡುತ್ತಿದ್ದು, ಬರಲು ಸಮಯ ಬೇಕು, ಕೊಳ್ಳೇಗಾಲದಿಂದಲೂ ತರಲಾಗುತ್ತಿದೆ’ ಎಂದರು. ಆದರೆ, ಹನ್ನೊಂದೂವರೆಗೂ ಬರದೇ ಇದ್ದಾಗ ಮಾಧ್ಯಮದವರೂ ಸೇರಿದಂತೆ ನನಗೆ ಗೊತ್ತಿದ್ದವರಿಗೆ ಫೋನ್ ಮಾಡಿದೆ. ರಾತ್ರಿ 11 ಗಂಟೆಗೆ ಆಮ್ಲಜನಕದ ವ್ಯವಸ್ಥೆ ಮಾಡಿದ್ದರೂ ಕನಿಷ್ಠ ಏಳೆಂಟು ಜೀವ ಉಳಿಸಬಹುದಿತ್ತು

ರಾಜೇಂದ್ರ ಬಾಬು, ಪ್ರತ್ಯಕ್ಷದರ್ಶಿ, ಮಾದಾಪುರ, ಚಾಮರಾಜನಗರ

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 9-5-1996

● **ಕಾಂಗ್ರೆ-ಬಿಜೆಪಿ ಸಮನಡೆ: ರಾಜ್ಯದಲ್ಲಿ ದಳದ ಮೇಲುಗೈ**

ನವದೆಹಲಿ, ಮೇ 8 (ಪಿಟಿಐ, ಯುಎನ್‌ಐ)– 11ನೇ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಗೆ ಭಾರಿ ಮುಖಭಂಗವಾಗಿದ್ದು ಮಧ್ಯರಾತ್ರಿ ವೇಳೆಗೆ ಫಲಿತಾಂಶ ಪ್ರಕಟವಾದ 21 ಸ್ಥಾನಗಳಲ್ಲಿ 7 ಸ್ಥಾನಗಳನ್ನು ಮಾತ್ರ ಆ ಪಕ್ಷ ಗೆದ್ದಿದೆ. ಯಾವ ಪಕ್ಷವೂ ಬಹುಮತ ಗಳಿಸುವ ಮುನ್ಸೂಚನೆ ಇಲ್ಲ. ಅತಂತ್ರ ಸಂಸತ್ ಅನಿವಾರ್ಯ ಎಂದು ಭಾವಿಸಲಾಗಿದೆ.

ಅಲ್ಲದೆ 309 ಕ್ಷೇತ್ರಗಳ ಮುನ್ನಡೆಯ ವಿವರ ಲಭ್ಯವಾಗಿದ್ದು 89 ಸ್ಥಾನಗಳಲ್ಲಿ ಕಾಂಗ್ರೆ ಮುಂದಿದೆ. ಬಿಜೆಪಿ 81 ಕ್ಷೇತ್ರಗಳಲ್ಲಿ ಮುನ್ನಡೆದು ತನ್ನ ಸಂಖ್ಯೆಯನ್ನು ಏರಿಸಿಕೊಳ್ಳುತ್ತಿದೆ. ಜನತಾದಳ ಕರ್ನಾಟಕದಲ್ಲಿ 7 ಸ್ಥಾನಗಳಲ್ಲಿ ಜಯ ಗಳಿಸಿ 10 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿ ಕಾಂಗ್ರೆಗೆ ಮಣ್ಣು ಮುಕ್ಕಿಸಿದೆ.

50 ವರ್ಷಗಳ ಹಿಂದೆ — ಭಾನುವಾರ, 9-5-1971

● **ನಿರಾಶ್ರಿತರ ಸಮಸ್ಯೆ: ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಗಡಿ ರಾಜ್ಯಗಳ ಮನವಿ**

ಕಲ್ಕತ್ತ, ಮೇ 8– ಬಾಂಗ್ಲಾದೇಶದಿಂದ ಭಾರಿ ಪ್ರಮಾಣದಲ್ಲಿ ವಲಸೆ ಬರುತ್ತಿರುವ ನಿರಾಶ್ರಿತರ ಹೊಣೆಯನ್ನು ಭಾರತದೊಂದಿಗೆ ಹಂಚಿಕೊಳ್ಳಲು ಮಾನವೀಯ ದೃಷ್ಟಿಯಿಂದ ಮುಂದೆ ಬರಬೇಕೆಂದು ಬಿಹಾರ, ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ, ತ್ರಿಪುರಾಗಳ ಮುಖ್ಯಮಂತ್ರಿಗಳು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಮತ್ತು ಸ್ವತಂತ್ರ ರಾಷ್ಟ್ರಗಳಿಗೆ ಜಂಟಿಯಾಗಿ ಮನವಿ ಮಾಡಿಕೊಂಡಿದ್ದಾರೆ.

ನಿರಾಶ್ರಿತರ ವಲಸೆಯಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಈ ಐದೂ ರಾಜ್ಯಗಳು ಮೂರು ಗಂಟೆ ಕಾಲ ನಡೆಸಿದ ಮಾತುಕತೆ ಅಂತ್ಯದಲ್ಲಿ ಈ ಮನವಿಯನ್ನು ಮಾಡಲಾಯಿತು. ಈಗಾಗಲೇ ನಿರಾಶ್ರಿತರ ಸಂಖ್ಯೆ 18 ಲಕ್ಷ ದಾಟಿದೆ. ಶೀಘ್ರದಲ್ಲಿಯೇ ಇದು 20 ಲಕ್ಷ ದಾಟಲಿದೆ.

ದಿನ ಭವಿಷ್ಯ — ಭಾನುವಾರ 9 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣೀ ತ್ರಯೋದಶೀ ಗಂ. 33-22 (ರಾ. 7-23) ಭಾನುವಾರ ನಿತ್ಯ ನಕ್ಷತ್ರ ರೇವತಿ ಗಂ. 29-0 (ಸಾ. 5-39) ಪ್ರೀತಿ ನಾಮ ಯೋಗ ಗಂ 37-26 ಗರಜ ಕರಣ ಗಂ. 1-42 ವಿಷ ಶೇಷ ಗಂ. 0-48 ಅಮೃತ ಗಂ. 23-9 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 1 6

ಮೇಷ: ಅನಿರೀಕ್ಷಿತ ಬೆಳವಣಿಗೆಯಿಂದ ಸಾಮಾಜಿಕ ಗೌರವ. ಸಂತೋಷ ನೀಡುವ ವಿಚಾರದಲ್ಲಿ ಕುಟುಂಬದಿಂದ ಸಹಕಾರ. ಸಮಾಜ ಸೇವಕರಿಗೆ ಸಾಫಲ್ಯ. ವಿದ್ಯಾರ್ಥಿಗಳಲ್ಲಿ ಭಯದ ವಾತಾವರಣ.

ವೃಷಭ: ನೀವು ಮಾಡುವ ಯಾವುದೇ ಕಾರ್ಯದಲ್ಲೂ ಬದಲಾವಣೆಯಾದರೂ ಸಕಾರಾತ್ಮಕವಾಗಲಿದೆ. ಯಶಸ್ಸು ನಿಮ್ಮ ಪಾಲಿಗೆ ಬರಲಿದೆ. ರಕ್ಷಣಾ ಕ್ಷೇತ್ರದಲ್ಲಿ ದುಡಿಯುವವರಿಗೆ ಕಠಿಣ ಸವಾಲು.

ಮಿಥುನ: ಒಳ್ಳೆಯ ಕೆಲಸದ ನಿರೀಕ್ಷೆಯಲ್ಲಿರುವಿರಿ. ವ್ಯವಹಾರದಲ್ಲಿ ಪ್ರಗತಿ. ಗ್ರಹ ಬಲಗಳು ನಿಮಗೆ ಕೂಡಿಬರಲಿವೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಯಶಸ್ಸು ಕಾಣಲಿದ್ದೀರಿ.

ಕರ್ಕಾಟಕ: ವ್ಯವಹಾರದಲ್ಲೂ ಉನ್ನತಿಯಾಗಿ ಸಾಮಾಜಿಕ ಗೌರವಾದರ. ಮಕ್ಕಳಲ್ಲಿ ಸ್ವಲ್ಪ ಮಟ್ಟಿನ ಮಾನಸಿಕ ಕಿರಿಕಿರಿ. ಸತ್ಪುರುಷರ ದರ್ಶನ ಮಾಡಲಿದ್ದೀರಿ. ಚಿನ್ನಾಭರಣ ಖರೀದಿ ಸಾಧ್ಯತೆ. ದಾಂಪತ್ಯದಲ್ಲಿ ಸರಸ.

ಸಿಂಹ: ಅತಿಯಾದ ಉಲ್ಲಾಸದಿಂದ ಮೈ ಮರೆಯುವ ಸಾಧ್ಯತೆ. ದೂರದಲ್ಲಿರುವ ಬಂಧುಗಳ ಆಗಮನ ಸಾಧ್ಯತೆ. ನಿಮ್ಮನ್ನು ಅತಿಯಾಗಿ ಪ್ರೀತಿಸುವವರಿಂದ ಸಾಂತ್ವಾನದ ಮಾತುಗಳು.

ಕನ್ಯಾ: ವಿದ್ಯಾರ್ಥಿಗಳಿಗೆ ಕಠಿಣ ಪರಿಶ್ರಮದಿಂದಾಗಿ ಕಾರ್ಯದಲ್ಲಿ ಯಶಸ್ಸು. ಎದುರಾಳಿಗಳ ಕುತಂತ್ರಗಳು ಬಯಲಾಗಲಿದೆ. ತೈಲ ವ್ಯಾಪಾರದಲ್ಲಿ ಅಭಿವೃದ್ಧಿ. ಶನೀಶ್ವರ ದೇವರಿಗೆ ಎಳ್ಳೆಣ್ಣೆ ಸಮರ್ಪಿಸಿ.

ತುಲಾ: ವೈದ್ಯವೃತ್ತಿಯವರಿಗೆ ಅಧಿಕ ಶ್ರಮವಾಗಿ ವಿಪರೀತ ಆಯಾಸ. ಸ್ತ್ರೀಯರಿಗೆ ಅನುಕೂಲ ಪರಿಸ್ಥಿತಿ ನಿರ್ಮಾಣವಾಗಲಿದೆ. ಚಿನ್ನಾಭರಣ ಖರೀದಿ ಮಾಡುವ ಸಾಧ್ಯತೆ. ಮನೋ ವ್ಯಾಧಿಗಳು ದೂರವಾಗಲಿವೆ.

ವೃಶ್ಚಿಕ: ಬಂಧುಮಿತ್ರರ ಆಗಮನದಿಂದ ಮನಸ್ಸಿಗೆ ನೆಮ್ಮದಿ. ಆರೋಗ್ಯದಲ್ಲಿ ಸುಧಾರಣೆ. ಯೋಗಾಭ್ಯಾಸದ ಮೊರೆ ಹೋಗಬೇಕಾದೀತು. ದೀನರಿಗೆ ಸಹಾಯ ನೀಡಿ ಬರಲಿರುವ ಸಂಕಷ್ಟ ದೂರಮಾಡಿಕೊಳ್ಳಿ.

ಧನು: ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಕಿರಿಕಿರಿ. ಅನಿರೀಕ್ಷಿತವಾದ ತಲೆನೋವು. ನಿಗದಿತ ಕಾರ್ಯಗಳಲ್ಲಿ ಯಶಸ್ಸು. ಧನಾಗಮನದ ಸಾಧ್ಯತೆ. ಲಕ್ಷ್ಮೀ ಕಟಾಕ್ಷಕ್ಕಾಗಿ ದೇವಿಗೆ ತುಪ್ಪದ ದೀಪ ಬೆಳಗಿರಿ.

ಮಕರ: ಗೃಹ, ವಸ್ತ್ರ ವಿನ್ಯಾಸಕಾರರಿಗೆ ಆರ್ಥಿಕ ಲಾಭ. ನಿಮ್ಮ ಮೇಲಿನ ಹೆಚ್ಚಿನ ಜವಾಬ್ದಾರಿ ನಿಭಾಯಿಸಿಕೊಳ್ಳುವಲ್ಲಿ ಯಶಸ್ಸು. ಆತ್ಮೀಯರಲ್ಲಿ ಸಂತೋಷ ಹಂಚಿಕೊಳ್ಳಲಿದ್ದೀರಿ. ಗಣಪತಿ ಆರಾಧನೆ ಮುಂದುವರೆಸಿ.

ಕುಂಭ: ಆರ್ಥಿಕ ರಂಗದಲ್ಲಿ ಪ್ರಗತಿ. ದೂರಪ್ರಯಾಣದ ಆಯಾಸದಿಂದಾಗಿ ಚೇತರಿಸಿಕೊಂಡು ಆರೋಗ್ಯದಲ್ಲಿ ಚೇತರಿಕೆ. ವಿವಾಹಾಪೇಕ್ಷಿಗಳಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ಉದ್ಯೋಗದಲ್ಲಿ ಆಸಕ್ತಿ.

ಮೀನ: ಸಮಾಧಾನಚಿತ್ತದಿಂದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಕೊಳ್ಳಬಹುದು. ದುಡುಕುತನ ಒಳ್ಳೆಯದಲ್ಲ. ಯಾವುದೇ ವಿಚಾರಕ್ಕೂ ಮತ್ತೊಮ್ಮೆ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ.

ನಿಮ್ಮ ಜನ್ಮದಿನ 9-ಮೇ: ಈ ದಿನವು ಅತ್ಯಂತ ಶುಭಕರವಾಗಿದ್ದು, ಕ್ರೀಡಾಪಟುಗಳಿಗೆ ಸ್ಪರ್ಧೆಗಳು ಸಾಧನೆಗೆ ಮೆಟ್ಟಿಲಾಗಲಿವೆ. ನಿಮ್ಮ ಜೀವನಕ್ಕೆ ಅನುಕೂಲಕರ ಬೆಳವಣಿಗೆಯೊಂದು ಕಂಡುಬರುವುದು. ಉದ್ಯೋಗ ವ್ಯವಹಾರಗಳಲ್ಲಿ ಅಭಿವೃದ್ಧಿ ಕಾಣಲಿದ್ದೀರಿ. ಕಲಾ ಜೀವನದಲ್ಲಿ ಅಭಿವೃದ್ಧಿ.


ಪದಬಂಧ 4591 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಈ ರೂಪ ಬಲು ವಿರಳ! (4)
3. ತುಂಬಾ ಹಳಬ! (4)
5. ಯಥೇಚ್ಛ ಎಂದು ಹೀಗೆ ಹೇಳಿ (3)
7. ಸೊಂಟಕ್ಕೆ ಸುತ್ತುವ ಪಂಚೆ (2)
8. ಗೂಢಾರ್ಥ ಇಲ್ಲಿಯೇ ಕಾಣುತ್ತಿದೆ (2)
9. ಗುಗ್ಗುರಿಯನ್ನು ತಿನ್ನುವತ್ತಲೇ ನೆಟ್ಟ ಲಕ್ಷ್ಯ! (2)
10. ಮಕರ ಸಂಕ್ರಾಂತಿಯಿಂದ ಕರ್ಕಾಟಕ ಸಂಕ್ರಾಂತಿವರೆಗಿನ ಕಾಲ (5)
12. ನುಡಿ ಅಥವಾ ವಚನ (2)
13. ಪರವಶಗೊಂಡು ನೋಡಿದ ಹೆಣ (2)
14. ಜಾಗರೂಕತೆಯಿಂದಲೇ ಈ ಸ್ಥಳ ಹುಡುಕಿ! (2)
15. ಪವಿತ್ರವಾದ ಮಣ್ಣು (3)
17. ಒಳಗಿನ ಅಭಿಪ್ರಾಯವಿದು (4)
18. ಸನ್ನಿಗೊಳಗಾದವನ ಎದುರು! (4)

ಮೇಲಿಂದ ಕೆಳಕ್ಕೆ

1. ಹೃದಯದಿಂದ ದೇಹದ ಇತರೆಡೆಗೆ ರಕ್ತ ಪೂರೈಸುವ ನಾಳ (5)
2. ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3. ಇದೇ ಯುಕ್ತವಾದ ವೇಳೆ (3)
4. ಚಲುವಾದ ಹೆಂಗಸು ತರಿಯಲ್ಲಿ ನಿಂತಿದ್ದಾಳಲ್ಲಾ? (4)
6. ಮತ್ತೆ ಮತ್ತೆ ಉಂಟಾಗುವುದು (5)
9. ಗುಡಾಣದಂತಿರುವವನ ಸ್ವಭಾವ! (2)
10. ಅರುಣೋದಯದ ಕಾಲ (2)
11. ಲೋಕವನ್ನು ನೋಡುವುದು! (5)
12. ಭಾಗ ಹಿಡಿದಿರುವ ಹರಿದಾಸ! (4)
15. ಎಲ್ಲರೂ ದಂಗಾಗುವಂತೆ ನುಡಿಸಿದ ಚರ್ಮವಾದ್ಯ (3)
16. ಕೆಲವರಷ್ಟೇ ಮಾಡುವ ಕಾರ್ಯ (3)



4590ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ಹರವಿ 2.ಸಮೀಕ್ಷಕ 5.ಪ್ರಥಮಾ 6.ಕನಕ 8.ಸುಭಗ 10.ಆನಂದಾಶ್ರು 11.ರಸದಾಳಿ 12.ತಮಾಳ 14.ಕದಂಬ 16.ಲಾಲಸ 18.ಅವಧಾನಿ 19.ಖರೀದಿ

ಮೇಲಿಂದ ಕೆಳಕ್ಕೆ

2.ವಿಪ್ರ 3.ಸಮಾರಂಭ 4.ಕ್ಷಣಿಕ 7.ಕದಳಿ 8.ಸುಶ್ರುತ 9.ಗರಳ 10.ಆಸ್ತಿಕ 13.ಮಾತುಲಾನಿ 15.ಬಡವ 17.ಸಖ

ಸುಡೊಕು 4977

7		4		5			9	
	2		1		9	6		5
		5		3			1	
						1		9
9		1	5				4	
4				1		3		7
			3		7			1
	6			9	1	7		
				2			6	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4976 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಂಕ್ಷಿಪ್ತ ಸುದ್ದಿ

ಕೊರೊನಾ: ₹2 ಲಕ್ಷಕ್ಕೂ ಹೆಚ್ಚು ನಗದು ಸ್ವೀಕರಿಸಲು ಅನುಮತಿ

ನವದೆಹಲಿ (ಪಿಟಿಐ): ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳು ₹2 ಲಕ್ಷಕ್ಕಿಂತ ಹೆಚ್ಚು ಹಣವನ್ನು ನಗದು ರೂಪದಲ್ಲಿ ಸ್ವೀಕರಿಸಬಹುದು ಎಂದು ಆದಾಯ ತೆರಿಗೆ ಇಲಾಖೆ ಅಧಿಸೂಚನೆ ಹೊರಡಿಸಿದೆ.

ಆದಾಯ ತೆರಿಗೆ ಇಲಾಖೆಗಾಗಿ ನೀತಿ ರೂಪಿಸುವ ಕೇಂದ್ರೀಯ ನೇರ ತೆರಿಗೆ ಮಂಡಳಿ (ಸಿಬಿಡಿಟಿ) ಶುಕ್ರವಾರ ಈ ಅಧಿಸೂಚನೆ ಹೊರಡಿಸಿದೆ.

ಕೋವಿಡ್–19 ರೋಗಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಂಧ್ರಪ್ರದೇಶ: ಕಲ್ಲು ಕ್ವಾರಿಯಲ್ಲಿ ಸ್ಫೋಟ–9 ಮಂದಿ ಸಾವು

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಕಡಪ ಜಿಲ್ಲೆಯ ಮಾಮಿಲಪಲ್ಲಿ ಎಂಬಲ್ಲಿ ಸುಣ್ಣದಕಲ್ಲು ಕ್ವಾರಿಯೊಂದರಲ್ಲಿ ಶನಿವಾರ ಸ್ಫೋಟ ಸಂಭವಿಸಿದ್ದು, ದುರಂತದಲ್ಲಿ 9 ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ.

ಕಲ್ಲುಗಳನ್ನು ಒಡೆಯಲು ಬಳಸುವ ಜಿಲೆಟಿನ್ ಕಟ್ಟಿಗಳಿದ್ದ ಪೆಟ್ಟಿಗೆಗಳನ್ನು ವಾಹನದಿಂದ ಇಳಿಸುತ್ತಿದ್ದಾಗ ಈ ದುರಂತ ಸಂಭವಿಸಿದೆ, 5 ದೇಹಗಳನ್ನು ಮಾತ್ರ ಇದುವರೆಗೆ ಗುರುತಿಸಲಾಗಿದೆ, ಇದೊಂದು ಪರವಾನಗಿ ಪಡೆದ ಗಣಿ' ಎಂದು ಕಡಪ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಅನ್ಬುರಾಜನ್ ತಿಳಿಸಿದ್ದಾರೆ.

ಸಂತ್ರಸ್ತರಿಗೆ ತಲಾ ₹ 1 ಕೋಟಿ ಪರಿಹಾರ ನೀಡುವಂತೆ ವಿರೋಧ ಪಕ್ಷದ ನಾಯಕ ಎನ್.ಚಂದ್ರಬಾಬು ನಾಯ್ಡು ಒತ್ತಾಯಿಸಿದ್ದಾರೆ.

ಗುಜರಾತ್: ಸಿಂಹ ದಾಳಿ, ವ್ಯಕ್ತಿ ಸಾವು

ಜುನಾಗಡ (ಪಿಟಿಐ): ಗುಜರಾತಿನ ಜುನಾಗಡ ಜಿಲ್ಲೆಯ ಮಧುಪುರ ಗ್ರಾಮದಲ್ಲಿ ಸಿಂಹ ದಾಳಿ ನಡೆಸಿದ್ದರಿಂದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

'ಬಹಾದ್ದೂರ್‌ಬಾಯಿ ಜೀವಭಾಯಿ (35) ಎಂಬುವವರು ಮಾವಿನ ತೋಟದ ಗುಡಿಸಲಿನ ಹೊರಗೆ ಮಲಗಿದ್ದರು. ಶುಕ್ರವಾರ ಮಧ್ಯರಾತ್ರಿ 1ರ ವೇಳೆಗೆ ಸಿಂಹವೊಂದು ಅಲ್ಲಿಯೇ ಕಟ್ಟಿಹಾಕಿದ್ದ ಮೇಕೆಯ ಮೇಲೆ ದಾಳಿ ಮಾಡಲು ಯತ್ನಿಸಿತು. ಈ ವೇಳೆ ಎಚ್ಚರಗೊಂಡ ಅವರು ಮೇಕೆಯನ್ನು ರಕ್ಷಿಸಲು ಮುಂದಾದಾಗ ಸಿಂಹ ದಾಳಿ ನಡೆಸಿ ಕೊಂದು ಹಾಕಿತು' ಜುನಾಗಡದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ದುಷ್ಯಂತ್ ವಾಸವಾಡ ತಿಳಿಸಿದ್ದಾರೆ. ಘಟನೆಯ ನಂತರ ಅರಣ್ಯ ಇಲಾಖೆ ತಂಡವು ಸಿಂಹವನ್ನು ಸೆರೆ ಹಿಡಿದಿದೆ.

ಬಂಗಾಳ: ಕಾರ್ಯದರ್ಶಿ ನಡೆಗೆ ರಾಜ್ಯಪಾಲರ ಆಕ್ಷೇಪ

ಕೋಲ್ಕತ್ತ (ಪಿಟಿಐ): ರಾಜ್ಯದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ಬಗ್ಗೆ ಸಕಾಲದಲ್ಲಿ ಮಾಹಿತಿ ನೀಡದಿರುವ ಗೃಹ ಕಾರ್ಯದರ್ಶಿಯ ವಿರುದ್ಧ ರಾಜ್ಯಪಾಲ ಜಗದೀಪ್ ಧನ್‌ಕರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಈ ಕೂಡಲೇ ಬಂದು ತಮ್ಮನ್ನು ಭೇಟಿಮಾಡುವಂತೆ ಸೂಚಿಸಿದ ಘಟನೆ ಶನಿವಾರ ನಡೆದಿದೆ.

'ಹಿಂಸಾಚಾರದ ಬಗ್ಗೆ ಡಿಜಿಪಿ ಅವರು ನೀಡಿದ್ದ ಮಾಹಿತಿಯನ್ನು, ಗೃಹ ಕಾರ್ಯದರ್ಶಿ ನನಗೆ ಹಲುಹಿಸಿಲ್ಲ. ಕಾನೂನು ಸುವ್ಯವಸ್ಥೆಯ ಬಗ್ಗ ಮಾಹಿತಿ ನೀಡಲು ವಿಫಲರಾದ ಅವರಿಗೆ ಸಂಜೆಯೊಳಗೆ ಬಂದು ನನ್ನನ್ನು ಭೇಟಿಮಾಡುವಂತೆ ಸೂಚಿಸಿದ್ದೇನೆ. ಇಂಥ ಲೋಪ ನಡೆದಿರುವುದು ದುರದೃಷ್ಟಕರ ಇದನ್ನು ನಿರ್ಲಕ್ಷಿಸಲಾಗದು' ಎಂದು ರಾಜ್ಯಪಾಲರು ಟ್ವೀಟ್ ಮಾಡಿದ್ದಾರೆ.

'ಇಷ್ಟು ಗಂಭೀರ ಸ್ವರೂಪದ ಹಿಂಸಾಚಾರ ನಡೆದಿದ್ದರೂ ಸಾಂವಿಧಾನಿಕ ಹುದ್ದೆಯಲ್ಲಿರುವ ಮುಖ್ಯಸ್ಥರಿಗೆ ಮಾಹಿತಿ ನೀಡದಿರುವುದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

ಸಾರ್ವತ್ರಿಕ ಲಸಿಕೆ ಯೋಜನೆ ಜಾರಿಗೊಳಿಸಿ: ಪಶ್ಚಿಮ ಬಂಗಾಳ ಸಿ.ಎಂ ಮಮತಾ ಬ್ಯಾನರ್ಜಿ

'ಕೇಂದ್ರಕ್ಕೆ ₹ 30,000 ಕೋಟಿ ದೊಡ್ಡದಲ್ಲ'



ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ದೇಶದಲ್ಲಿ ಸಾರ್ವತ್ರಿಕ ಲಸಿಕೆ ಯೋಜನೆ ರೂಪಿಸಬೇಕು. ಅದಕ್ಕೆ ಬೇಕಾಗುವ ₹ 30,000 ಕೋಟಿ ಕೇಂದ್ರ ಸರ್ಕಾರಕ್ಕೆ ದೊಡ್ಡದಲ್ಲ ಎಂದು ಹೇಳಿದ್ದಾರೆ.

ರಾಜ್ಯ ವಿಧಾನಸಭೆಯಲ್ಲಿ ಶನಿವಾರ ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರವನ್ನೂ ಬರೆಯಲಾಗಿದ್ದು, ದೇಶದ ಎಲ್ಲ ನಾಗರಿಕರಿಗೂ ಉಚಿತ ಲಸಿಕೆ ನೀಡಬೇಕು ಎಂದು ಮನವಿ ಮಾಡಿರುವುದಾಗಿ ತಿಳಿಸಿದ್ದಾರೆ. ಇದೇ ವೇಳೆ ಅವರು, ಪಿಎಂ ಕೇರ್ಸ್ ನಿಧಿಗೆ ಸಂಬಂಧಿಸಿದಂತೆ ಬಿಜೆಪಿ ವಿರುದ್ಧ ಕಿಡಿಕಾರಿದ್ದಾರೆ. ಹೊಸ ಸಂಸತ್ ಭವನ ಮತ್ತು ಪ್ರತಿಮೆ ನಿರ್ಮಿಸಲು ₹ 20,000 ಕೋಟಿ ಖರ್ಚು ಮಾಡುತ್ತಿರುವ ಅವರು (ಬಿಜೆಪಿ), ಲಸಿಕೆಗಾಗಿ ₹30,000 ಕೋಟಿ ರೂ. ಖರ್ಚು ಮಾಡಲು ಏಕೆ ಬಿಡುತ್ತಿಲ್ಲ. ಪಿಎಂ ಕೇರ್ಸ್ ಫಂಡ್ ಎಲ್ಲಿದೆ? ಎಂದು ಪ್ರಶ್ನಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯು ಸಾಕಷ್ಟು ಹಣ ಖರ್ಚು ಮಾಡಿದೆ ಎಂದೂ ಆರೋಪಿಸಿರುವ ಮಮತಾ, ಬಿಜೆಪಿಯು ಬೇರೆಬೇರೆ ರಾಜ್ಯಗಳ ನಾಯಕರು ಮತ್ತು ಕೇಂದ್ರ ಸಚಿವರುಗಳಿಗಾಗಿ ಸಾಕಷ್ಟು ಹೋಟೆಲ್‌ಗಳನ್ನು ಬುಕ್ ಮಾಡಿಕೊಂಡಿತ್ತು. ಎಲ್ಲ ಸಚಿವರೂ ಇಲ್ಲಿಗೆ ಬಂದು ಪಿತೂರಿ ನಡೆಸಿದರು. ಯೋಜನೆಗಳು ಮತ್ತು ಹೋಟೆಲ್‌ಗಳಿಗಾಗಿ ಎಷ್ಟು ಕೋಟಿ ಹಣ ಖರ್ಚು ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆದರೆ, ಹಣವನ್ನು ನೀರಿನಂತೆ ಹರಿಸಲಾಯಿತು. ಅದರ ಬದಲು ಅವರು ಲಸಿಕೆ ನೀಡಿದ್ದಿದ್ದರೆ, ರಾಜ್ಯಕ್ಕೆ ಒಳ್ಳೆಯದಾಗುತ್ತಿತ್ತು ಎಂದರು.

ಇದೇ ವೇಳೆ, ಲಸಿಕೆ ಖರೀದಿಗೆ ಅನುಮತಿ ನೀಡುವಂತೆ ಕೇಂದ್ರಕ್ಕೆ ಈಗಾಗಲೇ ಪತ್ರ ಬರೆದಿದ್ದೇವೆ. ಆದರೆ, ಅವರು ಅನುಮತಿ ನೀಡಿಲ್ಲ. ಇದೀಗ ರಾಜ್ಯವು ಲಸಿಕೆ ಹಾಗೂ ಆಮ್ಲಜನಕ ಕೊರತೆಯ ಸಂಕಷ್ಟ ಎದುರಿಸುತ್ತಿದೆ ಎಂದು ಆರೋಪಿಸಿದರು.

'ರಾಜ್ಯಗಳ ಬಳಿ 84 ಲಕ್ಷ ಡೋಸ್ ಕೋವಿಡ್ ಲಸಿಕೆ'

ನವದೆಹಲಿ (ಪಿಟಿಐ): ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಬಳಿಯಲ್ಲಿ 84 ಲಕ್ಷ ಡೋಸ್‌ಗಳಿಗೂ ಹೆಚ್ಚು ಕೋವಿಡ್ 19 ಲಸಿಕೆಯಿದೆ. ಮುಂದಿನ ಮೂರು ದಿನಗಳಲ್ಲಿ ಇನ್ನೂ 53 ಲಕ್ಷ ಡೋಸ್ ಲಸಿಕೆಯನ್ನು ಪೂರೈಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಈ ಕುರಿತು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, 'ಇಲ್ಲಿವರೆಗೂ 17.49 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ದೇಶದ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪೂರೈಸಲಾಗಿದೆ. ಅದರಲ್ಲಿ ಸುಮಾರು 16.7 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ಬಳಕೆ ಮಾಡಲಾಗಿದೆ' ಎಂದು ಹೇಳಿದೆ.

'ಪೂರೈಸಿದ ಲಸಿಕೆಯಲ್ಲಿ, ವ್ಯರ್ಥವಾಗಿರುವುದೂ ಸೇರಿದಂತೆ ಒಟ್ಟು 16,65,49,583 ಡೋಸ್ ಲಸಿಕೆಗಳು (ಶನಿವಾರ ಬೆಳಿಗ್ಗೆ 8 ಗಂಟೆಗೆ ಲಭ್ಯವಿರುವ ಮಾಹಿತಿಯ ಪ್ರಕಾರ) ಬಳಕೆ ಮಾಡಲಾಗಿದೆ. ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ 84,08,187 ಡೋಸ್‌ಗಳಷ್ಟು ಲಸಿಕೆ ಲಭ್ಯವಿದೆ' ಎಂದು ಸಚಿವಾಲಯ ತಿಳಿಸಿದೆ.

ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಔಷಧ ಬಳಕೆಗೆ ಅನುಮತಿ

ಒಂದನೇ ಪುಟದಿಂದ...

'ಅಲ್ಲದೆ, ಆಮ್ಲಜನಕದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಸಣ್ಣ ಪೊಟ್ಟಣಗಳಲ್ಲಿ ಪುಡಿಯ ರೂಪದಲ್ಲಿ ಬರುವ ಈ ಔಷಧವನ್ನು ನೀರಿನಲ್ಲಿ ಮಿಶ್ರಣ ಮಾಡಿ ಸೇವಿಸಬಹುದು. ಈ ಔಷಧವು ಸೋಂಕಿತ ಕೋಶಗಳ ಮೇಲೆ ಕಾರ್ಯಾಚರಣೆ ಮಾಡುವುದರಿಂದ ಜೀವ ಉಳಿಸಲು ನೆರವಾಗಲಿದೆ' ಎಂಬುದು ಪ್ರಯೋಗಗಳಿಂದ ದೃಢಪಟ್ಟಿದೆ ಎಂದು ಸಚಿವಾಲಯ ಹೇಳಿದೆ.

2–ಡಿಜಿ ಔಷಧವನ್ನು ಹೈದರಾಬಾದ್‌ನ ಡಾ. ರೆಡ್ಡೀಸ್ ಲ್ಯಾಬ್‌ನ ಸಹಯೋಗದಲ್ಲಿ ಡಿಆರ್‌ಡಿಒದ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಅಂಡ್ ಅಲೈಡ್ ಸೈನ್ಸಸ್ (ಐಎನ್‌ಎಂಎಎಸ್) ಪ್ರಯೋಗಾಲಯದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಔಷಧವು ದೇಹವನ್ನು ಸೇರಿದ ಬಳಿಕ ಸೋಂಕಿತ ಜೀವಕೋಶಗಳ ಮೇಲೆ ಸಂಗ್ರಹಗೊಂಡು, ಅಲ್ಲಿ ವೈರಸ್ ಅಭಿವೃದ್ಧಿಹೊಂದುವುದನ್ನು ತಡೆಯುತ್ತದೆ. 2–ಡಿಜಿ ಔಷಧದ ಸಹಾಯದಿಂದ ಚಿಕಿತ್ಸೆ ಪಡೆದ ರೋಗಿಗಳು ಇತರ ರೋಗಿಗಳಿಗಿಂತ ಶೀಘ್ರದಲ್ಲಿ ಗುಣಮುಖರಾಗಿರುವುದು ಕಂಡುಬಂದಿದೆ ಎಂದು ಸಚಿವಾಲಯ ತಿಳಿಸಿದೆ.

ಈ ಔಷಧವನ್ನು ಸುಲಭವಾಗಿ ತಯಾರಿಸಿ ಎಲ್ಲರಿಗೂ ಪೂರೈಸಬಹುದಾಗಿದೆ. ಸಾಮಾನ್ಯದಿಂದ ಗಂಭೀರ ಸ್ವರೂಪದ ಕೋವಿಡ್ ರೋಗಿಗಳ ಮೇಲೆ ಈ ಔಷಧವನ್ನು ತುರ್ತು ಸಂದರ್ಭದಲ್ಲಿ ಸಹಾಯಕ ಚಿಕಿತ್ಸೆಯ ರೂಪದಲ್ಲಿ (ಪ್ರಾಥಮಿಕ ಚಿಕಿತ್ಸೆಯ ಜತೆಯಲ್ಲೇ, ಅದಕ್ಕೆ ಪೂರಕವಾಗುವಂತೆ ಇನ್ನೊಂದು ಚಿಕಿತ್ಸೆ ನೀಡುವುದನ್ನು ಸಹಾಯಕ ಚಿಕಿತ್ಸೆ ಎನ್ನಲಾಗುತ್ತದೆ) ಬಳಸಲು ಅನುಮತಿ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

'ಆಮ್ಲಜನಕದ ಸಹಾಯದಲ್ಲಿ 9 ಲಕ್ಷ ಕೋವಿಡ್ ರೋಗಿಗಳು'

ನವದೆಹಲಿ (ಪಿಟಿಐ): 'ದೇಶದಲ್ಲಿ 9 ಲಕ್ಷ ಕೋವಿಡ್ ರೋಗಿಗಳು ಆಮ್ಲಜನಕ ಸಹಾಯದಲ್ಲಿದ್ದು, 1.7 ಲಕ್ಷ ಮಂದಿ ವೆಂಟಿಲೇಟರ್‌ನಲ್ಲಿದ್ದಾರೆ' ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಶನಿವಾರ ತಿಳಿಸಿದ್ದಾರೆ.

ಕೋವಿಡ್ ಪರಿಸ್ಥಿತಿಯ ಕುರಿತು ನಡೆದ ಸಚಿವರ ಸಮೂಹ (ಜಿಒಎಂ) ಸಭೆಯಲ್ಲಿ ಮಾತನಾಡಿದ ಅವರು, 'ಕೋವಿಡ್ ಪ್ರಕರಣಗಳ ಪೈಕಿ ಶೇಕಡ 1.34 ಮಂದಿ ಐಸಿಯುನಲ್ಲಿದ್ದು, ಶೇಕಡ 0.39 ವೆಂಟಿಲೇಟರ್‌ನಲ್ಲಿ ಮತ್ತು ಶೇ. 3.70 ರೋಗಿಗಳಿಗೆ ಆಮ್ಲಜನಕ ಸಹಾಯದಲ್ಲಿದ್ದಾರೆ' ಎಂದು ಮಾಹಿತಿ ನೀಡಿದರು.

180 ಜಿಲ್ಲೆಗಳಲ್ಲಿ ವಾರದಿಂದ ಪ್ರಕರಣ ಇಲ್ಲ: ದೇಶದ 180 ಜಿಲ್ಲೆಗಳಲ್ಲಿ ಒಂದು ವಾರದಿಂದ ಯಾವುದೇ ಹೊಸ ಪ್ರಕರಣ ದಾಖಲಾಗಿಲ್ಲ ಎಂಬುದನ್ನು ಆರೋಗ್ಯ ಸಚಿವರು ಸಭೆಯ ಗಮನಕ್ಕೆ ತಂದರು.

ಮಹಾರಾಷ್ಟ್ರ ಬಿಟ್ಟರೆ ಅಧಿಕ ಸಕ್ರಿಯ ಪ್ರಕರಣಗಳು ಇರುವ ರಾಜ್ಯ ಕರ್ನಾಟಕ. ಬೆಂಗಳೂರು ನಗರ, ಪುಣೆ, ದೆಹಲಿ, ನಾಗಪುರ, ಮುಂಬೈ, ಎರ್ನಾಕುಲಂ, ಕೋಜಿಕೋಡ್, ಠಾಣೆ, ನಾಸಿಕ್, ಮಲಪ್ಪುರಂ, ತ್ರಿಶೂರ್, ಜೈಪುರ, ಗುರುಗ್ರಾಮ, ತಿರುವನಂತಪುರ, ಪಾಲಕ್ಕಾಡ್‌ಗಳಲ್ಲಿ ದೊಡ್ಡ ಪ್ರಮಾಣದ ಸಕ್ರಿಯ ಪ್ರಕರಣಗಳಿವೆ ಎಂದು ಸಚಿವರು ಮಾಹಿತಿ ನೀಡಿದರು.

ಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಕೇಂದ್ರ ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್‌ಪುರಿ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಮನ್ಸೂಖ್ ಮಾಂಡವೀಯಾ, ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಇದ್ದರು.

ರಾಜ್ಯಕ್ಕೆ ₹ 34 ಕೋಟಿ ಮಂಜೂರು ಮಾಡಿದ ಕೇಂದ್ರ ಸರ್ಕಾರ

28 ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ರೋಗಿಗಳ ಚಿಕಿತ್ಸೆಗೆ ನೆರವಾಗಲು ರಾಜ್ಯದ 28 ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆಗೆ ಕೇಂದ್ರದ ಇಂಧನ ಹಾಗೂ ನೈಸರ್ಗಿಕ ಅನಿಲ ಇಲಾಖೆ ನಿರ್ಧರಿಸಿದೆ.

ರಾಜ್ಯದ ವಿವಿಧ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿನ ಆಯ್ದ ಆಸ್ಪತ್ರೆಗಳಲ್ಲಿ ಪ್ರತಿ ನಿಮಿಷಕ್ಕೆ 500ರಿಂದ 1,000 ಲೀಟರ್ ಸಾಮರ್ಥ್ಯದ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

ಕೇಂದ್ರ ಸರ್ಕಾರಿ ಸ್ವಾಮ್ಯದ ಎಂಆರ್‌ಪಿಎಲ್, ಒಎನ್‌ಜಿಸಿ, ಎಂಡಿಸಿ ಕಂಪನಿಗಳು ಈ ಘಟಕ ಸ್ಥಾಪಿಸಲಿದ್ದು, ದಿನದ 24 ಗಂಟೆಯೂ ರೋಗಿಗಳಿಗೆ ಆಮ್ಲಜನಕ ದೊರೆಯುವಂತೆ ಕ್ರಮ ಕೈಗೊಳ್ಳಲಿವೆ.

28 ಘಟಕಗಳ ಪೈಕಿ 11 ಘಟಕಗಳ ಸ್ಥಾಪನಾ ಕಾರ್ಯ ಮೇ 15ರೊಳಗೆ ಪೂರ್ಣಗೊಳ್ಳಲಿದ್ದು, ಮಿಕ್ಕ ಘಟಕಗಳನ್ನು ಜೂನ್ 30ರೊಳಗೆ ಪೂರ್ಣಗೊಳಿಸುವಂತೆ ಗಡುವು ನೀಡಲಾಗಿದೆ.

ಕೇಂದ್ರದ ಇಂಧನ ಹಾಗೂ ನೈಸರ್ಗಿಕ ಅನಿಲ ಖಾತೆ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಈ ಸಂಬಂಧ ₹ 34 ಕೋಟಿ ಅನುದಾನ ಮಂಜೂರು ಮಾಡಿದ್ದಾರೆ ಎಂದು ಕೇಂದ್ರದ ಕಲ್ಲಿದ್ದಲು ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಆಮ್ಲಜನಕ ಲಭ್ಯವಿಲ್ಲದೆ ರೋಗಿಗಳಿಗೆ ಸಮಸ್ಯೆ ಎದುರಾಗುತ್ತಿದ್ದು, ಬೇರೆ ಸ್ಥಳಗಳಿಂದ ಆಮ್ಲಜನಕ ತರಿಸಿಕೊಳ್ಳಲು ಸಮಯದ ಅಭಾವ ಉಂಟಾಗುವ ಸಾಧ್ಯತೆ ಇರುವುದರಿಂದ ಆಯಾ ಆಸ್ಪತ್ರೆಗಳಲ್ಲೇ ಆಮ್ಲಜನಕ ಉತ್ಪಾದನಾ ಘಟಕ ಅಳವಡಿಸಿದಲ್ಲಿ ಸಮಯ ಹಾಗೂ ಸಾಗಣೆ ವೆಚ್ಚವೂ ಉಳಿತಾಯ ಆಗಲಿದೆ ಎಂದು ಹೇಳಿದ್ದಾರೆ.

ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪಿಸುವ ಸ್ಥಳಗಳು ಈ ರೀತಿ ಇವೆ.

ತುಮಕೂರು, ಜೇವರ್ಗಿ, ಚಾಮರಾಜನಗರ, ಭಾಲ್ಕಿ, ಹುಮನಾಬಾದ್, ಯಾದಗಿರಿ, ಚಿಕ್ಕಮಗಳೂರು, ರಾಮನಗರ, ಚಿಕ್ಕಬಳ್ಳಾಪುರ, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ, ಜಮಖಂಡಿ, ಯಲಹಂಕ, ಕುಂದಾಪುರ, ಬಸವಕಲ್ಯಾಣ, ಹಾವೇರಿ, ಗೋಕಾಕ, ಗಂಗಾವತಿ, ಶಿರಸಿ, ಭಟ್ಕಳ, ಚಿಕ್ಕೋಡಿ, ಕೋಲಾರ, ವಿಜಯಪುರ, ಸೇಡಂ, ಔರಾದ್, ಕೊಡಗು, ದಾವಣಗೆರೆ.

ಸಿ.ಎಂಗಳ ಜೊತೆ ಪ್ರಧಾನಿ ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ ಮತ್ತು ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ಕೋವಿಡ್ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿದರು.

ರಾಜ್ಯದಲ್ಲಿ ಕೋವಿಡ್ ವ್ಯಾಕ್ಸಿನೇಷನ್‌ಗಾಗಿ ಪ್ರತ್ಯೇಕ ಅಪ್ಲಿಕೇಶನ್ ಅಭಿವೃದ್ಧಿಪಡಿಸಲು ಅನುಮತಿ ಕೋರಿ ಬರೆದಿರುವ ಪತ್ರದ ಬಗ್ಗೆ ಪ್ರಧಾನ ಮಂತ್ರಿ ಮತ್ತು ಠಾಕ್ರೆ ನಡುವಿನ ಸಂಭಾಷಣೆ ವೇಳೆ ಚರ್ಚೆ ನಡೆಯಿತು.

ಕೊರೊನಾ ಸೋಂಕಿನ ಎರಡನೇ ಅಲೆ ಅತಿ ಹೆಚ್ಚು ಪರಿಣಾಮ ಬೀರಿರುವ ರಾಜ್ಯ ಮಹಾರಾಷ್ಟ್ರವಾಗಿದೆ. ದೇಶದಲ್ಲೇ ಹೆಚ್ಚು ಕೋವಿಡ್ ಪ್ರಕರಣಗಳು ಅಲ್ಲಿವೆ.

ಪ್ರಧಾನಿ ದೂರವಾಣಿ ಕರೆ ಬಳಿಕ ಟ್ವೀಟ್ ಮಾಡಿರುವ ಮಧ್ಯಪ್ರದೇಶ ಸಿಎಂ ಶಿವರಾಜ್ ಸಿಂಗ್ ಚೌಹಾಣ್, 'ರಾಜ್ಯದಲ್ಲಿ ನಿರಂತರವಾಗಿ ಕಡಿಮೆಯಾಗುತ್ತಿರುವ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತು ವೇಗವಾಗಿ ಹೆಚ್ಚುತ್ತಿರುವ ಚೇತರಿಕೆ ದರ'ದ ಕುರಿತು ಪ್ರಧಾನಿ ಮೋದಿ ಅವರಿಗೆ ಮಾಹಿತಿ ನೀಡಿದ್ದೇನೆ' ಎಂದು ತಿಳಿಸಿದ್ದಾರೆ. ಜನತಾ ಕರ್ಫ್ಯೂ ಸೇರಿದಂತೆ ವೈರಸ್ ವಿರುದ್ಧ ಹೋರಾಡಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಅವರು ಪ್ರಧಾನ ಮಂತ್ರಿಯೊಂದಿಗೆ ಚರ್ಚಿಸಿರುವುದಾಗಿ ಹೇಳಿದ್ದಾರೆ.



ತಾತ್ಕಾಲಿಕ ಪ್ರಾಣವಾಯು...

ದೆಹಲಿಯ ಹೊರವಲಯದ ಗೌತಮ ಬುದ್ಧ ನಗರ ಜಿಲ್ಲೆಯ ಬೊಟಾನಿಕಲ್ ಗಾರ್ಡನ್ ಮೆಟ್ರೊ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿಯೇ ಕೋವಿಡ್ ರೋಗಿಯೊಬ್ಬರಿಗೆ ಶನಿವಾರ ಆಮ್ಲಜನಕ ವ್ಯವಸ್ಥೆ ಕಲ್ಪಿಸಲಾಯಿತು –ಪಿಟಿಐ ಚಿತ್ರ

ಕೋವಿಡ್ ನಿರ್ವಹಣೆಗೆ ಎಚ್‌ಡಿಕೆ 10 ಸೂತ್ರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಆರೋಗ್ಯ ವ್ಯವಸ್ಥೆ, ಸರ್ಕಾರದ ಮೇಲೆ ತಡೆಯಲಾರದ ಒತ್ತಡ ಸೃಷ್ಟಿಯಾಗುತ್ತಿದೆ. ಈ ಕಾರಣಕ್ಕೆ ತಜ್ಞರು, ವೈದ್ಯರು, ಸಲಹೆಗಾರರ ಜೊತೆ ಚರ್ಚಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ರಾಜ್ಯ ಸರ್ಕಾರಕ್ಕೆ ಹತ್ತು ಸಲಹೆಗಳನ್ನು ನೀಡಿದ್ದಾರೆ.

'ಪ್ರತಿ ವಾರ್ಡ್, ಗ್ರಾಮ ಪಂಚಾಯಿತಿ ಮಟ್ಟದಲ್ಲಿ 3-4 ಫೀವರ್ ಕ್ಲಿನಿಕ್‌ಗಳನ್ನು ಆರಂಭಿಸಿದರೆ ಆಸ್ಪತ್ರೆಗಳ ಮೇಲಿನ ಒತ್ತಡವನ್ನು ನಿಯಂತ್ರಿಸಬಹುದು. ಸಿಬ್ಬಂದಿ ಕೊರತೆ ನೀಗಿಸಲು ಆಸ್ಪತ್ರೆಗಳು ಮತ್ತು ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ವೈದ್ಯಕೀಯೇತರ ಬೋಧನಾ ಸಿಬ್ಬಂದಿ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನದ ಸಿಬ್ಬಂದಿಯನ್ನು ನಿಯೋಜಿಸಬಹುದು. ಕಡಿಮೆ ರೋಗಲಕ್ಷಣಗಳಿರುವ ಸೋಂಕಿತರಿಗೆ ಆಯುಷ್ ಕಾಲೇಜುಗಳು ಮತ್ತು ಆಸ್ಪತ್ರೆಗಳು ಚಿಕಿತ್ಸೆ ನೀಡಬೇಕು' ಎಂದು ಅವರು ಹೇಳಿದ್ದಾರೆ.

'ವೈದ್ಯಕೀಯ ಕಾಲೇಜು, ಆಸ್ಪತ್ರೆಗಳು, ಹೋಟೆಲ್‌ಗಳನ್ನು ರೋಗಲಕ್ಷಣ ರಹಿತರ ಆರೈಕೆ ಮತ್ತು ನಿಗಾ ಕೇಂದ್ರಗಳಾಗಿ ಪರಿವರ್ತಿಸಬೇಕು. ಗಂಭೀರ ಸಮಸ್ಯೆ ಎದುರಿಸುತ್ತಿರುವವರಿಗೆ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಬೇಕು. ವಾರ್ಡ್, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರೋಗ್ಯ ಸೇವೆ ಒದಗಿಸುತ್ತಿರುವ ಕ್ಲಿನಿಕ್‌ಗಳು ಮತ್ತು ಆರೋಗ್ಯ ಸಿಬ್ಬಂದಿ ಮಾತ್ರ ಹಾಸಿಗೆ ನೀಡುವಂತೆ ವಾರ್ ರೂಂಗಳಿಗೆ ಶಿಫಾರಸು ಮಾಡಬೇಕು. ಆಸ್ಪತ್ರೆಗಳ ಮೇಲೆ ನಿಗಾ ವಹಿಸಲು ಐಎಎಸ್ ಮತ್ತು ಕೆಎಎಸ್ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

'ನಿರ್ದಿಷ್ಟ ಆಸ್ಪತ್ರೆಗೆ ನಿಯೋಜಿಸಲಾದ ಅಧಿಕಾರಿಯು ನಿತ್ಯ ತನ್ನ ಜವಾಬ್ದಾರಿಯ ಆಸ್ಪತ್ರೆಗೆ ಕಡ್ಡಾಯವಾಗಿ ಭೇಟಿ ನೀಡುವಂತೆ ತಾಕೀತು ಮಾಡಬೇಕು.ಆರೋಗ್ಯ ವ್ಯವಸ್ಥೆಯ ನೆರವಿಗೆ ಬರುವಂತೆಯುವಕರಿಗೆ, ಸ್ವಯಂಸೇವಕರಿಗೆ ಸರ್ಕಾರ ಕರೆ ನೀಡಬೇಕು. ಫೀವರ್ ಕ್ಲಿನಿಕ್‌ಗಳ ಹಂತದಲ್ಲಿಯೂ ಲಸಿಕೆ ಲಭ್ಯವಾಗುವಂತೆ ಮಾಡಬೇಕು. ಅಲ್ಲದೆ, ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಸಿಬ್ಬಂದಿಯಲ್ಲಿ ಅರ್ಹರನ್ನು ಸರ್ಕಾರ ತಕ್ಷಣ ಕಾಯಂಗೊಳಿಸಬೇಕು ಎಂದೂ ಕುಮಾರಸ್ವಾಮಿ ತಿಳಿಸಿದ್ದಾರೆ.

ಮಾರ್ಗಸೂಚಿ ಪಾಲಿಸದೇ ಅಂತ್ಯಸಂಸ್ಕಾರ: 21 ಸಾವು

ಜೈಪುರ (ಪಿಟಿಐ): ರಾಜಸ್ಥಾನದ ಸಿಕಾರ್ ಜಿಲ್ಲೆಯ ಖೀರ್ವಾ ಗ್ರಾಮದಲ್ಲಿ ಕೋವಿಡ್‌ನಿಂದ ಮೃತನಾದ ವ್ಯಕ್ತಿಯೊಬ್ಬನ ಅಂತ್ಯಸಂಸ್ಕಾರವನ್ನು ಕೋವಿಡ್ ಮಾರ್ಗಸೂಚಿ ಪಾಲಿಸದೇ ಅಂತ್ಯಸಂಸ್ಕಾರ ಮಾಡಿದ ಕೆಲವೇ ದಿನಗಳಲ್ಲಿ 21 ಮಂದಿ ಮೃತಪಟ್ಟಿದ್ದಾರೆ.

'ಕೆಲಸ ಹೋಗಲಿ, ಪ್ರಾಣ ಉಳಿದರೆ ಸಾಕು...'

ಒಂದನೇ ಪುಟದಿಂದ

'ಲಾಕ್‌ಡೌನ್ ಘೋಷಿಸಿರುವ ಕಾರಣ ಕೆಲಸವಿಲ್ಲದಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮೂರು ಹೊತ್ತು ಊಟ ಮಾಡುವುದೇ ಕಷ್ಟ. ಮನೆಯ ಬಾಡಿಗೆ ಕಟ್ಟಲು ಹಣ ಹೇಗೆ ಹೊಂದಿಸಬೇಕು. ಊರಿಗೆ ಹೋದರೆ ಸಣ್ಣಪುಟ್ಟ ಕೆಲಸವಾದರೂ ಸಿಗಬಹುದು. ಹೇಗೊ ತುತ್ತಿನ ಚೀಲ ತುಂಬಿಸಿಕೊಳ್ಳಬಹುದು. ಹೀಗಾಗಿ ಬೆಳಿಗ್ಗೆಯೇ ಬಸ್ ಹಿಡಿದು ರೈಲ್ವೆ ನಿಲ್ದಾಣಕ್ಕೆ ಬಂದಿದ್ದೇವೆ. ಇಲ್ಲಿ ನೋಡಿದರೆ ಟಿಕೆಟ್ ಇಲ್ಲ ಎನ್ನುತ್ತಿದ್ದಾರೆ. ಎಲ್ಲಾದರು ಮೂಲೆಯಲ್ಲಿ ಕೂತು ಹೇಗೋ ಊರು ಸೇರಿಕೊಳ್ಳುತ್ತೇವೆ ಎಂದರೂ ಕೇಳುತ್ತಿಲ್ಲ. ನಿಮಗ್ಯಾರಾದರೂ ಪರಿಚಯಸ್ಥರಿದ್ದರೆ ಹೇಳಿ ಎರಡು ಟಿಕೆಟ್ ಕೊಡಿಸಿ' ಎಂದು ಯಾದಗಿರಿಗೆ ಹೋಗಲು ನಿಂತಿದ್ದ ದಂಪತಿ ಅಳಲು ತೋಡಿಕೊಂಡರು.

'ನಾವು ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೆವು. ಲಾಕ್‌ಡೌನ್ ಕಾರಣ ಕಂಪನಿ ಮುಚ್ಚುವ ಸ್ಥಿತಿಗೆ ಬಂದಿದೆ. ಹೀಗಾಗಿ ಊರ ದಾರಿ ಹಿಡಿದಿದ್ದೇವೆ. ಊರಿನಲ್ಲಿ ಹೊಲ ಇದೆ. ಅದರಲ್ಲೇ ದುಡಿಮೆ ಮಾಡುತ್ತೇವೆ. ಇದನ್ನು ಬಿಟ್ಟರೆ ಈಗ ನಮ್ಮ ಎದುರು ಬೇರೆ ಯಾವ ದಾರಿಯೂ ಇಲ್ಲ' ಎಂದು ಧಾರವಾಡ ಹಾಗೂ ಬೆಳಗಾವಿಗೆ ಹೊರಟಿದ್ದ ಯುವಕರು ತಿಳಿಸಿದರು.

ರೈಲ್ವೆ ನಿಲ್ದಾಣದ ಎದುರು ಜನದಟ್ಟಣೆ: ಲಾಕ್‌ಡೌನ್ ಘೋಷಿಸಿದ ಬೆನ್ನಲ್ಲೇ ವಲಸೆ ಹಾಗೂ ಕೂಲಿ ಕಾರ್ಮಿಕರು ತಮ್ಮ ಊರುಗಳತ್ತ ಮುಖಮಾಡಿದ್ದಾರೆ. ಹೀಗಾಗಿ ಇಲ್ಲಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಎದುರು ಶನಿವಾರ ಜನದಟ್ಟಣೆ ಕಂಡುಬಂತು.

ಬಸ್ ಸಂಚಾರ ಸ್ತಬ್ಧವಾಗಿರುವ ಕಾರಣ ಅನೇಕರು ಕ್ಯಾಬ್ ಮಾಡಿಕೊಂಡು ತಂಡೋಪತಂಡವಾಗಿ ರೈಲು ನಿಲ್ದಾಣದತ್ತ ಬರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಚಿಕ್ಕ ಮಕ್ಕಳೊಂದಿಗೆ ಬಂದಿದ್ದ ಅನೇಕರು ನಿಲ್ದಾಣದ ಎದುರು ದೈಹಿಕ ಅಂತರ ಮರೆತು ಕುಳಿತಿದ್ದರು. ಕೆಲವರು ಮನೆಯಿಂದ ತಂದಿದ್ದ ಬುತ್ತಿ ಸವಿಯುತ್ತಿದ್ದರೆ, ಮತ್ತೆ ಹಲವರು ಸಾಮಾನು ತುಂಬಿದ್ದ ಮೂಟೆಗೆ ಒರಗಿ ನಿದ್ರೆಗೆ ಜಾರಿದ್ದ ದೃಶ್ಯಗಳೂ ಕಂಡುಬಂದವು.

ಅಸ್ಸಾಂ: ಸಿ.ಎಂ ಆಯ್ಕೆಗೆ ಸರಣಿ ಸಭೆ

ನಡ್ಡಾ, ಅಮಿತ್ ಶಾ ಭೇಟಿ ಮಾಡಿದ ಸೋನೊವಾಲ್, ಬಿಸ್ವ ಶರ್ಮಾ

ಜನತಂತ್ರದ ಹಬ್ಬ 2021

ನವದೆಹಲಿ (ಪಿಟಿಐ): ಅಸ್ಸಾಂನ ಮುಂದಿನ ಮುಖ್ಯಮಂತ್ರಿ ಯಾರು ಎಂಬ ಕುತೂಹಲ ಗರಿಗೆದರಿದ್ದು, ಹುದ್ದೆಯ ಆಕಾಂಕ್ಷಿಗಳಾದ ಸರ್ಬಾನಂದ ಸೋನೊವಾಲ್ ಮತ್ತು ಹಿಮಂತ ಬಿಸ್ವ ಶರ್ಮಾ ಅವರು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಗೃಹಸಚಿವ ಅಮಿತ್ ಶಾ ಅವರನ್ನು ಶನಿವಾರ ಭೇಟಿ ಮಾಡಿ ಮಾತುಕತೆ ನಡೆಸಿದರು.

ಬಿಜೆಪಿಯ ಅಸ್ಸಾಂ ಶಾಸಕಾಂಗ ಪಕ್ಷವು ಭಾನುವಾರ ಗುವಾಹಟಿಯಲ್ಲಿ ಸಭೆ ಸೇರುವ ಸಾಧ್ಯತೆಯಿದ್ದು, ಹೊಸ ಸರ್ಕಾರ ರಚನೆಗೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೆ ಅಲ್ಲಿ ಉತ್ತರಿಸಲಾಗುವುದು ಎಂದು ಸರಣಿ ಸಭೆಗಳ ಬಳಿಕ ಶರ್ಮಾ ತಿಳಿಸಿದರು.

ಅಸ್ಸಾಂನಲ್ಲಿ ನಾಯಕತ್ವದ ವಿಷಯದ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಸೋನೊವಾಲ್ ಮತ್ತು ಆರೋಗ್ಯ ಸಚಿವ ಶರ್ಮಾ ಇಬ್ಬರನ್ನು ಬಿಜೆಪಿ ಕೇಂದ್ರ ನಾಯಕರು ದೆಹಲಿಗೆ ಕರೆಸಿದ್ದರು.

ಅಸ್ಸಾಂನ ಈ ಇಬ್ಬರೂ ನಾಯಕರ ಜೊತೆ ನಡ್ಡಾ ಅವರ ನಿವಾಸದಲ್ಲಿ ಶಾ ಹಾಗೂ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸಮ್ಮುಖದಲ್ಲಿ ಮೂರು ಸುತ್ತಿನ ಮಾತುಕತೆಗಳು ನಡೆದವು.

ಮೊದಲೆರಡು ಸುತ್ತಿನ ಮಾತುಕತೆಯಲ್ಲಿ ಇಬ್ಬರೂ ನಾಯಕರನ್ನು ರಾಷ್ಟ್ರೀಯ ನಾಯಕರು ಪ್ರತ್ಯೇಕವಾಗಿ ಭೇಟಿ ಮಾಡಿದರು. ಮೂರನೇ ಸುತ್ತಿನ ಮಾತುಕತೆಯಲ್ಲಿ ಇಬ್ಬರೂ ಆಕಾಂಕ್ಷಿಗಳನ್ನು ಒಟ್ಟಿಗೆ ಕೂರಿಸಿ ಮಾತುಕತೆ ನಡೆಸಲಾಯಿತು.

ಅಸ್ಸಾಂನಲ್ಲಿ ಹೊಸ ಸರ್ಕಾರ ರಚನೆ ಹಾಗೂ ಮುಂದಿನ ಮುಖ್ಯಮಂತ್ರಿ ಆಯ್ಕೆ ಕುರಿತು ಮಾತುಕತೆ ನಡೆಸಲಾಯಿತು. ಸೋನೊವಾಲ್ ಮತ್ತು ಶರ್ಮಾ ಪ್ರತ್ಯೇಕವಾಗಿ ನಡ್ಡಾ ಅವರ ನಿವಾಸಕ್ಕೆ ಬಂದರೂ, ಸಭೆಗಳ ನಂತರ ಒಂದೇ ಕಾರಿನಲ್ಲಿ ಹೊರಟರು.

ಸೋನೊವಾಲ್ ಅವರು ಅಸ್ಸಾಂನ ಸ್ಥಳೀಯ ಸೋನೊವಾಲ್-ಕಚಾರಿ ಬುಡಕಟ್ಟು ಜನಾಂಗಕ್ಕೆ ಸೇರಿದ್ದಾರೆ. ಅಸ್ಸಾಂ ಬ್ರಾಹ್ಮಣರಾದ ಹಿಮಂತ ಬಿಸ್ವ ಶರ್ಮಾ ಅವರು ಈಶಾನ್ಯ ಪ್ರಜಾಸತ್ತಾತ್ಮಕ ಒಕ್ಕೂಟದ ಸಂಚಾಲಕರಾಗಿದ್ದಾರೆ. ಚುನಾವಣೆಗೂ ಮುನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಬಿಜೆಪಿ ಘೋಷಿಸಿರಲಿಲ್ಲ. 2016ರ ಚುನಾವಣೆಯಲ್ಲಿ ಸೋನೊವಾಲ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದ್ದ ಬಿಜೆಪಿ, ಅಧಿಕಾರಕ್ಕೆ ಬಂದಿತ್ತು.

126 ಸದಸ್ಯಬಲದ ಅಸ್ಸಾಂ ವಿಧಾನಸಭೆಯಲ್ಲಿ ಬಿಜೆಪಿ 60 ಕ್ಷೇತ್ರಗಳಲ್ಲಿ ಹಾಗೂ ಮಿತ್ರಪಕ್ಷಗಳಾದ ಎಜಿಪಿ 9 ಕ್ಷೇತ್ರಗಳಲ್ಲಿ, ಯುಪಿಪಿಎಲ್ 6 ಕ್ಷೇತ್ರಗಳಲ್ಲಿ ಜಯ ಸಾಧಿಸಿವೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಭಾನುವಾರದ ಪುರವಣಿ



ಕಣ್ಣಿಲ್ಲದ ಕಾಟಿಗೆ ಸಿಕ್ಕಿತು ಸೂರು
11

ಭಾನುವಾರ, 9 ಮೇ 2021



ಕಲ್ಯಾಣದ ಕೋಟೆಯೊಳಗೆ ಪಾಳುಬಿದ್ದ ದರ್ಬಾರ್ ಹಾಲ್‌ನ ನೋಟ ಚಿತ್ರ: ಲೇಖಕರದು

ಬಿರುಬಿಸಿಲಲ್ಲಿ ಕಲ್ಯಾಣವನ್ನು ಸುತ್ತಿದಾಗ ಬೀಸಣಿಕೆ ಗಾಳಿಯೇನೂ ಸುಳಿಯಲಿಲ್ಲ. ಆದರೆ, ಅಲ್ಲಿನ ಹಾದಿ–ಬೀದಿಯಲ್ಲಿ, ಜನರ ಮಾತಿನಲ್ಲಿ ಬಸವಣ್ಣ ಸುಳಿದಾಡಿದ. 'ಈಗೇನರೆ ಬಸವುರು ಬಂದು ಎಲೆಕ್ಷನ್ನಿಗೆ ನಿಂತಿದ್ದರ ಇವ್ರೇ ಸೋಲಿಸ್ತಿದ್ರು' ಎಂಬ ರಿಕ್ಷಾವಾಲಾನ ಮಾತಿನಲ್ಲಿ, 'ಬಸವಣ್ಣಾರು ಅದುಕ ಹೇಳ್ಯಾರ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ವಾಚ್‌ಮನ್ ಹೇಳಿಕೆಯಲ್ಲಿ ಏನೋನೋ ಅರ್ಥಗಳನ್ನೂ ಹೊಳೆಸಿದ...

ಕಲ್ಯಾಣದಲ್ಲಿ ಕಾಣಿಸಿದ್ದೇನು?

ಎಚ್. ಎಸ್. ಅನುಪಮಾ

ಬರಹಕ್ಕೆಂದು ಸೃಷ್ಟಿಸಿಕೊಳ್ಳುವ ಏಕಾಂತದ ಕ್ಷಣಗಳು ಒಂಟಿತನದ ಬಾವಿಯಲ್ಲಿ ಮುಳುಗಿಸುವ ಸಾಧ್ಯತೆಯಿದೆ. ಅದನ್ನು ಕಳೆದುಕೊಳ್ಳಲು ಬಸವಣ್ಣ ತುಳಿದ ದಾರಿ ಗುರುತುಗಳ ಊಹಿಸುತ್ತ, ಬಸವಣ್ಣನನ್ನು ಅರಸುತ್ತ ಕಲ್ಯಾಣ ಸುತ್ತಿದ್ದಾಯಿತು. ಈಗಿರುವ ಊರು ನಮ್ಮ ಕಲ್ಪನೆಯ ಕಲ್ಯಾಣದಂತಿರಲು ಸಾಧ್ಯವಿಲ್ಲ. ಒಂದಷ್ಟು ಪಳೆಯುಳಿಕೆಗಳಾದರೂ ಸಿಕ್ಕಾವೆಂಬ ಭರವಸೆಯಿಂದ ಹದಿನೈದು ತಾಸು ದೂರವಿರುವ ಬಸವ ಕಲ್ಯಾಣವನ್ನು ಹೋಳಿಹುಣ್ಣಿಮೆಯ ಹೊತ್ತಿಗೆ ತಲುಪಿದ್ದಾಯಿತು. ಆ ಪಾದದರಿವು ಇಲ್ಲಿದೆ:

1 ಫೋರ್ಟ್, ಕೋಟೆ ಅಂದಾಗ ಕಣ್ಕಣ್ಣು ಬಿಟ್ಟ ಸಾರಥಿಯು ಕಿಲ್ಲಾ ಅಂದದ್ದೇ ಭರ್ರನೆ 'ಕೋಟೆ ವಸ್ತುಸಂಗ್ರಹಾಲಯ'ದ ಎದುರು ತಂದು ನಿಲ್ಲಿಸಿದ. ದಾರಿಯುದ್ದಕ್ಕೂ ಹಳೆಯ ಶಾಸನ, ಶಿಲ್ಪ, ಕಂಬಗಳೆಲ್ಲ ಪಾಯಕಲ್ಲು, ಒಗೆಯುವ ಕಲ್ಲು, ಹಾಸುಕಲ್ಲುಗಳಾಗಿ ಕಂಡದ್ದು ನನ್ನ ಭ್ರಮೆಯೇ ತಿಳಿಯಲಿಲ್ಲ.

ವಸ್ತುಸಂಗ್ರಹಾಲಯದ ಒಳಹೊಕ್ಕರೆ ಅಂಗಾಂಗಗಳು ಛಿದ್ರಗೊಂಡ ಜಿನಬಿಂಬಗಳೂ ಶಿವಶಿವೆಯರೂ ವಿಷ್ಣುವಿನ ಅವತಾರಗಳೂ ಬೋದಿಗೆಯ ಆಧಾರ ಶಿಲ್ಪಗಳೂ ಅರೆಬರೆ ನಾಶವಾದ ಬಸ್ತಿ, ದೇಗುಲದ ಭಾಗಗಳೂ ಹರಡಿಕೊಂಡಿದ್ದವು. ಅವು ಎಲ್ಲಿ ದೊರೆತವು? ಯಾವ ಕಾಲಮಾನದವು ಎಂಬ ಮಾಹಿತಿ ಬರೆದಿರಲಿಲ್ಲ. ಎಲ್ಲೋ ಒಂದೆರಡು ಶಿಲ್ಪಗಳ ಎದುರು 'ನಾರಾಯಣಪುರ, 12ನೆಯ ಶತಮಾನ' ಎಂದು ಕಂಡದ್ದು ಬಿಟ್ಟರೆ ಉಳಿದಂತೆ ಸ್ಥಳ, ಕಾಲ ಬರೆದು ಅಂಟಿಸಿದ್ದ ತುಂಡುಗಳು ಕಿತ್ತು ಹೋಗಿದ್ದವು. ಲೋಹದ ತುಂಡುಗಳನ್ನು ಕಿಡಿಗೇಡಿಗಳು ಕಿತ್ತೊಯ್ದು ಮಾರಿಬಿಡುವರಂತೆ! ಹೊರಬರುವ ಮುನ್ನ 'ಮ್ಯೂಸಿಯಂ ಸೂಕ್ತ ನಿರ್ವಹಣೆಯಿಲ್ಲದೆ ಸೊರಗಿದೆ. ಅತ್ಯಮೂಲ್ಯ ಶಿಲ್ಪಗಳು ಶಿಥಿಲಗೊಂಡು, ನಿರ್ಲಕ್ಷ್ಯಕ್ಕೊಳಗಾಗಿವೆ'ಯೆಂದು ಸಂದರ್ಶಕರ ಪುಸ್ತಕದಲ್ಲಿ ಬರೆದುಬಿಟ್ಟೆ.

ನೂರಾರು ಎಕರೆ ವಿಸ್ತಾರದ ಹಲವು ಸುತ್ತಿನ ಕೋಟೆಯದು. ಆನೆಗಳು ಬಂದು ಒದ್ದರೂ ಬೀಳಿಸಲಾಗದ ಬೃಹತ್ ಬಾಗಿಲು, ದುಂಡನೆಯ ಕಲ್ಲುಗುಂಡುಗಳು, ಕೋಟೆಯ ಸುತ್ತಲೂ ಆಳ ಕಂದಕ, ಮದ್ದರೆಯುವ ಸ್ಥಳ, ಮದ್ದು ಸಂಗ್ರಹಿಸುವ ಕೋಣೆ, ರಾಣಿಯರ ಆವಾಸ, ಈಜುವ ಕೊಳ, ಬಣ್ಣದ ಕೊಳ (ರಂಗೀನ್ ಮಹಲ್), ಆನೆ ಕುದುರೆಗಳ ಲಾಯ, ದರ್ಬಾರ್, ಝರಿಯಂತೆ ನೀರು ಬೀಳುವ ಮೀನಿನಾಕಾರದ ಇಳಿಜಾರು, ರಾಣಿಯರ ಗ್ಯಾಲರಿ, ಬೃಹತ್ ಬೀಸುವ ಕಲ್ಲು, ಫಿರಂಗಿ ತೋಪುಗಳು, ಬಹುದೂರದವರೆಗಿನ ಹಾದಿ ತೋರಿಸುವ ಎತ್ತರದ ಬುರುಜುಗಳು, ದಾಖಲೆಗಳನ್ನಿಡುವ ಕೋಣೆ, ಸುರಂಗ, ಗರಡಿಮನೆ, ಮೊಹರಂಗೆ ಅಲಿ ದೇವರ ಕೂರಿಸುವ ಕಟ್ಟೆ - ಒಂದೇ ಎರಡೇ? ಶತಮಾನಗಟ್ಟಲೆ ಕಾಲಾವಧಿಯಲ್ಲಿ ಯೋಜನಾಬದ್ಧವಾಗಿ ಕಟ್ಟಿದ ನೂರಾರು ರಚನೆಗಳು ಅಲ್ಲಿವೆ. ಚಾಲುಕ್ಯರು, ಕಳಚೂರ್ಯ ಬಿಜ್ಜಳನ ಕಾಲದ ಕುರುಹುಗಳಾಗಿ ಲಾಂಛನಗಳು, ದೇವಾನುದೇವತೆಗಳು, ಪೌರಾಣಿಕ ಶಿಲ್ಪಗಳಿವೆ. ಆನಂತರ ಬಂದವರ ಸೇರಿಸುವ-ಒಡೆಯುವ-ಕೀಳುವ ಹುಮ್ಮಸ್ಸಿನ ಕುರುಹುಗಳು ಢಾಳಾಗಿ ಗೋಚರಿಸುತ್ತವೆ. ಕೋಟೆಯೊಳಗೆ ಮಂದಿರವೂ ಇದೆ, ಮಸೀದಿಯೂ ಇದೆ.

ಈಗ ಎಲ್ಲೆಡೆ ಕಸದ ರಾಶಿ. ನಾಕಾರು ಆಳೆತ್ತರದ ಕೋಟೆಗೋಡೆಯ ಮೇಲೆ ಹಳು, ಕಳೆ ಬೆಳೆದು ಶಿಥಿಲಗೊಳ್ಳುತ್ತಿದೆ. ಸುಣ್ಣಗಾರೆ ಉದುರಿ ಬೀಳುತ್ತಿದೆ. ಗೋಡೆ, ಕಂಬಗಳ ಮೇಲೆ ಇತಿಹಾಸ ನಿರ್ಮಾಪಕರು ತಮ್ಮ ಪ್ರಿಯರ, ಅಪ್ರಿಯರ ಹೆಸರುಗಳನ್ನು ಕೆತ್ತಿದ್ದಾರೆ. ಮಂದಿರ, ಮಸೀದಿಗಳಿಗೂ ಅವರು ವಿನಾಯ್ತಿ ನೀಡಿಲ್ಲ.

ಇದು ಬಸವಣ್ಣ ಭಂಡಾರಿಯಾಗಿ ಹೊಕ್ಕುಹೊರಟ ಕೋಟೆಯೇ? ಶರಣತತ್ತ್ವಗಳನ್ನು ಬೆಂಬಲಿಸಿ, ಬಳಿಕ ಪಟ್ಟಭದ್ರರ ಕಿವಿಕಚ್ಚುವಿಕೆಗೆ ಶರಣರನ್ನು ಬೆಂಬತ್ತಿ ಬಡಿದ ಬಿಜ್ಜಳನ ಕೋಟೆಯೇ? ಆನೆಗೆ ಶರಣರನ್ನು ಕಟ್ಟಿ ಎಳೆಸಿದ್ದು ಇಲ್ಲೇ? ಕಲ್ಪನೆಯ ಹಂಸವು ಗತವೆಂಬ ಆಗಸದಲ್ಲಿ ಕೋಟೆಯನ್ನು ಸುತ್ತಿಸುತ್ತಿ ಬಂದರೂ ಯಾವುದೂ ಸ್ಪಷ್ಟವಿಲ್ಲ. ಕೋಟೆ ಸುತ್ತಿಸಿಕೊಂಡು ಬಂದ ಮೇಲ್ವಿಚಾರಕ ಕಂ ಕಾವಲುಗಾರ ಕಂ ಕೆಲಸಗಾರ ಹೇಳಿದ: 'ಬಸವಣ್ಣಾರು ಅದುಕ ಹೇಳ್ಯಾರ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ!'

ಬಸವ, ಇದು ನಿನ್ನ ಸಂದೇಶವಾ?

2 ಮರುಬೆಳಿಗ್ಗೆ ಬೇಗನೆದ್ದು ಊರ ಹೊರಗಿದ್ದ ನುಲಿಯ ಚಂದಯ್ಯನ ಗವಿಯೆಡೆಗೆ ರಿಕ್ಷಾ ಹತ್ತಿ ಹೊರಟದ್ದಾಯಿತು. ಏಳೂವರೆಗಿಂತ ಮೊದಲು ಪ್ರವೇಶವಿಲ್ಲ. ಹಿಂದಿನಿಂದ ಹೋಗಬಹುದು ಎಂದು ಹಿರಿಯರಾದ ರಿಕ್ಷಾಭಾಯಿ ಹೇಳಿದರು. ದಾರಿಮೇಲೆ ಉರ್ದು-ಕನ್ನಡ-ಮರಾಠಿ ಮಿಶ್ರಿತ ಭಾಷೆಯಲ್ಲಿ ಮಾತುಕತೆ ನಡೆಯಿತು. ಮೂರು ಭಾಷೆಗಳ ಮಿಶ್ರಣದ ಕಲ್ಯಾಣಿಗರ ಮಾತು ಕೇಳುವುದೇ ಒಂದು ಸ್ವಾರಸ್ಯ. ಅಲ್ಲಿಯ ಕೋಮು ಸಾಮರಸ್ಯ ಹೇಗಾದರೂ ಇರಲಿ, ಭಾಷೆಗಳು ಮಾತ್ರ ಒಂದರೊಳಗೊಂದು ಬೆಸೆದುಕೊಂಡು ವಿಶಿಷ್ಟ ಕಲ್ಯಾಣಗನ್ನಡವನ್ನು ಸೃಷ್ಟಿಸಿರುವುದು ವಿಶೇಷ. ಅವರೊಂದು ಕುತೂಹಲಕರ ಪ್ರಸಂಗ ಹೇಳಿದರು.

ನುಲಿಯ ಚಂದಯ್ಯನ ಗುಹೆಯ ಬಳಿ ಉದ್ಯಾನವನ, ಸ್ಮಾರಕ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಅಲ್ಲೊಂದು ಬಾಬಾರ ದರ್ಗಾವೂ ಇತ್ತು. ಉದ್ಯಾನ ವಿಸ್ತರಿಸಿದರೆ ದರ್ಗಾಗೆ ಹಾನಿಯಾಗುವುದೆಂದು ಮುಸ್ಲಿಂ ಬಾಂಧವರು ದನಿಯೆತ್ತಿದರು. ಕೊಂಚ ಚಕಮಕಿ ಸಂಭವಿಸಿತು.

'ಪೈಲೆ ನಾವೂ ಅವುರು ಕೂಡೆ ದೀಪಳಿ, ಉರುಸ ಮಾಡತಿದ್ವಿ. ನಮ್ಗೆ ಪೀರ್ ಬ್ಯಾರೆ ಅಲ್ಲ, ಚಂದಯ್ಯ ಶರಣ್ರು ಬ್ಯಾರೆ ಅಲ್ಲ. ಈಗ ಪಾಲಿಟಿಕ್ಸ್ ಬಂದೈತಿ. ಬಸವುರು ನಮ್ಮರು ಮಾತ್ರ ಅಂತಾರ. ಆದ್ರೆ ಬಸವರು ಅವುರಿಗಷ್ಟ ಅಲ್ಲ, ನಮ್ಮೋರ್ ಭೀ ಹೌದು. ಅನಬವ ಮಂಟಪದಾಗೆ ನಮ್ಮೋರ್ ಭೀ ಇದ್ರು. ಈಗೂ ಅಲಿಘರ್ಲಿಂದ ನಂ ಜನಾ ಇಲ್ಲೀಗ್ ಬಂದು ಬಸವರ ಬಗ್ಗೆ ತಿಳಕಂಡ್ ಹೋಕ್ಕಾರ. ಹೀಂಗಿರತ ಪಾಲಿಟಿಕ್ಸ್ ಬಂದು ದರ್ಗಾ ಬೀಳಸಾಕ ಜೆಸಿಬಿ ತಂದ್ರು. ಆದ್ರ ಅದರಾಗ ಬಿಜಲಿ ಹರದು ಡ್ರೈವರಗ ಕರೆಂಟು ಹೊಡೀತು. ಅಂವಾ ಪರೇಶಾನ್ ಆದ. ಆಗೇ ಚಲಾನಾ ಹೋತಾ ನೈ ಅಂದು ಕಾಮ್ ಚೋಡ್ಕೆ ಭಾಗಾ. ಹೀಂಗಿರತ ಡೀಸಿ ಸಾಹೇಬ್ ಏಕ್ ಸಪನ ದೇಖೆ. ಕನಸಿನ್ಯಾಗ ಬಸವರು ಬಂದು 'ನಾ ಬ್ಯಾರೇ ಅಲ್ಲ, ಆ ಪೀರ ಬ್ಯಾರೇ ಅಲ್ಲ, ಯಲ್ಲಾ ಕೆಲ್ಸಾ ನಿಲುಸ್ರಿ' ಅಂತ ಜೋರು ಮಾಡಿದುರಂತ. ವ್ಹಾಂ ದೇಖೊ, ದೈನೇಕ್ಕ, ದರಗಾ ಅದ ಅಲ್ಲಿ.'


ಒಬ್ಬ ಅಧಿಕಾರಿಗೆ ಕನಸು ಬಿದ್ದು ಹೀಗೂ ಆಗುವುದಾದರೆ ಇಂಥ ಕನಸುಗಳು ಬೀಳುತ್ತಲೇ ಇರಲಿ, ಓ ದೇವರೇ ಎಂದುಕೊಳ್ಳುವಾಗ 'ಈಗೇನರೆ ಬಸವುರು ಬಂದು ಎಲೆಕ್ಷನ್ನಿಗೆ ನಿಂತಿದ್ದರ ಇವ್ರೇ ಸೋಲಿಸ್ತಿದ್ರು ಮೇಡಂ' ಎಂದು ಬೆಚ್ಚಿ ಬೀಳಿಸಿದರು. ಆಧುನಿಕ ಬಿಜ್ಜಳರನ್ನು ನಾವು ಸೃಷ್ಟಿಸುತ್ತಿರುವುದು ನಿಜವೇ. ಗುಹೆಯ ಹಿಂಭಾಗದಲ್ಲಿಳಿಸಿದ ಅವರೊಡನೆ ದರ್ಗಾ ಕಂಡು ಪೀರನನ್ನೂ ಚಂದಯ್ಯನನ್ನೂ ಬಂಧಿಸಿರಬಹುದಾದ ನೂಲು ಯಾವುದೆಂದು ಯೋಚಿಸುತ್ತ ಗವಿಯ ಕಡೆ ಹೋಗುವಾಗ ಕಾಗೆ ಉಲಿಯಿತು: 'ಇವ ನಮ್ಮವ ಇವ ನಮ್ಮವ ಎನ್ನುವ ಪೀರನ ಅನುಯಾಯಿಗಳ ಎದೆಯಲ್ಲಿ ಇದ್ದಾನೆ ಬಸವಣ್ಣ'.

3 ಬಸವಣ್ಣನ ಅರಿವಿನ ಮನೆ ಎಲ್ಲೆಂದು ಕೇಳಿ ಅತ್ತ ಹೊರಟದ್ದಾಯಿತು. ಬೃಹತ್ ಮೈದಾನದಂತಹ ಆವರಣ ಪ್ರವೇಶಿಸುವಾಗ ಹಿಂದಿಯಲ್ಲಿ ಬರೆದ 'ಬಾಬಾಸಾಹೇಬ್' ಫಲಕ ಗಮನ ಸೆಳೆಯಿತು. ಅಲ್ಲೊಂದು ಸಮಾಧಿಯಿದೆ. ಸೊಲ್ಲಾಪುರದ ಬಾಬಾಸಾಹೇಬ್ ಮಲ್ಲಪ್ಪ ವಾರದ್ ಅವರದು. ಸ್ವಾತಂತ್ರ್ಯಾನಂತರ ಕಲ್ಯಾಣವು ಬರಿಯ ಒಂದು ಹೋಬಳಿಯಾಗಿ, ದೊಡ್ಡ ಹಳ್ಳಿಯಾಗಿ, ತನ್ನ ಗತವನ್ನು ಊಹಿಸಿಕೊಳ್ಳಲಾಗದ ವಿಸ್ಮೃತಿಯಲ್ಲಿದ್ದಾಗ ಒಂದೆಡೆ ಫ.ಗು. ಹಳಕಟ್ಟಿಯವರು ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿ ವಚನಕಾಲದ ಅರಿವನ್ನು ಕಟ್ಟಿಕೊಟ್ಟರೆ ಇನ್ನೊಂದೆಡೆ ಬಾಬಾ ಮಲ್ಲಪ್ಪ ವಾರದ್ ಅವರು ಕಲ್ಯಾಣವೆಂಬ ಊರೇ ಬಸವಣ್ಣನ ಕಲ್ಯಾಣವೆನ್ನುವುದನ್ನು ಜನರಿಗೆ ನೆನಪಿಸಿಕೊಟ್ಟರು.

ಮುಂದಿನ ಪುಟಕ್ಕೆ...



ಗುಡ್ಡದ ಮೇಲಿನ ಕೋಟೆಗೆ ಪ್ರವೇಶದ್ವಾರ ಚಿತ್ರ: ವಿಶ್ವನಾಥ ಸುವರ್ಣ



ಕಲೆ: ಗುರು ನಾವಳ್ಳಿ

ಶಾನಭಾಗರ ಮಳಿಗೆ ಪುಸ್ತಕ ಗಣಿ ನಮಗೆ

ರಾಮಚಂದ್ರ ಗುಹಾ

ನಾನು ಮೊದಲ ಸಲ ಪ್ರೀಮಿಯರ್ ಪುಸ್ತಕದಂಗಡಿಗೆ ಹೋದದ್ದು 1979ರಲ್ಲಿ. ನನಗಾಗ ಇಪ್ಪತ್ತು ಮೀರಿದ ಹರೆಯ. ಮುಂದಿನ ಮೂರು ದಶಕಗಳ ಕಾಲ ಆ ಅಂಗಡಿ ಮತ್ತು ಅದರ ಒಡೆಯ ನನ್ನ ಬದುಕಿನ ಅನಿವಾರ್ಯ ಭಾಗವೇ ಆಗಿಬಿಟ್ಟರು. ಮಂಗಳವಾರ ಮುಂಜಾನೆ ಅವರು ನಿಧನರಾದದ್ದು ತಿಳಿದು ಕಣ್ಣೀರಿಟ್ಟೆ.

ಇಪ್ಪತ್ತನಾಲ್ಕು ತಾಸುಗಳ ನಂತರ ಮನಸ್ಸು ತಿಳಿ ಮಾಡಿಕೊಂಡು ಈ ಲೇಖನ ಬರೆದೆ. ಬೆಂಗಳೂರಿಗೆ ಅವರ ರಚನಾತ್ಮಕ ಕೊಡುಗೆಯನ್ನು ಮೆಲುಕು ಹಾಕಿದೆ. ಇಂಗ್ಲಿಷ್ ಪುಸ್ತಕಗಳ ಖರೀದಿಸಿ ಓದುವ ಬೆಂಗಳೂರು ನಿವಾಸಿಗಳ ಆಸಕ್ತಿಗಳು ಮತ್ತು ಗೀಳುಗಳನ್ನು ಪೊರೆದು ಪೋಷಿಸಿದ್ದು ಟಿ.ಎಸ್. ಶಾನಭಾಗರು ಮತ್ತು ಅವರ ಪ್ರೀಮಿಯರ್ ಪುಸ್ತಕದಂಗಡಿ. ಅವರ ಸಂಗ್ರಹದ ಸಿರಿವಂತಿಕೆ ದಂಗುಬಡಿಸುವಂತಹುದಾಗಿತ್ತು. ಅವರ ಬೆಚ್ಚನೆಯ ಸ್ನೇಹ ಮತ್ತು ಧಾರಾಳ ಸ್ವಭಾವಗಳು ಓದುಗರನ್ನು ಗೆದ್ದಿದ್ದವು.

ಪ್ರೀಮಿಯರ್ ಮತ್ತು ಅದರ ಒಡೆಯನ ಜೊತೆಗಿನ ನನ್ನ ಸಂಬಂಧ ಕುರಿತು ಬೇರೆಡೆ ವಿಸ್ತೃತವಾಗಿ ಬರೆದಿದ್ದೇನೆ. ಇಲ್ಲಿ ಬೇರೆಯವರ ನೆನಪುಗಳನ್ನು ಹೆಕ್ಕಿ ನೀಡುತ್ತಿದ್ದೇನೆ. ಕೊಂಕಣ ತೀರದಿಂದ ಹೊಸದಾಗಿ ಬೆಂಗಳೂರಿಗೆ ಕಾಲಿಟ್ಟ ದಿನಗಳಲ್ಲಿ ಹದಿನೆಂಟರ ಹರೆಯದ ನಾಚಿಕೆಯ ಸ್ವಭಾವದ ತಾವು ಪ್ರೀಮಿಯರ್‌ಗೆ ನೀಡಿದ ಮೊದಲ ಭೇಟಿಯನ್ನು ಅಚ್ಚುಮೆಚ್ಚಿನಿಂದ ನೆನೆಯುತ್ತಾರೆ ಕನ್ನಡ ಕಾದಂಬರಿಕಾರ ವಿವೇಕ ಶಾನಭಾಗ. ಆಗ ಬಹಳ ಇಷ್ಟಪಟ್ಟು ಪುಸ್ತಕವೊಂದನ್ನು ಕೈಗೆತ್ತಿಕೊಂಡು ಪುಟ ತಿರುವಿ ನಿಟ್ಟುಸಿರಿಟ್ಟು ಅದನ್ನು ಕೆಳಗಿರಿಸುತ್ತಿದ್ದ ವಿವೇಕರನ್ನು ಗಮನಿಸಿದ ಹಿರಿಯ ಶಾನಭಾಗರು ಸಹಾನುಭೂತಿಯ ದನಿಯಲ್ಲಿ ಹೇಳುತ್ತಿದ್ದರಂತೆ- 'ಪುಸ್ತಕ ತೆಗೆದುಕೊಂಡು ಹೋಗಿ ಓದಿ, ನಾಳೆ ವಾಪಸು ತಾ'.

> ಇಂಗ್ಲಿಷ್ ಪುಸ್ತಕಗಳನ್ನು ಖರೀದಿಸಿ ಓದುವ ಬೆಂಗಳೂರು ನಿವಾಸಿಗಳ ಆಸಕ್ತಿಗಳು ಮತ್ತು ಗೀಳುಗಳನ್ನು ಪೊರೆದು ಪೋಷಿಸಿದ್ದು ಟಿ.ಎಸ್. ಶಾನಭಾಗರು ಮತ್ತು ಅವರ ಪ್ರೀಮಿಯರ್ ಪುಸ್ತಕದಂಗಡಿ. ಮೊನ್ನೆ ಅವರು ತೀರಿಹೋದಾಗ ಅವರ ಒಡನಾಟದ ನೆನಪುಗಳು ಸುರುಳಿ ಸುರುಳಿಯಾಗಿ ಬಿಚ್ಚಿಕೊಂಡವು...

ಆನಂತರ ತಾವು ಬಯಸಿದ ಪುಸ್ತಕಗಳನ್ನು ಖರೀದಿಸುವ ಶಕ್ತಿ ಬಂದಿತ್ತು ವಿವೇಕರಿಗೆ. ದೇಶದ ಇತರೆಡೆಗಳಲ್ಲಿ ಸಿಗದೆ ಇರುವಂತಹ ಪುಸ್ತಕಗಳನ್ನು ತರಿಸಿಕೊಡುವ ಶಾನಭಾಗರ ಸಾಮರ್ಥ್ಯವನ್ನು ಗೌರವಿಸಿದ್ದರು. ವಿಶೇಷವಾಗಿ ಐಸಾಕ್ ಬಾಶೆವಿಕ್ ಸಿಂಗರ್ ಅವರ ಕತೆ ಕಾದಂಬರಿಗಳ ಗೀಳು ಬೆಳೆಸಿಕೊಂಡಿದ್ದರು ವಿವೇಕ. ಸಿಂಗರ್ ಬರೆದ ಮೂವತ್ತು ಪುಸ್ತಕಗಳ ಪೈಕಿ ಬಹುಪಾಲನ್ನು ವಿವೇಕ ಒಂದರ ನಂತರ ಮತ್ತೊಂದರಂತೆ ಖರೀದಿಸಿದ್ದು ಪ್ರೀಮಿಯರ್‌ನಲ್ಲೇ. ಅಮೆಜಾನ್‌ನಂತಹ ಖರೀದಿ ವ್ಯವಸ್ಥೆ ಇಲ್ಲದ ದಿನಗಳಲ್ಲಿ ಪ್ರತಿಯೊಬ್ಬ ಗ್ರಾಹಕನ ಅಗತ್ಯಗಳನ್ನು ಪೂರೈಸುತ್ತಿದ್ದರು ಶಾನಭಾಗರು.

ಪ್ರೀಮಿಯರ್‌ಗೆ ಕಾಲಿಡುವ ಪ್ರತಿಯೊಬ್ಬ ಓದುಗನ ಆಸಕ್ತಿ ಅಭಿರುಚಿಯನ್ನು ಎರಡನೆಯ ಭೇಟಿಗೇ ಅರಿತುಬಿಡುತ್ತಿದ್ದರು ಶಾನಭಾಗರು. ಕಂಪ್ಯೂಟರಿಗಿಂತ ಮಿಗಿಲಾಗಿ ನೆನಪಿಟ್ಟು ಅಂತಹ ಪುಸ್ತಕಗಳನ್ನು ಅವರಿಗೆ ನೀಡುತ್ತಿದ್ದರು.

'ಶಾನಭಾಗರದು ಬೆರಗುಗೊಳಿಸುವ ಪುಸ್ತಕ ಸಂಗ್ರಹ. ಕಾಲಿಟ್ಟಲ್ಲೆಲ್ಲ ಕಿಕ್ಕಿರಿದ ಪುಸ್ತಕಗಳ ನಡುವೆ ನಡೆಯುವುದೇ ದುಸ್ತರ ಎಂಬಷ್ಟು ದಟ್ಟ. ನಾಚಿಕೆ ಸ್ವಭಾವದ ಈ ವ್ಯಕ್ತಿ ನನ್ನ ಆಸಕ್ತಿಗಳನ್ನು ಬಲು ಬೇಗ ಗ್ರಹಿಸಿದ್ದರು. ನಾನು ಹೋದಾಗಲೆಲ್ಲ ರಾಶಿ ಪುಸ್ತಕಗಳ ನಡುವಿನಿಂದ ಹೊರಗೆಳೆದ ಹೊತ್ತಿಗೆಯೊಂದನ್ನು ಕೈಗಿಡುತ್ತಿದ್ದರು. ನಿಮಗೆ ಇಷ್ಟವಾದೀತು ಎನ್ನುತ್ತಿದ್ದರು. ಹೀಗೆ ಅವರು ಕೈಗಿಡುತ್ತಿದ್ದ ಪುಸ್ತಕಗಳು ನನಗೆ ನಿಜವಾಗಿಯೂ ಇಷ್ಟವಾಗುತ್ತಿದ್ದವು. ಇಂತಹುದೇ ಅನುಭವವನ್ನು ಹಲವಾರು ಮಂದಿ ನನ್ನ ಬಳಿ ಹೇಳಿಕೊಂಡಿದ್ದಾರೆ' ಎಂದು ಜೀವಶಾಸ್ತ್ರಜ್ಞ ವಿದ್ಯಾನಂದ ನಂಜುಂಡಯ್ಯ ನನಗೆ ಬರೆದು ತಿಳಿಸಿದ್ದಾರೆ.

ಶಾನಭಾಗರ ಸಾವನ್ನು ಕುರಿತು ನಾನು ಟ್ವೀಟ್ ಮಾಡಿದಾಗ ಹಲವಾರು ಮಂದಿ ತಮ್ಮ ನೆನಪುಗಳನ್ನು ಹಂಚಿಕೊಂಡರು. ಅಂಕಲ್, ಜೇಬಲ್ಲಿ ಸಾಕಷ್ಟು ಹಣವಿಲ್ಲ, ಪುಸ್ತಕವನ್ನು ನಂತರ ಯಾವಾಗಲಾದರೂ ಖರೀದಿಸುತ್ತೇನೆ ಎಂದರೆ, ಭಾರೀ ರಿಯಾಯಿತಿ ನೀಡುತ್ತಿದ್ದರು. ಪುಸ್ತಕ ಒಯ್ಯಿ, ಸಂಬಳ ಬಂದಾಗ ಹಣ ಕೊಡುವೆಯಂತೆ ಎನ್ನುತ್ತಿದ್ದರು. ದೊಡ್ಡ ಮನುಷ್ಯ ಎಂದು ಒಬ್ಬಾತ ನೆನೆದಿದ್ದರು.

ತಮ್ಮ 'ಸನ್ನಿ ಡೇಸ್' ಪುಸ್ತಕಕ್ಕೆ ಹಸ್ತಾಕ್ಷರ ಹಾಕಿಕೊಡಲು ಸುನಿಲ್ ಗವಾಸ್ಕರ್ ಬರಲಿದ್ದಾರೆಂದು ಫೋನ್ ಮಾಡಿ ನಮಗೆ ತಿಳಿಸಿದ್ದರು ಶಾನಭಾಗರು. ಲಿಟ್ಲ್ ಮಾಸ್ಟರ್ ಹಸ್ತಾಕ್ಷರದ ಆ ಪುಸ್ತಕ ಈಗಲೂ ನನ್ನ ಬಳಿಯಿದೆ. ಥ್ಯಾಂಕ್ಯೂ ಶಾನಭಾಗರೇ ಎಂದು ಮತ್ತೊಬ್ಬರು ಪ್ರತಿಕ್ರಿಯಿಸಿದ್ದರು. ನಿಜಕ್ಕೂ ಅಚ್ಚುಮೆಚ್ಚಿನ ನೆನಪುಗಳು. ಮ್ಯಾನೇಜ್ಮೆಂಟ್ ವಿದ್ಯಾರ್ಥಿಯಾಗಿದ್ದ ನಾನು, ಶಾನಭಾಗರು ಶಿಫಾರಸು ಮಾಡಿದ ಪುಸ್ತಕಗಳನ್ನೇ ಓದಿ ಬೆಳೆದವನು. ಸಾಧು ಸ್ವಭಾವದ ಆಕರ್ಷಕವೂ ಸ್ನೇಹಪರವೂ ಆಗಿದ್ದ ವ್ಯಕ್ತಿತ್ವ ಅವರದು. ಬೆಂಗಳೂರಿಗರ ಓದುವ ಹವ್ಯಾಸಕ್ಕೆ ಸ್ಫೂರ್ತಿ ತುಂಬಿದವರು. ನಾನು ನನ್ನ ತಂದೆ ಹಲವು ತಾಸುಗಳ ಕಾಲ ಪುಸ್ತಕಗಳ ತಡವಿ ಹುಡುಕಿ ತೆರೆದು, ಪುಟ ತಿರುವಿ ನೋಡಿದ ನಂತರ ಒಂದೇ ಪುಸ್ತಕ ಖರೀದಿಸಿ ಮನೆಗೆ ಮರಳಿ ಓದಿನ ಸುಖ ಹಂಚಿಕೊಳ್ಳುತ್ತಿದ್ದೆವು. ತಂದೆಯ ಕೈಲಿ ಓಡಾಟ ಸಾಧ್ಯವಾಗದೆ ಹೋದಾಗ ನಾನೊಬ್ಬನೇ ಹೋಗಿ ಬರುತ್ತಿದ್ದೆ ಎಂಬುದು ಟ್ವಿಟರ್‌ನಲ್ಲಿ ನಮೂದಾದ ಮತ್ತೊಂದು ನೆನಪು.

ಪ್ರೀಮಿಯರ್ ಪುಸ್ತಕ ಭಂಡಾರದ್ದು ಸಾಹಿತ್ಯ, ವಿಜ್ಞಾನ, ಪ್ರವಾಸ, ಕ್ರೀಡೆ, ಮ್ಯಾನೇಜ್ಮೆಂಟ್ ಮುಂತಾದ ಹತ್ತು ಹಲವು ವಿಷಯ ವಸ್ತು ವ್ಯಾಪ್ತಿ. ಪ್ರಾಯಶಃ ದೇಶದ ಇಂತಹ ಯಾವುದೇ ಪುಸ್ತಕದ ಅಂಗಡಿಗೆ ಮಿಗಿಲಾದದ್ದು.

ಮುಂದಿನ ಪುಟಕ್ಕೆ...

ಬ್ಯಾಸಿಗಿ ಹೊಡೆದದ ಬಿಸಿಲಿನಾ ಡೇರೆ...

ಅರ್ಪಣಾ ಎಚ್.ಎಸ್.

ಸ್ನಾನ ಮಾಡೋಕೆ ನೀರು ಕಾಯಿಸೋದು ಸಾಮಾನ್ಯವಾಗಿ ಎಲ್ಲರೂ ಮಾಡುವ ಕೆಲಸ. ಸ್ನಾನ ಮಾಡೋಕೆ ನೀರು ತಣ್ಣಗೆ ಮಾಡಿಕೊಳ್ಳೋದು ಮಾತ್ರ ಹೈದ್ರಾಬಾದ್ ವಿಶೇಷ. ಇದರ ಅನುಭವ ಬೇಕೆಂದರೆ ನೀವು ಬಿರು ಬೇಸಿಗೆ ಕಾಲದಲ್ಲಿ ಹೈದ್ರಾಬಾದಿಗೆ ಭೇಟಿ ನೀಡಬೇಕು. ಸುಡು ಸುಡುವ ತಾಪಕ್ಕೆ ಬಸವಳಿದು ತಣ್ಣಗೆ ಸ್ನಾನ ಮಾಡೋಣ ಅಂದುಕೊಂಡರೆ ಧಗಧಗಿಸುವ ಸೂರ್ಯ ಬಿಟ್ಟಿಯಾಗಿ ನೀರು ಕಾಸಿ, ಬೇಕಿಲ್ಲದ ಕಾಲದಲ್ಲಿ 24 ಗಂಟೆಯೂ ಬಿಸಿ ನೀರಿನ ಸೌಲಭ್ಯ ಒದಗಿಸಿರುತ್ತಾನೆ. ಹೀಗಾಗಿ, ಹೈದ್ರಾಬಾದಿನ ಬಹುತೇಕ ಜನ ನೀರು ಬಕೆಟಿಗೆ ಬಿಟ್ಟು ತಣ್ಣಗಾಗುವುದಕ್ಕೆ ಕಾಯುತ್ತಾರೆ ಅಥವಾ ಇನ್ನೂ ಕೊಂಚ ಹೆಚ್ಚು ತಣ್ಣಗೆ ಬೇಕು ಎಂದಾದರೆ ಒಂದೆರಡು ಮಂಜುಗಡ್ಡೆಯ ತುಂಡು ನೀರಿಗೆ ಸೇರಿಸುತ್ತಾರೆ. ಇದು ಯಾವುದೇ ಉತ್ಪ್ರೇಕ್ಷೆಯ ಮಾತಲ್ಲ. ಹೀಗೆ ಮಾಡದೇ ಇದ್ದಲ್ಲಿ, ಸ್ನಾನ ಮುಗಿಸಿ ಹೊರಬಂದಾಗ ಮೈ ಒದ್ದೆಯಾಗಿರುವುದು ನೀರಿನಿಂದಲೋ ಬೆವರಿನಿಂದಲೋ ಎಂಬ ಪರಿಹಾರವಾಗದ ಗೊಂದಲಕ್ಕೆ ಒಳಗಾಗಬೇಕಾಗುತ್ತದೆ.

ಅಂತೂ ನೀರು ತಣ್ಣಗೆ ಮಾಡಿಕೊಂಡು ಸ್ನಾನಮಾಡಿ, ಮೈ ಒರೆಸಿಕೊಳ್ಳದೆ ನೀರನ್ನು ಹಾಗೆಯೇ ಆರಲು ಬಿಟ್ಟು, ಒಂದುಕ್ಷಣ ತಂಪಿನ ಅನುಭವ ಹೊಂದಿದರೂ ಮರುಕ್ಷಣವೇ ಮತ್ತೊಂದು ಘೋರ ಕಾದಿರುತ್ತದೆ. ಹಾಕಿಕೊಳ್ಳಲು ಎತ್ತಿಕೊಳ್ಳುವ ಬಟ್ಟೆ ಆಗಷ್ಟೇ ಹಂಚಿನಿಂದ ತೆಗೆದ ಗರಿಗರಿ ದೋಸೆಯಷ್ಟೇ ಬಿಸಿಯಾಗಿರುತ್ತದೆ. ಇದಕ್ಕೂ ಒಂದು ಪರಿಹಾರವಿದೆ. ಸ್ನಾನ ಮುಗಿಸಿ ಬಂದು ವಾರ್ಡ್ ರೋಬಿನಿಂದ ಬಟ್ಟೆ ತೆಗೆದುಕೊಳ್ಳುವ ಬದಲು ಫ್ರಿಜ್‌ನಿಂದ ತೆಗೆದು ಹಾಕಿಕೊಳ್ಳಬೇಕು. ಸ್ನಾನಕ್ಕೆ ಹೋಗುವ ಮೊದಲು ಹಾಕಿಕೊಳ್ಳಬೇಕಾದ ಬಟ್ಟೆಯನ್ನು ಫ್ರಿಜ್ ಒಳಗಿಟ್ಟಿರಬೇಕು ಅಷ್ಟೇ.



ಕಲೆ: ರಾಮಕೃಷ್ಣ ಸಿದ್ರಪಾಲ

> ಹೈದ್ರಾಬಾದ್‌ನಿಂದ ಬಂದ ಬೇಸಿಗೆಯ ಈ ಚಿತ್ರಿಕೆಗಳನ್ನು ಬಿಡಿಸಿ ನೋಡಿದರೆ ನಮ್ಮೂರಿನವೂ ಎನಿಸಿಬಿಟ್ಟಾವು. ಆದರೂ ಬಿಸಿಲಿನ ಡೇರೆ ತಲೆಎತ್ತಿ ನಿಂತ ಮಿನಾರ್ ನಗರಿಯ ಬೇಸಿಗೆಯ ಸೊಬಗು ಬೇರೆಯೇ ಬಿಡಿ!

ಹಾಗೆ ನೋಡಿದರೆ, ನನಗೆ ಬಿಸಿಲು, ಸೆಕೆ, ಬೆವರು ಹೊಸದೇನೂ ಅಲ್ಲ. ಕರಾವಳಿಯಲ್ಲಿ ಬೆಳೆದ ಯಾರಿಗೇ ಆದರೂ ಸೆಕೆ ಎನ್ನುವುದು ಅನುದಿನದ ಸಂಗಾತಿ. ಹೊರಗೆ ಧಾರಾಕಾರ ಮಳೆ ಸುರಿಯುತ್ತಿದ್ದರೂ ಒಳಗೆ ಕೂತು ಬೆವರಲೇ ಬೇಕು. ಚಳಿಗಾಲ ಎನ್ನುವುದು ಕೇವಲ ಪಠ್ಯಪುಸ್ತಕದಲ್ಲಿ ಓದಿ ಗೊತ್ತೇ ಹೊರತು, ಕರಾವಳಿಯವರ ಪಾಲಿಗೆ ಇರುವುದು ಬೇಸಿಗೆಕಾಲ ಮತ್ತು ಮಳೆಗಾಲ ಮಾತ್ರ. ಆದರೂ, ಬಯಲುಸೀಮೆಯ ತಾಪಮಾನಕ್ಕೂ, ಕರಾವಳಿಯ ತಾಪಮಾನಕ್ಕೂ ಅಜಗಜಾಂತರ ಇದೆ. ಬಯಲುಸೀಮೆಯದ್ದು ಸುಡುವ ಬಿಸಿಲು, ಕರಾವಳಿಯದ್ದು ಬೆವರು ಹಿಂಡಿ ತೆಗೆಯುವ ಬಿಸಿಲು. ಕರಾವಳಿಯ ಆರ್ದ್ರ ಹವಾಮಾನದಿಂದಾಗಿ ಉಷ್ಣತೆ ಹೆಚ್ಚೆನಿಸಿದರೂ ಬೆವರಿ ಬೆವರಿ ರೇಜಿಗೆ ಬಂದರೂ ಸುಡುವಂತಹ ಬಿಸಿ ಗಾಳಿಯ ಕಾಟ ಅಷ್ಟಿಲ್ಲ. ಹೈದ್ರಾಬಾದನ್ನು ಆವರಿಸಿರುವ ಕಲ್ಲು ಬಂಡೆಗಳು ಕಾದ ಹಂಚಿನಂತಾದಾಗ, ಆ ಒಣಶಾಖಕ್ಕೆ ಇಡೀ ನಗರವೇ ಓವನ್ನಿನೊಳಗೆ ಇರುವಂತೆ ಭಾಸವಾಗುತ್ತದೆ. ಜನರೆಲ್ಲಾ, ಮರಳು ಬಿಸಿ ಮಾಡಿ ಹುರಿದ ಬಿಸಿ ಬಿಸಿ ಕಡ್ಲೆಕಾಯಿಯಂತಾಗಿರುತ್ತಾರೆ.


ಇನ್ನು ಆ ತಾಪಮಾನದಲ್ಲಿ ಮಲಗಿ, ನಿದ್ರಿಸುವುದು ಮತ್ತೊಂದು ನಿತ್ಯ ಸಾಹಸ. ಕೆಸರಲ್ಲಿ ಮುಳುಗಿ ಆನಂದಿಸುವ ಎಮ್ಮೆಯನ್ನು ಕಂಡು ಲೇವಡಿ ಮಾಡಿ ನಗುವವರು ಎಮ್ಮೆಗೆ ಪೈಪೋಟಿ ನೀಡಲು ಆರಂಭಿಸುತ್ತಾರೆ. ಏಕೆಂದರೆ, ಫ್ಯಾನ್ ಹಾಕಿದರೆ ಬಿಸಿ ಗಾಳಿ. ಎ.ಸಿ, ಏರ್ ಕೂಲರ್ ಎಲ್ಲರ ಕೈಗೆಟುಕುವ ವಸ್ತುವಲ್ಲ. ಹೀಗಾಗಿ, ರಾತ್ರಿ ಮಲಗಲು ಸಂಜೆ ವೇಳೆಗೆ ಸಿದ್ಧತೆ ಆರಂಭವಾಗುತ್ತದೆ. ಮಲಗುವ ಕೋಣೆಯ ಮೇಲೆ ನೆಲಕ್ಕೆ ನೀರು ಸುರಿದು ಫ್ಯಾನ್ ಹಾಕಿಬಿಟ್ಟರೆ, ರಾತ್ರಿಯ ವೇಳೆಗೆ ನೆಲ ಕೊಂಚ ತಂಪಾಗಿರುತ್ತದೆ. ಅಲ್ಲಲ್ಲಿ, ನೀರು ಹಾಗೇ ನಿಂತಿದ್ದರೆ ಇನ್ನೂ ಒಳ್ಳೆಯದು. ನೀರಿನಿಂದ ಒದ್ದೆಯಾದ ಆ ನೆಲದ ಮೇಲೆ ಮಲಗಿ ಹೊರಳಾಡಿ ಮಧ್ಯರಾತ್ರಿಯವರೆಗಂತೂ ಕಾಲ ತಳ್ಳಬಹುದು.

11ನೇ ಪುಟಕ್ಕೆ...


ರೋಮನ್ ಕ್ಯಾಥೊಲಿಕ್ ಕ್ಯಾಥೆಡ್ರಲ್ ಮತ್ತು ಗಂಟೆ ಗೋಪುರ

ವಾಲು ಗೋಪುರಕ್ಕೆ ಹೀಗೆ ನೇರಬನ್ನಿ...

ಕೆ.ಪಿ. ಸತ್ಯನಾರಾಯಣ


ವಾಲು ಗೋಪುರ ಇನ್ನೊಂದು ದಿಕ್ಕಿನಿಂದ ಕಂಡಂತೆ

ಪ್ರವಾಸ

ಇಟಲಿಯ ಪೀಸಾದಲ್ಲೊಂದು ಗೋಪುರವಿದೆ, ಅದು ನೂರಾರು ವರ್ಷಗಳಿಂದ ಓರೆಯಾಗಿ ನಿಂತಿದೆ ಎಂದು ಪಠ್ಯಗಳಲ್ಲಿ ಓದಿ ಆಶ್ಚರ್ಯಪಡುತ್ತಿದ್ದ ನಮಗೆ ಅದನ್ನು ಪ್ರತ್ಯಕ್ಷ ನೋಡಿದಾಗ ಆಗುವ ಆನಂದ ಪದಗಳಿಗೆ ನಿಲುಕದ್ದು.

ಪೀಸಾದ 'ಅಚ್ಚರಿಗಳ ಚೌಕ' (Square of Miracles ಅಥವಾ Cathedral Square) ಸುಮಾರು ಒಂಬತ್ತು ಹೆಕ್ಟೇರ್ ಪ್ರದೇಶವನ್ನು ಒಳಗೊಂಡಿದ್ದು ಇದರಲ್ಲಿ ವರ್ಜಿನ್ ಮೇರಿಗೆ ಸಮರ್ಪಿತವಾದ ಪೀಸಾದ ಆರ್ಚ್ ಬಿಷಪ್ ಇರುವ ರೋಮನ್ ಕ್ಯಾಥೊಲಿಕ್ ಕ್ಯಾಥೆಡ್ರಲ್ (ನಿರ್ಮಾಣ 1092), ದೀಕ್ಷೆ ಕೊಡುವ ಸ್ಥಳವಾದ ಸೇಂಟ್ ಜಾನ್ ಬಾಪ್ಟಿಸ್ಟ್ರಿ (ನಿರ್ಮಾಣ 1153) ಮತ್ತು ವಾಲು ಗೋಪುರ ಇವೆ. ಇದನ್ನು ವಿಶ್ವ ಪಾರಂಪರಿಕ ಸ್ಥಳವೆಂದು ಘೋಷಿಸಲಾಗಿದೆ.

The Leaning Tower of Pisa ಪೀಸಾದ ಚರ್ಚಿನ ಗಂಟೆ ಗೋಪುರ. ಸಾಧಾರಣವಾಗಿ ಗಂಟೆ ಗೋಪುರಗಳು ಚರ್ಚ್ ಕಟ್ಟಡದ ಭಾಗವಾಗಿಯೇ ಇರುತ್ತವಾದರೂ, ಇದು ಹೊರಭಾಗದಲ್ಲಿ ಸ್ವತಂತ್ರವಾಗಿ ನಿಂತಿರುವುದು ವಿಶೇಷ. ನಮ್ಮ ದೇವಾಲಯಗಳೆದುರು ಗರುಡಗಂಬ ಇರುತ್ತದೆಯಲ್ಲ ಹಾಗೆ. ನೆಲಕ್ಕೆ ನೇರ ಲಂಬವಾಗಿರದೆ ನಾಲ್ಕು ಡಿಗ್ರಿಗಳಷ್ಟು ಓರೆಯಾಗಿರುವುದರಿಂದ ಇದನ್ನು ಪೀಸಾದ ವಾಲು ಗೋಪುರ ಎಂದು ಕರೆಯುವುದುಂಟು. The falling Tower ಎಂದೂ ಕರೆಯುವ ರೂಢಿಯಿದೆ. ಆ ಕಾರಣದಿಂದಲೇ ವಿಶ್ವಪ್ರಸಿದ್ಧವೂ ಆಗಿದೆ.

ಪೀಸಾ ಗೋಪುರದ ಎತ್ತರ ದಕ್ಷಿಣ ಭಾಗದಲ್ಲಿ 55.86 ಮೀಟರ್, ಉತ್ತರದ ಕಡೆಯಲ್ಲಿ 56.67 ಮೀಟರ್ ಎತ್ತರವಿದ್ದು ಒಟ್ಟು ಎಂಟು ಮಹಡಿಗಳನ್ನು ಹೊಂದಿದೆ. ಕಟ್ಟಡದ ಒಳಗೆ ಒಂದು ಬದಿಯಲ್ಲಿ 296, ಮತ್ತೊಂದು ಬದಿಯಲ್ಲಿ 294 ಮೆಟ್ಟಿಲುಗಳು ಇವೆ. ಈ ವೃತ್ತಾಕಾರದ ಕಟ್ಟಡದ ವ್ಯಾಸ 15.50 ಮೀಟರ್ ಮತ್ತು ಗೋಡೆಯ ದಪ್ಪ ಕೆಳಭಾಗದಲ್ಲಿ 4.1 ಮೀಟರ್ ಮತ್ತು ಉಳಿದ ಮಹಡಿಗಳಲ್ಲಿ 2.7 ಮೀಟರ್ ಇದೆ. ಈ ಗೋಪುರದ ಒಟ್ಟು ತೂಕ 14,700 ಮೆಟ್ರಿಕ್ ಟನ್ ಎಂದು ಅಂದಾಜು ಮಾಡಲಾಗಿದೆ.

ನಿರ್ಮಾಣದ ರೋಚಕ ಕಥೆ

ಆಗಸ್ಟ್ 1173ರಲ್ಲಿ ಅಡಿಪಾಯ ಹಾಕುವುದರೊಂದಿಗೆ ಆರಂಭವಾದ ಇದರ ನಿರ್ಮಾಣ ಕಾರ್ಯ ಸುಮಾರು 200 ವರ್ಷಗಳ ನಂತರ 1370ರಲ್ಲಿ ಕೊನೆಗೊಂಡಿತು. ಆರಂಭದಲ್ಲಿ ಮೊದಲ ನಾಲ್ಕು ಮಹಡಿಗಳು ನಿರ್ಮಾಣವಾಗಿದ್ದವು. ಒಂದು ಶತಮಾನದ ನಂತರ ನಂತರದ ಮೂರು ಮಹಡಿಗಳನ್ನು ಕಟ್ಟಲಾಯಿತು. ಮತ್ತೂ ಒಂದು ಶತಮಾನದ ನಂತರ (1360–1370ರಲ್ಲಿ) ಕೊನೆಯ ಮಹಡಿಯ ನಿರ್ಮಾಣ ಮತ್ತು ಗಂಟೆಗಳನ್ನು ಅಳವಡಿಸುವ ಕೆಲಸಗಳು ನಡೆದವು. ಇಲ್ಲಿ ಸ್ವರಕ್ಕೊಂದರಂತೆ ಒಟ್ಟು ಏಳು ಗಂಟೆಗಳು ಇವೆ.

ಕಂಚಿನ ಕೆಲಸಗಳಲ್ಲಿ ಪರಿಣತಿ ಹೊಂದಿದ ಪಿಸಾನೊ ಈ ಗೋಪುರವನ್ನು ವಿನ್ಯಾಸ ಮಾಡಿದ ವಾಸ್ತುಶಿಲ್ಪಿ ಎಂದು ನಂಬಲಾಗಿತ್ತು. ಆದರೆ 2001ರ ಒಂದು ಅಧ್ಯಯನದ ಪ್ರಕಾರ ಡಯೋಟಿಸಾಲ್ವಿ ಇದರ ವಿನ್ಯಾಸಕಾರ ಎಂದು ನಿರ್ಧರಿಸಲಾಯಿತು. ಪಿಸಾನೊ ಚರ್ಚಿನ ಕಂಚಿನ ಬಾಗಿಲನ್ನು ಮಾತ್ರ ಮಾಡಿರಬಹುದೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಎರಡನೇ ಮಹಡಿಯ ನಿರ್ಮಾಣವಾಗುವ ಹೊತ್ತಿಗೇ ಈ ಕಟ್ಟಡವು ದಕ್ಷಿಣದ ಬದಿಯಲ್ಲಿ ಕುಸಿಯಲು ಪ್ರಾರಂಭವಾಗಿತ್ತು. ಇನ್ನೆರಡು ಮಹಡಿಗಳನ್ನು ಕಟ್ಟಿದ ನಂತರ, ಸುಮಾರು ಒಂದು ಶತಮಾನ ಕಾಲ ಕಟ್ಟಡದ ಕಾರ್ಯ ಸ್ಥಗಿತಗೊಂಡಿತ್ತು. ಅದಕ್ಕೆ ಯುದ್ಧ, ಅರಾಜಕತೆ ಇತ್ಯಾದಿ ರಾಜಕೀಯ ಕಾರಣಗಳೂ ಇದ್ದವು. ಸಡಿಲಗೊಂಡಿದ್ದ ಮಣ್ಣು 1233ರ ವೇಳೆಗೆ ಸ್ವಲ್ಪ ಮಟ್ಟಿಗೆ ಗಟ್ಟಿಗೊಂಡಿತ್ತು. ಇಲ್ಲದೇ ಹೋಗಿದ್ದರೆ ಕಟ್ಟಡವು ಕುಸಿಯುವ ಸಾಧ್ಯತೆಯೇ ಅಧಿಕವಾಗಿತ್ತು. ವಾಲುವಿಕೆಯ ಪರಿಣಾಮವನ್ನು ತಗ್ಗಿಸಲು ಉತ್ತರ ದಿಕ್ಕಿನ ಅಂತಸ್ತುಗಳು ತುಸು ಎತ್ತರವಾಗಿರುವಂತೆ ನೋಡಿಕೊಳ್ಳಲು ವಾಸ್ತುತಜ್ಞರು ಸಲಹೆಯಿತ್ತರು. ಯುದ್ಧದ ಕಾರಣ ನಿರ್ಮಾಣ ಮತ್ತೆ ಸ್ಥಗಿತಗೊಂಡಿತು. ಹಲವು ವರ್ಷಗಳ ಬಳಿಕ ಏಳನೇ ಮಹಡಿಯನ್ನು ಕಟ್ಟಲಾಯಿತು. ಗಂಟೆ ಗೋಪುರವನ್ನು ಮತ್ತೊಬ್ಬ ಪಿಸಾನೊ ಉಸ್ತುವಾರಿಯಲ್ಲಿ ಸೇರಿಸಲಾಯಿತು. ಅಂತೂ ಇಂತೂ ಹಟ ಬಿಡದೆ ಈ ಗೋಪುರದ ಕೆಲಸವನ್ನು ಪೂರ್ಣಗೊಳಿಸಲಾಯಿತು. 12ನೇ ಶತಮಾನದಲ್ಲಿ ನಿರ್ಮಾಣ ಕಾರ್ಯ ಶುರುವಾದಾಗಲೇ, ಒಂದು ಭಾಗದ ಮೆದು ಮಣ್ಣಿನ ಕಾರಣದಿಂದ, ಓರೆಯಾಗಲು ತೊಡಗಿದ ಈ ಗೋಪುರ 14ನೇ ಶತಮಾನದಲ್ಲಿ ನಿರ್ಮಾಣ ಪೂರ್ಣವಾದಾಗ ಸಾಕಷ್ಟು ಓರೆಯಾಗಿತ್ತು.

ಪೀಸಾದ ವಾಲು ಗೋಪುರ ವರ್ಷ ವರ್ಷವೂ ತುಸು ಬಾಗುತ್ತಲೇ ಶತಮಾನಗಳನ್ನು ಕಾಣುತ್ತಾ ಹೋಯಿತು. 1990ರ ಹೊತ್ತಿಗೆ 5.5 ಡಿಗ್ರಿಗಳಷ್ಟು ಓರೆಯಾದಾಗ, ಕಟ್ಟಡವನ್ನು ಉಳಿಸಿಕೊಳ್ಳಲು ಏನಾದರೂ ಪರಿಹಾರೋಪಾಯಗಳನ್ನು ಮಾಡಲೇಬೇಕಾದ ಅನಿವಾರ್ಯ ಉಂಟಾಯಿತು.

ಗೋಪುರ ಕುಸಿದುಬೀಳುವ ಅಪಾಯವನ್ನು ಮನಗಂಡು ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು. ವಾಲುವಿಕೆಯನ್ನು ಸರಿಪಡಿಸಿ, ಕುಸಿಯುವ ಅಪಾಯವನ್ನು ತಪ್ಪಿಸಲು ಯೋಜನೆ ರೂಪಿಸಲಾಯಿತು. ಕಟ್ಟಡದ ತೂಕವನ್ನು ಕಡಿಮೆ ಮಾಡಲು ಗೋಪುರದ ಮೇಲಿನ ಹಂತದಲ್ಲಿದ್ದ ಗಂಟೆಗಳನ್ನು ಸ್ಥಳಾಂತರಿಸಿದ್ದಲ್ಲದೆ, ಗೋಪುರ ಬೀಳಬಹುದಾದ ಪ್ರದೇಶದ ಎಲ್ಲಾ ಕಟ್ಟಡಗಳಿಂದ ಜನರನ್ನು ತೆರವುಗೊಳಿಸಲಾಯಿತು. ಮೂರನೇ ಮಹಡಿಯ ಸುತ್ತ ಬಲವಾದ ಕೇಬಲ್‌ಗಳನ್ನು ಅಳವಡಿಸಿ ನೂರು ಮೀಟರ್ ದೂರದ ಸ್ಥಳದಲ್ಲಿ ಗೂಟಗಳನ್ನು ನೆಟ್ಟು, ಬಿಗಿದು ಕಟ್ಟಲಾಯಿತು. ವಾಲುವಿಕೆಯ ವಿರುದ್ಧ ದಿಕ್ಕಿನಲ್ಲಿ ಅಡಿಪಾಯದ ಕೆಳಗಿನ 38 ಘನ ಮೀಟರ್ ಮಣ್ಣನ್ನು ಹೊರತೆಗೆದು, ಆ ಗುಂಡಿಯಲ್ಲಿ 870 ಟನ್ ತೂಕದ ಲೋಹದ ವಸ್ತುಗಳನ್ನು ತುಂಬಿದ್ದರಿಂದ ಮತ್ತಷ್ಟು ವಾಲುವಿಕೆ ತಪ್ಪಿತು. ಸ್ವಲ್ಪ ನೇರಗೊಂಡ ಪೀಸಾದ ಗೋಪುರ ಕುಸಿಯುವ ಅಪಾಯದಿಂದ ಪಾರಾಗಿ ನಿಂತಿದೆ. ಗೋಪುರದ ವಾಲುವಿಕೆಯನ್ನು ಐದೂವರೆ ಡಿಗ್ರಿಗಳಿಂದ ನಾಲ್ಕು ಡಿಗ್ರಿಗಳಿಗೆ ಇಳಿಸಿ ಕಟ್ಟಡವನ್ನು ಸುಭದ್ರಗೊಳಿಸಲಾಯಿತು. ಬಳಿಕ ಮತ್ತೆ ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಲಾಯಿತು.

ಆಗಿಂದಾಗ್ಗೆ ಸಾಕಷ್ಟು ರಿಪೇರಿ ಮತ್ತು ಗಟ್ಟಿಗೊಳಿಸುವ ಕೆಲಸಗಳು ನಡೆಯುತ್ತಲೇ ಇರುತ್ತವೆ. ಗೋಪುರ ನಿರ್ಮಾಣವಾದಾಗಿನಿಂದ ಕನಿಷ್ಠವೆಂದರೂ ನಾಲ್ಕು ಬಲವಾದ ಭೂಕಂಪನಗಳನ್ನು ಎದುರಿಸಿ ನಿಂತಿದೆ ಈ ವಾಲುಗೋಪುರ. ಯಾವ ಮೆದುಮಣ್ಣಿನ ಕಾರಣದಿಂದ ಗೋಪುರ ತುಸು ಓರೆಯಾಯಿತೋ, ಅದೇ ಮಣ್ಣಿನ ಕಾರಣಕ್ಕೆ ಅದು ಈ ಭೂಕಂಪನಗಳನ್ನು ತಡೆದುಕೊಳ್ಳಲು ಸಾಧ್ಯವಾಗಿದೆಯೆಂಬುದು ಆಶ್ಚರ್ಯಕರ. ಮೆದುಮಣ್ಣಿನ ಕಾರಣದಿಂದಲೇ ಭೂಕಂಪನದ ಅಲೆಗಳು ಗೋಪುರವನ್ನು ತಲುಪುವ ವೇಳೆಗೆ ಕ್ಷೀಣಗೊಳ್ಳುತ್ತವೆಯಂತೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನ್ನರು ಈ ಗೋಪುರವನ್ನು ಕಣ್ಗಾವಲಿಗೆ ಬಳಸುತ್ತಿದ್ದಾರೆಂಬ ಅನುಮಾನದಿಂದ ಅಮೆರಿಕದ ಸೈನ್ಯಾಧಿಕಾರಿಯೊಬ್ಬ ಇದನ್ನು ಹಾಳುಗೆಡಹುವ ಉದ್ದೇಶದಿಂದ ಬಂದವನು ಇದರ ಸೌಂದರ್ಯಕ್ಕೆ ಮನಸೋತು ಹಾಗೆಯೇ ಹಿಂದಿರುಗಿದನಂತೆ!

ಚರ್ಚ್ ಮತ್ತು ದೀಕ್ಷಾ ಸ್ಥಳಗಳು ಅದ್ಭುತ ವಾಸ್ತುಶಿಲ್ಪವನ್ನು ಹೊಂದಿದ್ದು ನೋಡಲು ಕಣ್ಣುಗಳು ಸಾಲವು ಎನ್ನುವಂತಿವೆ. ಕಲಾ ಸಿರಿವಂತಿಕೆಯನ್ನು ಪ್ರದರ್ಶಿಸುವ ಬೃಹತ್ ಚರ್ಚ್ ಮತ್ತು ಧ್ವನಿಯನ್ನು ಸ್ಪಷ್ಟವಾಗಿ ಕೇಳಿಸುವ ವಿಶೇಷ ತಂತ್ರಜ್ಞಾನ ಹೊಂದಿದ ಬ್ಯಾಪ್ಟಿಸ್ಟ್ರಿ ನೋಡಲೇಬೇಕಾದ ಸ್ಥಳಗಳು. ವಿಚಿತ್ರ ಎಂದರೆ ತನ್ನ ವಾರೆಯಾಗಿರುವ ಗುಣದಿಂದಲೇ ಪ್ರಖ್ಯಾತವಾದ ಗಂಟೆ ಗೋಪುರ ಅವೆರಡರ ವಿಶೇಷತೆಯನ್ನು ಮರೆಯಾಗಿಸಿಬಿಡುತ್ತದೆ!

ಓರೆಗೋಪುರವೂ ತನ್ನಲ್ಲಿ ಅನೇಕ ವಿಶೇಷತೆಗಳನ್ನು ಹೊಂದಿದ್ದು, ಎಂಟು ಮಹಡಿಗಳನ್ನು ಮೆಟ್ಟಿಲುಗಳ ಮೂಲಕ ಹತ್ತಿ ಅಲ್ಲಿಂದ ಸುತ್ತಲಿನ ನೋಟವನ್ನು ಕಣ್ತುಂಬಿಕೊಳ್ಳುವುದು ಅದ್ಭುತ ಅನುಭವವೇ ಸರಿ. ಚಿತ್ರ ವಿಚಿತ್ರ ಭಂಗಿಗಳಲ್ಲಿ ವಾಲುಗೋಪುರದ ಜತೆಗೆ ಫೋಟೊ ತೆಗೆಸಿಕೊಳ್ಳುವ ಪ್ರವಾಸಿಗರನ್ನಿಲ್ಲಿ ನಾವು ಕಾಣಬಹುದು. ಮೂರೂ ಸ್ಮಾರಕಗಳಿಗೆ ಪ್ರತ್ಯೇಕ ಪ್ರವೇಶ ಶುಲ್ಕವಿದೆ. ❖

ಮುನ್ನೋಟ 09-05-2021 ರಿಂದ 15-05-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಯಾವುದೇ ಕೆಲಸದಲ್ಲೂ ಆರಂಭಶೂರತ್ವ ಬೇಡ, ಮಾಡುವ ಕೆಲಸದಲ್ಲಿ ಜಾಗ್ರತೆಯಿರಲಿ. ಹಳೆಯ ಸಾಲಗಾರರು ಬಂದು ಕಾಡಬಹುದು, ಕುಳಿತು ಮಾತನಾಡಿದಲ್ಲಿ ಸಾಲ ತೀರಿಸಲು ಹೆಚ್ಚಿನ ಕಾಲಾವಕಾಶ ದೊರೆಯುತ್ತದೆ. ಮಧ್ಯವರ್ತಿ ಕೆಲಸ ಮಾಡುವವರಿಗೆ ಹೆಚ್ಚಿನ ಆದಾಯ ಬರುತ್ತದೆ. ವಿದೇಶಿ ವಿನಿಮಯ ವ್ಯವಹಾರವನ್ನು ಮಾಡುವವರಿಗೆ ಆದಾಯ ವೃದ್ಧಿಸುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವೃತ್ತಿಯಲ್ಲಿ ತಾಂತ್ರಿಕ ಪರಿಣತರಿಗೆ ಹೆಚ್ಚಿನ ಮಾನ್ಯತೆ ದೊರೆತು ಹೆಚ್ಚಿನ ಜವಾಬ್ದಾರಿಯು ದೊರೆಯುತ್ತದೆ. ಉದ್ಯೋಗದಲ್ಲಿ ಸಮಾಧಾನಕರ ವಾತಾವರಣವಿರುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ರಾಜಕಾರಣಿಗಳಿಗೆ ಅನಿರೀಕ್ಷಿತ ಒತ್ತಡಗಳು ಬರುತ್ತವೆ. ಸಾರ್ವಜನಿಕ ರಂಗದಲ್ಲಿ ಇರುವವರಿಗೆ ಗೌರವ ಪ್ರಾಪ್ತಿಯಾಗುತ್ತದೆ. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಲಾಭ ಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಉದ್ಯೋಗದಲ್ಲಿ ಮತ್ತು ವ್ಯವಹಾರದಲ್ಲಿ ಧನ ಲಾಭವಿರುತ್ತದೆ. ನ್ಯಾಯಾಧೀಶರಿಗೆ ತೀರ್ಮಾನ ಕೊಡುವ ಸಂದರ್ಭದಲ್ಲಿ ಸಂದಿಗ್ಧ ಸ್ಥಿತಿ ಒದಗುವ ಸಾಧ್ಯತೆ ಇದೆ. ಕೆಲವು ನ್ಯಾಯಾಧೀಶರುಗಳಿಗೆ ಮೇಲ್ದರ್ಜೆಯ ನ್ಯಾಯಾಲಯಗಳಿಗೆ ಬಡ್ತಿ ದೊರೆಯುವ ಸಾಧ್ಯತೆಗಳಿವೆ. ಬ್ಯಾಂಕ್ ಅಧಿಕಾರಿ ವರ್ಗದವರಿಗೆ ಹೆಚ್ಚಿನ ಜವಾಬ್ದಾರಿಗಳು ಹೆಗಲೇರಬಹುದು. ಉದ್ಯೋಗ ಅರಸುತ್ತಿರುವವರಿಗೆ ಉದ್ಯೋಗ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನೀವು ಬಯಸುತ್ತಿದ್ದ ಸವಲತ್ತುಗಳು ಈಗ ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳ ಶ್ರಮಕ್ಕೆ ತಕ್ಕ ಫಲಿತಾಂಶ ದೊರೆಯುತ್ತದೆ. ದೀಕ್ಷಿತರಿಗೆ ವಿವಾಹ ಅಪೇಕ್ಷಿತರಿಗೆ ಕಂಕಣ ಒದಗುವ ಸಾಧ್ಯತೆ ಇದೆ. ಸಾಲ ತೀರಿಸಲು ನೀವು ಆರಿಸಿದ ಮಾರ್ಗ ಫಲ ಕೊಡುತ್ತದೆ. ಸಾಂಸಾರಿಕ ಬದುಕಿನಲ್ಲಿ ಸಂತೋಷವನ್ನು ಕಾಣಬಹುದು. ಮಕ್ಕಳಿಂದ ಸಂತೋಷ ಪ್ರಾಪ್ತಿಯಾಗುತ್ತದೆ. ಖರ್ಚಿಗೆ ಕಡಿವಾಣ ಹಾಕುವುದು ಅತ್ಯಗತ್ಯ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಹಿರಿಯರ ಆರೋಗ್ಯದ ಬಗ್ಗೆ ಸ್ವಲ್ಪ ಗಮನ ಇರಲಿ. ಕೃಷಿ ಉತ್ಪನ್ನಗಳನ್ನು ಮಾರುವವರಿಗೆ ವ್ಯವಹಾರ ಹೆಚ್ಚಾಗಿ ಲಾಭ ಬರುತ್ತದೆ. ವಿದೇಶಗಳಿಗೆ ಅದಿರು ಅಥವಾ ಲೋಹಗಳನ್ನು ರಫ್ತು ಮಾಡುವವರ ವ್ಯಾಪಾರ ವೃದ್ಧಿಸಿ ಲಾಭ ಇರುತ್ತದೆ. ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಹೆಚ್ಚಿನ ಗೌರವ ದೊರೆಯುತ್ತದೆ. ರಾಜಕೀಯದಲ್ಲಿರುವ ಮಹಿಳೆಯರಿಗೆ ಹೆಚ್ಚಿನ ಸ್ಥಾನಮಾನ ದೊರೆಯುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆರ್ಥಿಕ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಲು ಯೋಜನೆಯೊಂದನ್ನು ತಯಾರು ಮಾಡುವಿರಿ. ಸಂಗಾತಿಯ ಸಂಪಾದನೆಯಲ್ಲಿ ಹೆಚ್ಚಳವನ್ನು ಕಾಣಬಹುದು. ಉಸಿರಾಟದ ತೊಂದರೆ ಇರುವವರು ಸ್ವಲ್ಪ ಎಚ್ಚರವಹಿಸುವುದು ಒಳ್ಳೆಯದು. ವಿದ್ಯಾರ್ಥಿಗಳಿಗೆ ಓದುವ ವಿಚಾರದಲ್ಲಿ ಗುರುಗಳಿಂದ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ಇತರರ ವಿಚಾರದಲ್ಲಿ ಹಗುರವಾಗಿ ಮಾತನಾಡುವುದು ಅಷ್ಟು ಒಳಿತಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ವಾರದ ಆರಂಭ ಆಲಸ್ಯದಿಂದ ಕೂಡಿರುತ್ತದೆ. ಸಂಗಾತಿಯೊಡನೆ ಕಾವೇರಿದ ಮಾತುಗಳು ನಡೆದು ಬೇಸರ ಆಗಬಹುದು. ಆದಾಯಕ್ಕಿಂತ ಖರ್ಚುಗಳು ಹೆಚ್ಚಾಗುವ ಸಾಧ್ಯತೆಗಳಿವೆ. ಮನಸ್ಥೈರ್ಯವನ್ನು ಕುಗ್ಗಿಸಿಕೊಳ್ಳದೆ ಮುನ್ನುಗ್ಗುವುದು ಒಳ್ಳೆಯದು. ಉದ್ಯೋಗ ಬದಲಾವಣೆಯ ವಿಚಾರ ಸದ್ಯಕ್ಕೆ ಬೇಡ. ಲೇವಾದೇವಿ ಮಾಡುವುದು ಈಗ ಅಷ್ಟು ಒಳಿತಲ್ಲ. ಉದ್ಯೋಗದಲ್ಲಿ ಒತ್ತಡ ಕಡಿಮೆಯಾಗುವುದು.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಶತ್ರುಗಳನ್ನು ಮಟ್ಟಹಾಕಲು ನೀವು ಬಳಸುವ ತಂತ್ರಗಳು ಸಾಕಷ್ಟು ಫಲವನ್ನು ಕೊಡುತ್ತವೆ. ಸ್ನೇಹಿತರೊಂದಿಗೆ ಕೂಡಿ ಮಾಡುವ ಕಠಿಣ ಪರಿಶ್ರಮದ ಕೆಲಸಗಳು ನಿಮಗೆ ಹೆಸರನ್ನು ತರುತ್ತವೆ. ಮನೆ ಪಾಠವನ್ನು ಮಾಡುವವರಿಗೆ ವಿದ್ಯಾರ್ಥಿಗಳು ದೊರೆತು ಹೆಚ್ಚು ಸಂಪಾದನೆ ಆಗುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಹೊಸ ಜವಾಬ್ದಾರಿಯೊಂದು ಹೆಗಲೇರುವ ಸಾಧ್ಯತೆ ಇದೆ. ವ್ಯವಹಾರಗಳಲ್ಲಿನ ನೀತಿ-ನಿಯಮಗಳನ್ನು ಬದಲಿಸದೆ ಇರುವುದು ನಿಮಗೆ ಒಳಿತು. ಚಿಲ್ಲರೆ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಲಾಭ ಬಂದು ಮನಸ್ಸಿಗೆ ನೆಮ್ಮದಿ ಇರುತ್ತದೆ. ವ್ಯವಹಾರದಲ್ಲಿ ನಷ್ಟವನ್ನು ತಪ್ಪಿಸಲು ಅತ್ಯಂತ ಜಾಗರೂಕರಾಗಿ ಇರುವುದು ಒಳ್ಳೆಯದು. ಕುಟುಂಬ ಕಲಹಗಳಿಂದ ಮುಕ್ತಿ ದೊರೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವ್ಯವಹಾರಗಳಲ್ಲಿ ನಿಮ್ಮ ಜಾಣ್ಮೆಯನ್ನು ಕಂಡು ಪಾಲುದಾರರು ನಿಮಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡುವರು. ಸೈನಿಕ ರಕ್ಷಣಾ ಇಲಾಖೆಯಲ್ಲಿ ಮಾಡುವವರಿಗೆ ಇಲಾಖೆಯಿಂದ ಬರಬೇಕಾದ ಹಳೆಯ ಬಾಕಿ ಹಣ ಬರುತ್ತದೆ. ಹೊಸ ವಾಹನ ಖರೀದಿ ಮಾಡಬಹುದು. ನೀವು ತೋರಿಸುವ ಸಕಾರಾತ್ಮಕ ಮನೋಭಾವಗಳು ನಿಮ್ಮನ್ನು ಉನ್ನತ ಸ್ಥಾನಕ್ಕೆ ಸೇರಿಸುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರದಲ್ಲಿ ಹೆಚ್ಚಿನ ಲಾಭವಿದೆ. ಶೃಂಗಾರ ಸಾಮಗ್ರಿಗಳನ್ನು ತಯಾರು ಮಾಡುವವರಿಗೆ ವ್ಯವಹಾರ ವಿಸ್ತರಣೆಯಾಗುತ್ತದೆ. ಸರಕು ಸಾಗಣೆ ಮಾಡುವವರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಧನಾದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಹೊಸ ಉದ್ಯಮದ ಸ್ಥಾಪನೆಯ ವಿಚಾರದಲ್ಲಿ ದುಡುಕುವುದು ಬೇಡ. ಪೂರ್ವಾಪರ ವಿಚಾರವನ್ನು ಮಾಡಿ ನಂತರ ತೀರ್ಮಾನಿಸಿರಿ. ಸಂಸಾರದ ವಿಷಯದಲ್ಲಿ ಗೊಂದಲಗಳು ಮೂಡಬಹುದು. ಅದಿರು ಮಾರಾಟಗಾರರಿಗೆ ಹೆಚ್ಚಿನ ಪೂರೈಕೆಗಾಗಿ ಬೇಡಿಕೆ ಬರಬಹುದು. ಮಿಶ್ರ ಲೋಹಗಳನ್ನು ತಯಾರು ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ.

ಪುಸ್ತಕ ಗಣಿ ನಮಗೆ...

8ನೇ ಪುಟದಿಂದ...

ಜೊತೆ ಜೊತೆಗೆ ಪುಸ್ತಕಗಳು ಅವುಗಳ ಲೇಖಕರ ಕುರಿತು ಅರಿತಿದ್ದಷ್ಟೇ ಅಲ್ಲದೆ, ಯಾವ ಓದುಗರಿಗೆ ಯಾವ ಲೇಖಕ- ಪುಸ್ತಕ ಇಷ್ಟವೆಂದು ಅನಾಯಾಸವಾಗಿ ಗ್ರಹಿಸಿದ್ದ ಅಪರೂಪದ ಮಾಲೀಕರು. ಅವರು ಪ್ರೀತ್ಯಾದರಗಳನ್ನು ಸಂಪಾದಿಸಿದ್ದೇ ಹೀಗೆ.

ಮಳಿಗೆಯ ಬಾಡಿಗೆ ತೀರಾ ಹೆಚ್ಚಾಗಿ ಅಂಗಡಿಯನ್ನು ಮುಚ್ಚುವುದಾಗಿ ಅವರು ಸಾರಿದಾಗ ಹೆಚ್ಚು ಕಡಿಮೆ ಬೆಂಗಳೂರಿಗೆ ಬೆಂಗಳೂರೇ ವಂತಿಗೆ ನೀಡಲು ಮುಂದೆ ಬಂದದ್ದನ್ನು ವ್ಯಕ್ತಿಯೊಬ್ಬರು ಟ್ವಿಟರ್‌ನಲ್ಲಿ ನೆನೆದಿದ್ದರು. ಈ ಪ್ರೀತಿಗೆ ಮನಸೋತೋ ಏನೋ ಶಾನಭಾಗರು ಅಂದಿನಿಂದ ಇನ್ನೂ ಕೆಲ ವರ್ಷ ಅಂಗಡಿಯನ್ನು ಮುಚ್ಚಲಿಲ್ಲ.

ಕರುಣೆ ಅನುಕಂಪದ ಗುಣಗಳು ಅವರ ವ್ಯಕ್ತಿತ್ವದೊಂದಿಗೆ ಬೆರೆತು ಹೋಗಿದ್ದವು. ಅವರು ಗಳಿಸಿದ್ದ ಜನಪ್ರೀತಿಯ ಹಿಂದಿನ ಹಲವು ಕಾರಣಗಳಲ್ಲಿ ಈ ಗುಣಗಳೂ ಮಿಳಿತಗೊಂಡಿದ್ದವು. ನ್ಯಾಯವಾದಿ ಆರತಿ ಮುಂಡ್ಕೂರು ಈ ಅಂಗಡಿಯ ಜೊತೆ ಜೊತೆಯಲ್ಲೇ ಬೆಳೆದು ದೊಡ್ಡವರಾದವರು. ಚಿಕ್ಕಂದಿನಲ್ಲಿ ತಮ್ಮ ಕೈ ಖರ್ಚಿಗೆಂದು ಕೊಡುತ್ತಿದ್ದ ಹಣವನ್ನು ಕೂಡಿಟ್ಟು ಪುಸ್ತಕ ಕೊಳ್ಳುತ್ತಿದ್ದವರು. ತಾಯಿಯನ್ನೂ ಕಾಡಿ ಈ ಅಂಗಡಿಯ ಪುಸ್ತಕ ಕೊಡಿಸಿಕೊಂಡವರು. ಮುಂಬಯಿಯ ವಿಶ್ವವಿದ್ಯಾಲಯದಲ್ಲಿ ಓದಿ ಹಲವು ವರ್ಷಗಳ ನಂತರ ಬೆಂಗಳೂರಿಗೆ ಮರಳಿದ ಅವರಿಗೆ ಪ್ರೀಮಿಯರ್‌ನಲ್ಲಿ ಎದುರಾದದ್ದು ಕೊಂಕಣಿ ನುಡಿಯ ಅಕ್ಕರೆಯ ಸ್ವಾಗತ. 'ನೀನು ಕೂಡಿಟ್ಟ ನಿನ್ನದೇ ಹಣದಿಂದ ನೀನು ಖರೀದಿಸಿದ ಮೊದಲ ಪುಸ್ತಕ Daddy Longlegs' ಎಂದು ಶಾನಭಾಗರು ನೆನಪಿಸಿದ್ದರು ಇಂಗ್ಲಿಷಿನಲ್ಲಿ.

ಅಕೆಯ ವಿದ್ಯಾಭ್ಯಾಸ ಅಧ್ಯಯನಗಳು ಶಾನಭಾಗರ ಕೊಡುಗೆಗಳಿಂದ ರೂಪು ತಳೆದು ಹಲವಾರು ವರ್ಷಗಳು ಉರುಳಿದ್ದವು. ಅದೊಂದು ದಿನ, ತಾಸಿನಲ್ಲಿ ಅಂಗಡಿ ಬಾಗಿಲು ಹಾಕುವ ಹೊತ್ತಿನಲ್ಲಿ ಬಂದ ಆರತಿ ಚೀಲದ ತುಂಬ ಪುಸ್ತಕ ಖರೀದಿಸಿ ಹೊರಬೀಳುವಷ್ಟರಲ್ಲಿ ಮಳೆ ಸುರಿಯಲಾರಂಭಿಸಿತು. ಬದಿಯಲ್ಲೇ ಮುಂಗಟ್ಟೊಂದರ ಕೆಳಗೆ ನಿಂತ ಆರತಿ ಅವರಿಗೆ ತಾಸುಗಟ್ಟಲೆ ಕಾಯಬೇಕಲ್ಲ ಎಂಬ ಆತಂಕ. ತಮ್ಮ ಆತಂಕಕ್ಕಿಂತ ಮನೆಯಲ್ಲಿ ಕಾಯುತ್ತಿದ್ದವರ ಚಿಂತೆ ಕಾಡಿತ್ತು. ಅಂಗಡಿ ಬೀಗ ಹಾಕಿ ಕಾರಿನತ್ತ ನಡೆದಿದ್ದರು ಶಾನಭಾಗರು. ಮಳೆಯಲ್ಲಿ ಸಿಕ್ಕಿಕೊಂಡ ಆರತಿ ಕಣ್ಣಿಗೆ ಬಿದ್ದಿದ್ದರು. ಬಳಿ ಬಂದು ಮನೆ ಎಲ್ಲೆಂದು ಕೇಳಿದವರು ಕಾರಿನಲ್ಲಿ ಕುಳಿತುಕೊಳ್ಳುವಂತೆ ಸನ್ನೆ ಮಾಡಿದರು. ಆಕೆಯನ್ನು ಸುರಕ್ಷಿತವಾಗಿ ಮನೆ ಬಾಗಿಲಿಗೆ ಇಳಿಸಿದ್ದರು.


ಪ್ರೀಮಿಯರ್ ಪುಸ್ತಕದಂಗಡಿಯಲ್ಲಿ ರಾಮಚಂದ್ರ ಗುಹಾ ಅವರೊಂದಿಗೆ ಟಿ.ಎಸ್.ಶಾನಭಾಗ ಚಿತ್ರ: ರಾಘವ್ ಶ್ರೇಯಸ್

ಶಾನಭಾಗರ ಸಾವಿನ ಸುದ್ದಿ ತಿಳಿದ ನಂತರ ಅವರ ಕುರಿತ ವಿವರಗಳಿಗೆ ಗೂಗಲ್‌ನಲ್ಲಿ ಹುಡುಕಾಡಿದೆ. The Bangalore Reviewನಲ್ಲಿ ಪ್ರಕಟವಾಗಿದ್ದ ಅವರ ದೀರ್ಘ ಸಂದರ್ಶನವೊಂದು ಕಣ್ಣಿಗೆ ಬಿತ್ತು. ಈ ಸಂದರ್ಶನ ನಡೆದದ್ದು 2014ರಲ್ಲಿ. ಆ ವೇಳೆಗಾಗಲೇ ಅವರು ನಿವೃತ್ತರಾಗಿದ್ದರು. ಪುಸ್ತಕ ಮಾರಾಟಗಾರರಾಗಿ ಅವರ ಸುದೀರ್ಘ ಕಸುಬು ಸವಿವರವಾಗಿ ಹರವಿರುವ ಮಾತುಕತೆಯದು. ಶಾನಭಾಗರಿಗೆ ನಾನು ತೀರಿಸಬೇಕಾದ ಹಲವು ಋಣಗಳಿವೆ. ಆದರೆ ನನ್ನದೂ ಸಣ್ಣ ಋಣವೊಂದು ಅವರ ಮೇಲಿತ್ತು. ಅಲ್ಲಿಯವರೆಗೆ ಅದು ಮರೆತೇ ಹೋಗಿತ್ತು.

ಕ್ರೆಡಿಟ್ ಕಾರ್ಡ್ ಯಂತ್ರವನ್ನು ಇಡುವಂತೆ ಅವರ ಮನ ಒಲಿಸಿದ ಮೊದಲಿಗ ನಾನು. ನಗರದ ಇತರೆ ಪುಸ್ತಕದ ಅಂಗಡಿಗಳು ಈ ಯಂತ್ರಗಳನ್ನು ಹೊಂದಿದ್ದವು. ಶಾನಭಾಗರು ಅವುಗಳೊಂದಿಗೆ ಪೈಪೋಟಿಯಲ್ಲಿ ಇರಲೇಬೇಕಿತ್ತು. ನನ್ನಂತಹ ಬಹಳ ಹಳೆಯ ಗ್ರಾಹಕರು ನಗದನ್ನೇ ಕೊಡುತ್ತಿದ್ದೆವು. ಎಷ್ಟೋ ಸಲ ಪುಸ್ತಕ ಕೊಂಡು ಒಯ್ದು ಓದಿ ಮುಗಿಸಿ ವಾರಗಳೇ ಉರುಳಿದ ನಂತರ ಹಣ ಕೊಟ್ಟಿದ್ದುಂಟು.

ಶಾನಭಾಗರ ಅಂಗಡಿಯಲ್ಲಿ ಇಂಗ್ಲಿಷ್ ಪುಸ್ತಕಗಳನ್ನು ಮಾತ್ರವೇ ಇಡಲಾಗುತ್ತಿತ್ತು. ಆದರೆ ಪ್ರೀಮಿಯರ್ ಅನೇಕ ಕನ್ನಡ ಬರಹಗಾರರ ದಿಗಂತಗಳನ್ನು ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸಿತು ಎನ್ನುತ್ತಾರೆ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಬರೆಯುವ ಸುಗತ ಶ್ರೀನಿವಾಸರಾಜು. ಸುಗತ ಅವರ ತಂದೆ ನಾಟಕಕಾರ ಚಿ.ಶ್ರೀನಿವಾಸರಾಜು ಪ್ರೀಮಿಯರ್‌ನಿಂದ ಡ್ರಾಮಾ ಥಿಯರಿ ಕುರಿತ ಭಾರೀ ಸಂಗ್ರಹವನ್ನೇ ಒಟ್ಟು ಮಾಡಿಕೊಂಡಿದ್ದರಂತೆ. ಇದೀಗ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ ಈ ಹೊತ್ತಿಗೆಗಳ ನೆಲೆ.

ಅದ್ವಿತೀಯ ನಿರ್ದೇಶಕ ಬಿ.ವಿ. ಕಾರಂತರು ಬೆಂಗಳೂರಿಗೆ ಬಂದಾಗ ಶ್ರೀನಿವಾಸರಾಜು ಅವರನ್ನು ಕಾಣುತ್ತಿದ್ದುದು ಪ್ರೀಮಿಯರ್‌ನಲ್ಲೇ. ಪುಸ್ತಕಗಳನ್ನು ತಡವಿ ಹುಡುಕಿ ಹಿಡಿಸಿದ್ದು ಸಿಕ್ಕ ಖುಷಿಯಲ್ಲಿ ತಾಸು ಹೊತ್ತು ಕಳೆದ ನಂತರ ಸನಿಹದಲ್ಲೇ ಇದ್ದ ಕೋಶೀಸ್ ರೆಸ್ಟುರಾದತ್ತ ಹೆಜ್ಜೆ ಹಾಕುತ್ತಿದ್ದರು. ಅಲ್ಲಿ ಮತ್ತೊಂದು ತಾಸಿನ ಗಾಢ ಮತ್ತು ಫಲಪ್ರದ ಸಂಭಾಷಣೆ. ಕನ್ನಡದ ಕವಯತ್ರಿ ಪ್ರತಿಭಾ ನಂದಕುಮಾರ್, ಕನ್ನಡದ ವಿಮರ್ಶಕ ಜಿ.ಕೆ.ಗೋವಿಂದರಾವ್, ಬರಹಗಾರ ಮತ್ತು ಸಂಪಾದಕ ಶೂದ್ರ ಶ್ರೀನಿವಾಸ್ ಹಾಗೂ ತಮಿಳು ಲೇಖಕ ಜಿ.ಶಿವರಾಮಕೃಷ್ಣನ್ ಅವರನ್ನು ಈ ಪುಸ್ತಕ ಮಳಿಗೆಯಲ್ಲಿ ಹಲವು ಸಲ ಕಂಡಿದ್ದೇನೆ. ಉರ್ದು, ಮರಾಠಿ ಹಾಗೂ ಕೊಂಕಣಿ ಬರಹಗಾರರ ಸಾಹಿತ್ಯಕ ಸಂವೇದನೆಗಳನ್ನೂ ಶಾನಭಾಗರ ಈ ಅಂಗಡಿ ಉದ್ದೀಪಿಸಿದ್ದುಂಟು.

ಶಾನಭಾಗರ ನಾಚಿಕೆಯ ಚರ್ಯೆಯ ಹಿಂದೆ ತುಂಟತನದ ವಿನೋದವಿತ್ತು, ಅದಮ್ಯ ಆತ್ಮಬಲವಿತ್ತು. ಅವರು ಬಹುಕಾಲದಿಂದ ಬಲ್ಲವರಿಗೆ ಮಾತ್ರವೇ ಅದು ಮೀಸಲಾಗಿರುತ್ತಿತ್ತು. ತಮ್ಮ ಸುತ್ತಣ ನಗರ ಮತ್ತು ವಿಶ್ವ ಬದಲಾಗತೊಡಗಿದ್ದಾಗಲೂ ಅವರ ಅಂಗಡಿಗೆ ಭಂಗವಿರಲಿಲ್ಲ. ಅವರಿಗಿದ್ದ ಆಳದ ಆತ್ಮಶಾಂತಿ, ಆತ್ಮತೃಪ್ತಿಯೇ ಅದರ ಹಿಂದಿನ ಗುಟ್ಟು. ಆದರೆ ರಿಯಲ್ ಎಸ್ಟೇಟ್ ದರಗಳು ಗಗನಕ್ಕೆ ಜಿಗಿದಾಗ ಮಳಿಗೆಯನ್ನು ಮುಚ್ಚದೆ ವಿಧಿಯಿರಲಿಲ್ಲ.

ನಿವೃತ್ತಿಯನ್ನು ಅಂತಹ ಅಸಾಧಾರಣ ಸಮಚಿತ್ತದಿಂದ ಸ್ವೀಕರಿಸಿದ ಮತ್ತೊಬ್ಬ ವ್ಯಕ್ತಿಯನ್ನು ನಾನು ಕಂಡಿಲ್ಲ. ಕಿಂಚಿತ್ತೂ ಕಹಿ-ಖೇದದ ಸುಳಿವಿರಲಿಲ್ಲ. ಅಚಲ್ ಪ್ರಬಲರೊಂದಿಗೆ 2016ರಲ್ಲಿ ಅವರನ್ನು ಕಾಣಲು ಹೋಗಿದ್ದೆ. ಪ್ರೀಮಿಯರ್ ಅನ್ನು ನಡೆಸುತ್ತಿದ್ದಾಗಿನ ದಿನಗಳ ಅದೇ ಕಕ್ಕುಲತೆ, ಅದೇ ಬೆಚ್ಚನೆಯ ಸ್ನೇಹವ (ತುಂಟತನ) ಆಗಲೂ ಸೂಸಿದ್ದರು. ಅವರ ನೆರೆಹೊರೆ ಕೂಡ ಶಾನಭಾಗರನ್ನು ಅವರ ಗ್ರಾಹಕರಂತೆಯೇ ಗೌರವಿಸಿತ್ತು.

ಸೇಡಿಗಾಗಿ ಕುದಿವ ಒಣಜಂಭದ ವ್ಯಕ್ತಿಗಳಿರುತ್ತಾರೆ. ಚರಿತ್ರೆಯ ರಭಸವೇ ತಮ್ಮ ಬೆನ್ನಿಗಿದೆಯೆಂದು ಕೊಚ್ಚಿಕೊಳ್ಳುತ್ತಾರೆ. ಇಂತಹವರಿಗೆ ಹೋಲಿಸಿದರೆ ಟಿ.ಎಸ್.ಶಾನಭಾಗರು ಮಾಡಿದ್ದು ತೀರದ ಒಳಿತೇ ಸರಿ.

ಕನ್ನಡಕ್ಕೆ: ಡಿ. ಉಮಾಪತಿ


ಕಲ್ಯಾಣದಲ್ಲಿ ಕಾಣಿಸಿದ್ದೇನು?


ಎಲೆ ಎಲೆಯಲ್ಲೂ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ತುಂಬಿಕೊಂಡ ಅಪರೂಪದ ಸ್ವಾತಂತ್ರ್ಯ ವೃಕ್ಷ ಚಿತ್ರಪಟ...

8ನೇ ಪುಟದಿಂದ...

ಗಿಡಗಂಟೆ ಬೆಳೆದು, ಕಾಡುಪ್ರಾಣಿಗಳ, ಬಾವಲಿಗಳ ಆವಾಸವಾಗಿದ್ದ ಗುಹೆಗಳನ್ನು ಪತ್ತೆ ಹಚ್ಚಿದರು. ಹಲವು ಸಾಕ್ಷ್ಯಾಧಾರಗಳನ್ನಿಟ್ಟುಕೊಂಡು ಯಾವುದು ಯಾರ ಗುಹೆ ಇರಬಹುದೆಂದು ಹೆಸರಿಸಿದರು. ಹೂಳು ತುಂಬಿದ್ದ ತ್ರಿಪುರಾಂತಕ ಕೆರೆದಂಡೆಯ ಗುಡಿ, ಗವಿಗಳನ್ನು ಒಂದೊಂದಾಗಿ ಪತ್ತೆ ಹಚ್ಚಿ ತಾವೇ ಸ್ವಚ್ಛಗೊಳಿಸತೊಡಗಿದರು. ಬಸವ ಜಯಂತಿಯಂದು ರಥೋತ್ಸವ ಶುರು ಮಾಡಿಸಿದರು. ಬಳಿಕ ಹಲವರು ಅವರೊಡನೆ ಕೈಜೋಡಿಸಿದರು. ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಬಂದು ಕಲ್ಯಾಣವು ಇವತ್ತಿನ ಸ್ವರೂಪ ಪಡೆಯಿತು. ಒಟ್ಟಾರೆ ಕಲ್ಯಾಣ ಎಂಬ ಕಸಬಾ ಹೋಬಳಿಯು ಇಂದಿನ ಬಸವಕಲ್ಯಾಣವಾಗುವುದರಲ್ಲಿ ನಿಸ್ಪೃಹವಾಗಿ, ಪ್ರತಿಫಲಾಪೇಕ್ಷೆಯಿಲ್ಲದೆ ದುಡಿದ ಬಾಬಾಸಾಹೇಬ್ ಮಲ್ಲಪ್ಪ ವಾರದ್ ಅವರಂಥವರ ಪಾತ್ರ ಹಿರಿದಾಗಿದೆ ಎಂದು ಬೇವಿನ ಮರದ ಕೆಳಗೆ ಕುಳಿತಿದ್ದ ಕಲ್ಯಾಣದ ಹಿರಿಯರೊಬ್ಬರು ನೆನೆಸಿದರು. 'ಎನಗಿಂತ ಕಿರಿಯರಿಲ್ಲ' ಎಂದ ಬಸವಣ್ಣನನ್ನು ಈ ಬಾಬಾ ಅವರಲ್ಲಲ್ಲದೇ ಮತ್ತೆಲ್ಲಿ ಹುಡುಕುವುದು?

4 ಬಿರುಬಿಸಿಲಲ್ಲಿ ಹಸಿವೆಯಾಯಿತೋ, ಬಾಯಾರಿಕೆಯಾಯಿತೋ ತಿಳಿಯದೇ ಒಂದು ಖಾನಾವಳಿಗೆ ಹೋದೆವು. ಭಾನುವಾರವೆಂದು ಹಲವು ಖಾನಾವಳಿಗಳು ಮುಚ್ಚಿದ್ದವು. ಅಂತೂ ತೆರೆದಿದ್ದ ಒಂದು ಕಾಣಿಸಿತು. ಗಿರಾಕಿಯಿಲ್ಲದೇ ಒಳಗಿನವರು ಒಂದೊಂದು ಬೆಂಚಿನ ಮೇಲೆ ಆರಾಮದಲ್ಲಿ ಕುಳಿತಿದ್ದರು. ಬಾಗಿಲಿನಲ್ಲೇ ಇದ್ದ ಅಜ್ಜಿ ಬರ್‌ಬರ್ರಿ ಎಂದು ಮನೆಗೆ ಬಂದ ಅತಿಥಿಗಳೋ ಎಂಬಂತೆ ಸ್ವಾಗತಿಸಿ ಒಳಗೆದ್ದು ಹೋದರು. ಅವರ ಬೆನ್ನು ಪೂರಾ ಬಾಗಿತ್ತು. ತಮ್ಮ ರಾಜಕೀಯ ಒಲವನ್ನು ಪ್ರದರ್ಶಿಸುವವರಂತೆ ಬಜರಂಗಬಲಿಯ ಚಿತ್ರಪಟದ ಕೆಳಗೆ ಗಲ್ಲಾದಲ್ಲಿ ಅಜ್ಜ ಕುಳಿತಿದ್ದರು. ನಮ್ಮೆದುರು ಒಂದು ತಟ್ಟೆ, ಸಣ್ಣ ಬಟ್ಟಲ ತುಂಬ ಸುಟ್ಟ ಶೇಂಗಾಬೀಜ, ಹಸಿ ತರಕಾರಿ ಬಂದವು.


ಕಲ್ಯಾಣದ ಅಂದದ ಕೋಟೆ ಚಿತ್ರ: ವಿಶ್ವನಾಥ ಸುವರ್ಣ

ಒಂದೊಂದೇ ಕಾಳು ಬಾಯಿಗೆಸೆದು ಕೊಳ್ಳುತ್ತಾ ಸುತ್ತ ತಿರುಗಿದರೆ... ಅಲ್ಲೊಂದು ತೀರಾ ಅಪರೂಪದ ಚಿತ್ರಪಟ. ಇದುವರೆಗೆ ನೋಡಿರದ ಚಿತ್ರಪಟ. ಅದರ ನಡುಮಧ್ಯದಲ್ಲಿದ್ದದ್ದು ಗಾಂಧೀಜಿ. ಅವರ ಹಿನ್ನೆಲೆಯಲ್ಲಿ ಓಂ. ಕೆಳಗೆ 'ಆರ್ಯ ದೇಶ್ ಕೆ ಆದರ್ಶ್ ನೇತಾ, ಮರ್ಯಾದಾ ಪುರುಷೋತ್ತಮ್, ಮಹಾತ್ಮಾ ಶ್ರೀ ಗಾಂಧೀಜಿ' ಎಂದು ಬರೆದಿತ್ತು. ಸ್ವಾತಂತ್ರ್ಯ ವೃಕ್ಷದ ಎಲೆಎಲೆಯಲ್ಲಿಯೂ ಕಾಂಗ್ರೆಸ್ಸಿನ ನೂರಾರು ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳಿದ್ದವು. ಮೇಲೊಂದು ವೃತ್ತದಲ್ಲಿ ನೆಹರೂ ಮಂತ್ರಿಮಂಡಲ. ಎಲ್ಲಕ್ಕಿಂತ ಮೇಲೆ ಭಾರತ ಮಾತಾ. ಗಾಂಧೀಜಿ ಪಕ್ಕ ಸಣ್ಣಗೆ ಕಸ್ತೂರಬಾ. ಕೆಳಗೆ ಕುದುರೆಯನೇರಿ ಕುಳಿತ ನೆಹರೂ, ಶಾಸ್ತ್ರಿ, ಪಟೇಲ, ಅಬ್ದುಲ್ ಕಲಾಂ ಆಜಾದ್. ಅದು 'ಬೌರಿಂಗ್ ಪೇಟ್, ಕೋಲಾರ'ದಲ್ಲಿ 1946ರಲ್ಲಿ ಶ್ರೇಷ್ಠಿಯೊಬ್ಬರಿಂದ ಮುದ್ರಿತವಾದ ಚಿತ್ರಪಟ.


ಅದರ ಪಕ್ಕದಲ್ಲಿ ಶಿರಡಿಯ ಸಾಯಿಬಾಬಾ ಅನ್ನ ಕುದಿಯುತ್ತಿರುವ ಪಾತ್ರೆಗೆ ಬರಿಗೈ ಹಾಕಿ ಅನ್ನ ತೆಗೆಯುತ್ತಿರುವ ಚಿತ್ರಪಟ. ನಗುವ ಸಾಯಿಬಾಬಾರ ಚಿತ್ರ ಇದ್ದಕ್ಕಿದ್ದಂತೆ ಝಗ್ಗನೆ ಬೆಳಗಿತು. ಮೊದಲ ಗಿರಾಕಿಗೆ ಊಟ ಕೊಡುವಾಗ ಸಾಯಿಬಾಬಾರ ಚಿತ್ರಪಟದ ಎದುರಿನ ದೀಪ ಉರಿಯುವುದಂತೆ. ನಮ್ಮೆದುರು ವಿಭೂತಿ ಉಂಡೆ ಬಂತು. ಎಲ್ಲಿಂದ ಬಂದೀರಿ, ಯಾಕ ಬಂದೀರಿ ಎಂದು ಅಜ್ಜಿ ವಿಚಾರಿಸಿದರು. ಉದ್ದೇಶ ತಿಳಿದು ಅವರಿಗೆ ಅಚ್ಚರಿಯಾಯಿತು. 'ಆತಾತು, ನೋಡ್ರೆವ್ವ, ಇದು ಸಣ್ಣೂರು. ಎಲ್ಲಾನು ಒಂದಿನದಾಗ ನೋಡಬಹುದು' ಎಂದು ನೋಡಬೇಕಾದ ಸ್ಥಳಗಳ ಪಟ್ಟಿ ಕೊಟ್ಟರು. 'ಏ, ಹಂಚಿನ ಮ್ಯಾಗಿಂದ ತೋಂಡ್ ಬಾ, ಅವ್ರು ಅಲ್ಲಿಂದ ಇಲ್ಲಿಗ್ ಬಂದಾರ' ಎಂದು ಬಿಸಿಬಿಸಿ ರೊಟ್ಟಿ ಹಾಕಿಸಿದರು.

ಅವರು ಕೊಟ್ಟ ಸ್ಥಳೀಯ ಬೆಲ್ಲಗಟ್ಟಿ ಹಿಡಿದು ಹೊರಬಂದು ಬೋರ್ಡು ನೋಡಿದರೆ ಅದು 'ತಿರುಪತಿ ಲಿಂಗಾಯತ ಖಾನಾವಳಿ'! ತಿರುಪತಿಗೂ ಲಿಂಗಾಯತಕ್ಕೂ ಎಲ್ಲಿಗೆಲ್ಲಿಯ ಸಂಬಂಧ? ಗಾಂಧಿ, ಸಾಯಿಬಾಬಾ, ಬಜರಂಗಬಲಿಯಿರುವ ಭಗವಾಧ್ವಜ ಒಟ್ಟಿಗಿರಲು ಹೇಗೆ ಸಾಧ್ಯ? ಬಸವಣ್ಣ, ಈ ನಂಟು ಬೆಸೆದದ್ದು 'ಅನ್ಯರಿಗೆ ಅಸಹ್ಯ ಪಡಬೇಡ' ಎಂದ ನೀನೇ ಇರಬೇಕು.

5 ಆ ನಸುಕು ನುಲಿಯ ಚಂದಯ್ಯನ ಗವಿ ಹೊರಗಿನ ನಿರ್ಜನ ಮಂಟಪವು ಸೂರ್ಯ ನಮಸ್ಕಾರ ಮಾಡು ಬಾ ಎಂದು ಆಹ್ವಾನಿಸುವಂತಿತ್ತು. ಆದರೆ ಕಾಯಕದವರ ನೆಲದಲ್ಲಿ ಕಸ, ಕೊಳೆಯ ರಾಶಿ ಕಣ್ಣೆದುರು ಬಿದ್ದಿರುವಾಗ ಕಂಡರೂ ಕಾಣದವರಂತೆ ಅಂಗಸಾಧನೆ ಮಾಡಲು ನಾಚಿಕೆಯೆನಿಸಿತು. ಕೆಳಬಿದ್ದ ಹುಣಿಸೆಯ ಬರಲು ಜೋಡಿಸಿ, ಗುಡಿಸಿ, ಕಸ ರಾಶಿ ಮಾಡಿ ಹೊರಬಂದಾಗ ಅಲ್ಪ ಸಮಾಧಾನ!

ಓಹ್, ಇನ್ನು ಬಸವಣ್ಣನನ್ನು ಗತದ ಪಳೆಯುಳಿಕೆಗಳಲ್ಲಿ ಹುಡುಕುವುದಲ್ಲ. ಪ್ರತಿಮೆ, ಪೂಜೆ, ಪಾದಪೂಜೆ, ಜಾತ್ಯಸ್ಥರ ಮಠಗಳು ಬಸವಣ್ಣನನ್ನು ಮುಚ್ಚಿಟ್ಟರೂ, ಬಚ್ಚಿಟ್ಟರೂ ಅವ ಇಲ್ಲಿಯೇ ಇದ್ದಾನೆ, ಒಳಗಿದ್ದಾನೆ ಎಂಬ ವಿಶ್ವಾಸವು ಸೂರ್ಯನಷ್ಟೇ ಸ್ಪಷ್ಟವಾಯಿತು. ದಕ್ಷಿಣದ ಮನೆಗೆ ಹೊರಟದ್ದಾಯಿತು. ❖

ಪದಬಂಧ 2686



ಮೇಲಿನಿಂದ ಕೆಳಕ್ಕೆ

1. ಓದಿದ್ದೆಲ್ಲವನ್ನೂ ಮೂರು ಗಂಟೆಗಳಲ್ಲಿ ಬರೆವ ಎಕ್ಸಾಮು 3
2. ರಕ್ತ ಹರಿವ ತಂತುಗಳಿಂದ ಕೂಡಿದ ಮರ್ಯಾದಾ ಮನುಷ್ಯ 5
3. ಇತ್ತೀಚೆಗೆ ಸುದ್ದಿ ಮಾಡಿದ ಬಂಗಾಳದ ವೃಷಭದ ಊರು 4
4. ಕೊನೆಯ ತನಕ ಅಡೆತಡೆಯಿಲ್ಲದ್ದು 4
6. ಮಾಲೆಯಾಗಿ ಸುರಿವ ದ್ರವ ವಿರಸ ರಹಿತ 3
8. ನಾಶಮಾಡುವ ಬುದ್ಧಿಯುಳ್ಳ ಪಂಚತಂತ್ರದ ನರಿ 4
10. ಭವಭಾರವನ್ನು ಕಳೆಯುವ ಮೂರೆಳೆ ನೂಲು 4
11. ಲಕ್ಷ್ಮೀ ವಾಸಿಸುವ ವನದಲ್ಲಿ ಕನ್ನಡ ಅರಸು ಕುಲ 3
13. ಸಾವಿರಾರು ಮನ್ವಂತರ 5
14. ತಲೆಕೆಳಕಾದ 'ಅಯ್ಯೋ' ಎನ್ನುವ ಭಾವನೆ 3
16. ನೋಡುವ ನಿಸ್ಸೀಮ 4
17. ಇದು ಅಲ್ಪವಾದುದಲ್ಲ ದೊಡ್ಡ ಜೀವ 4
18. ನಡೆಯುವ ರೀತಿ 3

ಎಡದಿಂದ ಬಲಕ್ಕೆ

1. ವನದಲ್ಲಿ ಹರಡುವ ಗಾಳಿ 3
3. ವಸಿಷ್ಠನ ಹಸುವಿನ ಹೆಸರಲ್ಲಿ ಹಾಲು ಮೊಸರು ಒದಗಿಸುವ ವ್ಯವಸ್ಥೆ 3
5. ತೇರು ಸಾಗುವ ಮಾರ್ಗ 4
6. ಸಮದೃಷ್ಟಿಯಿಂದ ನೋಡಲು ಅಭಿಪ್ರಾಯ ಮತ್ತು ಮಾಹಿತಿ ಸಂಗ್ರಹಣೆ 3
7. ಮತ್ತೇರಿದ ಗಜ ಚಿತ್ರದುರ್ಗದ ನಾಯಕನನ್ನು ನೆನಪಿಗೆ ತರುತ್ತದೆ 4
9. ಬದುಕಿನ ವ್ಯವಸ್ಥೆಯ ಬದಲಾವಣೆಗೆ ಕೆಲಸ ಮಾಡುವವ 6
12. ಶಿವನಭಕ್ತ ವೃಷಭ ವಿವಾಹವಾದ ಸ್ಥಳವೇ ಇದು? 6
15. ಮನವನ್ನು ರಮಿಸುವ ಮಲಯಾಳ ಪತ್ರಿಕೆ 4
18. ಛಳಿ ಮತು ಭಯಕ್ಕೆ ದೇಹದಲ್ಲಿ ಆಗುವ ಕಂಪನ 3
19. ಇದೀಗ ತುರ್ತಾಗಿ ಬೇಕಾಗಿರುವ ಜೀವರಕ್ಷಕ ಗಾಳಿ 4
20. ಅರುಣಾಚಲದಲ್ಲಿ ನೆಲಸಿದ ಮಹರ್ಷಿ 3
21. ಕೋಪಕ್ಕೆ ಮುಖ ಕುಂಭದಷ್ಟು ದಪ್ಪ 3

ಪದಬಂಧ ಉತ್ತರ -2685


ಮೇಲಿಂದ ಕೆಳಕ್ಕೆ

1. ಮನೋನಂದನ 2.ವಿಕಲ 3.ಹನುಮ 4.ಮನುಜಕುಲ 7.ಕುಲೀನಿ 9.ಕಲ್ಕತ್ತ 11.ಗಾಯತ್ರಿ 13.ಸಹಾಯ 14.ದತ್ತಕ 15.ಕರುಳು 18.ಪರಮದಾಸ 19.ಜಗುಲಿ 20.ರಥಮ 22.ಅಪಶಕುನ 24.ಸುಶ್ರಾವ್ಯ 25.ಅಣುಕು

ಎಡದಿಂದ ಬಲಕ್ಕೆ

1.ಮಹಾಮೇಧಾವಿ 3.ಹಜಾರರಾಮ 5.ಕಮಾನು 6.ನಂದಗೋಕುಲ 8.ಮಕರಧ್ವಜ 10.ನಗಾ 12.ನಿಸರ್ಗದತ್ತ 15.ಕಲ 16.ಯಮ 17.ಕಾರು 18.ಪತ್ರಿ 19.ಜಯಶಂಕರ 21.ಉಲಿ 23.ಮನವೊಲಿಸು 25.ಅಮರಕೋಶ 26.ಶ್ರಾವಣ 27.ಸಮಗ್ರಕಾವ್ಯ 28.ಕುಬೇರಧನ

ಕಾಡು ರಕ್ಷಿಸಿದ ಧೀಮಂತ



ಭಾರತ ಕಂಡ ಅಸಾಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳಲ್ಲಿ ಒಬ್ಬರಾದ ಸೋಮೇಶ್ವರ ಶ್ಯಾಮಸುಂದರ್ ಅವರು ಕಳೆದ ವಾರ (ಏಪ್ರಿಲ್ 29) ನಮ್ಮನ್ನಗಲಿದರು. ಈ 'ಕಾಡಿನ ದೈತ್ಯ'ನ ಬದುಕು ನಿಸರ್ಗದತ್ತ ಕಾಡಿನಂತೆಯೇ ಸಮೃದ್ಧವಾದುದು. ಹೌದು, ಕಾಡಿನ ಮರಗಳಂತೆ ಅವರ ನೆನಪುಗಳೂ ತಂಪೆರೆಯುವಂಥವು...

ಕೆ.ಉಲ್ಲಾಸ ಕಾರಂತ

ಸೋಮೇಶ್ವರ ಶ್ಯಾಮಸುಂದರ್ – ಸ್ವಾತಂತ್ರ್ಯೋತ್ತರ ಭಾರತ ಕಂಡ ಅತ್ಯಂತ ವೈಶಿಷ್ಟ್ಯಪೂರ್ಣವಾದ ಹಾಗೂ ಅಷ್ಟೇ ಅಪರೂಪದ ಅರಣ್ಯ ಸಂರಕ್ಷಣಾಧಿಕಾರಿ. ಅರಣ್ಯದ ಮೇಲೆ ಅವರಂತೆ 'ತಾಯಿ ಮಮತೆ'ಯನ್ನು ತೋರಿ ಕೆಲಸ ಮಾಡಿದವರು ಸಿಗುವುದು ತೀರಾ ವಿರಳ. ಕಾಡಿನ ರಕ್ಷಣೆಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಾಗ ದೊಡ್ಡವರ ಸ್ಥಾನಮಾನವನ್ನೂ ಲೆಕ್ಕಿಸದೆ, ಅವರ ನಿಲುವು ತಪ್ಪು ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಿದ್ದ ಗಟ್ಟಿಗ. ಅರಣ್ಯದ ಬಗೆಗೆ ನನ್ನಲ್ಲಿ ಆಸಕ್ತಿ ಹುಟ್ಟಿಸಿದ 'ಕಾಡಿನ ದೈತ್ಯ'. ಕಾಡಿನ ಈ ಕಡುಮೋಹಿಯನ್ನೂ ಬಿಡದೆ ನಿರ್ದಯಿ ಕೋವಿಡ್ ಸಾಂಕ್ರಾಮಿಕ ನಮ್ಮಿಂದ ಅವರನ್ನು ಕಿತ್ತುಕೊಂಡಿದೆ.

ದೇಶದ ಅಸಾಮಾನ್ಯ ಅರಣ್ಯ ಸಂರಕ್ಷಣಾಧಿಕಾರಿ ಎನಿಸಿದ್ದ ಶ್ಯಾಮಸುಂದರ್, 1989ರಲ್ಲಿ ಪಿಸಿಸಿಎಫ್ ಆಗಿ ನಿವೃತ್ತರಾದ ನಂತರವೂ ತುಂಬು ಜೀವನವನ್ನು ನಡೆಸಿದವರು. ಅವರು ಮೊನ್ನೆ ತೀರಿಕೊಂಡಾಗ ಅವರಿಗೆ ಭರ್ತಿ ತೊಂಬತ್ತು ವರ್ಷ. ಅರಣ್ಯ ಸಂರಕ್ಷಕರ ಲೆಕ್ಕಾಚಾರದಲ್ಲಿ ತೇಗದ ಮರವೊಂದಕ್ಕೆ ತೊಂಬತ್ತು ವರ್ಷ ತುಂಬಿತೆಂದರೆ ಅದು ತುಂಬು ಜೀವನ ನಡೆಸಿದೆ, ಇನ್ನು ಅದನ್ನು ಕಡಿಯಬಹುದು ಎಂದರ್ಥ!

ನಮ್ಮ ತಂದೆ ಶಿವರಾಮ ಕಾರಂತರ ತಂಗಿಯ ಮಗ ಶ್ಯಾಮಸುಂದರ್; ತಂದೆಯವರನ್ನು ನೋಡಲು ಆಗಾಗ ಪುತ್ತೂರಿಗೆ ಬರುತ್ತಿದ್ದರು. ಅವರನ್ನು ಮೊದಲ ಬಾರಿ ಭೇಟಿ ಆದಾಗ ನಾನಿನ್ನೂ ಏಳು ವರ್ಷದ ಬಾಲಕ. ನನ್ನನ್ನೂ ಅವರ ಜೊತೆ ಕಾಡಿಗೆ ಕರೆದೊಯ್ಯುತ್ತಿದ್ದರು. ಅಲ್ಲಿಂದಲೇ ನಮ್ಮ ಬಾಂಧವ್ಯ ಬೆಳೆದು ಗಾಢವಾಗಿದ್ದು. ಕಾಡು ಉಳಿಸುವ ಕುರಿತು ಅನೇಕ ಬುದ್ಧಿಜೀವಿಗಳ ಮನದಲ್ಲಿ ತುಂಬಿದ್ದ ರಮ್ಯ ಕಲ್ಪನೆಗಳನ್ನೆಲ್ಲ ಕಳಚುವಂತೆ ಮಾಡಿದ ಅವರು, ಕಾಡಿನ ರಕ್ಷಣೆಗೆ ಬೇಕಾದ ಬದ್ಧತೆಯೊಂದಿಗೆ ನನ್ನನ್ನು ಮುಖಾಮುಖಿಯಾಗಿಸಿದರು. ಅವರು ಈ ರೀತಿ ಮುಖಾಮುಖಿ ಆಗುವುದನ್ನು ಜೀವನದುದ್ದಕ್ಕೂ ರೂಢಿಸಿಕೊಂಡು ಬಂದವರು.

ಪ್ರಮುಖ ರಾಜಕೀಯ ನೇತಾರರಾದ ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಆರ್. ಗುಂಡೂರಾವ್ ಹಾಗೂ ನಿಸರ್ಗದ ಬಗೆಗೆ ಕಾಳಜಿ ಹೊಂದಿದಂತಹ ಅರಣ್ಯ ಸಚಿವರಾಗಿದ್ದ ಕೆ.ಎಚ್. ಪಾಟೀಲ, ಅವರಷ್ಟೇ ಅಲ್ಲದೆ ತಮ್ಮ ಸಹೋದ್ಯೋಗಿಗಳು, ಹಿರಿ–ಕಿರಿಯರೆಲ್ಲರನ್ನೂ ಶ್ಯಾಮಸುಂದರ್ ದಶಕಗಳ ಕಾಲ ಪರಿಣಾಮಕಾರಿಯಾಗಿ ಹಾಗೂ ನಾಜೂಕಾಗಿ ನಿಭಾಯಿಸಿದರು, ಕಾಡಿನ ರಕ್ಷಣೆಗೆ ಮಾಡಬೇಕಾದ ಕೆಲಸಗಳ ಕುರಿತೂ ಪ್ರೇರೇಪಿಸಿದರು. ಹತ್ತು ಸಾವಿರ ಸಿಬ್ಬಂದಿಯ ಮುಖ್ಯಸ್ಥರಾಗಿದ್ದ ಅವರು, ಅರಣ್ಯ ಸಂರಕ್ಷಣೆಯ ವಿಷಯದಲ್ಲಿ ರಾಜ್ಯವನ್ನು ದೇಶದಲ್ಲೇ ಮುಂಚೂಣಿಯಲ್ಲಿ ತಂದು ನಿಲ್ಲಿಸಿದವರು.

ಶ್ಯಾಮಸುಂದರ್ ಅವರು ಅರಣ್ಯ ಸಂರಕ್ಷಣೆಗೆ ಕೈಗೊಂಡ ಕ್ರಮಗಳನ್ನು ಭಾರತ ಸರ್ಕಾರದ ಆಗಿನ ಪ್ರಭಾವಿ ಕಾರ್ಯದರ್ಶಿಯಾಗಿದ್ದ ಟಿ.ಎನ್. ಶೇಷನ್ ಬಹುವಾಗಿ ಮೆಚ್ಚಿಕೊಂಡಿದ್ದರು. ಅರಣ್ಯ ಸಂಬಂಧಿ ಹೊಸ ಕಾರ್ಯಕ್ರಮಗಳನ್ನು ಮೊದಲು ಕರ್ನಾಟಕದಲ್ಲಿಯೇ ಅನುಷ್ಠಾನಕ್ಕೆ ತರಬೇಕು, ಅಲ್ಲಿನ ಯಶಸ್ಸು ನೋಡಿಕೊಂಡು ಭಾರತದ ಇತರ ಭಾಗಗಳಲ್ಲಿ ಅದನ್ನು ವಿಸ್ತರಿಸಬಹುದು ಎನ್ನುವುದು ಶೇಷನ್ ಅವರ ಅಭಿಪ್ರಾಯವಾಗಿತ್ತು. ಶ್ಯಾಮಸುಂದರ್ ಅವರ ಕಾರ್ಯ ಅವರನ್ನು ಅಷ್ಟೊಂದು ಪ್ರಭಾವಿಸಿತ್ತು.

ಹಲವು ರಾಷ್ಟ್ರೀಯ ಉದ್ಯಾನಗಳು–ಅಭಯಾರಣ್ಯಗಳ ಸ್ಥಾಪನೆಗೆ ಅಧಿಸೂಚನೆ ಹೊರಡಿಸಿದ್ದು, ರಾಜ್ಯದ ದಟ್ಟ ಕಾನನದಲ್ಲಿ ಮಾನವ ಹಸ್ತಕ್ಷೇಪ ತಡೆದಿದ್ದು, ಮರದ ದಿಮ್ಮಿಗಳಿಗಾಗಿ ಕಾಡು ಕಡಿಯುವ ಪ್ರಮಾಣವನ್ನು ಶೇ 50ರಷ್ಟು ತಗ್ಗಿಸಿದ್ದು ಹಾಗೂ ಭದ್ರಾ ವನ್ಯಜೀವಿ ಅಭಯಾರಣ್ಯದಿಂದ ನಿರಾಶ್ರಿತವಾಗುವ ಗ್ರಾಮಗಳನ್ನು ಸ್ಥಳಾಂತರಿಸುವ ಸಲುವಾಗಿ ಇಪ್ಪತ್ತೈದು ವರ್ಷಗಳ ಮೊದಲೇ ಫಲವತ್ತಾದ ಭೂಮಿಯನ್ನು ಕಾಯ್ದಿರಿಸಿದ್ದು– ಇವು ಶ್ಯಾಮಸುಂದರ್ ಅವರು ತಮ್ಮ ಅವಧಿಯಲ್ಲಿ ಮಾಡಿದ ಕೆಲವು ಗಮನಾರ್ಹ ಕಾರ್ಯಗಳು.

ದರ್ಪತೋರುವ ಆಡಳಿತಶಾಹಿ ನಡುವೆ ವಿನಮ್ರ ಹಾಗೂ ಹೆಡೆಯಾಡುತ್ತಿದ್ದ ಭ್ರಷ್ಟಾಚಾರದ ನಡುವೆ ಪ್ರಾಮಾಣಿಕ ವ್ಯಕ್ತಿತ್ವವನ್ನು ಉಳಿಸಿಕೊಂಡ ಅಧಿಕಾರಿ ಅವರಾಗಿದ್ದರು. ಸೋದರ ಮಾವ ಶಿವರಾಮ ಕಾರಂತರಂತೆಯೇ ಶ್ಯಾಮಸುಂದರ್ ಅವರೂ ಕಥನ ಕುಶಲಿ. ತಾವು ಕಂಡಿದ್ದನ್ನು, ತಮ್ಮ ಸುತ್ತಲಿನ ಅರಣ್ಯ ಮತ್ತು ಸಮಾಜದ ಆಗುಹೋಗುಗಳನ್ನು ದಾಖಲಿಸುವ ಮೂಲಕ ಸಾಹಿತ್ಯವನ್ನೂ ಶ್ರೀಮಂತಗೊಳಿಸಿದ 'ಕಥೆಗಾರ' ಅವರು.

ಉನ್ನತ ವ್ಯಾಸಂಗಕ್ಕಾಗಿ ಮದ್ರಾಸ್‌ಗೆ ಹೋಗಿದ್ದಾಗಲೇ ಭಾರತೀಯ ಅರಣ್ಯ ಸೇವೆಗೆ (ಐಎಫ್‌ಎಸ್) ಸೇರಿದ ಶ್ಯಾಮಸುಂದರ್ ಅವರು, 1952ರಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಸೇವೆಯನ್ನು ಆರಂಭಿಸಿದವರು. ಕಾಲೇಜಿನಲ್ಲಿ ಓದುವಾಗ ಕ್ರಿಕೆಟ್ ಆಟಗಾರನಾಗಿಯೂ ಅವರು ಛಾಪು ಮೂಡಿಸಿದ್ದರು. ಕ್ರಿಕೆಟ್ ಕೌಶಲ ಹೇಗೆ ಅರಣ್ಯ ಸೇವೆಗೆ ಸೇರಲು ನೆರವಾಯಿತು ಎಂಬುದನ್ನೂ ಅವರು ತಮ್ಮ 'ನೆನಪು'ಗಳಲ್ಲಿ ದಾಖಲಿಸಿದ್ದಾರೆ.

ಆಗಷ್ಟೇ ಸ್ವಾತಂತ್ರ್ಯ ಸಿಕ್ಕ ಸಂದರ್ಭ. ಆಗಿನ ಸೌತ್ ಕೆನರಾ ಜಿಲ್ಲೆ ಎಂದರೆ ಈಗಿನ ಕರ್ನಾಟಕದ ಎರಡು ಹಾಗೂ ಕೇರಳದ ಒಂದು ಜಿಲ್ಲೆಯನ್ನು ಒಳಗೊಂಡ ಪ್ರದೇಶ. ಅಷ್ಟೂ ಭಾಗಗಳ ಅರಣ್ಯದ ಉಸ್ತುವಾರಿಗೆ ಒಬ್ಬರೇ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ. ಅಷ್ಟೊಂದು ವಿಶಾಲವಾದ ಪಶ್ಚಿಮಘಟ್ಟ ಪ್ರದೇಶದಲ್ಲಿ ಗಸ್ತು–ತಪಾಸಣೆ ರೌಂಡ್‌ಗಳಿಗೆ ಶ್ಯಾಮಸುಂದರ್ ಅವರು ಎಂದೂ ಬೇಸರಿಸಿದವರಲ್ಲ. ಸೋತು ವಿಶ್ರಮಿಸಿದವರಲ್ಲ. ಭಾಷಾವಾರು ರಾಜ್ಯಗಳ ರಚನೆಯಾದ ಬಳಿಕ ಮೈಸೂರು ರಾಜ್ಯವನ್ನು ಆಯ್ಕೆ ಮಾಡಿಕೊಂಡು ಬಂದ ಶ್ಯಾಮಸುಂದರ್, ತವರಿನ ಅಪ್ಪಟ ಅಭಿಮಾನಿ. ಆದರೆ, ದೇಶದ ಎಲ್ಲ ಪ್ರದೇಶಗಳ ಕಾಡುಗಳೂ ಸಮೃದ್ಧವಾಗಿರಬೇಕು ಎಂದು ಬಯಸಿದ ಧೀಮಂತ.

ರಾಜ್ಯದ ಪ್ರತಿಯೊಂದು ಅಭಿವೃದ್ಧಿ ಯೋಜನೆಗೂ ಅರಣ್ಯದ ಮೇಲಿನ ಅವಲಂಬನೆ ಹೆಚ್ಚಾದಾಗ ಅದನ್ನು ತೀವ್ರವಾಗಿ ವಿರೋಧಿಸಿದವರು ಶ್ಯಾಮಸುಂದರ್. ಬೇಡ್ತಿ ಜಲ ವಿದ್ಯುತ್ ಯೋಜನೆಗೆ ಶ್ಯಾಮಸುಂದರ್ ಅವರ ನೇತೃತ್ವದ ಅರಣ್ಯ ಸಂರಕ್ಷಣಾಧಿಕಾರಿಗಳ ತಂಡ ವಿರೋಧ ವ್ಯಕ್ತಪಡಿಸಿದಾಗ ಆಗಿನ ಸಚಿವರೊಬ್ಬರಿಂದ 'ರಾಷ್ಟ್ರವಿರೋಧಿ' ಎಂದು ಕರೆಸಿಕೊಳ್ಳಬೇಕಾಯಿತು. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರೂ ಅರಣ್ಯ ಸಂರಕ್ಷಣಾಧಿಕಾರಿಗಳ ಮೇಲೆ ಅಸಮಾಧಾನ ವ್ಯಕ್ತಪಡಿಸಿದ್ದರು. ಬಳಿಕ ವಿಷಾದ ವ್ಯಕ್ತಪಡಿಸಿದ್ದೂ ಆಯಿತು. ಅವರ ಕಾಡಿನ ಪ್ರೀತಿಗೆ ಇಂತಹ ಹಲವು ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು.

ಸ್ವಾತಂತ್ರ್ಯೋತ್ತರ ಭಾರತದ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳು, ಅರಣ್ಯ ಸಂರಕ್ಷಣಾ ವಿಧಾನಗಳು, ಜೀವವೈವಿಧ್ಯದ ರಕ್ಷಣೆಗೆ ಎದುರಾದ ತೊಡರುಗಳು, ಆಡಳಿತದ ನಿರ್ವಹಣೆಯಲ್ಲಿ ಎದುರಾದ ಸವಾಲುಗಳು... ಅಬ್ಬಬ್ಬಾ, ಶ್ಯಾಮಸುಂದರ್ ಅವರ ನೆನಪುಗಳ ಬುತ್ತಿ ಎಷ್ಟೊಂದು ಶ್ರೀಮಂತವಾಗಿತ್ತು.

ಎಷ್ಟು ಹೇಳಿದರೂ ತೀರದ ಈ ಅರಣ್ಯ ಸಂರಕ್ಷಣಾಧಿಕಾರಿಯ ಒಳಹೊರಗನ್ನು ಇನ್ನೂ ಹೆಚ್ಚು ತಿಳಿದುಕೊಳ್ಳಲು ಬಯಸುವಿರಾದರೆ ಶ್ಯಾಮಸುಂದರ್ ಹಾಗೂ ಅವರ ಆಪ್ತ ಸಹೋದ್ಯೋಗಿ ಎಸ್. ಪರಮೇಶ್ವರಪ್ಪ ಸೇರಿ ಬರೆದ 'ಫಾರೆಸ್ಟ್ ಕನ್ಸರ್ವೇಶನ್ ಕನ್ಸರ್ನ್ಸ್ ಇನ್ ಇಂಡಿಯಾ' ಮತ್ತು ಕಳೆದ ವರ್ಷ ಶ್ಯಾಮಸುಂದರ್ ಅವರ ಮಗ ಶಿವಶರಣ್ ಸೋಮೇಶ್ವರ ಅವರು ಸಂಪಾದಿಸಿದ 'ರೀಲಿವಿಂಗ್ ದಿ ಮೆಮರೀಸ್ ಆಫ್ ಆ್ಯನ್ ಇಂಡಿಯನ್ ಫಾರೆಸ್ಟರ್' ಪುಸ್ತಕಗಳನ್ನು ಓದುವಂತೆ ನಾನು ಶಿಫಾರಸು ಮಾಡುವೆ.

ಹಾಗೆಂದು, ನಾನು ಐದು ದಶಕಗಳಲ್ಲಿ ಶ್ಯಾಮಸುಂದರ್ ಅವರ ಸಾಂಗತ್ಯದಲ್ಲಿ ಪಡೆದಷ್ಟೂ ಅನುಭವಗಳನ್ನು ಈ ಪುಸ್ತಕಗಳು ಓದುಗರಿಗೆ ದಾಟಿಸುತ್ತವೆ ಎಂದು ಖಾತರಿ ನೀಡಲಾರೆ. ಆದರೆ, ಶ್ಯಾಮಸುಂದರ್ ಅವರ ವಿದ್ವತ್ ಪ್ರತಿಭೆ ಮತ್ತು ಮನದಾಳದ ಚಿತ್ರಣವನ್ನು ಅವುಗಳು ನೀಡಬಲ್ಲವು. ಜತೆಗೆ ಓಲ್ಡ್ ಮಾಂಕ್ ರಮ್ ಮೇಲಿನ ಅವರ ಒಲವನ್ನು ಸಹ ಎತ್ತಿ ತೋರಬಲ್ಲವು!

ಕಪಿಲಾ ಗೋವಿನ ಸಮಗ್ರ ಮಾಹಿತಿ

ಮೊದಲ ಓದು

ದೇಸಿ ತಳಿಗಳ ಆಕಳುಗಳನ್ನು ಸಾಕುವವರೇ ವಿರಳರಾಗಿದ್ದಾರೆ. ದನದ ಸಂತೆಗೆ ಹೋದರೆ ಸಾವಿರ ಆಕಳುಗಳಲ್ಲಿ ಆರೆಂಟು ಶುದ್ಧ ತಳಿಯ ದೇಸಿ ಆಕಳುಗಳೂ ಸಿಗುವುದಿಲ್ಲ. ನಮ್ಮ ಜನ ಮತ್ತೆ ದೇಸಿ ತಳಿಯ ಆಕಳುಗಳನ್ನು ಸಾಕುವಂತಾಗಬೇಕು ಎನ್ನುವುದು ಲೇಖಕ ವಿಶ್ವನಾಥ ಭಟ್ಟ ಗೋಳಿಕ್ಕೈ ಅವರ ಕಳಕಳಿ. ಆ ಆಶಯವನ್ನು ಹೊತ್ತು, ಊರೂರು ಸುತ್ತಿ, ತಜ್ಞರನ್ನೂ ಭೇಟಿಮಾಡಿ ಅವರು ಸಿದ್ಧಪಡಿಸಿದ ಹೊತ್ತಿಗೆಯೇ ಕಪಿಲಾದರ್ಶನ.



ಪು: 65
₹80

ಕಪಿಲಾದರ್ಶನ
ಲೇ: ವಿಶ್ವನಾಥ ಭಟ್ಟ ಗೋಳಿಕ್ಕೈ
ಪ್ರ: ಸದ್ಗತಿ ಪ್ರಕಾಶನ
ಸಂ: 9483665748

ಹೆಸರೇ ಸೂಚಿಸುವಂತೆ ಕಪಿಲಾ ತಳಿಯ ಆಕಳು ಕುರಿತ ಮಾಹಿತಿಯನ್ನು ಈ ಕೃತಿ ಒಳಗೊಂಡಿದೆ. ಆಕಳುಗಳಲ್ಲೆಲ್ಲ ಕಪಿಲಾ ತಳಿಯ ಆಕಳುಗಳು ತುಂಬಾ ಶ್ರೇಷ್ಠ ಎಂದು ಪ್ರತಿಪಾದಿಸುವ ಲೇಖಕರು, ಅದರ ಕ್ಷೀರವನ್ನು ಅಮೃತಕ್ಕೆ ಹೋಲಿಸಿದ್ದಾರೆ. ಈ ಕ್ಷೀರವು ವಾತ, ಪಿತ್ತ, ಕಫ ದೋಷವನ್ನು ನಿವಾರಿಸುವ ಸಾಮರ್ಥ್ಯ ಹೊಂದಿದೆ. ಕಪಿಲೆಯ ಹಾಲು ವಿವೇಕವನ್ನೂ ಬುದ್ಧಿಯನ್ನೂ ಬೆಳೆಸುತ್ತದೆ. ಅಂಗಸೌಷ್ಟವ ವೃದ್ಧಿಗೂ ಸಹಕಾರಿಯಾಗಿದೆ ಎಂದು ವಿವರಿಸುತ್ತಾರೆ. ಕಪಿಲಾ ತಳಿಯಲ್ಲಿರುವ ಗೌರಶಬಲಾ, ಗೌರಪಿಂಗಲಾ, ರಕ್ತಕಪಿಲಾ, ನೀಲಪಾಟಲಾ, ನೀಲಪಿಂಗಾಕ್ಷಿ, ರಕ್ತಪಿಂಗಲಾ, ಬಹುಪಿಂಗಾಕ್ಷಿ, ನೀಲರೋಹಿಣಿ, ಶ್ವೇತಪಿಂಗಾಕ್ಷಿ, ಶ್ವೇತಪಿಂಗಲಾ ಪ್ರಭೇದಗಳ ಸಚಿತ್ರ ಮಾಹಿತಿಯನ್ನೂ ನೀಡಿದ್ದಾರೆ.

ಬಸವ ಭೂಪಾಲರ 'ಶಿವತತ್ವರತ್ನಾಕರ'ದಲ್ಲಿ ಪ್ರಸ್ತಾಪಗೊಂಡ ವಿವರಗಳನ್ನೂ ಈ ಕೃತಿಯಲ್ಲಿ ಬಳಸಿಕೊಳ್ಳಲಾಗಿದೆ. ಧಾರ್ಮಿಕ ಹಿನ್ನೆಲೆಯಲ್ಲೂ ಈ ಗೋವಿನ ಮಹತ್ವವನ್ನು ವಿವರಿಸಲಾಗಿದೆ. ಗೋಹತ್ಯೆ ನಿಷೇಧ ಕಾಯ್ದೆಯ ಕುರಿತು, ಗೋಸಂರಕ್ಷಣೆ ವಿಧಾನದ ಕುರಿತು ಚರ್ಚಿಸಲಾಗಿದೆ. ಹೈದರಾಲಿ ಕಾಲದಲ್ಲಿ ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು. ಗೋಹತ್ಯೆ ಮಾಡುವವರ ಕೈಯನ್ನು ಕತ್ತರಿಸುವ ಶಿಕ್ಷೆಯನ್ನೂ ಆತ ವಿಧಿಸಿದ್ದ ಎಂದೂ ಪ್ರಸ್ತಾಪಿಸಲಾಗಿದೆ. ಗೋವುಗಳ ಆರ್ಥಿಕ ಕ್ಷಮತೆ ಕುರಿತು ಮಾಹಿತಿ ನೀಡುವ ಪ್ರಯತ್ನವನ್ನೂ ಲೇಖಕರು ಮಾಡಿದ್ದಾರೆ. ಗೋವುಗಳಿಗೆ ಸಂಬಂಧಿಸಿದ ಬೇರೆ ವಿಷಯಗಳು ಚರ್ಚಿತವಾಗಿದ್ದರೂ ಕಪಿಲಾ ತಳಿಯ ಆಕಳುಗಳ ವಿಷಯವನ್ನೇ ಈ ಕೃತಿ ತನ್ನ ಕೇಂದ್ರವಾಗಿಸಿಕೊಂಡಿದೆ.


ಚೊಕ್ಕಾಡಿ ಸಾಂಸ್ಕೃತಿಕ ಜಗತ್ತಿನ ದರ್ಶನ

ಎಸ್.ಆರ್. ವಿಜಯಶಂಕರ

ಒಳನೋಟ

'ಕಾಲದೊಂದೊಂದೇ ಹನಿ' ಕವಿ ಸುಬ್ರಾಯ ಚೊಕ್ಕಾಡಿಯವರ ಅನುಭವ ಕಥನ. ತಮ್ಮ 'ಇರುಳ ಸದ್ದುಗಳು' ಎಂಬ ಕವನದ ಸಾಲೊಂದನ್ನು ಶೀರ್ಷಿಕೆಯಾಗಿ ಇರಿಸಿರುವ ಈ ಕೃತಿಯನ್ನು ಚೊಕ್ಕಾಡಿಯವರು ಆತ್ಮಕಥನವೆಂದು ಕರೆಯದೆ 'ಅನುಭವ ಕಥನ' ಎನ್ನಲು ಮುಖ್ಯ ಕಾರಣ, ಇವುಗಳೆಲ್ಲ ಬದುಕಿನ ಪಯಣದಲ್ಲಿ ಪಡೆದ ವೈಯಕ್ತಿಕ, ಸಾಮಾಜಿಕ ಅನುಭವಗಳ ದಾಖಲೆ ಎಂಬ ತಾತ್ವಿಕ ನಿಲುವು. ಆತ್ಮಕಥೆ ಬರೆಯುವಷ್ಟು ದೊಡ್ಡ ವ್ಯಕ್ತಿಯಾಗಲಿ ಅಥವಾ ಅಂತಹ ದೊಡ್ಡ ಜೀವನದರ್ಶನವಾಗಲಿ ತನ್ನದಲ್ಲ ಎನ್ನುವುದು ಅವರ ವಿನಯ. ಆದರೆ ತಾನು ಹುಟ್ಟಿ, ಬೆಳೆದು, ಬಾಳಿ, ಬದುಕುತ್ತಿರುವ ತನ್ನ ಊರಾದ ಚೊಕ್ಕಾಡಿ ಎಂಬ ಸ್ಥಳ ಕೇಂದ್ರವಾಗಿ ತನ್ನ ಬಾಳಿನಲ್ಲಿ ಕಂಡ ಒಂದು ಕಾಲಘಟ್ಟವನ್ನು (1950–2020), ಅದರ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ನೆಲೆಗಳಲ್ಲಿ ಈ ಕೃತಿ ದಾಖಲಿಸುತ್ತದೆ. ಆ ಮೂಲಕ ಸ್ವಾತಂತ್ರ್ಯೋತ್ತರದ ಕನ್ನಡ ಪರಿಸರದಲ್ಲಿ ಏಳು ದಶಕಗಳ ಸಾಂಸ್ಕೃತಿಕ ಚರಿತ್ರೆ ವಿಕಾಸಗೊಂಡ ಕ್ರಮವನ್ನೂ ಸೂಚಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕುಗ್ರಾಮವಾಗಿದ್ದ ಊರು ಚೊಕ್ಕಾಡಿ. ಶಿವರಾಮ ಕಾರಂತರ 'ಬೆಟ್ಟದ ಜೀವ'ದ ಪರಿಸರ. ಬಂಟಮಲೆ ಶ್ರೇಣಿಯ ಸುತ್ತಲಿನ ಗುಡ್ಡಕಣಿವೆಗಳ ನಡುವೆ ಹಬ್ಬಿರುವ ಭತ್ತ, ಕಂಗು, ತೆಂಗುಗಳ ಈ ಕೃಷಿಪ್ರದೇಶ ಯಕ್ಷಗಾನದ ಮೂಲಕ ಕಲಾಭಿರುಚಿಯನ್ನು ಬೆಳೆಸಿಕೊಂಡ ಊರು. ಅಲ್ಲಿ ಅಜ್ಜನಗದ್ದೆ ಗಣಪಯ್ಯ ಭಾಗವತರ ಹಿರಿಯ ಮಗನಾಗಿ ಜನಿಸಿದ ಸುಬ್ರಾಯರು ಬಡತನದಲ್ಲಿ ಓದಿ, ಶಾಲಾ ಮಾಸ್ತರರಾಗಿ ಸ್ವಾಧ್ಯಾಯದಿಂದ ಪದವಿಗಳನ್ನು ಪಡೆದವರು. ಸಾಹಿತ್ಯಾಭಿರುಚಿಯನ್ನೂ ಬೆಳೆಸಿಕೊಂಡವರು. ತಂದೆ ಉಪವೃತ್ತಿಯಾಗಿ ಮಾಡುತ್ತಿದ್ದ ಪುಸ್ತಕ ವ್ಯಾಪಾರ ಅವರ ಸಾಹಿತ್ಯ ಓದಿನ ಮೊದಲ ಪ್ರೇರಣೆ. ಮುಂದೆ ಗೋಪಾಲಕೃಷ್ಣ ಅಡಿಗರ ಕಾವ್ಯದಿಂದ ಪ್ರಭಾವಿತರಾದ ಅವರು ಸುಳ್ಯದ ನಡುವಿರುವ ನವಸಾಹಿತಿಗಳ 'ಸುಮನಸಾ' ವಿಚಾರವೇದಿಕೆ ಕಟ್ಟಿ ತಮ್ಮ ಸುತ್ತಮುತ್ತಲಿನ ಊರುಗಳಲ್ಲಿ ಹೊಸ ಸಾಹಿತ್ಯಾಭಿರುಚಿಯನ್ನು ಬೆಳೆಸಿದರು.



ಪು: 400
₹350

ಕಾಲದೊಂದೊಂದೇ ಹನಿ
ಲೇ: ಸುಬ್ರಾಯ ಚೊಕ್ಕಾಡಿ
ನಿರೂಪಣೆ: ಅಂಜನಾ ಹೆಗಡೆ
ಪ್ರ: ವಿಕಾಸ ಪ್ರಕಾಶನ
ಸಂ: 99000 95204

1970ರ ದಶಕದಲ್ಲಿ ಜಿ.ಎಸ್.ಉಬರಡ್ಕ, ಬಾಲಸುಬ್ರಹ್ಮಣ್ಯ ಕಂಜರ್ಪಣೆ, ಕಿರಣ, ಪ್ರಸಾದ್ ರಕ್ಷಿದಿ, ಪುರುಷೋತ್ತಮ ಬಿಳಿಮಲೆ, ಕೆ.ಪಿ.ಸುರೇಶ, ಅರವಿಂದ ಚೊಕ್ಕಾಡಿ, ಸಂತೋಷ ಚೊಕ್ಕಾಡಿ ಮೊದಲಾದ ಇಂದಿನ ಹಲವು ಬರಹಗಾರರು ಚೊಕ್ಕಾಡಿಯವರ ಒಡನಾಟದಲ್ಲಿ ಇದ್ದವರು. ಪಿ.ಲಂಕೇಶರ ಮೊದಲ ನಾಟಕ 'ನನ್ನ ತಂಗಿಗೊಂದು ಗಂಡು ಕೊಡಿ' ಚೊಕ್ಕಾಡಿಯಿಂದ ಪ್ರಕಟವಾಯಿತು ಎಂಬುದು ಆ ಕಾಲದಲ್ಲಿ ಕನ್ನಡ ಸಾಹಿತ್ಯದ ಹೊಸ ಚಿಂತನೆಯ ಜೊತೆ ಚೊಕ್ಕಾಡಿಯಂತಹ ಒಂದು ಟಾರು ರಸ್ತೆಯೂ ಇಲ್ಲದ ಪುಟ್ಟಹಳ್ಳಿಗೆ ಇದ್ದ ಸಾಂಸ್ಕೃತಿಕ ಸಂಪರ್ಕಗಳನ್ನು ಸೂಚಿಸುತ್ತದೆ. ಕಾರಂತ, ಮಾಸ್ತಿ, ಅಡಿಗ, ತಿರುಮಲೇಶ್ ಹೀಗೆ ಹಲವು ಲೇಖಕರ ಪರಿಚಯ, ಭೇಟಿ ಇತ್ಯಾದಿ ವಿವರಗಳು ಆಗಿನ ಸಾಹಿತ್ಯ–ಸಂಸ್ಕೃತಿಗಳ ಚರಿತ್ರೆ, ಚಿಂತನಾ ಕ್ರಮಗಳಿಗೊಂದು ದಿಕ್ಸೂಚಿ.

'ಚೋಮನ ದುಡಿ' ಕಾದಂಬರಿಯ ನಾಟಕ ಅವತರಣಿಕೆಯಲ್ಲಿ 'ಚೋಮ'ನಾಗಿ ಸುಳ್ಯದಲ್ಲಿ ಅಭಿನಯಿಸಿದ ಚೊಕ್ಕಾಡಿ (ನಿರ್ದೇಶನ ಆರ್.ನಾಗೇಶ್) ಹಲವು ನಾಟಕ ತಂಡಗಳ ಮೂಲಕ ಸುಳ್ಯದ ಸುತ್ತಮುತ್ತ ಹೊಸ ಅಲೆಯ ನಾಟಕಗಳ ಅಭಿರುಚಿಯನ್ನು ಬೆಳೆಸಿದರು. ಸಾಹಿತ್ಯ, ಸಾಂಸ್ಕೃತಿಕ ನೆಲೆಗಳಲ್ಲಿ ತಮ್ಮ ಹಳ್ಳಿಯಲ್ಲಿದ್ದೇ ತಾವೂ ಬೆಳೆಯುತ್ತಾ ತಮ್ಮ ಸುತ್ತಲೂ ಸಾಹಿತ್ಯದ ಸದಭಿರುಚಿಯನ್ನು ಪ್ರೋತ್ಸಾಹಿಸುತ್ತಾ, ಸಾಂಸ್ಕೃತಿಕ ವಿಕೇಂದ್ರೀಕರಣದ ಇನ್ನೊಂದು ಸಾಧ್ಯತೆಯನ್ನು ಅವರು ಕಾಣಿಸಿದರು. ಆರ್ಥಿಕ ಕಾರಣಗಳಿಂದ ವಿದ್ಯಾಭ್ಯಾಸ ಕುಂಠಿತವಾಗಿ ಉದ್ಯೋಗಕ್ಕೆ ಸೇರಿ ಕಾಡಿನ ಮಧ್ಯೆ ಬದುಕಿದ ಚೊಕ್ಕಾಡಿ ಅವರು, ತಮ್ಮ ಸಾಹಿತ್ಯ ಹಾಗೂ ಓದುವ ಹುಚ್ಚನ್ನು ತಾವು ಕಾಡಿಗೆ ಸ್ಪಂದಿಸಿದ ರೀತಿ ಎಂದೇ ತಿಳಿಯುತ್ತಾರೆ.

ಮನೆಯ ಹಿರಿಯ ಮಗನಾಗಿ, ಕೃಷಿಕನಾಗಿ, ಶಿಕ್ಷಕನಾಗಿ, ಸಾಹಿತಿಯಾಗಿ ಇರುವುದೇ ತನ್ನ ಪುರುಷಾರ್ಥಗಳು ಎಂದು ಭಾವಿಸಿ ಬರೆದಿರುವ ಈ ಅನುಭವ ಕಥನದಲ್ಲಿ 47 ವಿಶಿಷ್ಟ ಅಧ್ಯಾಯಗಳಿವೆ. ಒಂದು ಕಾಲಘಟ್ಟದ ವಿವರಗಳನ್ನು ಈ ನಾಲ್ಕೂ ನೆಲೆಗಳಲ್ಲಿ ದಾಖಲಿಸುವ ಈ ಅಧ್ಯಾಯಗಳನ್ನು ಬಿಡಿ ಲೇಖಗಳಂತೆಯೂ ಓದಲು ಸಾಧ್ಯ. ಇಲ್ಲಿನ ಬರವಣಿಗೆ ಚೊಕ್ಕಾಡಿ ಅವರು ನೇರವಾಗಿ ಬರೆದುದಲ್ಲ. ಕೈನೋವಿನಿಂದ ಬಳಲುತ್ತಿದ್ದ ಅವರು ಲಾಕ್‌ಡೌನ್ ಕಾಲದಲ್ಲಿ ಚೊಕ್ಕಾಡಿಯಿಂದ ಮೊಬೈಲ್ ಫೋನ್‌ನಲ್ಲಿ ಹೇಳಿದ್ದನ್ನು ಬೆಂಗಳೂರಿನಲ್ಲಿ ರೆಕಾರ್ಡ್ ಮಾಡಿಕೊಂಡು ಅಂಜನಾ ಹೆಗಡೆ ಅವರು ಟೈಪ್ ಮಾಡಿ ರಚಿತವಾದ ಪುಸ್ತಕವಿದು. ಹಾಗಾಗಿ ಅನುಭವ ಕಥನ ನೇರ ಬರವಣಿಗೆಯ ನಿರೂಪಣಾ ಶೈಲಿಗಿಂತ ತುಸು ಭಿನ್ನವಾದ ಸಂಭಾಷಣಾ ಶೈಲಿಯನ್ನು ಒಳಗೊಂಡಿದೆ. ಇದರಿಂದಾಗಿ ಕಥನ ಕ್ರಮಕ್ಕೊಂದು ಆಪ್ತಧಾಟಿ ಲಭಿಸಿದೆ. ಅದು ಕಾಲಘಟ್ಟದ ವಿವರಗಳನ್ನು ಓದುಗನ ಆಪ್ತ ಅನುಭವವನ್ನಾಗಿಸುತ್ತದೆ.

ಶಿಕ್ಷಕನಾಗಿ ಸುದೀರ್ಘ ಕೆಲಸ ಮಾಡಿದ ಚೊಕ್ಕಾಡಿ, ಶಿಕ್ಷಣಕ್ರಮದ ಬದಲಾವಣೆಗೆ ಸಂಬಂಧಿಸಿದಂತೆ ಹಲವು ಒಳನೋಟಗಳನ್ನು ನೀಡುತ್ತಾರೆ. ಉದಾಹರಣೆಗೆ ಹರ್ಬರ್ಟ್‌ನ ಪಂಚಸೋಪಾನದ ಹಳೆಯ ಶೈಲಿಯಲ್ಲಿ ಪಾಠ ಮಾಡುವ ಕ್ರಮದ ಪುನರವಲೋಕನ ರೀತಿಯನ್ನು ವಿದ್ಯಾರ್ಥಿಗಳ ಕಲಿಕೆಗೆ ಅನುಗುಣವಾಗಿ ಹೇಗೆ ಬದಲಾಯಿಸಿಕೊಳ್ಳಬಹುದು ಎಂಬುದು ಅವುಗಳಲ್ಲಿ ಒಂದು. ಈ ಕೃತಿಯಲ್ಲಿರುವ ಇಂತಹ ಹಲವು ಒಳನೋಟಗಳನ್ನು ಶಿಕ್ಷಣ ಇಲಾಖೆ ಮುಂದಿನ ಶೈಕ್ಷಣಿಕ ಕ್ಷೇತ್ರದ ಬದಲಾವಣೆಗಳ ಸಂದರ್ಭದಲ್ಲಿ ಚರ್ಚಿಸಿ, ಪರಿಶೀಲಿಸಿ ಬಳಸಿಕೊಂಡರೆ ಎಷ್ಟು ಉತ್ತಮ ಎಂಬ ಭಾವನೆ ಓದುಗರಿಗೆ ಬಾರದಿರದು.

ಚೊಕ್ಕಾಡಿಯವರ ಕೃಷಿಲೋಕದ ಅನುಭವ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬದಲಾಗುತ್ತಾ ಹೋದ ಗ್ರಾಮೀಣ ಕೃಷಿ ಆರ್ಥಿಕತೆಯ ಸಂಕೇತದಂತಿದೆ. ಕುಟುಂಬದ ಹಿರಿಯ ಮಗನಾಗಿ ಸಿಕ್ಕಿದ ಸಿಹಿಕಹಿಗಳ ವಿವರಗಳು ಅವರ ಮನಸ್ಸಿನೊಳಗೆ ಹಲವು ವರುಷಗಳ ಕಾಲ ಮನುಷ್ಯ ಸ್ವಭಾವದ ಬಗೆಗಿನ ಹೊಯ್ದಾಟಗಳಿಂದ ಹುಟ್ಟಿದ ಒತ್ತಡದ ಬಿಡುಗಡೆ. ಕರ್ತವ್ಯ ಮತ್ತು ಹಕ್ಕುಗಳ ಪರಸ್ಪರ ಸಂಬಂಧಗಳ ನೈತಿಕ ನೆಲೆಗಳಿಗೆ ಉತ್ತರ ಯಾವುದು ಎಂಬುದು ಈ ಇಳಿವಯಸ್ಸಿನಲ್ಲೂ ಅವರಿಗೆ ಬಗೆಹರಿಯದ ಚಿಂತನೆ.

'ಕವಿತೆ ಎನ್ನುವುದೊಂದು ಕಾಮರೂಪಿ' ಎನ್ನುವುದು ಇಲ್ಲಿ ಚೊಕ್ಕಾಡಿಯವರ ಮಾತು. ಅಡಿಗರ ಕಾವ್ಯಮಾರ್ಗದ ಸಂಕೀರ್ಣ ಶೋಧನೆಗಳನ್ನು ಬಿಟ್ಟು ತಮ್ಮ ಪುಟ್ಟ ಪ್ರಪಂಚದಲ್ಲಿ ಬದುಕು ಹೇಗೆ ಬಂತೋ ಹಾಗೆ ಸ್ವೀಕರಿಸುತ್ತಾ, ಅವರ ಧ್ಯಾನಸ್ಥ ಕವನದ 'ಪಾರಿಜಾತ' ಗಿಡದಂತೆ ಇದ್ದಲ್ಲೇ ಆಕಾಶಕ್ಕೆ ಲಗ್ಗೆ ಇಟ್ಟು ಸುತ್ತಲೂ ಪರಿಮಳ, ಸುಂದರ ಹೂವುಗಳ ನೆರಳಿನ ಪುಟ್ಟ ನೆಲೆ ನಿರ್ಮಿಸಿಕೊಳ್ಳಬೇಕೆಂದು ಹೊರಟವರು ಚೊಕ್ಕಾಡಿ. ಸುಗಮಸಂಗೀತದ ಕಾವ್ಯ ಕವಲು ಅವರಿಗೆ ಹೆಚ್ಚಿನ ಕೀರ್ತಿ ತಂದಿದೆ. ಉತ್ತಮ ಭಾವಗೀತೆಗೆ ಸಂಗೀತವನ್ನು ಅಳವಡಿಸುವುದಕ್ಕೆ ಮತ್ತು ನಿರ್ಮಿಸಿದ ಸಂಗೀತಕ್ಕೆ ಗೀತೆ ಬರೆಯುವುದಕ್ಕೆ ಗುಣಮಟ್ಟದಲ್ಲಿ ವ್ಯತ್ಯಾಸವಿರುತ್ತದೆ ಎಂಬುದನ್ನು ಸ್ವತಃ ವಿಮರ್ಶೆಗಳನ್ನು ಬರೆಯುವ ಚೊಕ್ಕಾಡಿ ಅರಿತಿದ್ದಾರೆ. ಚೊಕ್ಕಾಡಿಯವರ ಕಾವ್ಯ ಪಯಣದ ಅನುಭವ ಕಥನವು ಅವರ ಕಾವ್ಯ ರಚನೆ ಮತ್ತು ಸುಗಮಸಂಗೀತ ಲೋಕ ಎರಡನ್ನೂ ಸಮಾನಾಂತರ ರೇಖೆಗಳಂತೆ ಕಾಣಿಸುತ್ತದೆ. ನಮ್ಮ ಸಾಹಿತ್ಯ–ಸಂಸ್ಕೃತಿ ಚರಿತ್ರೆಯ ದಾಖಲೆಯಾಗಿ ಕವಿಯೊಬ್ಬನ ಆ ವಿವರಣೆಗಳೂ ಮುಖ್ಯವಾಗುತ್ತವೆ.

ಕೆಂಡವ ಮೆಟ್ಟಿದ ಕಾಲುಗಳ ಗಾಯದ ಗುರುತು

ಪದ್ಮನಾಭ ಭಟ್


ವಿಮರ್ಶೆ

'ಕೆಂಡದ ಬೆಳುದಿಂಗಳು' ಗುರುಪ್ರಸಾದ್ ಕಂಟಲಗೆರೆ ಅವರ ಎರಡನೇ ಕಥಾಸಂಕಲನ. ಇದರ ಶೀರ್ಷಿಕೆಯೇ ಹೊಸ ರೂಪಕವೊಂದನ್ನು ಕಟ್ಟಿನಿಲ್ಲಿಸುತ್ತದೆ. ಬೆಳುದಿಂಗಳ ಕನಸಲ್ಲಿ ಕಣ್ಕಟ್ಟು ಮಾಡಿ, ಕೆಂಡದ ಮೇಲೆ ನಿಂತಿರುವ ವಾಸ್ತವವನ್ನು ಮರೆಸುತ್ತಿರುವ ಕಾಲವಿದು; ಸ್ವರ್ಗದ ಪಾರಿಜಾತದ ಭ್ರಮಾಸುವಾಸನೆಯಲ್ಲಿ ಮೂಗುಮುಚ್ಚಿ, ಜೀವಂತ ಚರ್ಮ ಸುಡುತ್ತಿರುವ ವಾಸನೆಯನ್ನು ಮುಚ್ಚುತ್ತಿರುವ ಕಾಲ. ಇಲ್ಲಿನ ಬಹುತೇಕ ಕಥೆಗಳು ಸದ್ಯದ 'ಕಣ್ಕಟ್ಟಿನ ರಾಜಕಾರಣ'ದ ಬಗ್ಗೆ ನೇರವಾಗಿ ಮಾತಾಡದೆಯೂ ಅದರ ಪರಿಣಾಮಗಳನ್ನು ಕಾಣಿಸುತ್ತ ಬೆಚ್ಚಿಬೀಳಿಸುತ್ತವೆ.

ಇಲ್ಲಿನ ಎಲ್ಲ ಕಥೆಗಳೂ ಸಮಾಜದಲ್ಲಿ ದಟ್ಟವಾಗಿ ಬೇರೂರಿರುವ ಜಾತಿ ವ್ಯವಸ್ಥೆಯ ನಾನಾ ರೂಪಗಳನ್ನು ಕಾಣಿಸುತ್ತವೆ. ಈ ಪ್ರಯತ್ನದಲ್ಲಿ ಆಕ್ರೋಶವಿಲ್ಲ; ಗಾಢ ವಿಷಾದವಿದೆ. ಗುರುಪ್ರಸಾದ್ ಅವರಿಗೆ ದಟ್ಟ ಅನುಭವವಿದೆ. ಕತೆ ಹೇಳುವ ಭಾಷೆಯೂ ಒಂದು ಮಟ್ಟಿಗೆ ಸಿದ್ಧಿಸಿದೆ ಎನ್ನುವುದಕ್ಕೆ ಇಲ್ಲಿನ ಹಲವು ಕತೆಗಳೇ ಪುರಾವೆ.

'ಇವ ನಮ್ಮವ' ಕಥೆಯ ಶೀರ್ಷಿಕೆ ಬಸವಣ್ಣನ ವಚನದ ಸಾಲು. ಆದರೆ ಅದು ಇಲ್ಲಿ ತನ್ನ ಮೂಲಾರ್ಥಕ್ಕೆ ವಿರುದ್ಧವಾಗಿ, 'ನಮ್ಮವ'ನಾಗಿರುವುದೇ ಅಪರಾಧವಾಗಿಬಿಡುವ ದುರಂತವನ್ನು ಕಾಣಿಸುತ್ತದೆ. ನಗರವಾಸಿ ಸುಶಿಕ್ಷಿತ, ಉದ್ಯೋಗಿ ಸಾವಿತ್ರಿ ಮನೆಗೆಲಸಕ್ಕಾಗಿ ಶಿವಮ್ಮನನ್ನು ಕರೆಯುತ್ತಾಳೆ. ಒಂದು ದಿನ ಬಂದು ಹೋಗುವ ಅವಳು ಮರುದಿನದಿಂದಲೇ ಬರುವುದಿಲ್ಲ. ಕಥೆಯ ಕೊನೆಯಲ್ಲಿ ಅವಳು ಬರದಿರುವುದಕ್ಕೆ ಕಾರಣ, 'ಸಾವಿತ್ರಿ ಕೂಡ ಶಿವಮ್ಮನ ಜಾತಿಯವಳೇ. ಕೆಳಜಾತಿಯವರ ಮನೆಗೆಲಸಕ್ಕೆ ಹೋದರೆ ಮೇಲು ಜಾತಿಯವರು ಕೆಲಸ ಕೊಡುವುದಿಲ್ಲ' ಎಂಬುದು ಗೊತ್ತಾಗುತ್ತದೆ. ಈ ಕಥೆ ಕುತೂಹಲದಿಂದ ಓದಿಸಿಕೊಂಡು ಹೋಗಿ ಕೊನೆಯಲ್ಲಿ ಬೆಚ್ಚಿಬೀಳಿಸುವ ಜಾತಿವಿಕಾರವನ್ನು ಕಾಣಿಸುತ್ತದೆ. ಆದರೆ ಇಡೀ ಕಥೆಯ ಪಾತ್ರ, ವಿವರಗಳೆಲ್ಲವೂ ಕೊನೆಯ 'ಶಾಕ್'ಗಾಗಿ ಟೂಲ್‌ಗಳಾಗಿ ಬಳಕೆಯಾಗಿ ಅದೊಂದನ್ನೇ ಸಾಧಿಸಿ ಸುಮ್ಮನಾಗಿಬಿಡುತ್ತವೆ.

'ಪ್ರತಿಮೆ ತೆರವು' ಕಥೆಯಲ್ಲಿ, ದಲಿತರ ಅಸ್ಮಿತೆಯ ಗುರುತಾಗಿರುವ ಅಂಬೇಡ್ಕರ್ ಪ್ರತಿಮೆಯನ್ನೇ ಮರೆಮಾಚಿ ತನ್ನ ಹಟ್ಟಿ ಪ್ರವೇಶಿಸಬೇಕಾದ ವಿಚಿತ್ರ ಸನ್ನಿವೇಶವೊಂದಿದೆ. ಇದು ಆಧುನಿಕ ಸಮಾಜದಲ್ಲಿ ಜಾತಿಪ್ರಜ್ಞೆ ಇನ್ನಷ್ಟು ಸಂಕೀರ್ಣವಾಗಿ, ಅದು ಹುಟ್ಟಿಸುವ ದ್ವಂದ್ವಗಳನ್ನು ತುಂಬ ಸಶಕ್ತವಾಗಿ ಹಿಡಿದಿಡುವ ರೂಪಕ. ಆದರೆ ಇದು ಒಂದು ಪಾಸಿಂಗ್ ರೆಫರೆನ್ಸ್ ಆಗಿಯಷ್ಟೇ ಬಂದು, ಕಥೆ ಮತ್ತೆ ಸವೆದ ಜಾಡಿಗೇ ಮರಳುತ್ತದೆ.



ಪು: 120
₹120

ಕೆಂಡದ ಬೆಳುದಿಂಗಳು
ಲೇ: ಗುರುಪ್ರಸಾದ್ ಕಂಟಲಗೆರೆ
ಪ್ರಕಾಶನ: ಕಂಟಲಗೆರೆ ಬುಕ್ಸ್
ಸಂ: 9964521083

ಮೊದಲ ಕಥೆ, 'ಚಾಕರಿ'ಯಲ್ಲಿ ಹಟ್ಟಿಯ ಹುಡುಗರು, ಊರೊಳ್ಳರ ವಿರುದ್ಧ ಸಿಡಿದು ನಿಲ್ಲಲು ಯತ್ನಿಸಿ ತಮ್ಮ ಹಟ್ಟಿಯ ಕುಲ್ವಾಡಿ ನರಸಪ್ಪನಿಂದ ಆ ಪ್ರಯತ್ನದಲ್ಲಿ ವಿಫಲರಾಗುತ್ತಾರೆ. 'ಕುರುವು' ಕಥೆಯನ್ನು ಇದರ ಪಕ್ಕದಲ್ಲಿ ಇಟ್ಟು ನೋಡಬೇಕು. 'ಚಾಕರಿ'ಯಲ್ಲಿ ಶಿಕ್ಷಣವೆಂಬ ಹೊರಗಿನ ವ್ಯವಸ್ಥೆ ತಂದ ಅರಿವು ಜಾತಿ ವ್ಯವಸ್ಥೆಯ ವಿರುದ್ಧ ಬಂಡೇಳಲು ಕಾರಣವಾದರೆ 'ಕುರುವು' ಕಥೆಯಲ್ಲಿ ತನ್ನ ಬದುಕಿನಿಂದಲೇ ಪಡೆದುಕೊಂಡಿರುವ ಅರಿವಿನಿಂದ ದೈವವನ್ನೂ ಪ್ರಶ್ನಿಸುವ, ತಿಪ್ಪೆಗುಂಡಿಯಲ್ಲಿ ಮುಳುಗೇಳಿಸುವ ನರಸಿಂಹನ ಬಂಡಾಯವಿದೆ. ಈ ಎರಡೂ ಪಾತ್ರಗಳ ಹೆಸರು ನರಸಿಂಹ ಎಂದೇ ಆಗಿರುವುದು ಕಾಕತಾಳೀಯವೇ ಆಗಿದ್ದರೂ ಅವುಗಳ ಮುಖಾಮುಖಿ ಹೊರಡಿಸುವ ಧ್ವನಿ ಖಂಡಿತ ಕಾಕತಾಳೀಯವಲ್ಲ.

ಒಳ್ಳೆಯ ಕಥೆಯಾಗುವ ಎಲ್ಲ ಸಾಧ್ಯತೆಗಳು ಇದ್ದೂ ಆಳಕ್ಕಿಳಿಯದ ಹಗುರ ವಿವರಗಳಲ್ಲಿ ಮುಗಿದು ಸೋಲುವ ಕಥೆ 'ಬೇರಿಗಂಟದ ಮರ'. ಈ ಕಥೆಯ ಕೇಂದ್ರದಲ್ಲಿ, ತನ್ನ ತಂದೆಯ ಕಾಲದಿಂದಲೂ ಚಪ್ಪಲಿ ರಿಪೇರಿ ಅಂಗಡಿ ಇಟ್ಟು ಬದುಕುತ್ತಿರುವ ಕಾರಜ್ಜನಿದ್ದಾನೆ. ಅವನ ಸುತ್ತಲಿನ ಜಗತ್ತು ಕ್ರಮೇಣ ಬದಲಾಗುತ್ತ ಹೋಗಿ, ಕೊನೆಗೆ ಅವನೇ ಆ ಜಗತ್ತಿಗೆ ಅನಪೇಕ್ಷಿತ ಗುರುತಾಗಿಬಿಡುವುದು ಈ ಕಥೆಯ ವಸ್ತು. ಅಜ್ಜನ ನೆರಳಿಗೆ ಒಂದು ಆಲದ ಮರವೂ ಇದೆ. ಆದರೆ ಕಥೆಗಾರನ ಈ ಸನ್ನಿವೇಶ, ಪಾತ್ರಗಳ ಒಳಗೆ ಇಳಿಯದೇ ಇರುವುದರಿಂದ, ಸಶಕ್ತ ರೂಪಕಗಳಾಗಬೇಕಾಗಿದ್ದ ಸನ್ನಿವೇಶಗಳು ಬರಿ ವಿವರಗಳಾಗಿಯಷ್ಟೇ ಉಳಿದುಬಿಡುತ್ತವೆ. ಹೀಗಾಗಿಯೇ ಆಲದ ಮರ ಉರುಳುವ ದಾರುಣ ಸಂಗತಿಯೂ ಕಾಡದೆ ಮಾಹಿತಿಯಾಗಿಯಷ್ಟೇ ಗೋಚರಿಸುತ್ತದೆ.

'ಜಾತಿ ಮಾಂಸ' ಈ ಸಂಕಲನದ ಹೆಚ್ಚು ಯಶಸ್ವಿಯಾದ ಕಥೆ. ವಸ್ತು, ಭಾಷೆಯ ಬಳಕೆ, ಶಿಲ್ಪ ಎಲ್ಲದರಲ್ಲಿಯೂ ಈ ಕಥೆಯ ಸೌಷ್ಠವ ಗಮನಾರ್ಹ. ಈಗ ಬಹುಚರ್ಚೆಯಲ್ಲಿರುವ, ರಾಜಕಾರಣ, ಧರ್ಮ, ಜಾತಿ ಎಲ್ಲ ಗದ್ದಲಗಳಲ್ಲಿಯೂ ಕತ್ತಿಯಾಗಿ ಬಳಕೆಯಾಗುತ್ತಿರುವ ಆಹಾರ ರಾಜಕಾರಣವನ್ನು ಬೇರೆಯದೇ ರೀತಿಯಲ್ಲಿ ನೋಡಲು ಒತ್ತಾಯಿಸುವ ಈ ಕಥೆ ಎಲ್ಲಿಯೂ ಅದನ್ನು ವಾಚ್ಯವಾಗಿ ಹೇಳುವುದಿಲ್ಲ. ಲಕ್ಷ್ಮಿದೇವ್ರ ಪೂಜಾರಿ ಊದ್ಗಡ್ಡಯ್ಯನ ಹಂದಿಮಾಂಸ ಪ್ರೀತಿಯ ಸುತ್ತಲೂ ಬೆಳೆಯುತ್ತ ಹೋಗುವ ಈ ಕಥೆ, ಆಹಾರದಲ್ಲಿ ಶ್ರೇಷ್ಠ ಕನಿಷ್ಠ ಎಂದೆಣಿಸುವ ಸಮಾಜದ ಹುಸಿ ನೈತಿಕತೆಯನ್ನು ಬಲವಾಗಿ ಪ್ರಶ್ನಿಸುತ್ತದೆ. ಹಾಗೆ ಪ್ರಶ್ನಿಸುವುದರ ಜೊತೆಗೆ ಒಂದು ಊರಿನ ಕಥನವಾಗಿ, ಊದ್ಗಡ್ಡಯ್ಯನ ಬದುಕಿನ ಕಥನವಾಗಿಯೂ ಅದು ಗೆಲ್ಲುತ್ತದೆ. ಕಥೆಗಾರನ ಯಾವ ಹೊರಗಿನ ಭಾರವನ್ನೂ ಹೊರದೆ ತನ್ನಷ್ಟಕ್ಕೆ ತಾನು ಬೆಳೆಯುವ ಕಥೆ, ಮುಗಿದ ಮೇಲೂ ಮನಸೊಳಗೆ ಬೆಳೆಯುವ ಗುಣ ಹೊಂದಿರುವಂಥದ್ದು.

'ಎರಡನೇ ಹೆಂಡ್ತಿ' ಇನ್ನೊಂದು ಸಶಕ್ತ ಕಥೆ. ಎರಡನೇ ಹೆಂಡತಿಯಾಗಿ ಬಂದು, ಗಂಡನನ್ನು ಕಳೆದುಕೊಂಡು ಸಂಸಾರ ಪೊರೆಯುವ ಲಕ್ಷ್ಮವ್ವನಿಗೆ ತನ್ನ ಹೆಣ್ಣುಮಕ್ಕಳನ್ನು ಮಾತ್ರ ಎರಡನೇ ಸಂಬಂಧಕ್ಕೆ ಕೊಡಬಾರದು ಎಂಬ ಹಟ. ಆದರೆ ಇಡೀ ಸಮಾಜವೇ ಅವಳ ಸುತ್ತ ನಿಂತು, ಮೂಢನಂಬಿಕೆಯನ್ನು ಕಟ್ಟಿ, ಅವಳನ್ನು ಅಸಹಾಯಕಳನ್ನಾಗಿ ಮಾಡುತ್ತದೆ. ಅನಿವಾರ್ಯವಾಗಿ ಮತ್ತೆ ಮಗಳಿಗೂ ಎರಡನೇ ಸಂಬಂಧಕ್ಕೇ ಕೊಡುವ ಸೂಚನೆಯೊಂದಿಗೆ ಈ ಕಥೆ ಮುಗಿಯುತ್ತದೆ. ಈ ಎಲ್ಲವನ್ನೂ ಅಸಹಾಯಕನಾಗಿ ನೋಡುವ ಮೋಹನನ ಶೈಕ್ಷಣಿಕ ಪ್ರಜ್ಞೆಯೂ ಸಮಾಜದ ಕ್ರೌರ್ಯದ ಎದುರು ನಿಸ್ಸಹಾಯಕವಾಗಿಬಿಡುತ್ತದೆ.

ಇಲ್ಲಿನ ಹಲವು ಕಥೆಗಳು ಪ್ರಾರಂಭವಾಗುವುದು ಒಂದು ಪಾತ್ರದಿಂದ, ನಂತರ ಕೇಂದ್ರೀಕೃತವಾಗುವುದು ಇನ್ನೊಂದು ಪಾತ್ರದ ಮೇಲೆ. ಈ ಕೇಂದ್ರದ ಪಲ್ಲಟವೇ ಕೆಲವು ಕಡೆ ಅವರ ಕಥೆಗಳ ಶಿಲ್ಪವನ್ನು ಸಡಿಲಗೊಳಿಸುವುದಿದೆ. 'ಜಾತಿ ಮಾಂಸ' ಕಥೆ ಕುರಿ ಭೈರನ ಗಟ್ಟಿಯಾದ ವ್ಯಕ್ತಿಚಿತ್ರಣದ ಮೂಲಕ ಆರಂಭವಾಗುತ್ತದೆ. ಆದರೆ ಅದು ಕೊನೆಗೂ ಅವನ ಕಥೆಯಲ್ಲ, ಊದ್ಗಡ್ಡಯ್ಯನ ಕಥೆ. 'ಎರಡನೇ ಹೆಂಡ್ತಿ' ಕಥೆಯಲ್ಲಿಯೂ ಈ ಪಲ್ಲಟ ಕಥೆಯ ಶಿಲ್ಪವನ್ನು ಶಿಥಿಲಗೊಳಿಸಿರುವುದನ್ನು ಗಮನಿಸಬಹುದು. ಹಾಗೆಂದು ಗಟ್ಟಿಯಾದ ಕೇಂದ್ರವೊಂದಕ್ಕೆ ಅಂಟಿಕೊಂಡು ಕಥೆಯನ್ನು ಬಿಗಿಯಾಗಿ ಹೆಣೆಯುವ ಶಕ್ತಿ ಗುರುಪ್ರಸಾದ್ ಅವರಿಗೆ ಇಲ್ಲವೆಂದೇನಲ್ಲ. ಅವರ ಹೆಣಿಗೆಯ ಶಕ್ತಿಯನ್ನು 'ಟಿಪ್ಪು' ಕಥೆಯಲ್ಲಿ ನೋಡಬಹುದು. ಈ ಸಂಕಲನದ ಯಶಸ್ವಿ ಕಥೆಗಳಲ್ಲೊಂದಾದ 'ಟಿಪ್ಪು', ಹೆಸರಿನ ಕಾರಣಕ್ಕೆ ಮುಗ್ಧ ಬಾಲಕನೊಬ್ಬ ದೇಶದ್ರೋಹಿಯಾಗುವ, ದಾಳಿಗೆ ಒಳಗಾಗುವ ದಾರುಣ ಸನ್ನಿವೇಶವಿದೆ. 'ಅವನ ಹೆಸರು ಟಿಪ್ಪು' ಎಂದೇ ಆರಂಭವಾಗುವ ಈ ಕಥೆ ಎಲ್ಲಿಯೂ ಕೇಂದ್ರದಿಂದ ಆಚೀಚೆ ಹರಿದು ಜಾಳಾಗುವುದಿಲ್ಲ. ಮನುಷ್ಯನಿಗಿಂತ ಧರ್ಮ ಮುಖ್ಯವಾಗುವ, ಹೆಸರೇ ಮಗುವಿನ ವ್ಯಕ್ತಿತ್ವದ ಹಣೆಪಟ್ಟಿಯಾಗುವ ಅತ್ಯಂತ ಹೇಯ ವಾಸ್ತವವನ್ನು ಮುಖಕ್ಕೆ ಹೊಡೆದ ಹಾಗೆ ಹೇಳುತ್ತದೆ.

ಗುರುಪ್ರಸಾದ್ ಅವರ ಕಥನಜಗತ್ತು ಜಗಮಗಿಸುವ ದೀಪದ ಬೆಳಕಿನ ಅಡಿಯ ಅಂಧಕಾರದಲ್ಲಿ ನರಳುತ್ತಿರುವ ಜೀವಗಳದ್ದು. ಆ ಜಗತ್ತಿನ ಕುರಿತು ಒಂದು ಬಗೆಯ ಆತ್ಮಾವಲೋಕನ ಮತ್ತು ವಿಷಾದದ ಭಾವದಲ್ಲಿ ಅವರು ಬರೆಯುತ್ತಾರೆ. ಎಷ್ಟೋ ವರ್ಷಗಳ ಹೋರಾಟದ ನಂತರವೂ ಕನಿಷ್ಠ ಗೌರವದ ಬದುಕು ದಕ್ಕಿಸಿಕೊಳ್ಳಲು ಆಗದ ಜನರ ಕುರಿತು, 'ಯಾಕೆ ಹೀಗಾಗುತ್ತಿದೆ' ಎಂಬ ಪ್ರಶ್ನೆಯನ್ನು ತಮಗೆ ತಾವೇ ಕೇಳಿಕೊಳ್ಳುತ್ತಲೇ ಅವರು ಬರೆಯುತ್ತಿರುವಂತಿದೆ. ಹಾಗಾಗಿಯೇ ಅವರ ಕಥೆಗಳು ಅವರೊಳಗಿನ ಪ್ರಶ್ನೆಗಳನ್ನು ನಮಗೂ ಬಹುತೀಕ್ಷ್ಣವಾಗಿ ದಾಟಿಸುತ್ತವೆ; ಬೆಂಬಿಡದೆ ಕಾಡುತ್ತವೆ. ಇದೇ ಕಾರಣಕ್ಕೆ 'ಕೆಂಡದ ಬೆಳುದಿಂಗಳು' ನಾವೆಲ್ಲರೂ ಓದಿಕೊಳ್ಳಬೇಕಾದ ಕೃತಿ ಮತ್ತು ಗುರುಪ್ರಸಾದ್ ಗಮನಿಸಲೇಬೇಕಾದ ಬರಹಗಾರ.

ಕಣ್ಣಿಲ್ಲದ ಕಾಟಿಗೆ ಸಿಕ್ಕಿತು ಸೂರು

ಅಖಿಲೇಶ್ ಚಿಪ್ಪಳಿ

ಏಪ್ರಿಲ್ ತಿಂಗಳ ಕೊನೆಯಲ್ಲಿ, ಸಾಗರದ ಮಂಚಾಲೆಯ ಮಿತ್ರರೊಬ್ಬರು ಫೋನ್ ಮಾಡಿ, ಕಲ್ಲು ಕ್ವಾರಿಯಲ್ಲಿ ಕಾಡುಕೋಣವೊಂದು ಬಿದ್ದಿದೆ, ಪ್ರಾಯಶಃ ಅದಕ್ಕೆ ಕಣ್ಣು ಕಾಣುತ್ತಿಲ್ಲ, ಅರಣ್ಯ ಇಲಾಖೆಗೆ ಫೋನ್ ಮಾಡಿ ವಿಷಯ ತಿಳಿಸಿದ್ದೇವೆ ಎಂದರು. ಇಲಾಖೆಯ ಸಿಬ್ಬಂದಿ ಬಂದು ನೋಡಿದರು. ನೆರಳಿಲ್ಲದ ಕಲ್ಲುಕ್ವಾರಿಯಲ್ಲಿ ಕಾಟಿ ಬಳಲುತ್ತಿತ್ತು. ಶಿವಮೊಗ್ಗದ ವನ್ಯಜೀವಿ ವೈದ್ಯರಿಗೆ ನಾನು ವಿಷಯ ಮುಟ್ಟಿಸಿದೆ. ಸಂಜೆಯ ವೇಳೆಗೆ ಅವರು ಬಂದರು. ಅರಿವಳಿಕೆ ಮದ್ದುನೀಡಿ, ಕಾಟಿಯನ್ನು ಎಚ್ಚರ ತಪ್ಪಿಸಿದರು.

ಪ್ರಾದೇಶಿಕ ಪ್ರಾಬಲ್ಯಕ್ಕಾಗಿ ನಡೆದ ಕಾಳಗದಲ್ಲಿ ಕಾಟಿಯ ಎರಡೂ ಕಣ್ಣುಗಳು ಕಿತ್ತು ಹೋಗಿದ್ದವು. ಸಂತತಿ ಮುಂದುವರೆಸುವ ಕಾಳಗ ಕಾಟಿಯ ಭವಿಷ್ಯವನ್ನೇ ನುಂಗಿ ಹಾಕಿತ್ತು. ಅಲ್ಲದೆ, ಹೊಟ್ಟೆಯ ಕೆಳಭಾಗದಲ್ಲಿ ಆರಿಂಚು ಉದ್ದದ ಆಳವಾದ ಗಾಯ, ಪಶುವೈದ್ಯರು ಆ್ಯಂಟಿಬಯಾಟಿಕ್ ಚುಚ್ಚುಮದ್ದಿನ ಜೊತೆಗೆ ಐದು ಬಾಟಲು ಡ್ರಿಪ್ ಹಾಕಿದರು. ಅಷ್ಟರಲ್ಲಿ ಕಾಟಿಗೆ ಎಚ್ಚರವಾಯಿತು. ಟ್ಯಾಂಕರಿನಿಂದ ಸುರಿದ ನೀರನ್ನು ಅಲ್ಪ ಹೀರಿತು. ಅಷ್ಟರಲ್ಲಿ ಕಾಟಿಯು ಕ್ವಾರಿಯಿಂದ ಹತ್ತಿಹೋಗಲು ಅನುವಾಗುವಂತೆ ದಾರಿ ಮಾಡಿಟ್ಟಿದ್ದರು. ಇಲಾಖೆಯ ಸಿಬ್ಬಂದಿ ಅದರ ಕಾವಲಿಗೆ ನಿಂತಿದ್ದರು.

ಮಾರನೇ ದಿನ ಹೊತ್ತಾರೆಯಲ್ಲೇ ಎದ್ದು, ಒಂದು ಹೊರೆಯಾಗುವಷ್ಟು ಕ್ಯಾಲಿಯಾಂಡ್ರಾ ಸೊಪ್ಪನ್ನು ಮುರಿದು ಕಾಟಿಗೆ ತಿನ್ನಿಸುವ ಸಾಹಸಕ್ಕೆ ಮುಂದಾದೆವು. ಕಾಟಿಯು ಕಲ್ಲು ಕ್ವಾರಿಯಿಂದ ಮೇಲೆ ಹೋಗಿ, ಪೊದೆಯಲ್ಲಿ ನಿಂತಿತ್ತು. ರಾತ್ರಿಯ ಹೊತ್ತು ನಾಲಗೆಗೆ ನಿಲುಕಿದ ಕೊಂಚ ಬಿದಿರು ಸೊಪ್ಪನ್ನು ತಿಂದ ಕುರುಹು ಇತ್ತು. ಕಾಟಿಯೋ ಜನಗಳ ದಟ್ಟಣೆಯಿಂದ ಕೆರಳಿತ್ತು. ತಾತ್ಕಾಲಿಕವಾಗಿ ಅದಕ್ಕೆ 'ಭೀಮ' ಎಂದು ಹೆಸರಿಟ್ಟು, ರಮಿಸುವ ವ್ಯರ್ಥ ಪ್ರಯತ್ನ ಮಾಡಿದೆ. ಸೊಪ್ಪನ್ನು ಆದಷ್ಟು ಅದರ ಬಾಯಿಯ ಹತ್ತಿರ ಎಸೆಯುವ ಯತ್ನ ಫಲ ನೀಡಿದರೂ, ಅದು ತಿನ್ನಲಿಲ್ಲ, ಬದಲಿಗೆ ಹತ್ತಿರದ ಹುಣಾಲು ಗಿಡವನ್ನು ಸಿಟ್ಟಿನಿಂದ ಘಟ್ಟಿಸಿತು.

ನಾಲ್ಕು ವರ್ಷದ ಕಾಟಿಯನ್ನು ಉಳಿಸಲೇಬೇಕು ಎಂಬ ಇಚ್ಛೆ ನಮ್ಮದು. ನಿಸರ್ಗದ ನಿಯಮದಂತೆ, ಅದು ಹೇಗಾದರೂ ಬದುಕಲಿ ಎನ್ನುವುದು ಕೆಲವರ ಅಭಿಪ್ರಾಯ. ಮತ್ತೆ ಶಿವಮೊಗ್ಗದ ವನ್ಯಜೀವಿ ವೈದ್ಯರು ಬಂದರು. ಅವರ ಅಭಿಪ್ರಾಯದಂತೆ, ಅದು ಇಲ್ಲಿಗೆ ಬಂದಮೇಲೆ ಚೇತರಿಸಿಕೊಂಡಿದೆ. ಅದನ್ನು ಹಿಡಿದು ಮೃಗಾಲಯಕ್ಕೆ ಸಾಗಿಸುವುದು ಒಳ್ಳೆಯದು ಎಂದರು. ವನ್ಯಜೀವಿ ಸಂರಕ್ಷಣಾ ಕಾಯ್ದೆ (1972)ರ ಪರಿಚ್ಛೇದ 2ರ ಅಡಿಯಲ್ಲಿ ಸಂರಕ್ಷಿತ ಜೀವಿಯಾದ ಕಾಟಿಯನ್ನು ಸ್ಥಳಾಂತರ ಮಾಡುವುದಕ್ಕೆ ಅರಣ್ಯಭವನದ ಪರವಾನಗಿ ಕಡ್ಡಾಯ. ಇಂತಹ ಔಪಚಾರಿಕ ನಿಯಮಗಳಿಗೆ ಇ-ಮೇಲ್ ಮೂಲಕ ಪರಿಹಾರ ಸಿಕ್ಕಿತು. ಸ್ಥಳಾಂತರ ಮಾಡಲು ಪರವಾನಿಗೆ ಸಿಕ್ಕಿತು. ಅಷ್ಟರಲ್ಲಿ ಕಾಟಿಯು ಕಾಡಿನಲ್ಲಿ ದೂರ ಕ್ರಮಿಸಿತ್ತು. ಅಲ್ಪ-ಸ್ವಲ್ಪ ಆಹಾರವೇನೋ ಸಿಕ್ಕಿತ್ತಾದರೂ ಮುಖ್ಯವಾದ ಜೀವಜಲ ಅದಕ್ಕೆ ಮರೀಚಿಕೆಯಾಗಿತ್ತು. ಸಿಬ್ಬಂದಿ ಪ್ರಕಾರ, ಕಾಟಿ ಚಲಿಸುತ್ತಿದ್ದ ದಿಕ್ಕಿನಲ್ಲೊಂದು ಕೆರೆ ಇತ್ತು.

ಕಾಟಿಯನ್ನು ಮೃಗಾಲಯಕ್ಕೆ ಸ್ಥಳಾಂತರಿಸುವ ಕೆಲಸ ಬಹಳ ಸವಾಲಿನದು. 1500 ಕೆ.ಜಿ. ತೂಗುವ ದೈತ್ಯದೇಹಿಯನ್ನು ಎತ್ತಿ ಲಾರಿಗೆ ಹಾಕಲು ಸೂಕ್ತವಾದ ವ್ಯವಸ್ಥೆ ಇರಬೇಕು. ಕಾಡಿನ ಮಧ್ಯದಲ್ಲಿ ಎಚ್ಚರ ತಪ್ಪಿಸಿ, ಅದನ್ನು ರಸ್ತೆಯವರೆಗೆ ಹೊತ್ತು ತರುವುದು ಅಸಾಧ್ಯದ ಮಾತು. ಕ್ರಮಬದ್ಧ ಕ್ರಿಯಾಯೋಜನೆಯನ್ನು ಮುಂಚಿತವಾಗಿ ಸಿದ್ಧಪಡಿಸಬೇಕಿತ್ತು. ರಾತ್ರಿ ಹೊತ್ತು ಕಾಟಿಯನ್ನು ಹಿಂಬಾಲಿಸಲು ಸಿಬ್ಬಂದಿ ಬೇಕು. ಅಂತೂ ಬೆಳಗ್ಗೆ 6 ಗಂಟೆಗೆ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕು ಮತ್ತು ಶಿವಮೊಗ್ಗದ ಸಿಂಹಧಾಮದಲ್ಲಿರುವ ಪಂಜರವನ್ನು ರಾತ್ರಿಯೇ ಸಾಗರಕ್ಕೆ ತರುವ ವ್ಯವಸ್ಥೆ ಮಾಡಬೇಕು. ಪಂಜರವನ್ನು ಇಳಿಸಲು ಮತ್ತು ಲಾರಿಗೆ ಏರಿಸಲು ಕ್ರೇನ್ ಬೇಕು ಎಂದು ನಿರ್ಧರಿಸಿ ಹಿಂದಿನ ದಿನವೇ ವ್ಯವಸ್ಥೆ ಮಾಡಿಕೊಳ್ಳಲಾಯಿತು. ಸಮಾಲೋಚನಾ ಸಭೆ ಮುಗಿಯುವಷ್ಟರಲ್ಲಿ, ಸ್ಥಳದಿಂದ ಒಂದು ಒಳ್ಳೆಯ ಸುದ್ದಿ ಬಂತು. ಕಾಟಿ ಕೆರೆಗೆ ಇಳಿದು ನೀರು ಕುಡಿಯುತ್ತಿತ್ತು. ಬಹುಶಃ ವಾರದ ಬಾಯಾರಿಕೆಯನ್ನು ಒಂದೇ ಬಾರಿ ನೀಗಿಸಿಕೊಂಡಿತು. ಸುಮಾರು ಹದಿನೈದು ನಿಮಿಷ ಜೀವಜಲವನ್ನು ಹೀರಿತು. ಇದೊಂದು ನಮ್ಮ ಯೋಜಿತ ಕಾರ್ಯಾಚರಣೆಗೆ ಧನಾತ್ಮಕವಾದ ಅಂಶ.

ಏಪ್ರಿಲ್ 30ರ ಮುಂಜಾವಿನಲ್ಲಿ ಸ್ಥಳಕ್ಕೆ ತಲುಪುವ ಹೊತ್ತಿಗೆ ಆರು ಗಂಟೆಯಾಗಿತ್ತು. ಹಿಂದಿನ ರಾತ್ರಿ ಭರ್ಜರಿ ಮಳೆಯೂ ಆಗಿದ್ದು, ಕಾಡುಕೋಣದ ಆರೋಗ್ಯ ಹಿತದೃಷ್ಟಿಯಿಂದ ಒಳಿತಾಗಿತ್ತು. ವನ್ಯಜೀವಿ ತಜ್ಞರು, ತಜ್ಞ ವೈದ್ಯರು ಸ್ಥಳಕ್ಕೆ ಬರುವ ಹೊತ್ತಿಗೆ ಸುಮಾರು ಏಳು ಗಂಟೆ. ಸಂಜೆ ನೀರು ಕುಡಿದ ಕಾಟಿಯು ರಾತ್ರಿ ಸುಮಾರು ಅರ್ಧ ಕಿ.ಮೀ ಕ್ರಮಿಸಿತ್ತು. ಕೆರೆಯ ಪಕ್ಕದಲ್ಲಿ ಇರುವ ಸಿಪಿಟಿ(ಕೌ ಪ್ರಿವೆನ್ಷನ್ ಟ್ರೆಂಚ್ – ಅರಣ್ಯ ಒತ್ತುವರಿಯನ್ನು ತಡೆಯುವ ಸಲುವಾಗಿ ಅರಣ್ಯ ಇಲಾಖೆಯವರು ತೆಗೆಯುವ ಚಿಕ್ಕರೂಪದ ಹಳ್ಳ) ಗುಂಟ ಚಲಿಸಿ, ದಟ್ಟವಾದ ಪೊದೆಯಲ್ಲಿ ನಿಂತಿತ್ತು.

ಆ ಭಾಗಕ್ಕೆ ಲಾರಿಯಾಗಲೀ ಕ್ರೇನ್ ಆಗಲೀ ಹೋಗುವ ಅನುಕೂಲವಿರಲಿಲ್ಲ. ಕಾಟಿಯನ್ನು ನಿಧಾನವಾಗಿ ರಸ್ತೆಯ ಕಡೆಗೆ ಹೋಗುವ ಹಾಗೆ ಮಾಡಬೇಕು. ಕಣ್ಣಿಲ್ಲದ ಕಾಟಿಗೆ ತೀರಾ ಗಾಬರಿ ಮಾಡುವ ಹಾಗಿಲ್ಲ. ನಮ್ಮ ಯೋಚನೆಗಳು, ಯೋಜನೆಗಳು ಕಾಟಿಗೆ ಅರ್ಥವಾದರೆ ಅಡ್ಡಿಯಿಲ್ಲ. ಅದೊಂದು ವನ್ಯಜೀವಿ, ನಮ್ಮೆಲ್ಲಾ ಯೋಜನೆಗಳನ್ನು ತಲೆಬುಡ ಮಾಡಿ ಇಡೀ ಕಾರ್ಯಾಚರಣೆಯೇ ಬೇರೊಂದು ರೂಪ ಪಡೆಯುವ ಸಾಧ್ಯತೆ ಬಹಳ ಹೆಚ್ಚಾಗಿತ್ತು. ಕಣ್ಣು ಕಳೆದುಕೊಂಡ ಕಾಟಿ ಹೇಗಿದ್ದರೂ ಕಾಡಿನಲ್ಲಿ ಹೆಚ್ಚು ದಿನ ಬದುಕುವುದಿಲ್ಲ, ಆದ್ದರಿಂದ, ಇಂಥದೊಂದು ಅಪಾಯಕಾರಿ ಕಾರ್ಯಾಚರಣೆಗೆ ಮುಂದಾಗಿದ್ದೆವು.

ಕಾಟಿಗಳು ಹೆಚ್ಚಾಗಿ ರಾತ್ರಿ ವೇಳೆ ಚುರುಕಾಗಿರುತ್ತವೆ. ಹೀಗಾಗಿ ಬೆಳಗಿನ ಕಾರ್ಯಾಚರಣೆಗೆ ಮನಸ್ಸು ಮಾಡಿದ್ದೆವು. ಎಂಟು ಗಂಟೆಗೆ ಇಲಾಖೆಯ ಸಿಬ್ಬಂದಿ, ವೈದ್ಯರು, ತಜ್ಞರು ಎಲ್ಲಾ ಸೇರಿದರು. ತಜ್ಞ ವೈದ್ಯರು, ಅರಿವಳಿಕೆ ಚುಚ್ಚುಮದ್ದನ್ನು ತಯಾರು ಮಾಡಿಟ್ಟುಕೊಂಡರು. ಬೆಟ್ಟದ ಮೇಲ್ಭಾಗದಿಂದ ಕಾರ್ಯಾಚರಣೆ ಪ್ರಾರಂಭವಾಯಿತು. ಮೊದಲ ಹತ್ತು ನಿಮಿಷ ಕಾಟಿಯನ್ನು ಎಬ್ಬಿಸುವುದೇ ಕಷ್ಟಕರವಾಯಿತು.

ಚಂಚಲ ಮನಸ್ಸು ಅಪಾಯವಾಗಿರಬಹುದೇ ಎಂದು ಶಂಕಿಸಿತು. ಇಲ್ಲಾ! ಕಿವಿಗಳು ಆಡುತ್ತಿರುವ ದೃಶ್ಯ ಕಾಣಿಸಿತು. ಹತ್ತು ನಿಮಿಷದ ನಂತರ ಕಾಟಿ ಎದ್ದುನಿಂತು, ಪರಿಸ್ಥಿತಿಯನ್ನು ಅವಲೋಕನ ಮಾಡುವಂತೆ ಅತ್ತಿತ್ತ ತಲೆ ಆಡಿಸಿತು. ಸಿಬ್ಬಂದಿ ಗಲಾಟೆ ಹೆಚ್ಚಾಯಿತು. ನಿಧಾನವಾಗಿ ಹಳ್ಳಕ್ಕೆ ಇಳಿಯಿತು. ಇದೀಗ ನಮ್ಮಗಳ ಕೆಲಸ ಸುಲಭ. ಹಳ್ಳದ ಗುಂಟ ನಡೆಯುತ್ತಾ ರಸ್ತೆಯ ಹತ್ತಿರ ಬಂತು. ಅರಿವಳಿಕೆ ಚುಚ್ಚುಮದ್ದು ಕೊಟ್ಟ ಸುಮಾರು ಹತ್ತು ನಿಮಿಷದ ನಂತರದಲ್ಲಷ್ಟೇ ಅದಕ್ಕೆ ಎಚ್ಚರ ತಪ್ಪುತ್ತಿತ್ತು. ಡಾ.ಸುಜಯ್ ಶೂಟ್ ಮಾಡಿದ ಚುಚ್ಚುಮದ್ದು ಕ್ಷಣಮಾತ್ರದಲ್ಲಿ ಕಾಟಿಯ ಹಿಂಭಾಗಕ್ಕೆ ನಾಟಿತು. ಇನ್ನು ಹತ್ತು ನಿಮಿಷದಲ್ಲಿ ಕಾಟಿ ಧರೆಗುರುಳಬೇಕು. ಅಡ್ಡ ತಿರುಗಾಡುವ ದಾರಿ ಇದೆ ಎಂದು ಹತ್ತಡಿಯಷ್ಟು ಜಾಗದಲ್ಲಿ ಹಳ್ಳ ತೋಡಿರಲಿಲ್ಲ. ಕಾಟಿ ಅಲ್ಲಿಗೆ ತಲುಪಿತು.

ಈಗ ಮತ್ತೆ ಕಾಡಿನೊಳಕ್ಕೆ ಹೋಗುವ ಅಪಾಯದ ಸ್ಥಿತಿ ನಿರ್ಮಾಣವಾಯಿತು. ಕಾಡಿನೊಳಕ್ಕೆ ಹೋಗಲು ಕಾಟಿ ಮತ್ತು ಹೋಗದ ಹಾಗೆ ತಡೆಯಲು ನಾವು. ಜೋರಾಗಿ ಕೂಗುತ್ತಾ ಅದರ ಎದುರಿಗೆ ಗದ್ದಲ ಮಾಡುತ್ತಿದ್ದೆವು. ಕ್ಷಣಗಣನೆ ಆರಂಭವಾಯಿತು. ಕಾಟಿ ಹಟ ತೊಟ್ಟು ಹಳ್ಳ ಹತ್ತಿ, ದಾರಿಯನ್ನು ಬಳಸಿ, ಮುಂದುವರೆದ ಹಳ್ಳಕ್ಕೆ ಇಳಿಯಿತು ಅಷ್ಟೆ. ಅರಿವಳಿಕೆ ಕೆಲಸ ಮಾಡಿತ್ತು. ಅಲ್ಲೇ ಕುಸಿಯಿತು. ಅರಿವಳಿಕೆ ಚುಚ್ಚುಮದ್ದಿನ ಪ್ರಭಾವ ಇರುವುದು ಬರೀ ನಲವತ್ತು ನಿಮಿಷ ಮಾತ್ರ. ಅಷ್ಟರಲ್ಲಿ ಮುಖ್ಯ ಕಾರ್ಯಾಚರಣೆ ಮುಗಿಯಬೇಕು. ಹಳ್ಳದಲ್ಲಿ ಬಿದ್ದ ಕಾಟಿಯನ್ನು ರಸ್ತೆಗೆ ತರುವ ಮೊದಲು ಒಂದಿಷ್ಟು ಮಣ್ಣು ಕೆಲಸ ಮಾಡಬೇಕು. ನಮ್ಮ ಹತ್ತಿರ ಜೆಸಿಬಿ ಇಲ್ಲ. ಊರಿನಲ್ಲಿದ್ದ ಜೆಸಿಬಿಯನ್ನು ತುರ್ತಾಗಿ ತರಲಾಯಿತು.

ಈ ಮಧ್ಯೆ, ವಿವಿಧ ಆ್ಯಂಟಿಬಯಾಟಿಕ್ ಔಷಧಗಳನ್ನು ಕಾಟಿಗೆ ಚುಚ್ಚಲಾಯಿತು. ಜೆಸಿಬಿ ಬಂದು ಮಣ್ಣು ತೆಗೆಯಿತು. ಕ್ರೇನ್ ಬೆಲ್ಟುಗಳನ್ನು ಬಳಸಿ, ಕಾಟಿಯ ಎದೆ-ಹೊಟ್ಟೆಯ ಗುಂಟ ಸುತ್ತಲಾಯಿತು. ಜೆಸಿಬಿ ಯಂತ್ರ ನಿಧಾನವಾಗಿ ಕಾಟಿಯನ್ನು ಕಬ್ಬಿಣದ ಪಂಜರದ ಹತ್ತಿರ ತಂದಿತು. ಊರಿನವರೆಲ್ಲಾ ಸೇರಿ, ಐಸ್ಸಾ, ಐಸ್ಸಾ ಎನ್ನುತ್ತಾ ಕಾಟಿಯನ್ನು ಪಂಜರದ ಒಳಗೆ ಕಳುಹಿಸಲು ಸಫಲರಾದರು ಎಂಬಲ್ಲಿಗೆ ಕಾಟಿ ಹಿಡಿದ ಸಾಹಸದ ಕಥೆ ಮುಗಿಯಿತು. ಕಾಟಿಯೀಗ ಶಿವಮೊಗ್ಗದ ತ್ಯಾವರೇಕೊಪ್ಪದ ಹುಲಿ-ಸಿಂಹ ಧಾಮದಲ್ಲಿ ಆರೋಗ್ಯವಾಗಿದೆ. ಹ್ಞಾಂ! ಈ ತರಹದ ಕಾಟಿ ಕಾರ್ಯಾಚರಣೆ ಮಾಡಿದ್ದು, ಕರ್ನಾಟಕದಲ್ಲಿ ಇದೇ ಮೊದಲು.



ಗುಂಡಿಯಿಂದ ಹೊರಬರಲು ಕಾಟಿಗೆ ಹಾದಿಯ ನಿರ್ಮಾಣ



ಎರಡು ಕಣ್ಣುಗಳನ್ನು ಕಳೆದುಕೊಂಡ ಕಾಟಿಯ ಅಲೆದಾಟ



ಕ್ವಾರಿಯಲ್ಲಿ ಬಿದ್ದ ಕಾಟಿಯನ್ನು ಎತ್ತಲು ಹರಸಾಹಸ

ಬಿಸಿಲಿನಾ ಡೇರೆ...

8ನೇ ಪುಟದಿಂದ...

ಇಷ್ಟೆಲ್ಲಾ ಹೇಳಿದ ಮೇಲೆ ಬೇಸಿಗೆಯಲ್ಲಿ ಮಹಾನಗರಗಳಲ್ಲಿ ನೀರಿಗಾಗಿ ಏಳುವ ಹಾಹಾಕಾರವನ್ನು ಮರೆಯಲು ಸಾಧ್ಯವೇ? ಬಾಲ್ಯದಲ್ಲಿ ಕರಾವಳಿಯ ಸಮೃದ್ಧ ಹಳ್ಳಿಯಲ್ಲಿ, ತುಂಬಿ ತುಳುಕುವ ಬಾವಿ ನೋಡಿ ಬೆಳೆದಿದ್ದ ನಾನು, 'ನೀರು ಉಳಿಸಿ' ಎಂಬ ಮಾತನ್ನು ಮೊದಲಬಾರಿಗೆ ಕೇಳಿದಾಗ ನಕ್ಕಿದ್ದೆ. ಆದರೆ, ನೀರನ್ನು ನೀರಿನಂತೆ ಖರ್ಚು ಮಾಡುವ ಕಾಲ ಮುಗಿಯಿತು ಎಂಬ ಅರಿವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ನೀರಿನ ಕೊರತೆಯ ಬಗ್ಗೆ ಬಯಲುಸೀಮೆ ಜನರ, ನಗರವಾಸಿಗಳ ಬಾಯಿಂದ ಕೇಳಿದ ಮೇಲೆ ನೀರು ಎಂತಹ ಅಮೂಲ್ಯ ವಸ್ತು ಎಂಬ ಅರಿವಾಗತೊಡಗಿತ್ತು. ಹೀಗಾಗಿ, ನೀರನ್ನು ಉಳಿಸಲು, ಜೋಪಾನ ಮಾಡಲು ಕಲಿತರೂ, ಸ್ವತಃ ನೀರಿನ ಕೊರತೆ ಮಾತ್ರ ಎಂದೂ ಅನುಭವಿಸಿರಲಿಲ್ಲ. ಎರಡು ವರ್ಷದ ಹಿಂದೆ ಹೈದ್ರಾಬಾದಿನ ಬೇಸಿಗೆ ಅದರ ಅನುಭವವನ್ನೂ ನೀಡಿತು. ಹೈದ್ರಾಬಾದಿನಲ್ಲಿ ಪ್ರತೀ ಬೇಸಿಗೆಯಲ್ಲೂ ಇದೇ ಸ್ಥಿತಿ. ಆದರೆ, ನಮಗೆ ಮಾತ್ರ ಅದರ ಬಿಸಿ ತಟ್ಟಿರಲಿಲ್ಲ ಅಷ್ಟೆ.

ಹೈದ್ರಾಬಾದಿನ ಬಿರುಬೇಸಿಗೆಯ ಕಷ್ಟಗಳನ್ನಷ್ಟೇ ಹೇಳಿದ್ದಾಯಿತು. ಈ ಬೇಸಿಗೆ ಅನಾವರಣಗೊಳಿಸುವ ನಗರದ ವಿವಿಧ ಮಾನವೀಯ ಮುಖಗಳಿಗೂ, ಸುಡು ಬಿಸಿಲಿಗೂ ಅಂಜದೆ ಮುನ್ನಡೆಯುವ ಶ್ರಮಿಕ ವರ್ಗಕ್ಕೂ, ನಗರ ಈ ಕಾಲದಲ್ಲಿ ತೊಡುವ ಹೊಸ ಹೊಸ ಬಗೆಯ ರಂಗಿಗೂ ಸಲಾಂ ಹೇಳಲೇಬೇಕು. ಬೇಸಿಗೆ ಶುರುವಾದ ಕೂಡಲೇ ಹೈದ್ರಾಬಾದ್ ಮಾತ್ರವಲ್ಲದೆ ತೆಲಂಗಾಣ, ಆಂಧ್ರದ ಎಲ್ಲಾ ಕಡೆ ಸಾವಿರಾರು ಸಂಖ್ಯೆಯಲ್ಲಿ ಚಲಿವೇಂದ್ರಗಳು ತಲೆ ಎತ್ತುತ್ತವೆ. ಇವು ಜನರಿಗೆ ಬೆಳಗ್ಗಿನಿಂದ ಸಂಜೆಯವರೆಗೆ ಶುದ್ಧವಾದ, ತಂಪಾದ ಕುಡಿಯುವ ನೀರನ್ನು ಉಚಿತವಾಗಿ ಹಂಚುವ ಕೇಂದ್ರಗಳು. ಸರ್ಕಾರದ ಯಾವುದೇ ಸಹಾಯವಿಲ್ಲದೆ, ಹಲವು ಸಂಘ ಸಂಸ್ಥೆಗಳು ನಡೆಸುವ ಈ ಕುಡಿಯುವ ನೀರಿನ ಕೇಂದ್ರಗಳು ನಗರದ ಶ್ರಮಜೀವಿಗಳ ಜೀವನಾಡಿ.

ಪ್ರತಿಯೊಂದು ಬೀದಿಯಲ್ಲಿ, ತಿರುವುಗಳಲ್ಲಿ ಈ ಕೇಂದ್ರಗಳು ಬಾಯಾರಿ ಬಂದವರಿಗೆ ನಿರಂತರವಾಗಿ ನೀರು ತುಂಬಿ ಕೊಡುತ್ತವೆ. ಕೆಲವೊಮ್ಮೆ ತಣ್ಣನೆ ಮಜ್ಜಿಗೆಯನ್ನೂ ನೀಡುತ್ತವೆ. ರಾಮನವಮಿಯ ಆಸುಪಾಸಿನ ದಿನಗಳಲ್ಲಿ ಪಾನಕ, ಪ್ರಸಾದಗಳ ಹಂಚಿಕೆಗೂ ಕೊರತೆಯಿಲ್ಲ. ಇಂತಹ ಚಲಿವೇಂದ್ರಗಳು ತೆಲುಗುನಾಡಿನ ಸಂಸ್ಕೃತಿಯ ಭಾಗವಾಗಿ ಬಿಟ್ಟಿವೆ. ಇನ್ನು ಹೈದ್ರಾಬಾದಿನ ಪ್ರಸಿದ್ಧ ಫಲೂದಾಗಳಿಗೆ, ಕುಲ್ಫಿಗಳಿಗೆ, ತಣ್ಣನೆಯ ಸೋಡಾಗಳಿಗೆ, ತಂಪು ಬಾದಾಮಿ ಹಾಲಿಗೆ ಬೇಸಿಗೆಯಲ್ಲಿ ಹೊಸ ರುಚಿ ಬರುತ್ತದೆ. ತಳ್ಳುವ ಗಾಡಿಗಳಲ್ಲಿ, ಮೇಲೆ ಸೊಪ್ಪು ಮುಚ್ಚಿದ ಮಣ್ಣಿನ ಮಡಕೆಗಳಲ್ಲಿ ಇಟ್ಟುಕೊಂಡು ಮಾರುವ ಪುದೀನಾ ಪೇಯ, ಮಜ್ಜಿಗೆಯಂತೂ ಅಮೃತದಂತೆ ಭಾಸವಾದರೆ ಆಶ್ಚರ್ಯಪಡಬೇಕಿಲ್ಲ.

ಬೇಸಿಗೆಯ ಜೊತೆಜೊತೆಗೆ ಶುರುವಾಗುತ್ತದೆ ರಂಜಾನ್ ಮಾಸ. ಈ ಒಂದು ತಿಂಗಳು ಹೈದ್ರಾಬಾದಿನ ಖದರೇ ಬೇರೆ. ಚಾರ್ಮಿನಾರಿನಂತಹ ಹಳೆ ಹೈದ್ರಾಬಾದಿನ ಸ್ಥಳಗಳಿಗೆ ಹೋದರೆ ಎಲ್ಲೆಡೆಯೂ ಶಾಪಿಂಗ್ ಸಡಗರ. ನಸು ಬಣ್ಣದ, ತೆಳು ಕಾಟನ್ ಬಟ್ಟೆಗಳಲ್ಲೂ ಬೇಯುವ ಧಗೆ ಇರುವಾಗ, ಮೇಲಿನಿಂದ ಕೆಳಗಿನವರೆಗೂ ಕಪ್ಪು ಬುರ್ಕಾ ಧರಿಸಿ, ಉಪವಾಸವಿದ್ದು, ಅಂಗಡಿ ಅಂಗಡಿ ಅಲೆದು, ಚೌಕಾಸಿ ಮಾಡುತ್ತಾ ಸಡಗರದಿಂದ ಶಾಪಿಂಗ್ ಮಾಡುವ ಮಹಿಳೆಯರು ಜೀವನಪ್ರೀತಿಯ ಪ್ರತೀಕದಂತೆ ಕಾಣುತ್ತಾರೆ. ರಾತ್ರಿ ಇಡೀ ನಡೆಯುವ ರಂಜಾನ್ ಮಾರ್ಕೆಟ್, ನಗರದ ಉದ್ದಗಲಕ್ಕೂ ಎದ್ದೇಳುವ ಹಲೀಮ್ ಅಂಗಡಿಗಳು, ಇಫ್ತಾರ್ ಕೂಟಗಳು, ಅವ್ಯಾಹತವಾಗಿ ನಡೆಯುವ ದಾನಧರ್ಮಗಳು ಬೇಸಿಗೆಗೆ ತಂಪು ತರುತ್ತವೆ.

ಗರಿಷ್ಠ ತಾಪಮಾನ ಎಂಬುದು ಡಾಲರ್ ರೇಟಿನಂತೆ ದಿನದಿನಕ್ಕೆ ಏರುತ್ತಿರುವಾಗ, ಆಂಧ್ರ, ತೆಲಂಗಾಣದ ಜಿಲ್ಲೆಗಳು ಈ ವಿಷಯದಲ್ಲಿ ನಾ ಮುಂದೆ ತಾ ಮುಂದೆ ಎಂದು ಪೈಪೋಟಿ ನಡೆಸುತ್ತಿರುವಾಗ, ನಮ್ಮದೇ ಕರ್ನಾಟಕದ ಬಳ್ಳಾರಿ, ರಾಯಚೂರು, ಕಲಬುರ್ಗಿಗಳು ಅವುಗಳಿಗೆ ಸ್ಪರ್ಧೆ ಒಡ್ಡುತ್ತಿರುವಾಗ ಒಂದು ಸಂಜೆ ಥಟ್ಟನೆ ಮಳೆಯಾಗುತ್ತದೆ ನೋಡಿ, ಆಹಾ! ಅದರ ಮುಂದೆ ಸ್ವರ್ಗವೂ ಕಮ್ಮಿಯೇ! ಈ ಬೇಸಿಗೆ ಮಳೆ ಎಂತಹವರನ್ನಾದರೂ ಕವಿಯಾಗಿಸಿಬಿಡುತ್ತದೆ. ನಾಲಗೆ ಸಮೋಸ, ಬಜ್ಜಿಗಳನ್ನು ಕೇಳುತ್ತದೆ. ಬಿಸಿ ಬಿಸಿ ಇರಾನಿ ಚಾಯ್‌ನ ಆಸೆ ಹುಟ್ಟಿಸುತ್ತದೆ. ಇಂತಹ ಒಂದು ಸ್ವರ್ಗೀಯ ಘಟನೆಗೆ ಮರುದಿನದ ಪತ್ರಿಕೆಗಳು 'ನಗರಕ್ಕೆ ತಂಪೆರೆದ ಮಳೆ' ಎಂಬ ಮಾಮೂಲು ಶೀರ್ಷಿಕೆ ನೀಡುವುದನ್ನು ಅಪರಾಧವೆಂದು ಪರಿಗಣಿಸಬೇಕೆಂಬುದು ನನ್ನ ಆಗ್ರಹ. ಬೇಸಿಗೆ ಇಲ್ಲವಾದಲ್ಲಿ, ಈ ಮಳೆಯ, ಈ ಪರಿಯ ಸೊಬಗು ಅರಿವಾಗುತ್ತಿರಲಿಲ್ಲ ಎಂಬುದಕ್ಕಾದರೂ ಹೃದಯ ಬೇಸಿಗೆಗೆ ವಂದಿಸುತ್ತದೆ.

ಹೀಗಾಗಿಯೇ, 'ಅಯ್ಯೋ ಹೈದ್ರಾಬಾದಲ್ಲಿ ಇರೋದಾ? ಅಲ್ಲಿನ ಬೇಸಿಗೆ ಹೇಗೆ ತಡ್ಕೊತೀರಾ' ಎಂಬ ಮಾತು ಕೇಳಿದಾಗೆಲ್ಲಾ ಮನಸ್ಸು ಡಿಫೆನ್ಸ್ ಮೋಡಿಗೆ ಹೋಗಿ ಬಡಬಡಿಸುತ್ತದೆ – 'ಬೆಂಗಳೂರಲ್ಲಿ ಏನು ಈಗ ಕಡಿಮೆ ಸೆಕೆಯಾಗುತ್ತಾ? ಆಗಿನ ಕೂಲ್ ಕೂಲ್ ಬೆಂಗಳೂರು ಈಗ ಎಲ್ಲಿದೆ? ಹೆಸರಿಗೆ ತಕ್ಕ ಹಾಗೆ ಬೇಯುತ್ತಿರುವ ಕಾಳಿನಷ್ಟೇ ಬಿಸಿಯಾಗಿದೆ. ಅಪ್ಪಟ ಮಲೆನಾಡು ಶಿವಮೊಗ್ಗದಲ್ಲೇ ಈಗ ತಡೆಯೋಕಾಗದಷ್ಟು ಸೆಕೆ! ನಿಮ್ಮದೂ ಈಗ ಬಯಲುಸೀಮೆಯೇ ಆಗಿದೆ ಬಿಡಿ. ಎಲ್ಲರೂ ಈಗ ಸಮಾನ ತಾಪಮಾನ ತಪ್ತರೇ'!

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೇಳ್ರಪ್ಪ ಕಥೆಯ: ಮಹರ್ಷಿ ವಾಲ್ಮೀಕಿ


• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ವಾಲ್ಮೀಕಿ ಮಹರ್ಷಿ ಕುರಿತು ಹಲವು ದಂತಕಥೆಗಳಿವೆ. ಮೊದಲು ರತ್ನಾಕರ ಹೆಸರಿನ ಅವರೊಬ್ಬ ಕಾಡಿನಲ್ಲಿ ಲೂಟಿ ಮಾಡುವ ವ್ಯಕ್ತಿಯಾಗಿದ್ದರು ಎನ್ನುವುದು ಒಂದು ಅಂಥದ್ದೊಂದು ಪೌರಾಣಿಕ ಕಥೆ




ಒಮ್ಮೆ ಲೂಟಿ ಮಾಡುತ್ತಿದ್ದ ರತ್ನಾಕರ ಮತ್ತು ನಾರದ ಮುನಿ ಮುಖಾಮುಖಿಯಾಗುತ್ತದೆ. 'ನಿನ್ನ ಕೃತ್ಯದ ಹೊರೆಯನ್ನು ಮನೆಯವರು ಹೊರುವುದಿಲ್ಲ ಬೇಕಾದರೆ ಕೇಳಿಕೋ' ಎಂದು ನಾರದರು ತಿಳಿಹೇಳುತ್ತಾರೆ



ನಾರದರ ಮಾತು ಕೇಳಿದ ರತ್ನಾಕರ ಮನೆಗೆ ಹೋಗಿ ಪತ್ನಿಯನ್ನು ವಿಚಾರಿಸುತ್ತಾನೆ: 'ನಿಮಗಾಗಿ ಲೂಟಿ ಮಾಡಿ ತರುತ್ತಿದ್ದೇನೆ. ನನ್ನ ಕೃತ್ಯದ ಹೊರೆಯನ್ನು ನೀನೂ ಹೊರಲು ಸಿದ್ಧಳಿರುವೆಯಾ' ಎಂದು



ರತ್ನಾಕರನ ಮಾತಿನಿಂದ ಸಿಟ್ಟು ಮಾಡಿಕೊಳ್ಳುವ ಆತನ ಪತ್ನಿ, 'ನಿನಗೆ ಲೂಟಿ ಮಾಡಿ ತರಲು ಹೇಳಿದವರು ಯಾರು? ನಿನ್ನ ಕೃತ್ಯದ ಹೊರೆಯನ್ನು ಹೊರಲು ನಾನು ಸಿದ್ಧಳಿಲ್ಲ' ಎನ್ನುತ್ತಾಳೆ



ಪತ್ನಿ ಮಾತಿನಿಂದ ರತ್ನಾಕರನಿಗೆ ಜ್ಞಾನೋದಯವಾಗುತ್ತದೆ. ಕಠಿಣ ತಪಸ್ಸು ಮಾಡುತ್ತಾನೆ. ಸುತ್ತಲೂ ಹುತ್ತ ಬೆಳೆದರೂ ತಪಸ್ಸು ಭಂಗ ಆಗುವುದಿಲ್ಲ. ಹೀಗಾಗಿ ವಾಲ್ಮೀಕಿ ಮಹರ್ಷಿ ಎಂಬ ಹೆಸರಾಗುತ್ತದೆ



ರಾಮನನ್ನು ಕುರಿತು ಧ್ಯಾನಮಾಡಿದ ವಾಲ್ಮೀಕಿ ಮಹರ್ಷಿ, ಅಭಿಜಾತ ಕಾವ್ಯಗಳಲ್ಲಿ ಒಂದೆನಿಸಿದ ರಾಮಾಯಣವನ್ನು ರಚಿಸುತ್ತಾರೆ. ರಾಮಾಯಣದ ಮೂಲಕ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯುತ್ತದೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗೊಂದಲ ಗಣಿತ

ರವಿಯವರು ತಮ್ಮ ಆಫೀಸ್ ಕೆಲಸ ಮುಗಿಸಿ ಮನೆಗೆ ಬರುವಾಗ ತಮ್ಮ ಇಬ್ಬರು ಮಕ್ಕಳಿಗೆ ತಪ್ಪದೇ ಚಾಕೊಲೇಟ್ ತರುತ್ತಿದ್ದರು.

ಒಂದು ದಿನ ಇಬ್ಬರಿಗೂ ಒಂದಿಷ್ಟು ಚಾಕೊಲೇಟ್ ಕೊಟ್ಟರು. ಮಕ್ಕಳಿಬ್ಬರೂ ತಮ್ಮಲ್ಲೇ ಮಾತನಾಡಿಕೊಂಡರು. ಒಬ್ಬನು ಇನ್ನೊಬ್ಬನಿಗೆ – ನಿನ್ನ ಚಾಕೊಲೇಟ್‌ಗಳಲ್ಲಿ ನನಗೆ ಇನ್ನು ಒಂದು ಕೊಟ್ಟರೆ ಇಬ್ಬರಿಗೂ ಸಮವಾಗಿ ಬಿಡುತ್ತದೆ. ಒಂದನ್ನು ಕೊಡು ಎಂದ. ಅದಕ್ಕೆ ಇನ್ನೊಬ್ಬ– ನೀನೇ ನನಗೆ ಒಂದು ಚಾಕೊಲೇಟ್ ಕೊಟ್ಟರೆ ನಿನ್ನಲ್ಲಿರುವ ಚಾಕೊಲೇಟ್‌ಗಿಂತ ನನ್ನಲ್ಲಿರುವುವು ಎರಡು ಪಟ್ಟಾಗುತ್ತವೆ. ನೀನೇ ನನಗೆ ಒಂದು ಕೊಡು ಎಂದ. ಹಾಗಾದರೆ ತಂದೆ ಇಬ್ಬರಿಗೂ ಎಷ್ಟೆಷ್ಟು ಚಾಕೊಲೇಟ್ ಕೊಟ್ಟಿದ್ದರು?

ಶಬ್ದಗಳಲ್ಲಿ ಸರಸ... ಪದ ಒಗಟು

1	2	3	4	5	6

ನಾನೊಂದು 6 ಅಕ್ಷರಗಳ ಸಂಯುಕ್ತ ಪದ

1 + 2 ಅಕ್ಷರ ಸೇರಿಸಿದರೆ ಮಾಲೆ
1 + 3 ಅಕ್ಷರ ಸೇರಿಸಿದರೆ ಹುಲಿಯನ್ನು ಹೊಡೆದವ
1 + 4 ಅಕ್ಷರ ಸೇರಿಸಿದರೆ ರುಚಿ
1 + 6 ಅಕ್ಷರ ಸೇರಿಸಿದರೆ ಕೂಡ
2 + 1 ಅಕ್ಷರ ಸೇರಿಸಿದರೆ ದ್ರವ
2 + 4 ಅಕ್ಷರ ಸೇರಿಸಿದರೆ ಸೂರ್ಯ
2 + 5 ಅಕ್ಷರ ಸೇರಿಸಿದರೆ ಉಪ್ಪಿನ ನುಚ್ಚು
1 + 5 + 2 ಅಕ್ಷರ ಸೇರಿಸಿದರೆ (ಪ್ರಾಣಿ) ಹತ್ತುವವ
4 + 2 + 1 ಅಕ್ಷರ ಸೇರಿಸಿದರೆ ದ್ವೇಷ
4 + 2 + 3 ಅಕ್ಷರ ಸೇರಿಸಿದರೆ ಅಪರೂಪ
4 + 5 + 6 ಅಕ್ಷರ ಸೇರಿಸಿದರೆ ಮದುವೆ
5 + 1 ಅಕ್ಷರ ಸೇರಿಸಿದರೆ ಇರುವಿಕೆ
5 + 2 ಅಕ್ಷರ ಸೇರಿಸಿದರೆ ಏಳು ದಿನಗಳ ಅವಧಿ
5 + 3 ಅಕ್ಷರ ಸೇರಿಸಿದರೆ ಚರ್ಮದ ಮೇಲಿನ ಮಾಂಸದ ಗಂಟು
6 + 5 ಅಕ್ಷರ ಸೇರಿಸಿದರೆ ಗಾಳಿ
6 + 4 ಅಕ್ಷರ ಸೇರಿಸಿದರೆ ಹೋಮದಲ್ಲಿ ಹಾಕುವ ತುಪ್ಪ
6 + 1 ಅಕ್ಷರ ಸೇರಿಸಿದರೆ ಸ್ವಚ್ಛ
6 + 2 ಅಕ್ಷರ ಸೇರಿಸಿದರೆ ಶಿವ
6 + 2 + 4 ಅಕ್ಷರ ಸೇರಿಸಿದರೆ ಮಣ್ಣಿನ ದೊಡ್ಡ ಗಡಿಗೆ

ಪ್ಲೀಸ್ ಉತ್ತರ ಹೇಳಿ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಎಡಬದಿಯಲ್ಲಿ ಕೊಟ್ಟಿರುವ ವ್ಯಕ್ತಿಗಳ ಹೆಸರುಗಳಿಗೂ ಬಲಬದಿಯಲ್ಲಿ ಕೊಟ್ಟಿರುವ ವೃತ್ತಿ/ಬಿರುದುಗಳಿಗೂ ಹೊಂದಿಸಿ

1.	ಭೀಮಸೇನ ಜೋಷಿ	A.	ನಟ
2.	ರಾಜಾರಾಮಣ್ಣ	B.	ಸಂಗೀತಗಾರ
3.	ಸುನಿಲ್ ಗವಾಸ್ಕರ್	C.	ಗಗನಯಾನಿ
4.	ನೀಲ್ ಆರ್ಮ್‌ಸ್ಟ್ರಾಂಗ್	D.	ಶತಾವಧಾನಿ
5.	ಶಕುಂತಲಾದೇವಿ	E.	ಗೀತರಚನೆಕಾರ
6.	ಶ್ರೀನಿವಾಸ ರಾಮಾನುಜಂ	F.	ಆರ್ಥಿಕ ತಜ್ಞ
7.	ಆರ್. ಗಣೇಶ್	G.	ರಾಷ್ಟ್ರಕವಿ
8.	ಕಲ್ಯಾಣ್ ಕುಮಾರ್	H.	ಪಕ್ಷಿಪ್ರೇಮಿ
9.	ಚಿ. ಉದಯ ಶಂಕರ್	I.	ವರಕವಿ
10.	ಶಿಶು ಸಂಗಮೇಶ	J.	ಜಾದೂಗಾರ
11.	ಪಿ.ಬಿ. ಶ್ರೀನಿವಾಸ್	K.	ಕಾದಂಬರಿಗಾರ್ತಿ
12.	ಡಿ.ಎಂ. ನಂಜುಂಡಪ್ಪ	L.	ರೇಡಿಯೊ ಕಲಾವಿದೆ
13.	ದ.ರಾ. ಬೇಂದ್ರೆ	M.	ಚಿತ್ರನಿರ್ದೇಶಕ
14.	ಕುವೆಂಪು	N.	ತ್ರಿಪದಿ ಕವಿ
15.	ಸಲೀಂ ಅಲಿ	O.	ಹಿನ್ನೆಲೆ ಗಾಯಕ
16.	ಸರ್ವಜ್ಞ	P.	ಮಕ್ಕಳ ಸಾಹಿತಿ
17.	ತ್ರಿವೇಣಿ	Q.	ಗಣಿತಜ್ಞ
18.	ಪುಟ್ಟಣ್ಣ ಕಣಗಾಲ್	R.	ಕ್ರಿಕೆಟಿಗ
19.	ಯಮುನಾಮೂರ್ತಿ	S.	ವಿಜ್ಞಾನಿ
20.	ಉದಯ	T.	ಜೀವಂತ ಗಣಕಯಂತ್ರ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಜು ಜು ಜು ಜಿ ಜಿ
ಅ ನ ಗು ಮ ಗ

	ಂ		ಅಂಬಲಿ
	ಂ		ಬಂಗಾರ ಅಳತೆಯ ಒಂದು ಮಾನ
	ಂ		ಹೆದರು
	ಂ		ಹಿಮ
	ಂ		ವಿಷ

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಮೇ 2ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪುಟಾಣಿ ಪದಬಂಧ
1. ಪಂಕ್ತಿ, 2. ಮಿಂಚು, 3. ಹುಂಡಿ, 4. ಕಂತಿ, 5. ಕ್ರಾಂತಿ

ಟ್ವೆಂಟಿ– 20
1-N, 2-T, 3-P, 4-O, 5-K, 6-J, 7-C, 8-D, 9-I, 10-E, 11-B, 12-F, 13-S, 14-A, 15- G, 16-H, 17-M, 18-R, 19-Q, 20-L

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಜಯಕೃಷ್ಣ ಡಿ., ಬೆಂಗಳೂರು



ಶಾರದಾ ದೇಸಾಯಿ, ಹಿರೇಬಾಗೇವಾಡಿ (ಬೆಳಗಾವಿ)



ವೈಷ್ಣವಿ ಆರ್., ಶೃಂಗೇರಿ

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್, ಟೆಸ್ಟ್ ಸರಣಿ ಆಡಲಿರುವ ವಿರಾಟ್ ಕೊಹ್ಲಿ ಬಳಗ

ಇಂಗ್ಲೆಂಡ್ ಪ್ರವಾಸಕ್ಕೆ ದಿನ ನಿಗದಿ

ನವದೆಹಲಿ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮತ್ತು ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೆ ಸಜ್ಜಾಗುತ್ತಿರುವ ಭಾರತ ಕ್ರಿಕೆಟ್ ತಂಡ ಜೂನ್ ಎರಡರಂದು ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಲಿದೆ. ಅದಕ್ಕೂ ಮೊದಲು ಆಟಗಾರರು ಮುಂಬೈನಲ್ಲಿ ಎಂಟು ದಿನಗಳ ಕಠಿಣ ಕ್ವಾರಂಟೈನ್‌ಗೆ ಒಳಗಾಗುವರು.

ನ್ಯೂಜಿಲೆಂಡ್ ಎದುರಿನ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಸೇರಿದಂತೆ ಆರು ಟೆಸ್ಟ್ ಪಂದ್ಯಗಳನ್ನು ಆಡಲಿರುವ ವಿರಾಟ್ ಕೊಹ್ಲಿ ಬಳಗ ಮೂರೂವರೆ ತಿಂಗಳು ಇಂಗ್ಲೆಂಡ್‌ನಲ್ಲಿ ಕಳೆಯಲಿದೆ. ಅಲ್ಲಿಗೆ ತಲುಪಿದ ಕೂಡಲೇ ಆಟಗಾರರು 10 ದಿನಗಳ ಸಾಮಾನ್ಯ ಕ್ವಾರಂಟೈನ್‌ಗೆ ಒಳಗಾಗುವರು. ಈ ಕ್ವಾರಂಟೈನ್ ಅವಧಿಯನ್ನು ಕಡಿಮೆ ಮಾಡುವ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಚರ್ಚಿಸುತ್ತಿದೆ.

‘ತಂಡದ ಆಟಗಾರರು ಭಾರತದಲ್ಲಿ ಎಂಟು ದಿನ ಹೋಟೆಲ್ ಕೊಠಡಿಯಲ್ಲೇ ಕಳೆಯಲಿದ್ದಾರೆ. ಈ ಅವಧಿಯಲ್ಲಿ ಎರಡು, ನಾಲ್ಕು ಮತ್ತು ಏಳನೇ ದಿನಗಳಲ್ಲಿ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದವರು ಮಾತ್ರ ವಿಮಾನವೇರಲಿದ್ದಾರೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

‘ಬಬಲ್‌ನಿಂದ ಬಬಲ್‌ಗೆ ಆಟಗಾರರನ್ನು ಸ್ಥಳಾಂತರಿಸಲಾಗುವುದು. ಇಂಗ್ಲೆಂಡ್‌ನಲ್ಲಿ ಸಾಮಾನ್ಯ ಕ್ವಾರಂಟೈನ್ ಸಂದರ್ಭದಲ್ಲಿ ಅಭ್ಯಾಸ ಮಾಡಲು ಅವಕಾಶವಿದೆ. 10 ದಿನಗಳ ಕ್ವಾರಂಟೈನ್ ಕಡ್ಡಾಯವಾದರೆ ಜೂನ್ 13ರಿಂದ ತಂಡದ ಆಟಗಾರರಿಗೆ ನಗರ ಸುತ್ತಲು ಅವಕಾಶ ಸಿಗಲಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಜೂನ್ 18ರಂದು ಆರಂಭವಾಗಲಿದೆ. ಆತಿಥೇಯರ ಎದುರಿನ ಟೆಸ್ಟ್ ಸರಣಿ ಆಗಸ್ಟ್ ನಾಲ್ಕರಂದು ಆರಂಭವಾಗಲಿದೆ.

ಕುಟುಂಬಕ್ಕೆ ಅವಕಾಶ: ಸುದೀರ್ಘ ಕಾಲದ ಪ್ರವಾಸವಾಗಿರುವ ಕಾರಣ ಆಟಗಾರರು ಕುಟುಂಬದವರನ್ನು ಕರೆದುಕೊಂಡು ಹೋಗಲು ಅವಕಾಶ ಸಿಗಲಿದೆ. ಪತ್ನಿ-ಮಕ್ಕಳು ಆರಂಭದಲ್ಲೇ ಜೊತೆಯಲ್ಲಿತ್ತಾರೆಯೇ ಅಥವಾ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಂತರ ಅಲ್ಲಿಗೆ ತೆರಳುತ್ತಾರೆಯೇ ಎಂಬುದು ಇನ್ನೂ ಸ್ಪಷ್ಟವಾಗಲಿಲ್ಲ.

ಇಂಗ್ಲೆಂಡ್‌ಗೆ ಪಯಣಿಸುವ ಮೊದಲು ಎಲ್ಲ ಆಟಗಾರರಿಗೆ ಬಿಸಿಸಿಐ ಲಸಿಕೆ ಹಾಕಿಸಲಿದೆ. ಆದರೆ ಸೋಂಕು ದೃಢಪಟ್ಟಿರುವ ಪ್ರಸಿದ್ಧ ಕೃಷ್ಣ ಅವರಿಗೆ ಸದ್ಯ ಲಸಿಕೆ ನೀಡಲು ಸಾಧ್ಯವಿಲ್ಲ.



ಭಾರತ ತಂಡದ ಆರ್. ಅಶ್ವಿನ್ ಮತ್ತು ಮಯಂಕ್ ಅಗರವಾಲ್– ಪಿಟಿಐ ಚಿತ್ರ

ಮಾಲ್ಡಿವ್ಸ್‌ಗೆ ಕೇನ್ ‘ಬಳಗ’

ಇಂಗ್ಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಪಾಲ್ಗೊಳ್ಳುವ ನ್ಯೂಜಿಲೆಂಡ್ ಆಟಗಾರರ ಪ್ರವಾಸದಲ್ಲೂ ಬದಲಾವಣೆ ಮಾಡಲಾಗಿದೆ. ಭಾರತದಲ್ಲಿರುವ ಆಟಗಾರರು ಇಲ್ಲೇ ಕ್ವಾರಂಟೈನ್ ಮುಗಿಸುವುದಾಗಿ ಈ ಮೊದಲು ನಿರ್ಧರಿಸಲಾಗಿತ್ತು. ಆದರೆ ಈಗ ಮಾಲ್ಡಿವ್ಸ್‌ನಲ್ಲಿ ಕ್ವಾರಂಟೈನ್‌ಗೆ ವ್ಯವಸ್ಥೆ ಮಾಡಲಾಗಿದೆ.

ಕೇನ್ ವಿಲಿಯಮ್ಸನ್, ಮಿಚೆಲ್ ಸ್ಯಾಂಟ್ನರ್, ಕೈಲ್ ಜೆಮಿಸನ್ ಮತ್ತು ಫಿಸಿಯೊ ಟಾಮಿ ಸಿಮ್ಸೆಕ್ ಅವರು ಮಾಲ್ಡಿವ್ಸ್‌ಗೆ ತೆರಳುವರು.

ಟ್ರೇನರ್ ಕ್ರಿಸ್ ಡೊನಾಲ್ಡ್‌ಸನ್ ಇಂಗ್ಲೆಂಡ್‌ಗೆ ತೆರಳಲು ಸಜ್ಜಾಗಿದ್ದರು. ಆದರೆ ಇದೀಗ ಮಾಲ್ಡಿವ್ಸ್‌ಗೆ ಹೋಗಲು ನಿರ್ಧರಿಸಿದ್ದಾರೆ. ಭಾರತದಲ್ಲಿರುವ ನ್ಯೂಜಿಲೆಂಡ್ ಆಟಗಾರರು ಮೇ 11ರಂದು ಇಂಗ್ಲೆಂಡ್‌ಗೆ ತಲುಪುವ ಯೋಜನೆ ಇತ್ತು. ಇದು ಒಂದು ವಾರ ತಡವಾಗುವ ಸಾಧ್ಯತೆಗಳು ಕಂಡುಬಂದ ಕಾರಣ ಈ ಬದಲಾವಣೆ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಪ್ರಸಿದ್ಧ ಕೃಷ್ಣ, ಸೀಫರ್ಟ್‌ಗೆ ಕೋವಿಡ್

ಬೆಂಗಳೂರು/ಕ್ರೈಸ್ಟ್ ಚರ್ಚ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪ್ರಸಿದ್ಧ ಕೃಷ್ಣ ಮತ್ತು ಟಿಮ್ ಸೀಫರ್ಟ್ ಅವರಿಗೆ ಕೋವಿಡ್ –19 ಸೋಂಕು ಇರುವುದು ದೃಢಪಟ್ಟಿದೆ.



ಪ್ರಸಿದ್ಧ ಕೃಷ್ಣ

ಪ್ರಸಿದ್ಧ ಕೃಷ್ಣ ಅವರು ಬೆಂಗಳೂರಿನಲ್ಲಿರುವ ತಮ್ಮ ಮನೆಯಲ್ಲಿ ಪ್ರತ್ಯೇಕವಾಸದಲ್ಲಿದ್ದು ನ್ಯೂಜಿಲೆಂಡ್‌ನ ಸೀಫರ್ಟ್ ಸದ್ಯ ಅಹಮದಾಬಾದ್‌ನಲ್ಲಿದ್ದಾರೆ. ಅಲ್ಲಿ ಕ್ವಾರಂಟೈನ್ ಮುಗಿಸಿ ಚೆನ್ನೈಗೆ ಪಯಣಿಸಲಿದ್ದಾರೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮೂಲಗಳು ತಿಳಿಸಿವೆ. ಮಧ್ಯಮ ವೇಗಿ ಪ್ರಸಿದ್ಧ ಕೃಷ್ಣ ಅವರು ಇಂಗ್ಲೆಂಡ್ ಪ್ರವಾಸಕ್ಕಾಗಿ ಶುಕ್ರವಾರ ಪ್ರಕಟಿಸಿರುವ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಕೋಲ್ಕತ್ತ ನೈಟ್ ರೈಡರ್ಸ್‌ನ ವರುಣ್ ಚಕ್ರವರ್ತಿ ಮತ್ತು ಸಂದೀಪ್ ವಾರಿಯರ್ ಅವರಿಗೆ ಮೊದಲು ಕೋವಿಡ್ ಸೋಂಕು ತಗುಲಿತ್ತು.

‘ಪ್ರಸಿದ್ಧ ಮತ್ತು ಸಂದೀಪ್‌ಗೆ ವರುಣ್ ಅವರಿಂದ ಸೋಂಕು ಆಗಿರಬೇಕು. ಎರಡು ಬಾರಿ ನೆಗೆಟಿವ್ ವರದಿ ಬಂದ ನಂತರ ಮೇ 3ರಂದು ಪ್ರಸಿದ್ಧ ಬಯೋಬಬಲ್ ತೊರೆದಿದ್ದರು. ಆದರೆ ಬೆಂಗಳೂರಿನಲ್ಲಿ ನಡೆದ ಪರೀಕ್ಷೆಯಲ್ಲಿ ಪಾಸಿಟಿವ್ ವರದಿ ಬಂದಿದೆ. ಇಂಗ್ಲೆಂಡ್‌ಗೆ ಪಯಣಿಸಲಿರುವ ಭಾರತ ತಂಡದ ಆಟಗಾರರು ಇದೇ ತಿಂಗಳ 25ರಂದು ಬಯೊಬಬಲ್ ಪ್ರವೇಶಿಸಲಿದ್ದಾರೆ. ಅದಕ್ಕೂ ಮೊದಲು ಪ್ರಸಿದ್ಧ ಗುಣಮುಖರಾಗುವ ನಿರೀಕ್ಷೆ ಇದೆ’ ಎಂದು ಮೂಲಗಳು ಹೇಳಿವೆ.

ಸವಾಲು ಇದೆ; ಆದರೂ ಒಲಿಂಪಿಕ್ಸ್ ನಿಲ್ಲದು: ಕೋಟ್ಸ್

ಸಿಡ್ನಿ(ಎಎಫ್‌ಪಿ): ಕೋವಿಡ್‌ನಿಂದ ಉಂಟಾಗಿರುವ ವಿಷಮ ಪರಿಸ್ಥಿತಿಯಲ್ಲಿ ಒಲಿಂಪಿಕ್ಸ್ ನಡೆಸುವುದು ಸವಾಲೇ ಸರಿ. ಆದರೆ ಜಗತ್ತಿನ ಯಾವ ಶಕ್ತಿಗೂ ಈ ಕ್ರೀಡಾಕೂಟವನ್ನು ರದ್ದು ಮಾಡಿಸುವ ಶಕ್ತಿ ಇಲ್ಲ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಉಪಾಧ್ಯಕ್ಷ ಜಾನ್ ಕೋಟ್ಸ್ ಅಭಿಪ್ರಾಯಪಟ್ಟಿದ್ದಾರೆ.

ಸಿಡ್ನಿಯಲ್ಲಿ ಮಾತನಾಡಿದ ಅವರು ಆಟಗಾರರ ಸುರಕ್ಷತೆಗಾಗಿ ಕೈಗೊಳ್ಳಬೇಕಾಗಿರುವ ಎಲ್ಲ ಮುಂಜಾಗ್ರತಾ ಕ್ರಮಗಳಿಗೆ ಸಂಬಂಧಿಸಿದ ಜಪಾನ್ ಪ್ರಧಾನಮಂತ್ರಿ ಯೊಶಿಹಿಡೆ ಸೂಗ ಅವರೊಂದಿಗೆ ಚರ್ಚಿಸಲಾಗಿದೆ ಎಂದು ವಿವರಿಸಿದರು.

ಜುಲೈ 23ರಂದು ಆರಂಭವಾಗುವ ಒಲಿಂಪಿಕ್ಸ್ ಕುರಿತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ಸೂಗ ಅವರು ಏಪ್ರಿಲ್‌ನಲ್ಲಿ ಮಾತುಕತೆ ನಡೆಸಿದ್ದಾರೆ. ಕೋವಿಡ್ ನಿಯಂತ್ರಿಸಲು ಮತ್ತು ಕ್ರೀಡಾಪಟುಗಳಿಗೆ ಸೋಂಕು ತಗುಲದಂತಿರಲು ಸಕಲ ಸಿದ್ಧತೆಗಳನ್ನು ಮಾಡಲಾಗಿದ್ದು ಸುರಕ್ಷಿತವಾಗಿ ಒಲಿಂಪಿಕ್ಸ್ ಆಯೋಜಿಸಲು ಬದ್ಧರಾಗಿರುವುದಾಗಿ ಈ ಸಂದರ್ಭದಲ್ಲಿ ಸೂಗ ಭರವಸೆ ನೀಡಿದ್ದಾರೆ.

ಆದರೆ ಟೋಕಿಯೊ ಸೇರಿದಂತೆ ಜಪಾನ್‌ನ ವಿವಿಧ ಭಾಗಗಳಲ್ಲಿ ವೈರಸ್ ಸೃಷ್ಟಿಸಿರುವ ಆತಂಕದಿಂದಾಗಿ ತುರ್ತು ಪರಿಸ್ಥಿತಿಯನ್ನು ಹೇರಿರುವ ಹಿನ್ನೆಲೆಯಲ್ಲಿ ಕೂಟವನ್ನು ನಡೆಸುವ ಬಗ್ಗೆ ಸಂದೇಹಗಳು ಎದ್ದಿವೆ. ಈ ಕುರಿತ ಪ್ರಶ್ನೆಗೆ ಉತ್ತರಿಸಿದ ಕೋಟ್ಸ್ ‘ಒಲಿಂಪಿಕ್ಸ್‌ಗೆ ಕೋವಿಡ್‌ನಿಂದ ಯಾವ ಆತಂಕವೂ ಇಲ್ಲ’ ಎಂದರು.

ಸುದ್ದಿ 2 ನಿಮಿಷ

ಕೋವಿಡ್ ವಿರುದ್ಧದ ಹೋರಾಟಕ್ಕೆ ಕೈಜೋಡಿಸಿದ ರಿಷಭ್ ಪಂತ್

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಲು ನಿರ್ಧರಿಸಿರುವ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಅವರು ಆಮ್ಲಜನಕ, ಬೆಡ್ ಮತ್ತು ಕಿಟ್‌ಗಳನ್ನು ಒದಗಿಸುವುದಕ್ಕಾಗಿ ಸಹಾಯ ಮಾಡಲು ಮುಂದಾಗಿದ್ದಾರೆ. ಆದರೆ ಇದಕ್ಕಾಗಿ ನೀಡುವ ಮೊತ್ತವನ್ನು ಬಹಿರಂಗಪಡಿಸದೇ ಇರಲು ನಿರ್ಧರಿಸಿದ್ದಾರೆ.

23 ವರ್ಷದ ಪಂತ್ ಗುರುಗ್ರಾಮ್ ಮೂಲದ ಸರ್ಕಾರೇತರ ಸಂಸ್ಥೆಯಾದ ಹೇಮಕುಂತ್ ಫೌಂಡೇಷನ್‌ಗೆ ಹಣ ನೀಡುವುದಾಗಿ ತಿಳಿಸಿದ್ದಾರೆ. ತಮ್ಮ ಟ್ವಿಟರ್ ಖಾತೆಯಲ್ಲಿ ಈ ವಿಷಯವನ್ನು ಬಹಿರಂಗಪಡಿಸಿದ್ದಾರೆ.

ಕೊರೊನಾ ಪೀಡಿತರಿಗಾಗಿ ಹಗಲಿರುಳೆನ್ನದೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಕಾರ್ಯವನ್ನು ಮುಕ್ತಕಂಠದಿಂದ ಪಂತ್ ಪ್ರಶಂಸಿಸಿದ್ದು ಅವರ ಶ್ರಮಕ್ಕೆ ಎಲ್ಲರೂ ಬೆಂಬಲವಾಗಿ ನಿಲ್ಲಬೇಕು ಎಂದು ಹೇಳಿದ್ದಾರೆ.

‘ತಂಡ ಕಟ್ಟಿಕೊಂಡು ಮಾಡುವ ಕೆಲಸಕ್ಕೆ ಪ್ರತಿಫಲ ಸಿಗುತ್ತದೆ ಎಂಬುದನ್ನು ಕ್ರೀಡೆಯಿಂದ ನಾನು ಕಲಿತಿದ್ದೇನೆ. ಹತ್ತಿರದವರು ಸಾವಿಗೀಡಾದಾಗ ಅಥವಾ ಸಂಕಷ್ಟ ಅನುಭವಿಸಿದಾಗ ಇದೇ ರೀತಿಯಲ್ಲಿ ಕಷ್ಟಕ್ಕೆ ಒಳಗಾಗಿರುವ ಸಾವಿರಾರು ಮಂದಿ ಹಾಗೂ ಅವರ ಕುಟುಂಬದವರನ್ನು ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಹೀಗಾಗಿ ಗ್ರಾಮೀಣ ಭಾರತದ ಜನರ ಹಿತಕ್ಕಾಗಿ ಕೆಲಸ ಮಾಡುತ್ತಿರುವ ಸಂಸ್ಥೆಯೊಂದಿಗೆ ಕೈಜೋಡಿಸಲು ನಿರ್ಧರಿಸಿದ್ದೇನೆ’ ಎಂದು ಅವರು ವಿವರಿಸಿದರು.



ಮಾಜಿ ಕ್ರೀಡಾಪಟುಗಳಿಗೆ ಸಾಯ್, ಐಒಎ ನೆರವು

ಬೆಂಗಳೂರು: ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಒಳಗಾಗಿರುವ ಮಾಜಿ ಅಂತರರಾಷ್ಟ್ರೀಯ ಕ್ರೀಡಾಪಟುಗಳು ಮತ್ತು ಕೋಚ್‌ಗಳಿಗೆ ನೆರವಾಗಲು ಭಾರತ ಕ್ರೀಡಾ ಪ್ರಾಧಿಕಾರವು (ಸಾಯ್) ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಜೊತೆಗೂಡಿ ತಂಡವೊಂದನ್ನು ಕಟ್ಟಲು ಮುಂದಾಗಿದೆ.

ಶುಕ್ರವಾರ ರಚಿಸಲಾಗಿರುವ ತಂಡದಲ್ಲಿ ಸಾಯ್ ಮಹಾನಿರ್ದೇಶಕ ಸಂದೀಪ್ ಪ್ರಧಾನ್, ಐಒಎ ಅಧ್ಯಕ್ಷ ನರಿಂದರ್ ಬಾತ್ರಾ, ಮಹಾಕಾರ್ಯದರ್ಶಿ ರಾಜೀವ್ ಮೆಹ್ತಾ, ಭಾರತ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷೆ ದೀಪಾ ಮಲಿಕ್, ಕ್ರೀಡಾ ಸಚಿವಾಲಯದ ನಿರ್ದೇಶಕ ವಿಜಯ ಕುಮಾರ್, ಖೇಲೊ ಇಂಡಿಯಾ ಹಿರಿಯ ನಿರ್ದೇಶಕ ಸತ್ಯನಾರಾಯನ್ ಮೀನಾ, ಸಾಯ್ ಸಂಯೋಜಕಿ ರಾಧಿಕಾ ಶ್ರೀಮಾನ್, ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ರಾಜಗೋಪಾಲನ್ ಇದ್ದಾರೆ.

ರಾಜ್ಯ ಮಟ್ಟದಲ್ಲಿ ಆಯೋಜಿಸುವ ಯೋಜನೆಗಳನ್ನು ಈ ಸಮಿತಿ ಜಾರಿಗೆ ತರಲಿದೆ ಎಂದು ಪ್ರಕಟಣೆ ತಿಳಿಸಿದೆ.

₹ 2 ಕೋಟಿ ನೀಡಿದ ಕೊಹ್ಲಿ ದಂಪತಿ

ನವದೆಹಲಿ (ಪಿಟಿಐ): ಕೋವಿಡ್-19 ವಿರುದ್ಧದ ಹೋರಾಟಕ್ಕೆ ಕೈಜೋಡಿಸಿರುವ ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಹಾಗೂ ಬಾಲಿವುಡ್ ನಟಿ ಅನುಷ್ಕಾ ಶರ್ಮಾ ದಂಪತಿ ಎರಡು ಕೋಟಿ ರೂಪಾಯಿ ದೇಣಿಗೆ ನೀಡಿದ್ದಾರೆ.

‘ಕ್ರೌಡ್ ಫಂಡಿಂಗ್ ವೇದಿಕೆ ‘ಕೆಟ್ಟೊ’ ಮೂಲಕ ವಿರಾಟ್-ಅನುಷ್ಕಾ ದಂಪತಿಯು ಒಟ್ಟು ಏಳು ಕೋಟಿ ರೂಪಾಯಿ ದೇಣಿಗೆಯನ್ನು ಸಂಗ್ರಹಿಸುವ ಗುರಿ ಹೊಂದಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

‘ಇನ್ ದಿಸ್ ಟುಗೆದರ್’ ಎಂಬ ಅಭಿಮಾನದಡಿಯಲ್ಲಿ ದೇಣಿಗೆ ಸಂಗ್ರಹಿಸಲಾಗುತ್ತಿದೆ. ಈ ಅಭಿಯಾನವು ಕೆಟ್ಟೊದಲ್ಲಿ ಒಂದು ವಾರದವರೆಗೆ ಮುಂದುವರಿಯಲಿದೆ. ಇಲ್ಲಿ ಸಂಗ್ರಹಿಸುವ ಮೊತ್ತವನ್ನು ಎಸಿಟಿ ಗ್ರ್ಯಾಂಟ್ಸ್ ಸಂಸ್ಥೆಗೆ ನೀಡಲಾಗುತ್ತಿದ್ದು, ಈ ಸಂಸ್ಥೆಯು ಆಮ್ಲಜನಕ, ವೈದ್ಯರ ಸೇವೆ, ಲಸಿಕೆ ಕುರಿತು ಜಾಗೃತಿ ಹಾಗೂ ಟೆಲಿ ಮೆಡಿಸಿನ್ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ.

ಸಂಕ್ಷಿಪ್ತ ಸುದ್ದಿ

ಹಾಕಿ ಆಟಗಾರ್ತಿಯರು ಗುಣಮುಖ

ಬೆಂಗಳೂರು: ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಹಾಗೂ ತಂಡದ ಇತರ ಆರು ಆಟಗಾರ್ತಿಯರು, ಇಬ್ಬರು ನೆರವು ಸಿಬ್ಬಂದಿ ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ಎರಡು ವಾರಗಳ ಹಿಂದೆ ಇವರಿಗೆ ಸೋಂಕು ದೃಢಪಟ್ಟಿತ್ತು. ಇಲ್ಲಿಯ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಕ್ವಾರಂಟೈನ್ ಆಗಿದ್ದರು.

ರಾಣಿ, ಸವಿತಾ ಪೂನಿಯಾ, ಶರ್ಮಿಳಾ ದೇವಿ, ರಜನಿ, ನವಜೋತ್ ಕೌರ್, ನವನೀತ್ ಕೌರ್ ಮತ್ತು ಸುಶೀಲಾ, ವಿಡಿಯೊ ಅನಾಲಿಸ್ಟ್ ಅಮೃತಾಪ್ರಕಾಶ್ ಹಾಗೂ ವೈಜ್ಞಾನಿಕ ಸಲಹೆಗಾರ ವೇಯ್ನ್ ಲೊಂಬಾರ್ಡ್ ಕೋವಿಡ್‌ನಿಂದ ಚೇತರಿಸಿಕೊಂಡವರು.

ಅಥ್ಲೆಟಿಕ್ಸ್: ರತನ್ ಸಿಂಗ್ ನಿಧನ

ಬೆಂಗಳೂರು: ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಮಾಜಿ ಅಧ್ಯಕ್ಷ ಆರ್.ರತನ್ ಸಿಂಗ್ ಶನಿವಾರ ನಿಧನರಾದರು. ಅವರು ಪಾರ್ಶ್ವವಾಯು ಸಮಸ್ಯೆಯಿಂದ ಬಳಲುತ್ತಿದ್ದರು. ರತನ್ ಅವರು, ಪ್ಯಾರಾಲಿಂಪಿಕ್ ಸಂಸ್ಥೆಯ ಜವಾಬ್ದಾರಿಯನ್ನು ನಿಭಾಯಿಸಿದ್ದರು. ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿದ್ದರು.

ಒಲಿಂಪಿಕ್ಸ್ ‘ಚಿನ್ನ’ದ ಜೋಡಿ ಕೌಶಿಕ್, ರವೀಂದ್ರ ಪಾಲ್ ಇನ್ನಿಲ್ಲ

ನವದೆಹಲಿ (ಪಿಟಿಐ): 1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತ ಹಾಕಿ ತಂಡದ ಸದಸ್ಯರಾಗಿದ್ದ ಎಂ.ಕೆ.ಕೌಶಿಕ್ ಮತ್ತು ರವೀಂದ್ರ ಪಾಲ್ ಸಿಂಗ್ ಕೋವಿಡ್‌ನಿಂದ ಶನಿವಾರ ನಿಧನರಾದರು.



ಎಂ.ಕೆ.ಕೌಶಿಕ್



ರವೀಂದ್ರ ಪಾಲ್

60 ವರ್ಷದ ರವೀಂದ್ರ ಪಾಲ್ ಅವರನ್ನು ಎರಡು ವಾರಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಶನಿವಾರ ಬೆಳಿಗ್ಗೆ ಲಖನೌದಲ್ಲಿ ಕೊನೆಯುಸಿರೆಳೆದರೆ, ಮೂರು ವಾರಗಳಿಂದ ಚಿಕಿತ್ಸೆ ಪಡೆಯುತ್ತಿದ್ದ 66 ವರ್ಷದ ಕೌಶಿಕ್ ಶನಿವಾರ ಸಂಜೆ ದೆಹಲಿಯಲ್ಲಿ ಸಾವಿಗೀಡಾದರು. ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.

ಕೋಚ್ ಕೂಡ ಆಗಿದ್ದ ಕೌಶಿಕ್ ಭಾರತ ಪುರುಷರ ಮತ್ತು ಮಹಿಳಾ ತಂಡಗಳಿಗೆ ತರಬೇತಿ ನೀಡಿದ್ದಾರೆ. ಅವರ ಬಳಿ ಕೋಚಿಂಗ್ ಪಡೆದಿದ್ದ ಪುರುಷರ ತಂಡ 1998ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿತ್ತು. 2006ರ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳಾ ತಂಡ ಕಂಚಿನ ಪದಕ ಗೆದ್ದುಕೊಂಡಿತ್ತು.

2002ರಲ್ಲಿ ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತರಾಗಿದ್ದ ಕೌಶಿಕ್ 1998ರಲ್ಲಿ ಅರ್ಜುನ ಪ್ರಶಸ್ತಿಗೂ ಪಾತ್ರರಾಗಿದ್ದರು.

ಏಪ್ರಿಲ್ 24ರಂದು ಸೋಂಕು ಖಚಿತಗೊಂಡ ಕಾರಣ ರವೀಂದ್ರ ಪಾಲ್ ಸಿಂಗ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಚೇತರಿಸಿಕೊಂಡಿದ್ದರು. ಹೀಗಾಗಿ ಗುರುವಾರ ಅವರನ್ನು ಸಾಮಾನ್ಯ ವಾರ್ಡ್‌ಗೆ ಸ್ಥಳಾಂತರಿಸಲಾಗಿತ್ತು. ಆರೋಗ್ಯ ದಿಢೀರ್ ಹದಗೆಟ್ಟ ಕಾರಣ ಶುಕ್ರವಾರ ವೆಂಟಿಲೇಟರ್ ಅಳವಡಿಸಲಾಗಿತ್ತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲೂ ಆಡಿದ್ದ ರವೀಂದ್ರ ಪಾಲ್, ಅವಿವಾಹಿತರಾಗಿದ್ದರು. ಕರಾಚಿಯಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ (1980, 83), 1983ರಲ್ಲಿ ಹಾಂಗ್‌ಕಾಂಗ್‌ನಲ್ಲಿ ನಡೆದ 10 ರಾಷ್ಟ್ರಗಳ ರಜತ ಮಹೋತ್ಸವ ಟೂರ್ನಿ, 1982ರಲ್ಲಿ ಮುಂಬೈನಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು.

ಕುಸ್ತಿ: ಸೀಮಾಗೆ ಚಿನ್ನ

ಸೋಫಿಯಾ, ಬಲ್ಗೇರಿಯಾ (ಪಿಟಿಐ): ಭಾರತದ ಸೀಮಾ ಬಿಸ್ಲಾ ಅವರು ಇಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ವಿಶ್ವ ಅರ್ಹತಾ ಕುಸ್ತಿ ಟೂರ್ನಿಯ ಮಹಿಳೆಯರ 50 ಕೆಜಿ ವಿಭಾಗದಲ್ಲಿ ಶನಿವಾರ ಚಿನ್ನದ ಪದಕ ಗೆದ್ದುಕೊಂಡರು.

ಫೈನಲ್ ತಲುಪಿದಾಗಲೇ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದರು. ಪ್ರಶಸ್ತಿ ಸುತ್ತಿನಲ್ಲಿ ಅವರ ವಿರುದ್ಧ ಸ್ಪರ್ಧಿಸಬೇಕಾಗಿದ್ದ ಇಕ್ವಡೋರ್‌ನ ಲೂಸಿಯಾ ಎಮಿಲೆತ್ ಗಾಯದಿಂದಾಗಿ ಕಣಕ್ಕೆ ಇಳಿಯದೇ ಇದ್ದ ಕಾರಣ ಹಾದಿ ಸುಗಮವಾಯಿತು.

ಗ್ರೀಕೊ ರೋಮನ್ ವಿಭಾಗದಲ್ಲಿ ನಿರಾಸೆ: ಭಾರತದ ಗ್ರೀಕೊ ರೋಮನ್ ವಿಭಾಗದ ಪೈಲ್ವಾನರು ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಲು ವಿಫಲರಾಗಿ ನಿರಾಸೆ ಮೂಡಿಸಿದರು. ನಿರೀಕ್ಷೆ ಮೂಡಿಸಿದ್ದ ಗುರುಪ್ರೀತ್ ಸಿಂಗ್ (77 ಕೆಜಿ ವಿಭಾಗ) ಪ್ರಿಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಅಜರ್‌ಬೈಜಾನ್‌ನ ರಫೀಕ್ ಹುಸೇನೊವ್‌ಗೆ ಮಣಿದರು. 48 ಸೆಕೆಂಡುಗಳಲ್ಲಿ ಈ ಬೌಟ್ ಮುಗಿದಿತ್ತು. ಗುರುಪ್ರೀತ್ ಮೊದಲ ಸುತ್ತಿನಲ್ಲಿ ವಾಕ್ ಓವರ್ ಪಡೆದಿದ್ದರು.

60 ಕೆಜಿ ವಿಭಾಗದಲ್ಲಿ ಸಚಿನ್ ರಾಣಾ, ಆಶು (67 ಕೆಜಿ) ಕೂಡ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಆಶು, ಬೆಲಾರಸ್‌ನ ಅಲೆಕ್ಸಾಂಡರ್ ಲಿಯಾವೊಚಿಕ್ ಎದುರು ಸೋತರು. 87 ಕೆಜಿ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸುನಿಲ್ ಕುಮಾರ್ ರಷ್ಯಾದ ದವಿತ್ ಚಾಕ್ವಡ್ಜೆಗೆ ಮಣಿದರು.



ಸೀಮಾ ಬಿಸ್ಲಾ

ಟೆನಿಸ್: ಬೋಪಣ್ಣ–ಶಪೊವಲೊವ್‌ಗೆ ಸೋಲು

ಮ್ಯಾಡ್ರಿಡ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಹಾಗೂ ಕೆನಡಾದ ಡೆನಿಸ್ ಶಪೊವಲೊವ್ ಜೋಡಿಯು ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಎಂಟರಘಟ್ಟದ ಪಂದ್ಯದಲ್ಲಿ ವಿರೋಚಿತ ಸೋಲು ಅನುಭವಿಸಿತು. ಇಲ್ಲಿ ನಡೆದ ಪುರುಷರ ಡಬಲ್ಸ್ ಹಣಾಹಣಿಯಲ್ಲಿ ಜರ್ಮನಿಯ ಜೋಡಿ ಅಲೆಕ್ಸಾಂಡರ್ ಜ್ವೆರೆವ್– ಟಿಮ್ ಪ್ಯೂಟ್ಜ್ ಗೆಲುವು ಸಾಧಿಸಿದರು.

ಬೋಪಣ್ಣ ಜೋಡಿ 4–6, 6–3, 5–10ರಿಂದ ಎಡವಿತು. ಬೋಪಣ್ಣ–ಡೆನಿಸ್ ಐದು ಏಸ್‌ಗಳನ್ನು ಸಿಡಿಸಿದರೆ, ಎದುರಾಳಿಗಳು ಸಿಡಿಸಿದ್ದು ಕೇವಲ ಮೂರು. ಆದರೆ ಭಾರತ–ಕೆನಡಾ ಜೋಡಿ ಎದುರಾಳಿಗಳಿಗಿಂತ ಹೆಚ್ಚು ಲೋಪ ಎಸಗಿದ್ದು ಸೋಲಿಗೆ ಕಾರಣವಾಯಿತು.



ರೋಹನ್ ಬೋಪಣ್ಣ

ಅಮೆರಿಕದಲ್ಲಿರುವ ಭಾರತೀಯ ಶಸ್ತ್ರಚಿಕಿತ್ಸಕರ ಸಂಘದಿಂದ ನೆರವು

ಭಾರತಕ್ಕೆ 5 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್ ರವಾನೆ

ವಾಷಿಂಗ್ಟನ್ (ಪಿಟಿಐ): ಕೊರೊನಾ ಸೋಂಕಿತರ ಚಿಕಿತ್ಸೆಗೆ ನೆರವಾಗಲು ಅಮೆರಿಕದಲ್ಲಿರುವ ಭಾರತೀಯ ಶಸ್ತ್ರಚಿಕಿತ್ಸಕರ ಸಂಘ(ಎಫ್‌ಐಪಿಎ) 5 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಭಾರತಕ್ಕೆ ರವಾನಿಸುತ್ತಿದೆ.

ಭಾರತಕ್ಕೆ ಕಳುಹಿಸುವುದಕ್ಕಾಗಿಯೇ ಸಂಘ ಶುಕ್ರವಾರವೇ 5 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಖರೀದಿಸಿತ್ತು. ಇವುಗಳಲ್ಲಿ 450 ಕಾನ್ಸನ್‌ಟ್ರೇಟರ್‌ಗಳು ಈಗಾಗಲೇ ಅಹ್ಮದಾಬಾದ್ ತಲುಪಿವೆ. 325 ಘಟಕಗಳು ದೆಹಲಿಗೆ ಹಾಗೂ 300 ಘಟಕಗಳು ಮುಂಬೈಗಳಿಗೆ ತಲುಪುವ ಹಾದಿಯಲ್ಲಿವೆ.

‘ಭಾರತದಲ್ಲಿರುವ ನಮ್ಮ ಪಾಲುದಾರರು, ಆಸ್ಪತ್ರೆಗಳು, ತಾತ್ಕಾಲಿಕ ಐಸೊಲೇಷನ್ ಕೇಂದ್ರಗಳು, ಹೊಸದಾಗಿ ರಚಿಸಲಾಗಿರುವ ಸಂಚಾರಿ ಆಸ್ಪತ್ರೆಗಳು ಮತ್ತು ಚಾರಿಟಿಗಳು ಈ ಘಟಕಗಳನ್ನು ಸ್ವೀಕರಿಸಬೇಕು. ಸ್ಥಳೀಯ ಪಾಲುದಾರರ ಇವುಗಳನ್ನು ಭಾರತದ ಮೂಲೆ ಮೂಲೆಗಳಲ್ಲಿ ಕೋವಿಡ್ ಸೋಂಕಿಗೆ ಚಿಕಿತ್ಸೆ ಪಡೆಯುತ್ತಿರುವ ಅಗತ್ಯವಿರುವ ರೋಗಿಗಳಿಗೆ ಆಮ್ಲಜನಕವನ್ನು ಒದಗಿಸಬಹುದು‘ ಎಂದು ಎಫ್‌ಐಪಿಎ ಅಧ್ಯಕ್ಷ ಡಾ. ರಾಜ್ ಭಯಾನಿ ತಿಳಿಸಿದ್ದಾರೆ.

‘ಇನ್ನೂ 3500 ಘಟಕಗಳು ಸಾಗಣೆಗೆ ಸಿದ್ಧವಾಗಿದ್ದು, ಇಲ್ಲಿನ ಭಾರತೀಯ ರಾಯಭಾರಿ ಕಚೇರಿ ತಲುಪಿವೆ. ಈ ಘಟಕಗಳನ್ನು ಸಾಗಣೆ ಮಾಡಲು ಭಾರತೀಯ ನಾಗರಿಕ ವಿಮಾನಯಾನ ಸಚಿವಾಲಯ ಸಹಾಯ ಮಾಡುತ್ತದೆ‘ ಎಂದು ರಾಜ್ ಹೇಳಿದರು.

ಭಾರತದ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಯೋವಾ ಮೂಲದ ಸ್ವಯಂ ಸೇವಾ ಸಂಸ್ಥೆ ಸೆಹಗಲ್ ಫೌಂಡೇಷನ್, 200 ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಭಾರತಕ್ಕೆ ಕಳುಹಿಸುತ್ತಿರುವುದಾಗಿ ಪ್ರತ್ಯೇಕ ಪ್ರಕಟಣೆಯಲ್ಲಿ ತಿಳಿಸಿದೆ. ‘ಸಂಕಷ್ಟ ಎದುರಿಸುತ್ತಿರುವ ಭಾರತದಲ್ಲಿರುವ ಜನರಿಗೆ ದಣಿವರಿಯದೇ ಸಹಾಯ ಮಾಡುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದ ಸ್ಥಿತಿ ಹೃದಯವಿದ್ರಾವಕ: ಕಮಲಾ ಹ್ಯಾರಿಸ್



ಕಮಲಾ ಹ್ಯಾರಿಸ್

‘ಭಾರತದಲ್ಲಿ ಕೋವಿಡ್ ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿದ್ದು, ಹೆಚ್ಚಿನ ಸಾವು–ನೋವುಗಳು ಸಂಭವಿಸುತ್ತಿವೆ. ಅಲ್ಲಿನ ಪರಿಸ್ಥಿತಿ ಹೃದಯ ವಿದ್ರಾವಕವಾಗಿದೆ’ ಎಂದು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅಭಿಪ್ರಾಯಪಟ್ಟಿದ್ದಾರೆ.

ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ನೇತೃತ್ವದ ಆಡಳಿತವು ಅಗತ್ಯ ವೈದ್ಯಕೀಯ ಪರಿಹಾರ ಸಾಮಗ್ರಿಗಳನ್ನು ರವಾನಿಸುವ ಮೂಲಕ ಎಲ್ಲಾ ರೀತಿಯ ನೆರವು ನೀಡುತ್ತಿದೆ, ಕಳೆದ ವರ್ಷ ಅಮೆರಿಕದಲ್ಲಿ ಇಂತಹ ಪರಿಸ್ಥಿತಿ ನೆಲೆಸಿದ್ದಾಗ ಭಾರತ ನೆರವಿಗೆ ಬಂದಿತ್ತು ಎಂದು ಹ್ಯಾರಿಸ್ ವಾಷಿಂಗ್ಟನ್‌ನಲ್ಲಿ ಹೇಳಿದ್ದಾರೆ.

ವಿದೇಶಗಳಿಂದ 2,060 ಕಾನ್ಸನ್‌ಟ್ರೇಟರ್, 3 ಆಮ್ಲಜನಕ ಉತ್ಪಾದನಾ ಘಟಕ

ಅಮೆರಿಕ–ಭಾರತ ರಕ್ಷಣಾ ಪಾಲುದಾರಿಕೆ ವೇದಿಕೆ (ಯುಎಸ್‌ಐಎಸ್‌ಪಿಎಫ್) ಅಡಿಯಲ್ಲಿ ಭಾರತವು 2,060 ಆಮ್ಲಜನಕ ಕಾನ್ಸನ್‌ಟ್ರೇಟರ್, 30 ಸಾವಿರ ರೆಮ್‌ಡಿಸಿವಿರ್ ಔಷಧ, 467 ವೆಂಟಿಲೇಟರ್‌ಗಳು ಮತ್ತು 3 ಆಮ್ಲಜನಕ ಉತ್ಪಾದನಾ ಘಟಕಗಳನ್ನು ವಿದೇಶಿ ನೆರವಿನ ರೂಪದಲ್ಲಿ ಪಡೆದಿದೆ ಎಂದು ಕೇಂದ್ರ ಸರ್ಕಾರವು ತಿಳಿಸಿದೆ.

ಸ್ವಿಟ್ಜರ್‌ಲೆಂಡ್, ಪೋಲೆಂಡ್, ನೆದರಲ್ಯಾಂಡ್ಸ್ ಮತ್ತು ಇಸ್ರೇಲಿನಿಂದ ಈ ನೆರವು ಹರಿದುಬಂದಿದೆ. ಭಾರತವು ಏ. 27ರಿಂದ ವಿವಿಧ ದೇಶಗಳು ಮತ್ತು ಸಂಸ್ಥೆಗಳಿಂದ ಅಂತರರಾಷ್ಟ್ರೀಯ ದೇಣಿಗೆ ಮತ್ತು ಕೋವಿಡ್–19 ಪರಿಹಾರ ವೈದ್ಯಕೀಯ ಸರಬರಾಜು ಮತ್ತು ಸಲಕರಣೆಗಳ ಸಹಾಯವನ್ನು ಪಡೆಯುತ್ತಿದೆ ಎಂದು ಆರೋಗ್ಯ ಸಚಿವಾಲಯವು ಶನಿವಾರ ನವದೆಹಲಿಯಲ್ಲಿ ಬಿಡುಗಡೆ ಮಾಡಿರುವ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

‘ಏ. 27ರಿಂದ ಮೇ 7ರವರೆಗೆ ಒಟ್ಟಾರೆ 6,608 ಆಮ್ಲಜನಕ ಕಾನ್ಸಂಟ್ರೇಟರ್‌ಗಳು, 3,856 ಆಮ್ಲಜನಕ ಸಿಲಿಂಡರ್‌ಗಳು, 14 ಆಮ್ಲಜನಕ ಉತ್ಪಾದನಾ ಘಟಕಗಳು, 4,330 ವೆಂಟಿಲೇಟರ್‌ಗಳು, 3 ಲಕ್ಷ ರೆಮ್‌ಡಿಸಿವಿರ್ ವಯಲ್‌ಗಳು ತಲುಪಿವೆ’ಎಂದು ಹೇಳಿದೆ.

ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ವ್ಯಕ್ತವಾಗಿರುವ ಸಹಾಯ ಮತ್ತು ಬೆಂಬಲವನ್ನು ಶ್ಲಾಘಿಸಿರುವ ಕೇಂದ್ರ ಸರ್ಕಾರವು, ಈ ವೈದ್ಯಕೀಯ ಸಲಕರಣೆಗಳನ್ನು ವ್ಯವಸ್ಥಿತವಾಗಿ ಅವಶ್ಯವಿರುವ ಕಡೆಗಳಲ್ಲಿ ಹಂಚಿಕೆ ಮಾಡುವುದಾಗಿಯೂ ತಿಳಿಸಿದೆ.

‘ಜರ್ಮನಿಯಿಂದ ಬಂದಿರುವ ಸಂಚಾರಿ ಆಮ್ಲಜನಕ ಉತ್ಪಾದನಾ ಮತ್ತು ಭರ್ತಿ ಮಾಡುವ ಘಟಕ, 420 ಲೀಟರ್ ಸಾಮರ್ಥ್ಯದ ಆಮ್ಲಜನಕದ ಟ್ಯಾಂಕ್ ಮತ್ತು 100 ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ದೆಹಲಿಯಿಂದ ಅಸ್ಸಾಂಗೆ ರವಾನಿಸಲಾಗಿದೆ. ನೆದರ್‌ಲ್ಯಾಂಡ್‌ನಿಂದ ಪಡೆದ ವೆಂಟಿಲೇಟರ್‌ಗಳು ದೆಹಲಿಯಿಂದ ತೆಲಂಗಾಣಕ್ಕೆ ತೆರಳುತ್ತಿವೆ’ ಎಂದು ಕೇಂದ್ರ ಸರ್ಕಾರವು ಹೇಳಿದೆ.

ಬ್ಯಾಂಕ್ ಸಾಲ ನೀಡಿಕೆ, ಠೇವಣಿ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕ್‌ಗಳು ನೀಡಿರುವ ಸಾಲದ ಮೊತ್ತ ಹಾಗೂ ಸಂಗ್ರಹಿಸಿರುವ ಠೇವಣಿ ಮೊತ್ತವು ಏಪ್ರಿಲ್ 23ಕ್ಕೆ ಕೊನೆಗೊಂಡ 15 ದಿನಗಳ ಅವಧಿಯಲ್ಲಿ ಏರಿಕೆಯಾಗಿದೆ ಎಂದುಆರ್‌ಬಿಐ ಮಾಹಿತಿ ನೀಡಿದೆ.

ಈ 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ಗಳು ನೀಡಿರುವ ಸಾಲದ ಪ್ರಮಾಣ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 5.71ರಷ್ಟು ಹೆಚ್ಚಾಗಿ ₹ 108.60 ಲಕ್ಷ ಕೋಟಿಗಳಿಗೆ ತಲುಪಿದೆ. ಠೇವಣಿ ಸಂಗ್ರಹವು ಶೇ 10.28ರಷ್ಟು ಹೆಚ್ಚಾಗಿ ₹ 151.34 ಲಕ್ಷ ಕೋಟಿಗಳಿಗೆ ಏರಿಕೆಯಾಗಿದೆ.

ಕಾರ್ಮಿಕರ ಓಡಾಟಕ್ಕಾಗಿ ಖಾಸಗಿ ವಾಹನಕ್ಕೆ ಅನುಮತಿ ಕೊಡಿ: ಎಫ್‌ಕೆಸಿಸಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರದಿಂದ ಜಾರಿಗೆ ಬರಲಿರುವ ಲಾಕ್‌ಡೌನ್ ಅವಧಿಯಲ್ಲಿ ಕಾರ್ಮಿಕರು ಕೈಗಾರಿಕಾ ಪ್ರದೇಶಗಳಿಗೆ ಕೆಲಸಕ್ಕೆ ಬರಲು ಅನುಕೂಲ ಆಗುವಂತೆ ಖಾಸಗಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.



ಪೆರಿಕಲ್ ಎಂ. ಸುಂದರ್

ಕೈಗಾರಿಕೆಗಳನ್ನು ನಡೆಸಲು ಸರ್ಕಾರ ಅನುಮತಿ ನೀಡಿದೆ. ಆದರೆ, ಕಾರ್ಮಿಕರು ಖಾಸಗಿ ವಾಹನದಲ್ಲಿ ಕೆಲಸಕ್ಕೆ ಬಂದು ಹೋಗಲು ಅನುಮತಿ ಇಲ್ಲ. ಶೇಕಡ 90ರಷ್ಟು ಕಾರ್ಮಿಕರು ಬೇರೆ ಬೇರೆ ಕಡೆಗಳಿಂದ ಕೈಗಾರಿಕೆಗಳಿಗೆ ಕೆಲಸಕ್ಕೆ ಬರುತ್ತಿದ್ದಾರೆ. ಹೀಗಾಗಿ ಖಾಸಗಿ ವಾಹನದಲ್ಲಿ ಕೈಗಾರಿಕೆಗಳಿಗೆ ಬಂದು ಹೋಗಲು ಅನುಮತಿ ನೀಡಬೇಕು ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಅವರು ಸರ್ಕಾರವನ್ನು ಒತ್ತಾಯಿಸಿದರು.

ಕಾರ್ಮಿಕರು ಕೆಲಸ ಮಾಡುವ ಸ್ಥಳದಲ್ಲಿಯೇ ಉಳಿಯುಬೇಕು ಎಂದಾದರೆ ಸರ್ಕಾರವೇ ಕೈಗಾರಿಕಾ ಪ್ರದೇಶಗಳಲ್ಲಿ ಅವರಿಗೆ ಊಟ ಮತ್ತು ವಸತಿ ವ್ಯವಸ್ಥೆ ಕಲ್ಪಿಸಲಿ ಎಂದು ಹೇಳಿದರು. ಲಾಕ್‌ಡೌನ್‌ನಿಂದ ಉದ್ಯಮ ವಲಯ ಸಂಕಷ್ಟಕ್ಕೆ ಒಳಗಾಗಿದೆ. ಹೀಗಾಗಿ ವಿದ್ಯುತ್ ಶುಲ್ಕ ಮತ್ತು ಆಸ್ತಿ ತೆರಿಗೆಯನ್ನು ಆರು ತಿಂಗಳವರೆಗೆ ಮನ್ನಾ ಮಾಡುವಂತೆಯೂ ಅವರು ಸರ್ಕಾರಕ್ಕೆ ಮನವಿ ಮಾಡಿದರು.

ಕೋವಿಡ್: 229 ತೆರಿಗೆ ಅಧಿಕಾರಿಗಳ ಸಾವು

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕಕ್ಕೆ ತುತ್ತಾಗಿ 229 ಮಂದಿ ತೆರಿಗೆ ಅಧಿಕಾರಿಗಳು ತಮ್ಮ ಜೀವ ಕಳೆದುಕೊಂಡಿದ್ದು, ದೇಶವು ಅವರ ಕರ್ತವ್ಯಪರತೆಯನ್ನು ಸ್ಮರಿಸಲಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಅನುರಾಗ್ ಸಿಂಗ್ ಠಾಕೂರ್ ಹೇಳಿದ್ದಾರೆ.

ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿಯ (ಸಿಬಿಐಸಿ) 110 ಅಧಿಕಾರಿಗಳು ಹಾಗೂ ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯ (ಸಿಬಿಡಿಟಿ) 119 ಅಧಿಕಾರಿಗಳು ತಮ್ಮ ಕರ್ತವ್ಯದ ಸಂದರ್ಭದಲ್ಲಿ ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಕೋವಿಡ್–19 ಬಿಕ್ಕಟ್ಟಿನ ಈ ಸಂದರ್ಭದಲ್ಲಿ ದೇಶ ಸೇವೆಯಲ್ಲಿ ಪ್ರಾಣವನ್ನು ಪಣಕ್ಕಿಡುತ್ತಿದ್ದೀರಿ. ನಿಮ್ಮ ಸೇವೆಯ ಕಾರಣದಿಂದಾಗಿಯೇ ವಿವಿಧ ಬಂದರುಗಳಲ್ಲಿ ಆಮ್ಲಜನಕ ಸಿಲಿಂಡರ್ ನಂತಹ ಅತ್ಯಗತ್ಯ ವೈದ್ಯಕೀಯ ಉಪಕರಣಗಳು ದೇಶದೊಳಕ್ಕೆ ತ್ವರಿತವಾಗಿ ಪೂರೈಕೆ ಆಗುತ್ತಿವೆ’ ಎಂದು ತೆರಿಗೆ ಅಧಿಕಾರಿಗಳ ಕಾರ್ಯವೈಖರಿಗೆ ಇದೇ ವೇಳೆ ಅವರು ಮೆಚ್ಚುಗೆ ಸೂಚಿಸಿದ್ದಾರೆ.

ಸತತ ಎರಡನೇ ವಾರವೂ ಕಚ್ಚಾತೈಲ ದರ ಏರಿಕೆ

ನ್ಯೂಯಾರ್ಕ್ (ರಾಯಿಟರ್ಸ್): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸತತ ಎರಡನೇ ವಾರವೂ ಕಚ್ಚಾತೈಲ ದರ ಏರಿಕೆ ಕಂಡಿದೆ.

ಬ್ರೆಂಟ್ ಮತ್ತು ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮಿಡಿಯೆಟ್ (ಡಬ್ಲ್ಯುಟಿಐ ದರ್ಜೆಯ ಕಚ್ಚಾ ತೈಲಗಳ ದರವು ವಾರದ ವಹಿವಾಟಿನಲ್ಲಿ ಶೇ 1ಕ್ಕಿಂತಲೂ ಹೆಚ್ಚು ಏರಿಕೆ ಕಂಡಿದೆ. ಬ್ರೆಂಟ್ ತೈಲ ದರವು ಸೋಮವಾರದ ವಹಿವಾಟಿನ ಅಂತ್ಯದ ವೇಳೆಗೆ ಒಂದು ಬ್ಯಾರಲ್‌ಗೆ 67.53 ಡಾಲರ್‌ಗಳಷ್ಟಿತ್ತು. ಶುಕ್ರವಾರದ ವಹಿವಾಟಿನ ಅಂತ್ಯದ ವೇಳಗೆ 68.28 ಡಾಲರ್‌ಗಳಿಗೆ ಏರಿಕೆ ಕಂಡಿದೆ. ಡಬ್ಲ್ಯುಟಿಐ ದರ್ಜೆಯ ಕಚ್ಚಾ ತೈಲ ದರವು ಒಂದು ಬ್ಯಾರಲ್‌ಗೆ 64.38 ಡಾಲರ್‌ಗಳಷ್ಟು ಇದ್ದಿದ್ದು 65.90 ಡಾಲರ್‌ಗಳಿಗೆ ಏರಿಕೆ ಆಗಿದೆ.

ಅಮೆರಿಕ ಮತ್ತು ಯುರೋಪ್‌ನಲ್ಲಿ ಕೋವಿಡ್ ನಿಯಂತ್ರಿಸಲು ಹೇರಿದ್ದ ನಿರ್ಬಂಧಗಳನ್ನು ಸಡಿಲಿಸಲಾಗುತ್ತಿದೆ. ಕೈಗಾರಿಕಾ ಚಟುವಟಿಕೆಗಳಲ್ಲಿ ಚೇತರಿಕೆ ಕಾಣುತ್ತಿದೆ. ಜೊತೆಗೆ ಕೋವಿಡ್‌ಗೆ ಲಸಿಕೆ ನೀಡುವ ಕಾರ್ಯಕ್ರಮವೂ ವೇಗ ಪಡೆದಿದೆ. ಇದರಿಂದಾಗಿ ಇಂಧನ ಬೇಡಿಕೆ ಹೆಚ್ಚಾಗುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

ಪಾಕಿಸ್ತಾನ ಸಿಎಸ್‌ಎಸ್ ಪರೀಕ್ಷೆ: ಹಿಂದೂ ಮಹಿಳೆ ಉತ್ತೀರ್ಣ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಹಿಂದೂ ಮಹಿಳೆಯೊಬ್ಬರು ದೇಶದ ಪ್ರತಿಷ್ಠಿತ ಸೆಂಟ್ರಲ್ ಸುಪೀರಿಯರ್ ಸರ್ವೀಸಸ್ (ಸಿಎಸ್‌ಎಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಮೂಲಕ ಪಾಕಿಸ್ತಾನ ಆಡಳಿತ ಸೇವೆಗಳಿಗೆ (ಪಿಎಎಸ್) ಆಯ್ಕೆಯಾಗಿದ್ದಾರೆ.

ಡಾ.ಸನಾ ರಾಮಚಂದ್ ಪಾಕಿಸ್ತಾನದಲ್ಲಿ ಈ ಸಾಧನೆ ಮಾಡಿದ ಮೊದಲ ಹಿಂದೂ ಮಹಿಳೆ ಎಂದು ‘ಬಿಬಿಸಿ ಉರ್ದು’ ವರದಿ ಮಾಡಿದೆ.

ಸನಾ ಅವರು ಅತಿ ಹೆಚ್ಚು ಹಿಂದೂ ಜನಸಂಖ್ಯೆಯನ್ನು ಹೊಂದಿರುವ ಸಿಂಧ್ ಪ್ರಾಂತ್ಯದ ಶಿಕಾರ್‌ಪುರ ಜಿಲ್ಲೆಯ ಗ್ರಾಮೀಣ ಪ್ರದೇಶದವರು. ಲಿಖಿತ ಪರೀಕ್ಷೆಗೆ ಹಾಜರಾದ 18,553 ಜನರ ಪೈಕಿ ಸಿಎಸ್‌ಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ 221 ಅಭ್ಯರ್ಥಿಗಳಲ್ಲಿ ಸನಾ ಕೂಡ ಒಬ್ಬರು. ಭಾರತದಲ್ಲಿ ಇರುವಂತಹ ವ್ಯವಸ್ಥೆಯೇ ಪಾಕಿಸ್ತಾನದಲ್ಲೂ ಇದ್ದು, ಅವರು ಮೊದಲಿಗೆ ಉಪವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಲಿದ್ದು, ಬಳಿಕ ಜಿಲ್ಲಾಧಿಕಾರಿ ಸಹಿತ ಇತರ ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಲಿದ್ದಾರೆ.

ಸನಾ ಅವರು ತಮ್ಮ ಎಂಬಿಬಿಎಸ್ ಪದವಿಯನ್ನು ಸಿಂಧ್ ಪ್ರಾಂತ್ಯದ ಚಂಡ್ಕಾ ಮೆಡಿಕಲ್ ಕಾಲೇಜಿನಿಂದ ಪಡೆದಿದ್ದರು ಹಾಗೂ ಕರಾಚಿಯ ಆಸ್ಪತ್ರೆಯಲ್ಲಿ ಇಂಟರ್ನ್‌ಶಿಪ್ ಪೂರ್ಣಗೊಳಿಸಿದ್ದರು. ಅವರು ಸದ್ಯ ಸಿಂಧ್ ಇನ್‌ಸ್ಟಿಟ್ಯೂಟ್ ಆಫ್ ಯುರಾಲಜಿ ಆ್ಯಂಡ್ ಟ್ರಾನ್ಸ್‌ಪರೆಂಟ್ ಸಂಸ್ಥೆಯಲ್ಲಿ ಎಫ್‌ಸಿಪಿಎಸ್ ಮಾಡುತ್ತಿದ್ದು, ಶೀಘ್ರ ಅರ್ಹ ಸರ್ಜನ್ ಆಗಿ ಹೊರಹೊಮ್ಮಲಿದ್ದಾರೆ. ಆಗಲೇ ಅವರು ದೇಶದ ಅತ್ಯುನ್ನತ ನಾಗರಿಕ ಪರೀಕ್ಷೆಯಲ್ಲೂ ಉತ್ತೀರ್ಣರಾಗಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹440
	12 ಮೊಟ್ಟೆಗೆ	₹60
ಮೈಸೂರು	100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1455 (1447)
ಸೂರ್ಯಕಾಂತಿ (ರಿಫೈನ್ಡ್)	₹1730 (1730)
ಪಾಮೋಲಿನ್	₹1365(1365)

ಮುಂಬೈ ಧಾರಣೆ

ಶೇಂಗಾ

8-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1450 (1442)
ಪಾಮ್ ವಾರದ ಡೆಲಿವರಿ	1363 (1363)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1680)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,900 (47,500)

ಬೆಳ್ಳಿ ಕೆ.ಜಿ 71,200 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10575	10300	10550	152.90 ಸೆಂಟ್ಸ್
ಎಸಿ	4230	4000	4050	
ಆರ್‌ಪಿ	5100	5100	5200	ಲಂಡನ್
ಆರ್‌ಸಿ	3000	3000	3010	1539 ಡಾಲರ್ಸ್